وَاعْتَصِمُوْا بِحَبْلِ اللّٰهِ جَمِيْعًا وَّلَا تَفَرَّقُوْا



# ಬೈಅತ್ ಶರತ್ತುಗಳು ಮತ್ತು ಅಹ್ಮದಿಯರ ಹೊಣೆಗಾರಿಕೆಗಳು

ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್

## ABOUT THE BOOK:

The Holy Prophet of Islam, Muhammad (may peace and blessings of Allah be upon him), had prophesied about the coming of the Promised Messiah and Reformer who would revive and rejuvenate Islam. Hazrat Mirza Ghulam Ahmad of Qadian, India claimed to be that Promised Messiah and Reformer. In December of 1888, he announced that God had ordained him to create a new community of righteous Muslims and to take a pledge of allegiance.

Prior to founding this new jama'at (Community) on March 23, 1889, Hazrat Mirza Ghulam Ahmad announced and published ten conditions of Bai'at (initiation) for all those who wished to join his fold. These conditions beautifully capture the essence of Islam and set forth a sublime code of conduct for millions of Ahmadi Muslims today.

In the course of his sermons and speeches Hazrat Mirza Masroor Ahmad, the present head of the Worldwide Ahmadiyya Muslim Community, has explained these ten conditions in light of the Holy Qur'an, the sayings of the Holy Prophet Muhammad (may peace and blessings of Allah be upon him) and the writings of Hazrat Mirza Ghulam Ahmad, the Promised Messiah (may peace be upon him). A Kannada rendering of his thoughtful commentaries are presented in this book for the benefit of all Ahmadi Muslims and for all those who wish to learn more about Ahmadiyyat, the true Islam.

# ಬೈಅತ್ ಶರತ್ತುಗಳು
# ಮತ್ತು
# ಅಹ್ಮದಿಯರ ಹೊಣೆಗಾರಿಕೆಗಳು

# ಬೈಅತ್ ಶರತ್ತುಗಳು
# ಮತ್ತು
# ಅಹ್ಮದಿಯರ ಹೊಣೆಗಾರಿಕೆಗಳು

(ಪವಿತ್ರ ಖುರ್‌ಆನ್, ಹದೀಸ್‌ಗಳು ಮತ್ತು
ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿರ್ದೇಶನಗಳ ಬೆಳಕಿನಲ್ಲಿ)

**ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ
ಸರ್ವೋನ್ನತ ನೇತಾರ

# ಬೈಅತ್ ಶರತ್ತುಗಳು ಮತ್ತು ಅಹ್ಮದಿಯರ ಹೊಣೆಗಾರಿಕೆಗಳು

(ಪವಿತ್ರ ಖುರ್‌ಆನ್, ಹದೀಸ್‌ಗಳು ಮತ್ತು
ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿರ್ದೇಶನಗಳ ಬೆಳಕಿನಲ್ಲಿ)

*(Bai‘at Sharatthugalu matthu ahmadiyara honegarikegalu)*

Kannada translation of

شرائط بیعت اور احمدی کی ذمہ ّداریاں

**Shara’it-e-Bai‘at aur Ahmadi ki Dhimmidariyan** (urdu)

A Compilation of Friday Sermons of:

**Hazrat Mirza Masroor Ahmad**

Imam and the Head of the Worldwide Ahmadiyya Muslim Jama’at,
Khalifatul Masih V


Translated by : M. Ubeidullah, B.A., LLB.
Revised by : Muhammad Yusuf, B.com.
Assisted by : Inamullah
Type Setting : U. Basheer Ahmad, Manjeshwar.
Published by : Nazarat Nashro - Isha’at, Qadian,
Distt. Gurdaspur, Punjab -143516
First Edition : 2017
Copies : 1000
Printed at : Fazl-e-Umar Printing Press, Qadian

## ಲೇಖಕ ಪರಿಚಯ

ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದಹುಲ್ಲಾಹ್) ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನೇತಾರ (ಇಮಾಮ್). ಅವರು ವಾಗ್ದತ್ತ ಮಹ್‌ದೀ ಮಸೀಹ್ ಹಾಗೂ ಧರ್ಮೋದ್ಧಾರಕರಾಗಿ  ಆಗಮಿಸಿದ ಹಝ್ರ‌ತ್ ಮಿರ್ಝಾ ಗ್ಹುಲಾಮ್ ಅಹ್ಮದ್(ಅ) ಅವರ ಐದನೇ ಖ಼ಲೀಫರೂ ಆಗಿದ್ದಾರೆ.

ಹಝ್ರತ್ ಖ಼ಲೀಫರು ರಬ್‌ವದಲ್ಲಿ 1950 ಸೆಪ್ಟಂಬರ್ ದಿನಾಂಕ 15ರಂದು ಮಿರ್ಝಾ ಮನ್‌ಸೂರ್ ಅಹ್ಮದ್ ಮತ್ತು ನಾಸಿರ ಬೇಗಮ್ ದಂಪತಿಯ ಪುತ್ರರಾಗಿ ಜನಿಸಿದರು. ಪಾಕಿಸ್ತಾನದ ಫೈಸಲಾಬಾದ್ ಎಗ್ರಿಕಲ್ಚರಲ್ ಯುನಿವರ್ಸಿಟಿಯಲ್ಲಿ ಎಗ್ರಿಕಲ್ಚರಲ್ ಇಕೋನಮಿಕ್ಸ್‌ನಲ್ಲಿ ಸ್ನಾತಕೋತ್ತರ ಬಿರುದು ಗಳಿಸಿದ ಹಝ್ರತ್ ಖ಼ಲೀಫರು ತನ್ನ ಜೀವಿತವನ್ನು 1977ರಲ್ಲಿ ಇಸ್ಲಾಮಿನ ಸೇವೆಗೋಸ್ಕರ ಅರ್ಪಿಸಿದರು. ಅವರನ್ನು ಆಫ್ರಿಕದ ಘಾನ ದೇಶಕ್ಕೆ ಕಳುಹಿಸಲಾಯಿತು. ಅಲ್ಲಿ ಅವರು ವಿವಿಧ ಅಹ್ಮದಿಯಾ ಮುಸ್ಲಿಮ್ ವಿದ್ಯಾ ಸಂಸ್ಥೆಗಳಲ್ಲಿ ಪ್ರಿನ್ಸಿಪಲ್ ಆಗಿ ಅನೇಕ ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಸಲಾಗ ಎಂಬಲ್ಲಿ ಅಹ್ಮದಿಯಾ ಸೆಕಂಡರಿ ಸ್ಕೂಲನ್ನು ಹೊಸದಾಗಿ ಸ್ಥಾಪಿಸಿದ ಅವರು ಅಲ್ಲಿ ಎರಡು ವರ್ಷ ಪ್ರಾಂಶುಪಾಲರಾಗಿದ್ದರು. ಪಾಕಿಸ್ತಾನಕ್ಕೆ ಮರಳಿದ ನಂತರ ಅವರು ಪಾಕಿಸ್ತಾನದ ಅಹ್ಮದಿಯಾ ಜಮಾಅತಿನ ಕೇಂದ್ರದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದರು.

2003 ಎಪ್ರಿಲ್ ದಿನಾಂಕ 22ರಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಇಮಾಮರೂ ಖ಼ಲೀಫರೂ ಆಗಿ ಚುನಾಯಿಸಲ್ಪಟ್ಟ ಅವರು ಜೀವಾವಧಿ ತನಕ ಆ ಸ್ಥಾನದಲ್ಲಿ ಶೋಭಿಸುವರು. ಅವರು ಇನ್ನೂರಕ್ಕಿಂತಲೂ ಹೆಚ್ಚು ದೇಶಗಳಲ್ಲಿರುವ ಕೋಟಿಗಟ್ಟಲೆ ಅಹ್ಮದೀ ಮುಸ್ಲಿಮರ ಆಧ್ಯಾತ್ಮಿಕ ನೇತಾರರೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ಆಡಳಿತಾಧಿಕಾರಿಯೂ ಆಗಿರುವರು.

ಹಝ್ರತ್ ಖ಼ಲೀಫರು ಲೋಕದ ವಿವಿಧ ದೇಶಗಳಿಗೆ ಭೇಟಿ ನೀಡಿ ಮಾನವ ಸೇವೆಯ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ. ಹಝ್ರತ್ ಖ಼ಲೀಫರ ಮಾರ್ಗದರ್ಶನದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅನೇಕ ವಿದ್ಯಾ ಸಂಸ್ಥೆಗಳನ್ನೂ ಆಸ್ಪತ್ರೆಗಳನ್ನೂ ನಿರ್ಮಿಸಿ ಅತ್ಯುತ್ತಮ ಶೈಕ್ಷಣಿಕ ಮತ್ತು ವೈದ್ಯಕೀಯ ಸೇವೆಯನ್ನು ಲೋಕದ ವಿವಿಧ ಅಭಿವೃದ್ಧಿ ಹೊಂದದ ಪ್ರದೇಶಗಳಿಗೆ ತಲಪಿಸುತ್ತಾ ಇದೆ.

ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್ ಈಗ ಲಂಡನಿನಲ್ಲಿ ನೆಲೆಸಿದ್ದಾರೆ. ಅಹ್ಮದೀ ಮುಸ್ಲಿಮರ ಆಧ್ಯಾತ್ಮಿಕ ನಾಯಕರಾದ ಹಝ್ರತ್ ಖ಼ಲೀಫರು ಇಸ್ಲಾಮ್ ಧರ್ಮದ ಶಾಂತಿ ಮತ್ತು ಸಹಾನುಭೂತಿಯ ಮನಮುಟ್ಟುವ ಸಂದೇಶಗಳನ್ನು ನೀಡುತ್ತಿರುತ್ತಾರೆ.

| ಕ್ರ.ಸಂ. | ವಿಷಯ | ಪು.ಸಂ. |
|---|---|---|
| **1** | ಮುನ್ನುಡಿ | 1 |
| **2** | ಅಹ್ಮದಿಯಾ ಜಮಾಅತಿನ ಬೈಅತ್ ಶರತ್ತುಗಳು | 3 |
| **3** | ಪೀಠಿಕೆ | 5 |
| **4** | ಬೈಅತ್ ಎಂದರೇನು? | 5 |
| **5** | ಬೈಅತ್ ಎಂದರೆ ಜೀವವನ್ನು ಅಲ್ಲಾಹನಿಗೆ ಅರ್ಪಿಸುವುದು | 6 |
| **6** | ಬೈಅತ್ ಪಡೆದುಕೊಳ್ಳಲು ಅಲ್ಲಾಹನಿಂದ ಆಜ್ಞೆ | 9 |
| **7** | ಬೈಅತಿನ ಉದ್ದೇಶ ಲಕ್ಷ್ಯಗಳು | 10 |
| **8** | ಬೈಅತ್ ಪಡೆಯುವುದರ ಆರಂಭ | 11 |
| **9** | **ಬೈಅತಿನ ಪ್ರಥಮ ಶರತ್ತು** | 15 |
| **10** | ಅಲ್ಲಾಹನು ಶಿರ್ಕನ್ನು (ಬಹುದೇವಾರಾಧನೆಯನ್ನು) ಕ್ಷಮಿಸಲಾರನು | 15 |
| **11** | ಶಿರ್ಕ್ ವಿವಿಧ ರೀತಿಗಳಲ್ಲಿ | 16 |
| **12** | **ಬೈಅತಿನ ಎರಡನೆಯ ಶರತ್ತು** | 19 |
| **13** | ಅತ್ಯಂತ ದೊಡ್ಡ ದುರ್ಗುಣ – ಸುಳ್ಳು ಹೇಳುವುದು | 19 |
| **14** | ವ್ಯಭಿಚಾರದಿಂದ ದೂರಸರಿಯಿರಿ | 25 |
| **15** | ದುರ್ನೋಟದಿಂದ ದೂರಸರಿಯಿರಿ | 26 |
| **16** | ಆಜ್ಞೋಲ್ಲಂಘನೆ ಮತ್ತು ದುರ್ಮಾರ್ಗಗಳಿಂದ ದೂರಸರಿಯಿರಿ | 29 |
| **17** | ದೌರ್ಜನ್ಯ ಮಾಡಬೇಡಿರಿ | 31 |
| **18** | ವಿಶ್ವಾಸ ವಂಚನೆ ಮಾಡಬೇಡಿರಿ | 35 |
| **19** | ಶಾಂತಿಭಂಗ ಮಾಡಬೇಡಿರಿ | 36 |
| **20** | ವಿದ್ರೋಹದಿಂದ ದೂರಸರಿಯಿರಿ | 38 |
| **21** | ಭಾವೋದ್ರೇಕಗಳಿಂದ ಸೋಲಿಸಲ್ಪಡಬೇಡಿರಿ | 39 |
| **22** | **ಬೈಅತಿನ ಮೂರನೆಯ ಶರತ್ತು** | 43 |
| **23** | ಐದು ಹೊತ್ತಿನ ನಮಾಝನ್ನು ಅನುಷ್ಠಿಸಿರಿ | 43 |
| **24** | ತಹಜ್ಜುದ್ ನಮಾಝನ್ನು ಅನುಷ್ಠಿಸುವುದು | 48 |
| **25** | ಹಝ್ರತ್ ರಸೂಲುಲ್ಲಾಹ್‌ರಿಗಾಗಿ(ಸ) ದುರೂದ್ | 51 |
| **26** | ಕ್ಷಮೆ ಯಾಚಿಸುವುದು (ಇಸ್ತಿಗ್‌ಫಾರ್) | 55 |

| | | |
|---|---|---|
| **27** | ಇಸ್ತಿಗ್‌ಫಾರ್ ಮತ್ತು ತೌಬ | 58 |
| **28** | ಅಲ್ಲಾಹನನ್ನು ಸ್ತುತಿಸುವುದು | 59 |
| **29** | **ಬೈಅತಿನ ನಾಲ್ಕನೆಯ ಶರತ್ತು** | 65 |
| **30** | ಕ್ಷಮೆ ನೀಡಿರಿ | 66 |
| **31** | ಯಾರಿಗೂ ಕಷ್ಟ ಕೊಡಬೇಡಿರಿ | 68 |
| **32** | ವಿನಯವನ್ನು ಅವಲಂಬಿಸಿರಿ | 74 |
| **33** | **ಬೈಅತಿನ ಐದನೆಯ ಶರತ್ತು** | 76 |
| **34** | ಕಷ್ಟಗಳು ಪಾಪಗಳಿಗೆ ಪ್ರಾಯಶ್ಚಿತ್ತ | 77 |
| **35** | ನಿಜವಾದ ಸಹನೆ ದುಃಖದ ಆರಂಭದಲ್ಲಿಯೇ ಆಗಬೇಕು | 79 |
| **36** | ನೀವು ಅಲ್ಲಾಹನ ಅಂತಿಮ ಜಮಾಅತಾಗಿರುವಿರಿ | 81 |
| **37** | ಅವರು ನನ್ನವರು; ನನ್ನಿಂದ ಬೇರೆಯಾಗಲಾರರು | 83 |
| **38** | ಪರಿಪೂರ್ಣ ನಿಷ್ಠೆ ಮತ್ತು ಸ್ಥಿರತೆಯ ಮಾದರಿ | 84 |
| **39** | **ಬೈಅತಿನ ಆರನೆಯ ಶರತ್ತು** | 87 |
| **40** | ನವೀನ ಆಚಾರಗಳು | 90 |
| **41** | ಇಸ್ಲಾಮಿನ ಧರ್ಮದ ಉಪದೇಶಗಳಿಗೆ ಪವಿತ್ರ ಖುರ್‌ಆನ್ ಮಾರ್ಗಸೂಚಿ | 93 |
| **42** | ಪವಿತ್ರ ಖುರ್‌ಆನಿನಲ್ಲಿ ನಿಮ್ಮ ಜೀವಿತವಿದೆ | 94 |
| **43** | **ಬೈಅತಿನ ಏಳನೆಯ ಶರತ್ತು** | 102 |
| **44** | ಶಿರ್ಕ್ ನಂತರ ಅಹಂಕಾರದ ಹಾಗಿರುವ ಕೆಡುಕು ಬೇರೆ ಇಲ್ಲ | 102 |
| **45** | ಅಹಂಕಾರಿ ಎಂದೂ ಸ್ವರ್ಗವನ್ನು ಪ್ರವೇಶಿಸಲಾರನು | 106 |
| **46** | ಅಹಂಕಾರಕ್ಕೆ ಶೈತಾನನೊಂದಿಗೆ ಗಾಢವಾದ ಸಂಬಂಧ ಇದೆ | 108 |
| **47** | ಅಹಂಕಾರವು ಅಲ್ಲಾಹನ ದೃಷ್ಟಿಯಲ್ಲಿ ಅನಿಷ್ಟಕರವಾಗಿದೆ | 111 |
| **48** | ಹಝ್ರತ್ ರಸೂಲುಲ್ಲಾಹ್‌ರ(ಸ) ದೃಷ್ಟಿಯಲ್ಲಿ ನಿರಾಡಂಬರತೆಯಿಂದ ವರ್ತಿಸುವವರ ಸ್ಥಾನ | 114 |
| **49** | **ಬೈಅತಿನ ಎಂಟನೆಯ ಶರತ್ತು** | 117 |
| **50** | ಇಸ್ಲಾಮಿನ ಉಪದೇಶಗಳ ಸಂಕ್ಷಿಪ್ತ ರೂಪ | 118 |
| **51** | ಇಸ್ಲಾಮ್ ಧರ್ಮ ಪುನಶ್ಚೇತನಗೊಳ್ಳಲು ನಮ್ಮಿಂದ ಒಂದು ಪ್ರಾಯಶ್ಚಿತ್ತವನ್ನು ಆವಶ್ಯಪಡುತ್ತದೆ | 120 |
| **52** | ಪಾಪದಿಂದ ದೂರಸರಿಯಲು ಇರುವ ಮಾರ್ಗ – ದೃಢವಿಶ್ವಾಸ | 121 |

| | | |
|---|---|---|
| **53** | **ಬೈಅತಿನ ಒಂಬತ್ತನೆಯ ಶರತ್ತು** | 124 |
| **54** | ಎಲ್ಲರೊಡನೆ ಉತ್ತಮ ನಡತೆ | 124 |
| **55** | ಹಝ್ರತ್ ಮಸೀಹ್ ಮೌಊದ್‌ರಿಗೆ[ಅ] ಮಾನವರೊಂದಿಗೆ ಇದ್ದ ಸಹಾನುಭೂತಿ | 136 |
| **56** | **ಬೈಅತಿನ ಹತ್ತನೆಯ ಶರತ್ತು** | 139 |
| **57** | ಹಝ್ರತ್ ಮಸೀಹ್ ಮೌಊದ್[ಅ] ಮತ್ತು ಆಯಾಕಾಲದ ಖ಼ಲೀಫರೊಂದಿಗೆ ಭ್ರಾತೃತ್ವದ ಸಂಬಂಧ ಸ್ಥಾಪಿಸುವುದು | 139 |
| **58** | ಮಅ್‌ರೂಫ್ ಮತ್ತು ಗ಼ೈರ್ ಮಅ್‌ರೂಫ್ | 141 |
| **59** | ಅನುಸರಣೆಯ ಅತ್ಯುತ್ತಮ ಮಾದರಿ | 147 |
| **60** | ಹಝ್ರತ್ ಮಸೀಹ್ ಮೌಊದ್[ಅ] ಗಳಿಸಿದ ಅನುಗ್ರಹಗಳು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ[ಸ] ಅನುಸರಣೆಯಿಂದ | 148 |
| **61** | ಅನುಸರಣೆ ಎಲ್ಲ ಸ್ಥಿತಿಯಲ್ಲಿಯೂ ಆವಶ್ಯಕವಾಗಿದೆ | 153 |
| **62** | ಅಹ್ಮದಿಯಾ ಜಮಾಅತಿಗೆ ಸೇರಿದವರು ಯಾರು? | 155 |
| **63** | ಪರಸ್ಪರ ಭ್ರಾತೃತ್ವ ಮತ್ತು ಪ್ರೀತಿ ಉಂಟುಮಾಡಿರಿ ಮತ್ತು ಅಲ್ಲಾಹನೊಂದಿಗೆ ಸತ್ಯವಾದ ಸಂಬಂಧ ಸ್ಥಾಪಿಸಿರಿ | 157 |
| **64** | ಹಝ್ರತ್ ಮಸೀಹ್ ಮೌಊದ್‌ರ[ಅ] ಬೈಅತ್ ಮಾಡುವುದರಿಂದ ದೊರಕುವ ಎರಡು ಲಾಭಗಳು | 159 |
| **65** | ಈ ಕಾಲದ ಭದ್ರಕೋಟೆ ಹಝ್ರತ್ ಮಸೀಹ್ ಮೌಊದ್[ಅ] ಆಗಿದ್ದಾರೆ | 159 |

# ಮುನ್ನುಡಿ

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನುಡಿದ ಭವಿಷ್ಯವಾಣಿಯ ಪ್ರಕಾರ ಮಸೀಹ್ ಮೌಊದ್ ಮತ್ತು ಮಹ್‌ದೀ ಮಅ್‌ಹೂದ್ (ವಾಗ್ದತ್ತ ಮಸೀಹ್ ಮತ್ತು ವಾಗ್ದತ್ತ ಮಹ್‌ದಿ) ಆಗಿ ಆಗಮಿಸಿದ ಹಝ್ರತ್ ಮಿರ್ಝಾ ಗ಼ುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ಗುರುತಿಸಲು ಮತ್ತು ನಂಬಲು ನಮಗೆ ಅಲ್ಲಾಹನು ಭಾಗ್ಯ ಕೊಟ್ಟನು ಎಂಬುದು ಅಲ್ಲಾಹನ ಅಪರಿಮಿತವಾದ ಔದಾರ್ಯ ಮತ್ತು ಅನುಗ್ರಹವಾಗಿದೆ. (ಆ ಬಗ್ಗೆ ಅಲ್ಲಾಹನಿಗೆ ಸರ್ವಸ್ತುತಿಗಳನ್ನು ಅರ್ಪಿಸುತ್ತೇವೆ). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯುವ ಅನುಮತಿ ಅಲ್ಲಾಹನಿಂದ ದೊರೆತಾಗ ಅವರು ಆ ಬಗ್ಗೆ 1889ರ ಜನವರಿ ದಿನಾಂಕ 12ರಂದು ಒಂದು ಪ್ರಕಟಣೆ ಪತ್ರಿಕೆಯಲ್ಲಿ ಬೈಅತಿನ ಹತ್ತು ಶರತ್ತುಗಳನ್ನು ನಿಗದಿಪಡಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರ್ಪಡೆ ಯಾಗುವವರು ಈ ಶರತ್ತುಗಳನ್ನು ಪಾಲಿಸುವ ಪ್ರತಿಜ್ಞೆ ಮಾಡುತ್ತಾರೆ. ಈ ಶರತ್ತುಗಳ ಕುರಿತು ಸವಿವರವಾಗಿ ತಿಳಿಯುವುದು ಮತ್ತು ಅವುಗಳ ಪ್ರಕಾರ ಕಾರ್ಯಪ್ರವೃತ್ತರಾಗಲು ಪ್ರಯತ್ನಿಸುವುದು ಎಲ್ಲರಿಗೂ ಅತ್ಯಂತ ಆವಶ್ಯಕವಾಗಿದೆ.

ಹಝ್ರತ್ ಅಮೀರುಲ್ ಮೂಮಿನೀನ್ (ಸತ್ಯವಿಶ್ವಾಸಿಗಳ ನೇತಾರ) ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್ ಖ಼ಲೀಫತುಲ್ ಮಸೀಹ್ ಖಾಮಿಸ್ (ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ – ಅಲ್ಲಾಹನು ಅವರಿಗೆ ಬಲಯುತವಾದ ನೆರವಿನಿಂದ ಸಹಾಯವನ್ನು ದಯಪಾಲಿಸಲಿ) ಪವಿತ್ರ ಖುರ್‌ಆನ್, ಹದೀಸು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳ ಮೂಲಕ ನಮಗೆ ಈ ಶರತ್ತುಗಳ ಕುರಿತು ಅತ್ಯುತ್ತಮ ರೀತಿಯಲ್ಲಿ ವಿವರಿಸಿರುವರು. 2003 ಜುಲೈ ದಿನಾಂಕ 27ರಂದು ಬ್ರಿಟನಿನ ಜಲ್ಸಾ ಸಾಲಾನದ ಸಮಾರೋಪ ಭಾಷಣದಲ್ಲಿ ಮೊದಲಿನ ಮೂರು ಶರತ್ತುಗಳ ಕುರಿತು ವಿವರಣೆ ನೀಡಿದರು. ಅನಂತರ 2003 ಅಗಸ್ಟ್ ದಿನಾಂಕ 24ರಂದು ಜರ್ಮನಿಯ ಜಲ್ಸಾ ಸಾಲಾನದ ಸಮಾರೋಪ ಭಾಷಣದಲ್ಲಿ ನಾಲ್ಕನೆಯ, ಐದನೆಯ ಮತ್ತು ಆರನೆಯ ಶರತ್ತುಗಳನ್ನು ವಿವರಿಸಿದರು. ಅನಂತರ ಅದೇ ವರ್ಷ ಅಗಸ್ಟ್ ದಿನಾಂಕ 29ರಂದು ಶೇವರ್ಟ್‌ಹಾಲೆ, ಫ್ರಂಕ್‌ಫರ್ಟ್,

ಜರ್ಮನಿಯ ಜುಮುಅ ಖುತ್‌ಬದಲ್ಲಿ ಏಳನೆಯ ಮತ್ತು ಎಂಟನೆಯ ಶರತ್ತುಗಳ ಕುರಿತು ವಿವರಿಸಿದರು. 2003ರ ಸೆಪ್ಟಂಬರ್ ದಿನಾಂಕ 12ರಂದು ಲಂಡನಿನ ಮಸ್‌ಜಿದ್ ಫಝ್ಲ್‌ನಲ್ಲಿ ಜುಮುಅ ಖುತ್‌ಬದಲ್ಲಿ ಒಂಬತ್ತನೆಯ ಶರತ್ತಿನ ಕುರಿತು ಮತ್ತು 2003ರ ಸೆಪ್ಟಂಬರ್ ದಿನಾಂಕ 19ರ ಜುಮುಅ ಖುತ್‌ಬದಲ್ಲಿ ಹತ್ತನೆಯ ಶರತ್ತಿನ ಕುರಿತು ವಿವರಿಸಿದರು.

ಈ ಭಾಷಣಗಳನ್ನು ಮತ್ತು ಖುತ್‌ಬಗಳನ್ನು ಹಝ್ರತ್ ಖ಼ಲೀಫತುಲ್ ಮಸೀಹ್ ಖಾಮಿಸರು ಪರಿಶೀಲಿಸಿದ ನಂತರ ಜನರ ಪ್ರಯೋಜನಕ್ಕಾಗಿ ಗ್ರಂಥದ ರೂಪದಲ್ಲಿ ನಾವು ಪ್ರಕಟಿಸುತ್ತಿದ್ದೇವೆ. ಈ ಶರತ್ತುಗಳನ್ನು ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಳ್ಳಲು ಮತ್ತು ಅತ್ಯುತ್ತಮ ರೀತಿಯಲ್ಲಿ ಅನುಷ್ಠಾನಕ್ಕೆ ತರಲು ಅಲ್ಲಾಹನು ನಮಗೆ ಸೌಭಾಗ್ಯವನ್ನು ದಯಪಾಲಿಸಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಯಸುತ್ತಿದ್ದ ಹಾಗೆ ನಿಜವಾದ ಅಹ್ಮದಿಯಾಗಲು ನಮಗೆ ಅಲ್ಲಾಹನು ಸೌಭಾಗ್ಯವನ್ನು ನೀಡಲಿ.

ಈ ಗ್ರಂಥದಲ್ಲಿ ಮಲ್‌ಫೂಝ಼ಾತ್‌ಗಳನ್ನು ಉಲ್ಲೇಖಿಸಿದಲ್ಲಿ "ಹೊಸ ಮುದ್ರಣ" ಎಂದು ಬರೆಯದಿದ್ದಲ್ಲಿ 1984ರಲ್ಲಿ ಹತ್ತು ಸಂಪುಟಗಳಾಗಿ ಲಂಡನಿನಲ್ಲಿ ಮುದ್ರಿತವಾದ ಮಲ್‌ಫೂಝ಼ಾತ್‌ಗಳನ್ನು ಉದ್ದೇಶಿಸಲಾಗಿದೆ. ಹೊಸ ಮುದ್ರಣ ಎಂದು ಉಲ್ಲೇಖಿಸಿದ ಸ್ಥಳದಲ್ಲಿ ಐದು ಸಂಪುಟಗಳಾಗಿ ಹೊಸದಾಗಿ ಮುದ್ರಿತವಾದ ಗ್ರಂಥದ ಉಲ್ಲೇಖಗಳನ್ನು ಉದ್ದೇಶಿಸಲಾಗಿದೆ.

ಮುನೀರುದ್ದೀನ್ ಶಮ್ಸ್

**ಎಡಿಶನಲ್ ವಕೀಲುತ್ತಸ್‌ನೀಫ್**

ಜುಲಾಯಿ 15, 2004

# ಅಹ್ಮದಿಯಾ ಜಮಾಅತಿನ ಬೈಅತ್ ಶರತ್ತುಗಳು
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿರ್ದೇಶನಗಳು)

1. ಬೈಅತ್ ಮಾಡುವ ವ್ಯಕ್ತಿ ಸತ್ಯಸಂಧ ಹೃದಯದೊಂದಿಗೆ ಹೀಗೆ ಪ್ರತಿಜ್ಞೆ ಮಾಡಬೇಕು: ಜೀವಾಂತ್ಯದ ವರೆಗೆ ಬಹುದೇವಾರಾಧನೆ (ಶಿರ್ಕ್) ಮಾಡುವುದರಿಂದ ತನ್ನನ್ನು ರಕ್ಷಿಸಿಕೊಳ್ಳುವೆನು.

2. ಸುಳ್ಳು, ವ್ಯಭಿಚಾರ, ದುರ್ನೋಟ, ದೇವಾಜ್ಞೆಗಳ ಉಲ್ಲಂಘನೆ, ದೌರ್ಜನ್ಯ, ವಿಶ್ವಾಸವಂಚನೆ, ಶಾಂತಿಭಂಗ, ವಿದ್ರೋಹ ಮುಂತಾದವುಗಳಿಂದ ದೂರವಿರುವೆನು ಮತ್ತು ಭಾವೋದ್ರೇಕಗಳ ಸಂದರ್ಭಗಳಲ್ಲಿ ಅವು ಎಷ್ಟು ತೀವ್ರವಾಗಿದ್ದರೂ ಅವುಗಳಿಂದ ಸೋಲಿಸಲ್ಪಡಲಾರೆ.

3. ಅಲ್ಲಾಹನ ಮತ್ತು ಹಝ್ರತ್ ರಸೂಲುಲ್ಲಾಹ್‌ರ(ಸ) ಆಜ್ಞೆಗಳ ಪ್ರಕಾರ ಐದು ಹೊತ್ತಿನ ನಮಾಝನ್ನು ತಪ್ಪದೆ ಅನುಷ್ಠಿಸುತ್ತಾ ಇರುವೆನು. ತಹಜ್ಜುದ್ ನಮಾಝನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಅನುಷ್ಠಿಸುವುದನ್ನು, ಹಝ್ರತ್ ಮುಹಮ್ಮದ್ ರಸೂಲ್‌ರಿಗಾಗಿ(ಸ) ದುರೂದ್ (ಸಲಾತ್ ಮತ್ತು ಸಲಾಮ್) ಪ್ರಾರ್ಥನೆ ಮಾಡುವುದನ್ನು ಮತ್ತು ಪ್ರತಿದಿನ ತನ್ನ ಪಾಪಗಳಿಗಾಗಿ ಕ್ಷಮೆಯನ್ನು ಯಾಚಿಸುವುದನ್ನು (ಇಸ್ತಿಗ್ಫಾರ್) ತನ್ನ ಸ್ಥಿರ ಪ್ರವೃತ್ತಿಗಳಾಗಿ ಮಾಡಿಕೊಳ್ಳುವೆನು ಹಾಗೂ ಅಲ್ಲಾಹನು ನೀಡಿದ ಅನುಗ್ರಹಗಳನ್ನು ಹೃತ್ಪೂರ್ವಕವಾದ ಪ್ರೀತಿಯಿಂದ ನೆನಪಿಸಿ ಅವನ ಸ್ತುತಿಯನ್ನು ತನ್ನ ಪ್ರತಿದಿನದ ಕಾರ್ಯಕ್ರಮವನ್ನಾಗಿ ಮಾಡಿಕೊಳ್ಳುವೆನು.

4. ಭಾವೋದ್ರೇಕಗಳಿಗೆ ಒಳಗಾಗಿ ಸಾಮಾನ್ಯವಾಗಿ ದೇವಸೃಷ್ಟಿಗಳಲ್ಲಿ ಯಾರಿಗೂ ಮುಸ್ಲಿಮರಿಗೆ ವಿಶಿಷ್ಟವಾಗಿಯೂ ನಾಲಗೆಯಿಂದಾಗಲಿ, ಕೈಗಳಿಂದಾಗಲಿ ಅಥವಾ ಬೇರೆ ಯಾವುದೇ ರೀತಿಯಲ್ಲಿ ಅನ್ಯಾಯವಾಗಿ ಕಷ್ಟಕೊಡಲಾರೆನು.

5. ದುಃಖ ಮತ್ತು ಸುಖ, ಸಂಕಷ್ಟ ಮತ್ತು ಸೌಲಭ್ಯ, ಅನುಗ್ರಹ ಮತ್ತು ಆಪತ್ತು ಎಂಬೀ ಪರಿಸ್ಥಿತಿಗಳಲ್ಲಿ ಅಲ್ಲಾಹನಿಗೆ ನಿಷ್ಠನಾಗಿ ಅವನ ವಿಧಿ ನಿರ್ಣಯಗಳಿಗೆ ತೃಪ್ತನಾಗುವೆನು; ದೇವಮಾರ್ಗದಲ್ಲಿ ಎಲ್ಲ ವಿಧಗಳ ಅಪಮಾನ, ದುಃಖಗಳನ್ನು ಅನುಭವಿಸಲು ಸಿದ್ಧನಾಗುವೆನು ಮತ್ತು ಯಾವುದೇ ವಿಪತ್ತು ಬಂದೆರಗಿದಾಗ ಮುಖ ತಿರುಗಿಸದೆ ಮುಂದಕ್ಕೆ ಹೆಜ್ಜೆ ಇಡುವೆನು.

6. ದುರಾಚಾರ ಮತ್ತು ಕೆಟ್ಟ ಅಭಿಲಾಷೆಗಳಿಂದ ದೂರವಿದ್ದು ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಶಿರಬಾಗಿ ಸ್ವೀಕರಿಸುವೆನು ಮತ್ತು ಅಲ್ಲಾಹನ ವಚನಗಳನ್ನೂ ಮುಹಮ್ಮದ್ ರಸೂಲ್‌ರ(ಸ) ನುಡಿಗಳನ್ನೂ ನಿತ್ಯ ಕೃತ್ಯಗಳಿಗೆ ಮಾರ್ಗಸೂಚಿಯನ್ನಾಗಿ ಮಾಡಿಕೊಳ್ಳುವೆನು.

**7**. ಅಹಂಕಾರ, ತಾತ್ಸಾರ ಭಾವನೆಗಳನ್ನು ಸಂಪೂರ್ಣ ತ್ಯಜಿಸಿ ವಿನಯಭಾವ, ಸುಸ್ವಭಾವ, ಸಹನೆ ಮತ್ತು ನಿರಾಡಂಬರತೆಯಿಂದ ಜೀವಿಸುವೆನು.

**8**. ಧರ್ಮ, ಧರ್ಮದ ಗೌರವ ಮತ್ತು ಇಸ್ಲಾಮ್ ಧರ್ಮದ ಹಿತವನ್ನು ತನ್ನ ಜೀವ, ತನ್ನ ಸಂಪತ್ತು, ತನ್ನ ಗೌರವ, ತನ್ನ ಸಂತಾನ ಮತ್ತು ಪ್ರಿಯವಾದ ಎಲ್ಲಕ್ಕಿಂತಲೂ ಹೆಚ್ಚು ಪ್ರಿಯಕರವಾದುದೆಂದು ಭಾವಿಸುವೆನು.

**9**. ದೇವಸೃಷ್ಟಿಗಳ ಹಿತಕ್ಕಾಗಿ ಮಾಡುವ ಕೆಲಸಗಳನ್ನು ಕೇವಲ ಅಲ್ಲಾಹನ ಪ್ರೀತಿ ಗಳಿಸಲಿಕ್ಕಾಗಿ ಮಾಡುವೆನು; ತನಗೆ ಅಲ್ಲಾಹನು ನೀಡಿದ ಶಕ್ತಿ ಸಾಮರ್ಥ್ಯಗಳನ್ನು ಮತ್ತು ಅನುಗ್ರಹಗಳನ್ನು ಮನುಷ್ಯಕುಲದ ಪ್ರಯೋಜನಕ್ಕಾಗಿ ತನ್ನ ಶಕ್ತಿಯಾನುಸಾರ ವಿನಿಯೋಗಿಸುವೆನು.

**10**. ಉತ್ತಮ ಕೆಲಸಗಳಲ್ಲಿ ವಿಧೇಯನಾಗಿರುವುದಾಗಿ ಒಪ್ಪಿಕೊಂಡು ಈ ವಿನೀತನೊಂದಿಗೆ (ಹಝ್ರತ್ ಅಹ್ಮದ್‌ರೊಂದಿಗೆ) ಸ್ಥಾಪಿಸಿದ ಭ್ರಾತೃತ್ವದ ಸಂಬಂಧವು ಅಲ್ಲಾಹನ ತೃಪ್ತಿಯನ್ನು ಮಾತ್ರ ಆಶಿಸಿಕೊಂಡು ಮಾಡಿದುದಾಗಿರಬೇಕು ಮತ್ತು ಮೃತನಾಗುವ ತನಕ ಅದನ್ನು ನಿಷ್ಠೆಯಿಂದ ಪಾಲಿಸಬೇಕು. ಕೌಟುಂಬಿಕ ಸಂಬಂಧಗಳು, ಇತರ ಲೌಕಿಕ ಸಂಬಂಧಗಳು ಮತ್ತು ಇತರ ಎಲ್ಲ ರೀತಿಯ ಸೇವಾಸ್ಥಿತಿಗಳಲ್ಲಿ ಕಾಣಲಾಗದಂತಹ ಉನ್ನತ ಸ್ಥಾನವನ್ನು ಈ ಭ್ರಾತೃ ಸಂಬಂಧವು ಹೊಂದಿರಬೇಕು.

(ಇಶ್ತಿಹಾರ್ ತಖ್‌ಮೀಲೆ ತಬ್ಲೀಗ್; 12–1–1889)

# ಪೀಠಿಕೆ

(2003 ಜುಲೈ ದಿನಾಂಕ 27ರಂದು ಬ್ರಿಟನಿನ ಜಲ್ಸಾ ಸಾಲಾನದ ಸಮಾರೋಪ ಭಾಷಣ)

ಕೆಲವು ಸ್ನೇಹಿತರು ನನಗೆ ಹೀಗೆ ಬರೆದಿದ್ದಾರೆ: "ನಾವು ಬೈಅತನ್ನು ನವೀಕರಿಸಿದ್ದೇವೆ. ಬೈಅತ್ ಶರತ್ತುಗಳನ್ನು ಪೂರ್ಣವಾಗಿ ಅನುಸರಿಸುವ ಪ್ರತಿಜ್ಞೆ ಸಹ ಮಾಡಿದ್ದೇವೆ. ಆದರೆ ಬೈಅತ್ ಶರತ್ತುಗಳ ಬಗ್ಗೆ ನಮಗೆ ಪೂರ್ಣವಾಗಿ ತಿಳುವಳಿಕೆಯಿಲ್ಲ. ಆ ಹತ್ತು ಶರತ್ತುಗಳನ್ನು ನಾವು ಪಾಲಿಸುವುದು ಹೇಗೆಂದು ಮನವರಿಕೆ ಆಗಿಲ್ಲ." ಈ ಜಲ್ಸದ ಸಂದರ್ಭದಲ್ಲಿ ಬೈಅತ್ ಶರತ್ತುಗಳನ್ನು ವಿವರಿಸಬೇಕೆಂದು ನಾನು ಯೋಚಿಸಿದೆ. ಬಹಳ ಸವಿವರವಾಗಿ ಪ್ರಸ್ತಾಪಿಸಲಿಕ್ಕಿರುವುದರಿಂದ ಎಲ್ಲ ಶರತ್ತುಗಳ ಕುರಿತು ಈಗ ವಿವರಣೆ ನೀಡುವುದು ಪ್ರಯಾಸಕರವಾಗಿದೆ. ಆದರೆ ಕೆಲವು ಶರತ್ತುಗಳ ಬಗ್ಗೆ ಈಗ ವಿವರಿಸುವೆನು. ಅನಂತರ ಇನ್‌ಶಾಅಲ್ಲಾಹ್ (ಅಲ್ಲಾಹು ಇಚ್ಛಿಸಿದರೆ) ಈ ವಿಷಯದ ಬಗ್ಗೆ ಜುಮುಅ ಖುತ್‌ಬಗಳಲ್ಲಿ ಅಥವಾ ಬೇರೆ ಯಾವುದಾದರೂ ಸಂದರ್ಭದಲ್ಲಿ ವಿವರಿಸುವೆನು.

## ಬೈಅತ್ ಎಂದರೇನು?

ಬೈಅತ್ ಎಂದರೇನು? ಹದೀಸುಗಳ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖಗಳ ಮೂಲಕ ಇದನ್ನು ವಿವರಿಸುವೆನು. ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳುತ್ತಾರೆ:

> ಬೈಅತ್ ಎಂದರೆ ತನ್ನನ್ನು ಮಾರಾಟ ಮಾಡುವುದಾಗಿದೆ. ಅದರ ಅನುಗ್ರಹಗಳು ಮತ್ತು ಅದರಿಂದ ಉಂಟಾಗುವ ಪರಿಣಾಮಗಳು ಇದೇ ಶರತ್ತಿನೊಂದಿಗೆ ಸಂಬಂಧಿಸಿದೆ. ಯಾವ ರೀತಿಯಲ್ಲಿ ಒಂದು ಬೀಜವನ್ನು ಬಿತ್ತಿದಾಗ ಅದರ ಪ್ರಾರಂಭದ ಸ್ಥಿತಿ ರೈತನಿಂದ ಬಿತ್ತಲ್ಪಟ್ಟ ಒಂದು ಬೀಜ ಮಾತ್ರವಾಗಿದೆ. ಅದು ಏನಾಗುವುದೆಂದು ತಿಳಿಯದು. ಆದರೆ ಬೀಜವು ಉತ್ತಮವಾಗಿದ್ದರೆ ಮತ್ತು ಮೊಳಕೆ ಬರುವ ಶಕ್ತಿಯನ್ನು ಅದು ಹೊಂದಿದ್ದರೆ ಅಲ್ಲಾಹನ ಅನುಗ್ರಹದಿಂದ ಮತ್ತು ರೈತನ ಪ್ರಯತ್ನದಿಂದ ಅದು ಮೊಳಕೆಯೊಡೆದು ಮೇಲಕ್ಕೆ ಬರುತ್ತದೆ. ಹೀಗೆ ಒಂದು ಬೀಜದಿಂದ ಸಾವಿರ ಬೀಜಗಳು ಉತ್ಪಾದಿಸಲ್ಪಡುತ್ತವೆ. ಇದೇ ರೀತಿ ಬೈಅತ್ ಮಾಡುವವನು ಮೊದಲನೆಯದಾಗಿ ವಿನಯವನ್ನು ಅವಲಂಬಿಸಬೇಕು. ಅವನು ತನ್ನ ಸ್ವಾರ್ಥವನ್ನು ಮತ್ತು ಅಹಂಕಾರವನ್ನು ಬಿಡಬೇಕು. ಆಗ ಅವನು ಬೆಳವಣಿಗೆ ಪಡೆಯಲು ಸಾಮರ್ಥ್ಯ ಹೊಂದುತ್ತಾನೆ. ಆದರೆ ಬೈಅತ್‌ನೊಂದಿಗೆ ಸ್ವಾರ್ಥಾಭಿಲಾಷೆಗಳನ್ನು ಹೊಂದಿದರೆ ಅವನಿಗೆ ಬೈಅತಿನ ಅನುಗ್ರಹಗಳು ಖಂಡಿತವಾಗಿಯೂ ಲಭಿಸಲಾರದು.

**(ಮಲ್‌ಫೂಝಾತ್; ಭಾಗ 6, ಪುಟ 173)**

## ಬೈಅತ್ ಎಂದರೆ ಜೀವವನ್ನು ಅಲ್ಲಾಹನಿಗೆ ಅರ್ಪಿಸುವುದು

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

> ಬೈಅತ್ ಎಂದರೆ ಅಲ್ಲಾಹನಿಗೆ ಜೀವವನ್ನು ಅರ್ಪಿಸುವುದಾಗಿದೆ. ಎಂದರೆ ನಾವು ನಮ್ಮ ಜೀವವನ್ನು ಅಲ್ಲಾಹನಿಗೆ ಮಾರಿದ್ದೇವೆ ಎಂದಾಗಿದೆ. ಯಾರಾದರೂ ಅಲ್ಲಾಹನ ಮಾರ್ಗದಲ್ಲಿ ನಡೆದರೆ ಕೊನೆಗೆ ನಷ್ಟವನ್ನು ಅನುಭವಿಸುವನು ಎನ್ನುವುದು ತಪ್ಪು ಅಭಿಪ್ರಾಯವಾಗಿದೆ. ಸತ್ಯವಂತನು ಎಂದೂ ನಷ್ಟವನ್ನು ಅನುಭವಿಸಲಾರನು. ಸುಳ್ಳುಗಾರನಿಗೆ ಮಾತ್ರ ನಷ್ಟವುಂಟಾಗುವುದು. ಅಲ್ಲಾಹನೊಂದಿಗೆ ಮಾಡಿದ ಬೈಅತ್ ಮತ್ತು ಪ್ರತಿಜ್ಞೆಯನ್ನು ಯಾರು ಲೌಕಿಕ ಲಾಭಕ್ಕಾಗಿ ಮುರಿಯುತ್ತಾನೋ, ಲೋಕಕ್ಕೆ ಹೆದರಿಕೊಂಡು ಅಂತಹ ಕೆಲಸ ಮಾಡುತ್ತಾನೋ ಅವನು ನೆನಪಿಟ್ಟುಕೊಳ್ಳಲಿ; ಅವನು ಸಾಯುವಾಗ ಯಾವುದೇ ಅಧಿಕಾರಿ ಅಥವಾ ದೊರೆ ಅವನನ್ನು ಶಿಕ್ಷೆಯಿಂದ ಬಿಡುಗಡೆಗೊಳಿಸಲಾರನು. ಅವನು **ಅಹ್‌ಕಮುಲ್ ಹಾಕಿಮೀನ್** (ಅತ್ಯಂತ ಉನ್ನತ ಅಧಿಕಾರಿಯ) ಸಮೀಪಕ್ಕೆ ಮರಳಿ ಹೋಗಲಿಕ್ಕಿದೆ. ಆಗ ಅವನು (ಅಲ್ಲಾಹನು) ಕೇಳುವನು – ನೀನು ನನ್ನನ್ನು ಏಕೆ ಗಮನಿಸಲಿಲ್ಲ? ಆದುದರಿಂದ ಪ್ರತಿಯೊಬ್ಬ ಸತ್ಯವಿಶ್ವಾಸಿ ಆಕಾಶಗಳ ಮತ್ತು ಭೂಮಿಯ ದೊರೆಯಾದ ಅಲ್ಲಾಹನನ್ನು ನಂಬಬೇಕು ಮತ್ತು ಅವನ ಕಡೆಗೆ ಸತ್ಯ ಹೃದಯದೊಂದಿಗೆ ಪಶ್ಚಾತ್ತಾಪಗೊಂಡು ಮರಳಬೇಕು.

**(ಮಲ್‌ಫೂಝಾತ್; ಭಾಗ 7, ಪುಟ 29 – 30)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೇಲಿನ ಉಪದೇಶಗಳಿಂದ ಬೈಅತ್ ಎಂದರೇನೆಂದು ಸ್ಪಷ್ಟವಾಗುತ್ತದೆ. ನಮ್ಮಲ್ಲಿ ಪ್ರತಿಯೊಬ್ಬನು, "ನನ್ನ ಜೀವ ಈಗ ನನ್ನದೇ ಆಗಿ ಉಳಿದಿಲ್ಲ; ನಾವು ಎಲ್ಲ ಪರಿಸ್ಥಿತಿಗಳಲ್ಲೂ ಅಲ್ಲಾಹನ ಆಜ್ಞೆಗಳನ್ನು ಪಾಲಿಸಬೇಕು. ನಾವು ಅವುಗಳಿಗೆ ವಿಧೇಯರಾಗಬೇಕು. ನಮ್ಮ ಪ್ರತಿಯೊಂದು ಕೆಲಸವನ್ನು ಅಲ್ಲಾಹನ ಪ್ರೀತಿ ಗಳಿಸಲಿಕ್ಕಾಗಿ ಮಾಡಬೇಕು" ಎಂದು ತಿಳಿದುಕೊಳ್ಳಬೇಕು. ಬೈಅತಿನ ಹತ್ತು ಶರತ್ತುಗಳ ಸಾರಾಂಶ ಇದೇ ಆಗಿದೆ. ಇನ್ನು ನಾನು ಬೈಅತಿಗೆ ಸಂಬಂಧಿಸಿ ವಿವಿಧ ಹದೀಸುಗಳನ್ನು ವಿವರಿಸುವೆನು:

> ಆಯಿಝುಲ್ಲಾಹ್ ಬಿನ್ ಅಬ್ದುಲ್ಲಾ ಹೀಗೆ ವರದಿ ಮಾಡುತ್ತಾರೆ – ಉಬಾದ ಬಿನ್ ಸಾಮಿತ್(ರ) ಬದ್ರ್ ಯುದ್ಧದಲ್ಲೂ ಬೈಅತೆ ಅಖಬದಲ್ಲೂ ಭಾಗವಹಿಸಿದ ಸಹಾಬಿಗಳಲ್ಲಿ (ಪೈಗಂಬರ್ ಶಿಷ್ಯರಲ್ಲಿ) ಒಬ್ಬರಾಗಿದ್ದರು. ಅವರು ಹೀಗೆ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ತನ್ನ ಸುತ್ತಮುತ್ತ ಇದ್ದ ಸಹಾಬಿಗಳನ್ನು ಸಂಬೋಧಿಸಿ ಹೀಗೆಂದರು – "ಬನ್ನಿರಿ, ನಾನು ಹೇಳುವ ಈ ಶರತ್ತುಗಳಿಗನುಸಾರವಾಗಿ ಬೈಅತ್ ಮಾಡಿರಿ. **"ಅಲ್ಲಾ ತುಶ್‌ರಿಕೂ ಬಿಲ್ಲಾಹಿ ಶೈಅನ್"** – ನೀವು ಅಲ್ಲಾಹನೊಂದಿಗೆ ಯಾರನ್ನೂ

ಸಹಭಾಗಿಗಳನ್ನಾಗಿ ಮಾಡಲಾರಿರಿ. ನೀವು ಕಳ್ಳತನ ಮಾಡಲಾರಿರಿ. ನೀವು ವ್ಯಭಿಚಾರ ಮಾಡಲಾರಿರಿ. ನೀವು ನಿಮ್ಮ ಮಕ್ಕಳನ್ನು ಕೊಲ್ಲಲಾರಿರಿ. ನೀವು ಅನ್ಯರ ಮೇಲೆ ಸುಳ್ಳು ಆರೋಪ ಹೊರಿಸಲಾರಿರಿ. ನೀವು ಯಾವುದಾದರೂ ಉತ್ತಮ ಕೆಲಸದ ವಿಷಯದಲ್ಲಿ ನನ್ನ ಆಜ್ಞೆಗಳನ್ನು ನಿರಾಕರಿಸಲಾರಿರಿ.

ನಿಮ್ಮ ಪೈಕಿ ಯಾರು ಈ ಬೈಅತ್ ಪ್ರತಿಜ್ಞೆಯನ್ನು ಈಡೇರಿಸುತ್ತಾನೋ ಅವನಿಗೆ ಉತ್ತಮ ಪ್ರತಿಫಲ ನೀಡುವುದು ಅಲ್ಲಾಹನ ಹೊಣೆಗಾರಿಕೆಯಾಗಿದೆ. ಯಾರಾದರೂ ಈ ಪ್ರತಿಜ್ಞೆಯಲ್ಲಿ ಏನಾದರೂ ಕೊರತೆಯನ್ನು ಉಂಟು ಮಾಡಿದರೆ ಮತ್ತು ಅದಕ್ಕಾಗಿ ಇಹಲೋಕದಲ್ಲಿ ಶಿಕ್ಷೆ ಲಭಿಸಿದರೆ ಆ ಶಿಕ್ಷೆ ಅವನಿಗೆ ಪಾಪ ಪರಿಹಾರವಾಗಿ ಆಗುವುದು. ಯಾರಾದರೂ ಈ ಬೈಅತ್ ಪ್ರತಿಜ್ಞೆಯಲ್ಲಿ ಏನಾದರೂ ಕೊರತೆಯನ್ನು ಉಂಟುಮಾಡಿದರೆ ಮತ್ತು ಅಲ್ಲಾಹನು ಅದನ್ನು ಮರೆಮಾಡಿದರೆ ಅವನ ವಿಷಯ ಅಲ್ಲಾಹನ ಕೈಯಲ್ಲಿದೆ. ಅಲ್ಲಾಹನು ಇಚ್ಛಿಸಿದರೆ ಅವನಿಗೆ ಶಿಕ್ಷೆ ನೀಡಬಹುದು ಅಥವಾ ಅವನನ್ನು ಕ್ಷಮಿಸಬಹುದು.

**(ಸಹೀಹ್ ಬುಖಾರಿ – ಕಿತಾಬು ಮನಾಖಿಬುಲ್ ಅನ್‌ಸಾರ್; ಬಾಬ್ – ವಫೂದುಲ್ ಅನ್‌ಸಾರ್ ಇಲನ್ನಬೀ ಬಿಮಕ್ಕತಿ ವ ಬೈಅತುಲ್ ಅಖಬ)**

ಇನ್ನೊಂದು ಹದೀಸಿನಲ್ಲಿ ಹಝ್ರತ್ ಉಬಾದ ಬಿನ್ ಸಾಮಿತ್[ರ] ಹೀಗೆ ವರದಿ ಮಾಡುತ್ತಾರೆ: ನಾವು ಹಝ್ರತ್ ಮುಹಮ್ಮದ್‌ರ[ಸ] ಬೈಅತ್ ಈ ಶರತ್ತಿನೊಂದಿಗೆ ಮಾಡಿದೆವು –

ನಾವು ಆಲಿಸುವೆವು ಮತ್ತು ಅನುಸರಿಸುವೆವು – ಸೌಲಭ್ಯದಲ್ಲಿಯೂ ಸಂಕಷ್ಟದಲ್ಲಿಯೂ ಸಂತೋಷದಲ್ಲಿಯೂ ಸಂತಾಪದಲ್ಲಿಯೂ ನಾವು ನಮ್ಮ ಮೇಲಧಿಕಾರಿಗಳೊಂದಿಗೆ ಜಗಳ ಮಾಡಲಾರೆವು. ನಾವು ಎಲ್ಲಿದ್ದರೂ ಸತ್ಯದೊಂದಿಗೆ ನಿಲ್ಲುವೆವು. ಆಕ್ಷೇಪಿಸುವವನ ಆಕ್ಷೇಪಣೆಗೆ ನಾವು ಭಯಪಡಲಾರೆವು.

**(ಬುಖಾರಿ – ಕಿತಾಬುಲ್ ಬೈಅತ್; ಬಾಬುಲ್ ಬೈಅತ್ ಅಲಸ್ಸಮ್‌ಇ ವತ್ತಾಅತ್)**

ಉಮ್ಮುಲ್ ಮೂಮಿನೀನ್ (ಸತ್ಯವಿಶ್ವಾಸಿಗಳ ಮಾತೆ) ಹಝ್ರತ್ ಆಯಿಶಾ[ರ] ಹೀಗೆ ವರದಿ ಮಾಡುತ್ತಾರೆ:

ಹಝ್ರತ್ ಪೈಗಂಬರ್[ಸ] ಪವಿತ್ರ ಖುರ್‌ಆನಿನ ಈ ಕೆಳಗಿನ ವಚನದ ಪ್ರಕಾರ ಮಹಿಳೆಯರ ಬೈಅತ್ ಪಡೆಯುತ್ತಿದ್ದರು:

يَاَيُّهَا النَّبِيُّ اِذَا جَآءَكَ الْمُؤْمِنٰتُ يُبَايِعْنَكَ عَلٰٓى اَنْ لَّا يُشْرِكْنَ بِاللّٰهِ شَيْـًٔا وَلَا يَسْرِقْنَ وَلَا يَزْنِيْنَ وَلَا يَقْتُلْنَ اَوْلَادَهُنَّ وَلَا يَاْتِيْنَ بِبُهْتَانٍ يَّفْتَرِيْنَهٗ بَيْنَ اَيْدِيْهِنَّ وَاَرْجُلِهِنَّ وَلَا يَعْصِيْنَكَ فِيْ مَعْرُوْفٍ فَبَايِعْهُنَّ وَاسْتَغْفِرْ لَهُنَّ اللّٰهَ ؕ اِنَّ اللّٰهَ غَفُوْرٌ رَّحِيْمٌ

ಎಲೈ ಪ್ರವಾದಿ, ಸತ್ಯವಿಶ್ವಾಸಿನಿಯರು ನಿನ್ನ ಬಳಿಗೆ ಬಂದು, ತಾವು ಅಲ್ಲಾಹನಿಗೆ ಸಹಭಾಗಿತ್ವವನ್ನು ಕಲ್ಪಿಸಲಾರೆವು, ಕದಿಯಲಾರೆವು, ವ್ಯಭಿಚರಿಸಲಾರೆವು, ತಮ್ಮ ಸಂತಾನಗಳನ್ನು ಕೊಲ್ಲಲಾರೆವು, ಉದ್ದೇಶಪೂರ್ವಕವಾಗಿ ಸುಳ್ಳು ಆರೋಪವನ್ನು ಹೊರಿಸಲಾರೆವು ಮತ್ತು ಯಥೋಚಿತವಾಗಿ ಯಾವುದೇ ವಿಚಾರದಲ್ಲಿ ನಿಮಗೆ ಅವಿಧೇಯತೆ ತೋರಿಸಲಾರೆವು ಎಂಬ ನಿಬಂಧನೆಗಳೊಂದಿಗೆ ನಿನ್ನೊಡನೆ ಬೈಅತ್ (ಅನುಸರಣೆಯ ಪ್ರತಿಜ್ಞೆ) ಮಾಡಲು ಬಯಸಿದರೆ ನೀನು ಅವರ ಅನುಸರಣೆಯ ಪ್ರತಿಜ್ಞೆಯನ್ನು ಸ್ವೀಕರಿಸು ಮತ್ತು ಪಾಪ ವಿಮುಕ್ತಿಗೋಸ್ಕರ ಪ್ರಾರ್ಥಿಸು. ಖಂಡಿತವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ. **(60:13)**

ಹಝ್ರತ್ ಆಯಿಶಾ[ರ] ಹೀಗೆಯೂ ಹೇಳುತ್ತಾರೆ:

ಮಹಿಳೆಯರು ಬೈಅತ್ ಮಾಡುವಾಗ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ[ಸ] ಹಸ್ತ ತಮ್ಮ ಪತ್ನಿಯರ ಹೊರತು ಅನ್ಯ ಮಹಿಳೆಯರ ಹಸ್ತವನ್ನು ಸ್ಪರ್ಶಿಸುತ್ತಿರಲಿಲ್ಲ.

**(ಸಹೀಹ್ ಬುಖಾರಿ – ಕಿತಾಬುಲ್ ಅಹ್‌ಕಾಮ್; ಬಾಬು ಬೈಅತುನ್ನಿಸಾ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬೈಅತ್ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದನ್ನು ಪ್ರಾರಂಭಿಸುವ ಮೊದಲು ಉತ್ತಮಶೀಲರೂ ಇಸ್ಲಾಮಿನ ಬಗ್ಗೆ ನೋವನ್ನು ಹೊಂದಿದವರೂ ಆದ ಕೆಲವು ಹಿರಿಯ ಮಹಾನುಭಾವರು ಹೀಗೆ ಯೋಚಿಸುತ್ತಿದ್ದರು – ಅಲುಗಾಡುತ್ತಿರುವ ಇಸ್ಲಾಮಿನ ನೌಕೆಯನ್ನು ಮುಳುಗುವುದರಿಂದ ರಕ್ಷಿಸಬಲ್ಲ ಮತ್ತು ಇಸ್ಲಾಮಿನ ಕುರಿತು ನಿಜವಾಗಿಯೂ ನೋವನ್ನು ಹೊಂದಿದವರು ಯಾರಾದರೂ ಇರುವುದಾದರೆ ಅದು ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಸಾಹಿಬರಾಗಿದ್ದಾರೆ. ಅವರೇ ಮಸೀಹರೂ ಮಹ್‌ದಿಯೂ ಆಗಿದ್ದಾರೆ. "ನೀವು ನಮ್ಮಿಂದ ಬೈಅತ್ ಪಡೆಯಿರಿ" ಎಂದು ಅನೇಕರು ಅಪೇಕ್ಷಿಸುತ್ತಾ ಇದ್ದರು. ಆಗ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಿದ್ದರು: **ಲಸ್‌ತು ಬಿ ಮಅ್‌ಮೂರ್ –** "ನಾನು ಅದಕ್ಕಾಗಿ ಆಜ್ಞಾಪಿಸಲ್ಪಟ್ಟಿಲ್ಲ."

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಮೀರ್ ಅಬ್ಬಾಸ್ ಅಲಿ ಸಾಹಿಬರ ಮೂಲಕ ಮೌಲವಿ ಅಬ್ದುಲ್ ಖಾದಿರ್ ಸಾಹಿಬರಿಗೆ ಹೀಗೆ ಸ್ಪಷ್ಟವಾಗಿ ಬರೆದರು:

ಈ ವಿನೀತನ ಪ್ರಕೃತಿಯಲ್ಲಿ ಏಕದೇವ ವಿಶ್ವಾಸವು ಮತ್ತು ಅಲ್ಲಾಹನ ಕಡೆಗೆ ಬಾಗುವಿಕೆಯೂ ಅಗ್ರಸ್ಥಾನದಲ್ಲಿದೆ..... ಬೈಅತ್ ಬಗ್ಗೆ ಇಷ್ಟರ ತನಕ ಅಲ್ಲಾಹನಿಂದ ಯಾವುದೇ ಸಂದೇಶ ಲಭಿಸಿಲ್ಲ. ಆದುದರಿಂದ ಸ್ವತಃ ಹಾಗೆ ಹೆಜ್ಜೆ ಹಾಕುವುದು ಅನುಮತನೀಯವಲ್ಲ. **ಲಅಲ್ಲಲ್ಲಾಹಯುಹ್‌ದಿಸು ಬಅ್‌ದ**

**ಧ಼ಾಲಿಕ ಅಮ್‌ರ –** ಅಲ್ಲಾಹನು ಪ್ರಾಯಶಃ ಅನಂತರ ಈ ಬಗ್ಗೆ ತಿಳಿಸುವನು. ಮೌಲವಿ ಸಾಹಿಬ್, ನೀವು ಧಾರ್ಮಿಕ ಭ್ರಾತೃಭಾವ ಬೆಳೆಸಲು ಪ್ರಯತ್ನಿಸಿರಿ. ನಿಷ್ಠೆ ಮತ್ತು ಪ್ರೀತಿಯೆಂಬ ಪರಿಶುದ್ಧ ಕಾರಂಜಿಯಿಂದ ಈ ಗಿಡದ ಬೆಳವಣಿಗೆಗಾಗಿ ಪ್ರಯತ್ನ ಮಾಡುತ್ತಿದ್ದರೆ, ಈ ರೀತಿಯಲ್ಲಿ ವರ್ತಿಸುವುದು ಇನ್‌ಶಾಅಲ್ಲಾಹ್ (ಅಲ್ಲಾಹನು ಇಚ್ಛಿಸಿದರೆ) ಬಹಳ ಲಾಭದಾಯಕ ವಾಗುವುದು.

**(ಹಯಾತೆ ಅಹ್ಮದ್; ಸಂಪುಟ 2, ಪುಟ 12 – 13)**

## ಬೈಅತ್ ಪಡೆದುಕೊಳ್ಳಲು ಅಲ್ಲಾಹನಿಂದ ಆಜ್ಞೆ

ಕೊನೆಗೆ 1888ರ ಪ್ರಥಮ ಮೂರು ತಿಂಗಳುಗಳಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಬೈಅತ್ ಪಡೆದುಕೊಳ್ಳುವ ಆಜ್ಞೆ ನೀಡಿದನು. ಅಲ್ಲಾಹನ ಆಜ್ಞೆ ಹೀಗೆ ಇತ್ತು:

**ಇದ಼ಾ ಅಝ್ಮ್‌ತ್ತ ಫತವಕ್ಕಲ್ ಅಲಲ್ಲಾಹ್, ವಸ್‌ನಇಲ್ ಫುಲ್‌ಕ ಬಿ ಅಅ್‌ಯುನಿನಾ ವ ವಹ್‌ಯಿನ, ಅಲ್ಲದ಼ೀನ ಯುಬಾಯಿಊನಕ ಇನ್ನಮಾ, ಯುಬಾಯಿಊನಲ್ಲಾಹ ಯದುಲ್ಲಾಯಿ ಫೌಖ ಅಯ್‌ದೀಹಿಮ್.**

ಅರ್ಥ: ನೀನು ದೃಢ ನಿರ್ಧಾರ ಮಾಡಿದರೆ ಅಲ್ಲಾಹನ ಮೇಲೆ ಭರವಸೆ ಹೊಂದು. ನಮ್ಮ ಮುಂದೆ ಮತ್ತು ನಮ್ಮ ಸಂದೇಶ ವಚನಗಳ ಪ್ರಕಾರ ನೀನು ನೌಕೆಯನ್ನು ನಿರ್ಮಿಸು. ಯಾರು ನಿನ್ನ ಕೈ ಹಿಡಿದು ಬೈಅತ್ ಮಾಡುತ್ತಾರೋ ಅಲ್ಲಾಹನ ಕೈ ಅವರ ಕೈಗಳ ಮೇಲಿದೆ.

ಎಲ್ಲ ರೀತಿಯ ನಿಕೃಷ್ಟ ಜನರು ಬೈಅತ್ ಮಾಡುವವರಲ್ಲಿ ಸೇರಿಕೊಳ್ಳುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಕೃತಿಗೆ ಅಸಹ್ಯವಾಗಿತ್ತು. ಯಾರ ಪ್ರಕೃತಿಯಲ್ಲಿ ನಿಷ್ಠೆ ಇದೆಯೋ ಯಾರು ಅಪಕ್ವ ಸ್ವಭಾವವನ್ನು ಹೊಂದಿಲ್ಲವೋ ಅಂತಹ ಅನುಗ್ರಹೀತ ಜನರು ಬೈಅತ್ ಮಾಡಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಯಸಿದ್ದರು. ಆದುದರಿಂದ ನಿಷ್ಠಾವಂತರ ಮತ್ತು ಕಪಟ ವಿಶ್ವಾಸಿಗಳ ಮಧ್ಯೆ ವ್ಯತ್ಯಾಸವನ್ನು ಸ್ಪಷ್ಟಪಡಿಸುವಂತಹ ಒಂದು ಸಂದರ್ಭವನ್ನು ಅವರು ನಿರೀಕ್ಷಿಸುತ್ತಿದ್ದರು. ಅಲ್ಲಾಹನು ತನ್ನ ಪರಿಪೂರ್ಣ ಯುಕ್ತಿ ಮತ್ತು ಕಾರುಣ್ಯದಿಂದ, 1888ರ ನವೆಂಬರ್‌ನಲ್ಲಿ ಬಶೀರ್ ಅವ್ವಲ್ ನಿಧನ ಹೊಂದಿದಾಗ ಇಂತಹ ಸಂದರ್ಭ ಉಂಟುಮಾಡಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರ ಬಶೀರ್ ಅವ್ವಲ್ ನಿಧನ ಹೊಂದಿದಾಗ ಅವರ ವಿರುದ್ಧ ವಿರೋಧದ ಬಿರುಗಾಳಿ ಬೀಸಿತು. ದೃಢ ವಿಶ್ವಾಸಿಗಳಾಗದವರು ಸಂದೇಹ ಪೀಡಿತರಾಗಿ ದೂರಸರಿದರು. ಅನುಗ್ರಹೀತವಾದ ಬೈಅತ್ ಪ್ರತಿಜ್ಞೆ ಪಡೆಯಲು ಇದು ಸಕಾಲವೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿರ್ಧರಿಸಿದರು. 1888ರ ನವೆಂಬರ್ ದಿನಾಂಕ ಒಂದರಂದು ಒಂದು ಕರಪತ್ರದ ಮೂಲಕ ಅವರು ಬೈಅತ್ ಪಡೆದುಕೊಳ್ಳುವ

ಬಗ್ಗೆ ಪ್ರಕಟಿಸಿದರು. ಇಸ್ತಿಖಾರ ಪ್ರಾರ್ಥನೆ ಮಾಡಿದ ನಂತರ ಬೈಅತ್‌ಗಾಗಿ ಬರಬೇಕೆಂದು ಅವರು ಆದೇಶಿಸಿದರು.

**(ಇಶ್ತಿಹಾರ್ ತಕ್‌ಮೀಲೆ ತಬ್ಲೀಗ್; 12–1–1889 ನೋಡಿರಿ)**

ಮೊದಲು ದುಆ, ಇಸ್ತಿಖಾರ ಮಾಡಿದ ನಂತರ ಬೈಅತ್‌ಗಾಗಿ ಬರಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಯಸಿದರು.

ಈ ಕರಪತ್ರ ಪ್ರಕಟಿಸಿದ ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಖಾದಿಯಾನಿನಿಂದ ಲುಧಿಯಾನಕ್ಕೆ ಹೋಗಿ ಮಹಲ್ಲ ಜದೀದ್‌ನಲ್ಲಿರುವ ಹಝ್ರತ್ ಸೂಫೀ ಅಹ್ಮದ್ ಜಾನ್ ಸಾಹೇಬರ ಮನೆಯಲ್ಲಿ ತಂಗಿದರು.

**(ಹಯಾತೆ ಅಹ್ಮದ್; ಸಂಪುಟ 3, ಭಾಗ 1, ಪುಟ 1)**

## ಬೈಅತಿನ ಉದ್ದೇಶ ಲಕ್ಷ್ಯಗಳು

1889ರ ಮಾರ್ಚ್ ದಿನಾಂಕ 4ರಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಕರಪತ್ರದ ಮೂಲಕ ಹೀಗೆ ಪ್ರಕಟಿಸಿದರು:

> ಬೈಅತ್ ಮಾಡುವ ಈ ವ್ಯವಸ್ಥೆ ಭಯಭಕ್ತಿ (ತಖ್ವಾ) ಹೊಂದಿದ ಜನರ ಒಂದು ಜಮಾಅತನ್ನು ಸ್ಥಾಪಿಸಲಿಕ್ಕಾಗಿದೆ. ಅವರ ಮೂಲಕ ಭಯಭಕ್ತಿ ಹೊಂದಿದವರ ಒಂದು ದೊಡ್ಡ ಗುಂಪು ಲೋಕದಲ್ಲಿ ತನ್ನ ಉತ್ತಮ ಪ್ರಭಾವ ಬೀರುವಂತಾಗಬೇಕು. ಅವರ ಐಕ್ಯತೆ ಇಸ್ಲಾಮ್ ಧರ್ಮಕ್ಕೆ ಅನುಗ್ರಹ, ಘನತೆ ಮತ್ತು ಉತ್ತಮ ಪರಿಣಾಮ ಉಂಟುಮಾಡುವಂತಾಗಬೇಕು. ಅವರು ಏಕದೇವ ವಿಶ್ವಾಸದ ಮೂಲಮಂತ್ರದಲ್ಲಿ ವಿಶ್ವಾಸ ಹೊಂದಿ ಐಕ್ಯದಿಂದ ಇಸ್ಲಾಮಿಗಾಗಿ ಪರಿಶುದ್ಧ ಸೇವೆಯಲ್ಲಿ ಬೇಗನೆ ಮುಂದೆ ಸಾಗುವವರಾಗಬೇಕು. ಬೈಅತ್ ಮಾಡುವವರು, ಉದಾಸೀನತೆ ಹೊಂದಿದ, ಜಿಪುಣ ಮತ್ತು ಧರ್ಮಕ್ಕಾಗಿ ಖರ್ಚು ಮಾಡದ ಮುಸ್ಲಿಮನಾಗಬಾರದು. ತಮ್ಮ ಅನೈಕ್ಯತೆ ಮತ್ತು ಒಡಕಿನ ಕಾರಣದಿಂದ ಇಸ್ಲಾಮ್ ಧರ್ಮಕ್ಕೆ ಬಹಳ ನಷ್ಟವನ್ನುಂಟುಮಾಡಿದ ಮತ್ತು ಇಸ್ಲಾಮಿನ ಸುಂದರ ಮುಖಕ್ಕೆ ತಮ್ಮ ಧಿಕ್ಕಾರ ಮನೋಭಾವದಿಂದ ಕಳಂಕ ಉಂಟು ಮಾಡಿದ ಅಯೋಗ್ಯ ಜನರಂತೆ ಅವರು ಆಗಬಾರದು. ಇಸ್ಲಾಮ್ ಧರ್ಮದ ಆವಶ್ಯಕತೆಗಳ ಬಗ್ಗೆ ಏನೂ ತಿಳಿಯದೆ ಇರುವ, ತಮ್ಮ ಸಹೋದರರ ಹಿತದ ಬಗ್ಗೆ ಆಸಕ್ತಿ ಇಲ್ಲದ ಮತ್ತು ಮಾನವರ ಪ್ರಗತಿಗಾಗಿ ಯಾವುದೇ ಉತ್ಸಾಹವಿಲ್ಲದ ಮೂಢರಾದ ಸನ್ಯಾಸಿಗಳ ಹಾಗೆ ಮತ್ತು ಏಕಾಂತವಾಸಿಗಳ ಹಾಗೆ ಆಗಬಾರದು.
>
> ಬೈಅತ್ ಮಾಡುವವರು ತಮ್ಮ ಸಮುದಾಯದ ಹಿತೈಷಿಗಳಾಬೇಕು. ಎಂದರೆ ಅವರು ಬಡವರಿಗೆ ಆಶ್ರಯ ನೀಡುವವರಾಗಲಿ. ಅನಾಥರಿಗೆ ಪಿತರಾಗಲಿ. ಇಸ್ಲಾಮ್ ಧರ್ಮದ ಸೇವೆಗಾಗಿ ಪ್ರೇಮ ಪೀಡಿತನ ಹಾಗೆ

ಕೆಲಸ ಮಾಡಲು ಸಿದ್ಧರಾಗಲಿ. ಅವರ ಅನುಗ್ರಹಗಳು ಲೋಕದಾದ್ಯಂತ ಹರಡಲು ಎಲ್ಲ ರೀತಿಯಲ್ಲೂ ಪ್ರಯತ್ನಿಸಬೇಕು. ಅಲ್ಲಾಹನ ಕುರಿತು ಪ್ರೀತಿಯ ಮತ್ತು ಮಾನವರ ಹಿತದ ಬಗ್ಗೆ ಆಸಕ್ತಿಯ ಪವಿತ್ರ ಕಾರಂಜಿ ಪ್ರತಿಯೊಂದು ಹೃದಯದಿಂದ ಹೊರಚಿಮ್ಮಿ ಒಂದು ಸ್ಥಳದಲ್ಲಿ ಒಗ್ಗೂಡಿ ಒಂದು ನದಿಯ ರೂಪದಲ್ಲಿ ಹರಿಯುತ್ತಾ ಇರುವುದಾಗಿ ಕಾಣಿಸಿಕೊಳ್ಳಲಿ............. ಅಲ್ಲಾಹನು ಈ ಜನರ ಗುಂಪನ್ನು ತನ್ನ ಮಹತ್ವವನ್ನು ಪ್ರಕಟಿಸಲು, ತನ್ನ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಲಿಕ್ಕೋಸ್ಕರ ಸೃಷ್ಟಿಸಲು ಮತ್ತು ಅವರಿಗೆ ಅಭಿವೃದ್ಧಿ ನೀಡಲು ಬಯಸುತ್ತಾನೆ. ಆ ಮೂಲಕ ದೇವನ ಕುರಿತು ಪ್ರೀತಿ, ಅವನ ಕಡೆಗೆ ಪಶ್ಚಾತ್ತಾಪದಿಂದ ತಿರುಗುವಿಕೆ, ಪರಿಶುದ್ಧತೆ, ನೈಜ ಒಳಿತು, ಶಾಂತಿ, ಮೈತ್ರಿ ಮತ್ತು ಜನರ ಬಗ್ಗೆ ಹಿತಾಕಾಂಕ್ಷೆ ಹರಡಲಿಕ್ಕಾಗಿ ಈ ಜನರ ಗುಂಪು ಅಲ್ಲಾಹನ ಒಂದು ವಿಶಿಷ್ಟ ಗುಂಪಾಗುವುದು. ಅಲ್ಲಾಹನು ಅವರಿಗೆ ತನ್ನ ಆತ್ಮದಿಂದ ಶಕ್ತಿ ಕೊಡುವನು. ಅವರನ್ನು ಕೊಳಕು ಜೀವಿತದಿಂದ ಸ್ವಚ್ಛಗೊಳಿಸುವನು. ಅವರ ಜೀವಿತದಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡುವನು. ಅಲ್ಲಾಹನು ತನ್ನ ಪರಿಶುದ್ಧ ಭವಿಷ್ಯವಾಣಿಗಳಲ್ಲಿ ವಾಗ್ದಾನ ಮಾಡಿದ ಹಾಗೆ ಈ ಜನರ ಗುಂಪನ್ನು ಬಹಳ ವರ್ಧಿಸುವನು. ಇದರಲ್ಲಿ ಸಾವಿರಗಟ್ಟಲೆ ಸತ್ಯವಂತರನ್ನು ಸೇರಿಸುವನು. ಅವನು ಸ್ವತಃ ಇದಕ್ಕೆ ನೀರೆರೆಯುವನು. ಅವನೇ ಅದನ್ನು ಬೆಳೆಸುವನು. ಅವರ ಸಂಖ್ಯೆ ಮತ್ತು ಅವರಿಗೆ ದೊರೆತ ಅನುಗ್ರಹ ಜನರಿಗೆ ಆಶ್ಚರ್ಯಕರವಾಗುವುದು. ಎತ್ತರವಾದ ಸ್ಥಳದಲ್ಲಿರಿಸಿದ ದೀಪದ ಹಾಗೆ ಲೋಕದ ನಾಲ್ದೆಸೆಗಳಲ್ಲೂ ತನ್ನ ಪ್ರಕಾಶವನ್ನು ಬೀರುವುದು. ಇಸ್ಲಾಮ್ ಧರ್ಮದ ಅನುಗ್ರಹಗಳಿಗೆ ಅದೊಂದು ಮಾದರಿಯಾಗಿ ಗಣಿಸಲ್ಪಡುವುದು. ಈ ಜಮಾಅತಿನ ಪರಿಪೂರ್ಣ ಅನುಯಾಯಿಗಳಿಗೆ ಪ್ರತಿಯೊಂದು ಅನುಗ್ರಹದಲ್ಲಿ ಅನ್ಯರ ಮೇಲೆ ಜಯವನ್ನು ಅಲ್ಲಾಹನು ದಯಪಾಲಿಸುವನು. ಅಲ್ಲಾಹನ ಅಂಗೀಕಾರ ಮತ್ತು ಸಹಾಯವನ್ನು ಪಡೆದ ಜನರು ಅವರಲ್ಲಿ ಪುನರುತ್ಥಾನದ ದಿನದ ಹುಟ್ಟುತ್ತಾ ಇರುವರು. ಮಹತ್ವಶಾಲಿ ಪ್ರಭುವಾದ ಅಲ್ಲಾಹನು ಹೀಗೆ ಬಯಸುತ್ತಾನೆ. ಅವನು ಇಚ್ಛಿಸುವುದನ್ನು ಮಾಡುತ್ತಾನೆ. ಪ್ರತಿಯೊಂದು ಶಕ್ತಿ ಮತ್ತು ಸಾಮರ್ಥ್ಯ ಅವನಿಗೆ ಮಾತ್ರವಿದೆ.

ಈ ಪ್ರಕಟಣೆಯ ಪತ್ರದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ನಿರ್ದೇಶಿಸಿದರು: ಬೈಅತ್ ಮಾಡಲು ಬಯಸುವವರು ಮಾರ್ಚ್ ದಿನಾಂಕ 20ರ ನಂತರ ಲುಧಿಯಾನಕ್ಕೆ ಬರಬೇಕು.

**(ತಬ್ಲೀಗ್ ರಿಸಾಲತ್; ಸಂಪುಟ 1, ಪುಟ 150 – 155)**

## ಬೈಅತ್ ಪಡೆಯುವುದರ ಆರಂಭ

ಮೇಲಿನ ಪ್ರಕಟಣೆಯ ಪತ್ರದ ಪ್ರಕಾರ 1889 ಮಾರ್ಚ್ ದಿನಾಂಕ 23ರಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸೂಫೀ ಅಹ್ಮದ್ ಜಾನ್

ಸಾಹೇಬರ ಭವನದಲ್ಲಿ ಬೈಅತ್ ಪಡೆದರು. ಹಝ್ರತ್ ಮುನ್‌ಶೀ ಅಬ್ದುಲ್ಲಾ ಸನೌರಿಯರ ವರದಿ ಪ್ರಕಾರ ಬೈಅತ್ ಕುರಿತು ಚಾರಿತ್ರಿಕ ದಾಖಲೆಗಾಗಿ ಒಂದು ನೋಂದಣಿ ಪುಸ್ತಕವನ್ನು ತಯಾರಿಸಲಾಯಿತು. ಅದರ ಶೀರ್ಷಿಕೆ **"ಬೈಅತೆ ತೌಬ ಬರಾಯೆ ತಖ್ವಾ ವ ತಹಾರತ್"** (ಭಯ ಭಕ್ತಿ ಮತ್ತು ಪರಿಶುದ್ಧತೆಗಾಗಿ ಬೈಅತ್ ಮತ್ತು ಪಶ್ಚಾತ್ತಾಪದ ಪ್ರಾರ್ಥನೆ) ಎಂದಾಗಿತ್ತು.

ಆ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕೋಣೆಯಲ್ಲಿ ಕುಳಿತುಕೊಂಡು ಒಬ್ಬೊಬ್ಬರನ್ನು ಬೇರೆ ಬೇರೆಯಾಗಿ ಕರೆದು ಬೈಅತ್ ಪ್ರತಿಜ್ಞೆ ಮಾಡಿಸುತ್ತಿದ್ದರು. ಮೊತ್ತಮೊದಲು ಹಝ್ರತ್ ಮೌಲಾನಾ ನೂರುದ್ದೀನ್ ರಝಿಯಲ್ಲಾಹು ಅನ್‌ಹುರಿಂದ ಬೈಅತ್ ಪ್ರತಿಜ್ಞೆ ಪಡೆಯಲಾಯಿತು.

ಬೈಅತ್ ಮಾಡುವವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಉಪದೇಶಿಸಿದರು:

> ಈ ಜಮಾಅತಿಗೆ ಸೇರಿದವರು ಮೊದಲನೆಯದಾಗಿ ತಮ್ಮ ಜೀವಿತದಲ್ಲಿ ಬದಲಾವಣೆ ಉಂಟುಮಾಡಬೇಕು. ಅಲ್ಲಾಹನು ನಿಮ್ಮ ಪ್ರತಿಯೊಂದು ಕಷ್ಟದಲ್ಲಿ ಸಹಾಯಕನಾಗಲು ಅವನ ಬಗ್ಗೆ ನಿಮ್ಮ ವಿಶ್ವಾಸವು ಸತ್ಯಸಂಧವಾಗಿರಬೇಕು. ಅವನ ಆಜ್ಞೆಗಳನ್ನು ಕೀಳಾಗಿ ಕಾಣಬಾರದು. ಪ್ರತಿಯೊಂದು ಆಜ್ಞೆಗಳನ್ನು ಗೌರವಿಸಬೇಕು. ಅವನನ್ನು ಗೌರವಿಸುವ ಕುರಿತು ನೀವು ಕೃತಿ ರೂಪದಲ್ಲಿ ಸಾಕ್ಷ್ಯಾಧಾರ ನೀಡಬೇಕು.
>
> ಭೌತಿಕ ಸಾಧನಗಳಿಗೆ ತಲೆಬಾಗಿಸುವುದು ಮತ್ತು ಅಲ್ಲಾಹನನ್ನು ಬಿಟ್ಟು ಅವುಗಳಲ್ಲಿ ಭರವಸೆ ಇಡುವುದು ಶಿರ್ಕ್ (ಬಹು ದೇವಾರಾಧನೆ) ಮತ್ತು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವುದಕ್ಕೆ ಸಮವಾಗಿದೆ. ನಾವು ಸಾಧನಗಳ ನೆರವನ್ನು ಎಷ್ಟರ ಮಟ್ಟಿಗೆ ಪಡೆಯಬಹುದೆಂದರೆ ಅದರಿಂದ ಶಿರ್ಕ್ (ಬಹುದೇವಾರಾಧನೆ) ಉಂಟಾಗಬಾರದು. ನಮ್ಮ ನಿಲುವು ಇದಾಗಿದೆ: ನಾವು ಸಾಮಗ್ರಿಗಳ ಬಳಕೆಯನ್ನು ನಿಷಿದ್ಧಗೊಳಿಸುವುದಿಲ್ಲ. ಆದರೆ ಅವುಗಳ ಮೇಲೆ ಭರವಸೆ ಇಡುವುದನ್ನು ನಿಷಿದ್ಧಗೊಳಿಸುತ್ತೇವೆ. **ದಸ್ತ್ ದರ್‌ಕಾರ್ ದಿಲ್ ಬಾಯಾರ್** (ಕೈಗಳು ಕೆಲಸದಲ್ಲಿ ಹೃದಯ ದೇವನೊಂದಿಗೆ) ಎನ್ನುವಂತಿರಬೇಕು.
>
> ಕೇಳಿರಿ, ಬೈಅತ್ ಮಾಡಿದ ನೀವು ಬೈಅತ್ ಪ್ರತಿಜ್ಞೆಯನ್ನು ನಾಲಗೆಯಿಂದ ಉಚ್ಚರಿಸುವುದು ಸುಲಭದ ಕೆಲಸವಾಗಿದೆ. ಆದರೆ ಅದನ್ನು ಕೃತಿಗಿಳಿಸುವುದು ಕಷ್ಟಕರವಾಗಿದೆ. ಏಕೆಂದರೆ ಮನುಷ್ಯನನ್ನು ಧರ್ಮದ ಬಗ್ಗೆ ಪರಿವೆ ಇಲ್ಲದವನಂತೆ ಮಾಡಲು ಶೈತಾನನು ಪ್ರಯತ್ನಿಸುತ್ತಾ ಇರುತ್ತಾನೆ. ಲೋಕ ಮತ್ತು ಅದರ ಲಾಭಗಳನ್ನು ಶೈತಾನನು ಬಹಳ ಸುಲಭವೆಂದೂ ಆದರೆ ಧರ್ಮಾನುಷ್ಠಾನದ ಲಾಭ ಬಹಳ ದೂರವೆಂದೂ ತೋರಿಸುತ್ತಾನೆ. ಇದರಿಂದ ಹೃದಯ ಕಠಿಣವಾಗುತ್ತದೆ. ಮನುಷ್ಯನ ಮೊದಲಿನ ಸ್ಥಿತಿಗಿಂತ

ಅವನ ಅನಂತರದ ಸ್ಥಿತಿ ಹೆಚ್ಚು ಕೆಟ್ಟುಹೋಗುತ್ತದೆ. ನೀವು ಅಲ್ಲಾಹನ ಸಂಪ್ರೀತಿಯನ್ನು ಬಯಸುವಿರಾದರೆ, ಪಾಪದಿಂದ ನಿಮ್ಮನ್ನು ರಕ್ಷಿಸಿಕೊಳ್ಳುವಿರಿ ಎಂದು ನೀವು ಮಾಡಿದ ಈ ಪ್ರತಿಜ್ಞೆಯನ್ನು ಈಡೇರಿಸಲು ಶಕ್ತಿಯುತವಾಗಿ ಪ್ರಯತ್ನ ಮಾಡುತ್ತಾ ಇರಬೇಕು.

ನೀವು ಕಲಹದ ಮಾತುಗಳನ್ನಾಡಬೇಡಿರಿ. ನೀವು ಕೆಡುಕನ್ನು ಹಬ್ಬಿಸಬೇಡಿರಿ. ಬೈಗಳನ್ನು ಕೇಳಿ ಸಹನೆದೋರಿರಿ. ನೀವು ಯಾರನ್ನೂ ಎದುರಿಸಬೇಡಿರಿ. ನಿಮ್ಮನ್ನು ಎದುರಿಸಿದವರೊಂದಿಗೆ ಕೂಡ ದಯೆ ಮತ್ತು ಒಳಿತಿನೊಂದಿಗೆ ವರ್ತಿಸಿರಿ. ನೀವು ಮಧುರ ಮಾತುಗಳ ಉತ್ತಮ ಮಾದರಿ ತೋರಿಸಿರಿ. ಸತ್ಯ ಹೃದಯದಿಂದ ಪ್ರತಿಯೊಂದು ಆಜ್ಞೆಯನ್ನು ಪಾಲಿಸಿ ಅಲ್ಲಾಹನ ತೃಪ್ತಿ ಗಳಿಸಿರಿ. ಬೈಅತ್ ಮಾಡಿದ ಈ ಮನುಷ್ಯ ಮೊದಲಿದ್ದ ಹಾಗೆ ಇಲ್ಲ ಎಂದು ನಿಮ್ಮ ಶತ್ರುವಿಗೆ ಸಹ ಗೊತ್ತಾಗಲಿ.

ಮೊಕದ್ದಮೆಗಳಲ್ಲಿ ಸತ್ಯವಾದ ಸಾಕ್ಷ್ಯ ನೀಡಿರಿ. ಈ ಜಮಾಅತಿಗೆ ಸೇರುವವರು ಪೂರ್ಣ ಹೃದಯದೊಂದಿಗೆ, ಪೂರ್ಣ ಧೈರ್ಯದೊಂದಿಗೆ ಮತ್ತು ಸಂಪೂರ್ಣ ಜೀವದೊಂದಿಗೆ ಸತ್ಯವನ್ನು ಪಾಲಿಸುವವರಾಗಬೇಕು.

**(ಧ಼ಿಕ್ರೆ ಹಬೀಬ್; ಪುಟ 436 – 439)**

1903ರ ಮಾರ್ಚ್ ತಿಂಗಳಲ್ಲಿ ಈದ್ ದಿವಸ ಕೆಲವರು ಕುಳಿತಿದ್ದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರು ಹೀಗೆ ಹೇಳಿದರು:

ಈಗ ಬೈಅತ್ ಮಾಡಿದವರು (ಆಗ ಬೈಅತ್‌ಗಾಗಿ ಜನರು ಬಂದಿದ್ದರೆಂದು ತಿಳಿಯುತ್ತದೆ) ಮತ್ತು ಇದರ ಮೊದಲು ಬೈಅತ್ ಮಾಡಿದವರಿಗೆ ಉಪದೇಶದ ರೂಪದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ನೀವು ಪೂರ್ಣವಾಗಿ ಗಮನವಿಟ್ಟು ಆಲಿಸಿರಿ.

ನೀವು ಮಾಡಿದ ಈ ಬೈಅತ್, ತೌಬದ (ಪಶ್ಚಾತ್ತಾಪ ಸೂಚಿಸಿ ಅಲ್ಲಾಹನ ಕಡೆಗೆ ತಿರುಗುವ) ಬೈಅತ್ ಆಗಿದೆ. ತೌಬ ಎರಡು ರೀತಿಗಳಲ್ಲಿದೆ. ಒಂದನೆಯದು – ಹಿಂದೆ ಮಾಡಿದ ಪಾಪಗಳ ದುಷ್ಪರಿಣಾಮಗಳನ್ನು ನಿವಾರಿಸಲು ಯತ್ನಿಸುವುದು ಮತ್ತು ಎರಡನೆಯದು – ಇನ್ನು ಮುಂದೆ ಪಾಪ ಮತ್ತು ತಪ್ಪು ಕೆಲಸಗಳಿಂದ ಬಿಟ್ಟು ನಿಲ್ಲುವುದು ಮತ್ತು ತನ್ನನ್ನು ನರಕಾಗ್ನಿಯಿಂದ ರಕ್ಷಿಸಿಕೊಳ್ಳುವುದಾಗಿದೆ.

ತೌಬ ಮಾಡಿದರೆ ಹಿಂದೆ ಮಾಡಿದ ಪಾಪಗಳು ಕ್ಷಮಿಸಲ್ಪಡುತ್ತದೆ ಎಂಬುದು ಅಲ್ಲಾಹನ ವಾಗ್ದಾನವಾಗಿದೆ. ಆದರೆ ತೌಬ ಸತ್ಯವಾದ ಹೃದಯದೊಂದಿಗೆ ಮತ್ತು ನಿಷ್ಕಳಂಕ ಸಂಕಲ್ಪದಿಂದ ಮಾಡಿರಬೇಕು. ಯಾವುದಾದರೂ ರಹಸ್ಯವಾದ ರೀತಿಯ ವಂಚನೆ ಹೃದಯದ ಯಾವುದೇ ಮೂಲೆಯಲ್ಲಿ ಅಡಗಿರಬಾರದು. ಅಲ್ಲಾಹನು ಹೃದಯಗಳ ರಹಸ್ಯಗಳನ್ನು ಬಲ್ಲವನಾಗಿದ್ದಾನೆ. ಅವನು ಯಾರಿಂದಲೂ ಮೋಸಗೊಳಿಸಲ್ಪಡಲಾರನು.

ಅಲ್ಲಾಹನನ್ನು ವಂಚಿಸಲು ಯಾರೂ ಪ್ರಯತ್ನಿಸಬಾರದು. ಅವನ ಮುಂದೆ ಸತ್ಯದೊಂದಿಗೆ, ಕಾಪಟ್ಯರಹಿತವಾಗಿ ಪಶ್ಚಾತ್ತಾಪದೊಂದಿಗೆ ಪ್ರಾರ್ಥಿಸಿರಿ. ತೌಬ ಎಂಬುದು ಮನುಷ್ಯನಿಗೆ ಅನಾವಶ್ಯಕವಾದುದೂ ನಿಷ್ಪ್ರಯೋಜಕವೂ ಅಲ್ಲ. ಅದರ ಪ್ರಭಾವ ಕೇವಲ ಪರಲೋಕಕ್ಕೆ ಸೀಮಿತವಾಗಿಲ್ಲ. ಅದರ ಮೂಲಕ ಮನುಷ್ಯನ ಇಹಲೋಕ ಜೀವಿತ ಮತ್ತು ಧರ್ಮವು ಸರಿಪಡಿಸಲ್ಪಡುತ್ತದೆ. ಅಂತಹ ಮನುಷ್ಯನಿಗೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವೂ ಸಂತೋಷವೂ ದಯಪಾಲಿಸಲ್ಪಡುತ್ತದೆ.

**(ಮಲ್‌ಫೂಝಾತ್; ಭಾಗ 5, ಪುಟ 187 – 188)**

# ಬೈಅತಿನ ಪ್ರಥಮ ಶರತ್ತು

**ಬೈಅತ್ ಮಾಡುವ ವ್ಯಕ್ತಿ ಸತ್ಯಸಂಧ ಹೃದಯದೊಂದಿಗೆ ಹೀಗೆ ಪ್ರತಿಜ್ಞೆ ಮಾಡಬೇಕು: ಜೀವಾಂತ್ಯದ ವರೆಗೆ ಬಹುದೇವಾರಾಧನೆ (ಶಿರ್ಕ್) ಮಾಡುವುದರಿಂದ ತನ್ನನ್ನು ರಕ್ಷಿಸಿಕೊಳ್ಳುವೆನು.**

## ಅಲ್ಲಾಹನು ಶಿರ್ಕನ್ನು (ಬಹುದೇವಾರಾಧನೆಯನ್ನು) ಕ್ಷಮಿಸಲಾರನು

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

إِنَّ اللّٰهَ لَا يَغْفِرُ أَنْ يُشْرَكَ بِهٖ وَيَغْفِرُ مَا دُوْنَ ذٰلِكَ لِمَنْ يَّشَآءُ ۚ وَمَنْ يُشْرِكْ بِاللّٰهِ فَقَدِ افْتَرٰٓى إِثْمًا عَظِيْمًا

(ಬೇರೆ ಯಾವುದಕ್ಕೂ) ಅವನೊಂದಿಗೆ ಸಹಭಾಗಿತ್ವ ಕಲ್ಪಿಸುವುದನ್ನು (ಶಿರ್ಕನ್ನು) ಖಂಡಿತವಾಗಿಯೂ ಅಲ್ಲಾಹನು ಕ್ಷಮಿಸಲಾರ. ಅದರ ಹೊರತಿರುವುದನ್ನು ತಾನಿಚ್ಛಿಸುವವರಿಗೆ ಅವನು ಕ್ಷಮಿಸುವನು. ಯಾವನಾದರೂ ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸಿದರೆ ಖಂಡಿತವಾಗಿಯೂ ಅವನು ಘೋರ ಪಾಪಕರವಾದ ಮಿಥ್ಯಾರೋಪವನ್ನು ಮಾಡುತ್ತಾನೆ. **(4: 49)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಬಗ್ಗೆ ಹೇಳುತ್ತಾರೆ:

ಅಲ್ಲಾಹನು ಪ್ರತಿಯೊಂದು ಪಾಪವನ್ನು ಕ್ಷಮಿಸುವನು. ಆದರೆ ಶಿರ್ಕನ್ನು ಕ್ಷಮಿಸಲಾರನು ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ್ದಾನೆ. ಆದ್ದರಿಂದ ಶಿರ್ಕ್ ಕಡೆಗೆ ಹೋಗಬೇಡಿರಿ. ಅದನ್ನು ನಿಷಿದ್ಧ ವೃಕ್ಷ ಎಂದು ತಿಳಿದುಕೊಳ್ಳಿರಿ.

**(ಝಮೀಮ ತುಹ್‌ಫಃ ಗೋಲ್ಡವಿಯಾ; ರೂಹಾನೀ ಖಝಾಇನ್, ಸಂಪುಟ 17, ಪುಟ 323 – 324, ಟಿಪ್ಪಣಿ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಇಲ್ಲಿ ಶಿರ್ಕ್ ಎಂದು ಹೇಳಿದ್ದು ಕೇವಲ ಕಲ್ಲುಗಳು ಮೊದಲಾದವುಗಳನ್ನು ಪೂಜಿಸುವ ಕುರಿತಲ್ಲ. ಭೌತಿಕ ಮಾರ್ಗಗಳನ್ನು (ಸಾಧನ) ಪೂಜಿಸುವುದು ಮತ್ತು ಅಲ್ಲಾಹನು ಸೃಷ್ಟಿಸಿದ ಲೌಕಿಕ ವಸ್ತುಗಳಿಗೆ ಮಹತ್ವ ನೀಡುವುದು ಇವೇ ಶಿರ್ಕ್‌ಗಳಾಗಿವೆ.

**(ಅಲ್‌ಹಕಮ್; ಸಂಪುಟ 7, ಸಂಚಿಕೆ 24, 30/6/1903. ಪುಟ 11)**

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

وَإِذْ قَالَ لُقْمٰنُ لِابْنِهٖ وَهُوَ يَعِظُهٗ يٰبُنَيَّ لَا تُشْرِكْ بِاللّٰهِ ۖ إِنَّ الشِّرْكَ لَظُلْمٌ عَظِيْمٌ

> ತನ್ನ ಪುತ್ರನಿಗೆ ಉಪದೇಶಿಸುತ್ತಾ ಲುಖ್‌ಮಾನ್ ನುಡಿದ ಸಂದರ್ಭ: ನನ್ನ ಪ್ರಿಯ ಮಗನೇ, ನೀನು ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಸಬೇಡ. (ಅಲ್ಲಾಹನಿಗೆ) ಸಹಭಾಗಿಗಳನ್ನು ಕಲ್ಪಿಸುವುದು ಖಂಡಿತವಾಗಿಯೂ ಘೋರ ದುಷ್ಕರ್ಮವಾಗಿದೆ. **(31: 14)**

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರಿಗೆ(ಸ) ತನ್ನ ಸಮುದಾಯದಲ್ಲಿ ಶಿರ್ಕ್ ವ್ಯಾಪಿಸುವ ಕುರಿತು ಆತಂಕವಿದ್ದಿತು. ಒಂದು ಹದೀಸಿನಲ್ಲಿ ಉಬಾದ ಬಿನ್ ನಸೀ ಹೀಗೆ ಹೇಳುತ್ತಾರೆ:

> ಶದ್ದಾದ್ ಬಿನ್ ಔಸ್(ರ) ಅಳುತ್ತಾ ಇದ್ದರು. ನೀವು ಏಕೆ ಅಳುತ್ತಿದ್ದೀರಿ ಎಂದು ವಿಚಾರಿಸಿದಾಗ, ಅವರು ಹೇಳಿದರು: ಹಝ್ರತ್ ಪೈಗಂಬರ್(ಸ) ಹೇಳಿದ ಒಂದು ವಿಷಯ ನನಗೆ ನೆನಪಿಗೆ ಬಂದಾಗ ನಾನು ಅಳತೊಡಗಿದೆನು. ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದರು: ನಾನು ನನ್ನ ಸಮುದಾಯದವರ ಶಿರ್ಕ್ ಮತ್ತು ರಹಸ್ಯ ವ್ಯಾಮೋಹಗಳ ಕುರಿತು ಭಯಪಡುತ್ತೇನೆ. ಆಗ ನಾನು ಕೇಳಿದೆ: ಅಲ್ಲಾಹನ ಪ್ರವಾದಿಯೇ, ನಿಮ್ಮ ಸಮುದಾಯ ನಿಮ್ಮ ಅಗಲುವಿಕೆಯ ನಂತರ ಶಿರ್ಕ್ ಮಾಡುವುದೇ? ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಸಮುದಾಯ ಸೂರ್ಯ ಚಂದ್ರರನ್ನೂ ವಿಗ್ರಹಗಳನ್ನೂ ಕಲ್ಲುಗಳನ್ನೂ ಆರಾಧಿಸಲಾರರು. ಆದರೆ ಅವರು ತೋರಿಕೆಗಾಗಿ ಸತ್ಕಾರ್ಯ ಮಾಡುವರು. ಅವರು ರಹಸ್ಯ ವ್ಯಾಮೋಹಗಳಲ್ಲಿ ಮುಳುಗುವರು. ಅವರಲ್ಲಿ ಯಾರಾದರೂ ಉಪವಾಸ ವ್ರತ ಮಾಡುವವನಾಗಿ, ಬೆಳಗ್ಗೆ ಎದ್ದ ನಂತರ ಯಾವುದಾದರೂ ಆಶೆಗೊಳಗಾದರೆ ಅವನು ಉಪವಾಸವನ್ನು ಬಿಟ್ಟು ಆ ಆಶೆಯನ್ನು ಈಡೇರಿಸುವನು.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 4, ಪುಟ 124; ಬೈರೂತ್‌ನಲ್ಲಿ ಮುದ್ರಿತ)**

## ಶಿರ್ಕ್ ವಿವಿಧ ರೀತಿಗಳಲ್ಲಿ

ಹದೀಸಿನಲ್ಲಿ ಹೇಳಿದ ಪ್ರಕಾರ ಬಾಹ್ಯವಾಗಿ ಕಾಣುವ ಶಿರ್ಕ್, ಮೂರ್ತಿ ಪೂಜೆ, ಸೂರ್ಯ ಚಂದ್ರರ ಪೂಜೆ ಮಾಡದಿದ್ದರೂ ತೋರಿಕೆಗಾಗಿ ಮಾಡುವ ಸತ್ಕಾರ್ಯ, ಆಶಾಭಿಲಾಷೆಗಳನ್ನು ಹಿಂಬಾಲಿಸುವುದು ಶಿರ್ಕ್‌ನಲ್ಲಿ ಸೇರಿದೆ. ಒಬ್ಬ ಕೆಳಮಟ್ಟದ ನೌಕರ ತನ್ನ ಮೇಲಧಿಕಾರಿಯನ್ನು ಅನುಸರಿಸುವ ಪರಿಧಿಯನ್ನು ಮೀರಿ ಅವನನ್ನು ಹೊಗಳುತ್ತಾ ಅವನ ಹಿಂದೆ ಮುಂದೆ ನಡೆಯುತ್ತಾ "ನನ್ನ ಜೀವನಾಧಾರವು ಇವರನ್ನು ಹೊಂದಿಕೊಂಡಿದೆ" ಎಂದು ಯೋಚಿಸುವನಾದರೆ ಇದು ಸಹ ಒಂದು ರೀತಿಯ ಶಿರ್ಕ್ ಆಗಿದೆ. ಒಬ್ಬನು ತನ್ನ ಮಕ್ಕಳ ಕುರಿತು ಅಭಿಮಾನ ಹೊಂದಿ ನನಗೆ ಇಷ್ಟು ಮಕ್ಕಳಿದ್ದಾರೆ, ಇವರು ಬೆಳೆದು ದೊಡ್ಡವರಾಗುತ್ತಿದ್ದಾರೆ, ಅವರು ನೌಕರಿ ಗಳಿಸಿ ಸಂಪಾದನೆ ಮಾಡುವರು, ನನ್ನ ಖರ್ಚು ವೆಚ್ಚ ನೋಡಿಕೊಳ್ಳುವರು, ನಾನು ಸಂತೋಷದಿಂದ ನನ್ನ ಉಳಿದ

ಜೀವಿತ ಕಾಲವನ್ನು ಕಳೆಯುವೆನು ಎಂದು ಯೋಚಿಸುತ್ತಾನೆ. ನನ್ನ ತರುಣರಾದ ಮಕ್ಕಳ ಕಾರಣದಿಂದ ನನ್ನ ಸಹಭಾಗಿಗಳು ನನ್ನನ್ನು ಎದುರಿಸಲಾರರು ಎಂದು ಭಾವಿಸುತ್ತಾನೆ. (ಭಾರತದ ಉಪ ಭೂಖಂಡದಲ್ಲಿ ಮತ್ತು ತೃತೀಯ ಲೋಕದ ದೇಶಗಳಲ್ಲಿ ಸಹಭಾಗಿತ್ವದ ಕೆಟ್ಟ ಆಚಾರವಿದೆ). ಹೀಗೆ ತಮ್ಮ ಮಕ್ಕಳ ಮೇಲೆ ಪೂರ್ಣ ಭರವಸೆ ಇಡುತ್ತಾರೆ. ಕೊನೆಗೆ ಇಂತಹ ತಂದೆ ತಾಯಂದಿರ ಮಕ್ಕಳು ಅಯೋಗ್ಯರಾಗುತ್ತಾರೆ ಅಥವಾ ಯಾವುದಾದರೂ ಅಪಘಾತದಲ್ಲಿ ಮೃತರಾಗುತ್ತಾರೆ ಅಥವಾ ಅಂಗವಿಕಲತೆಯನ್ನು ಹೊಂದುತ್ತಾರೆ. ಮೇಲಿನಂತೆ ಭಾವಿಸಿದ ವ್ಯಕ್ತಿಯ ಎಲ್ಲ ಆಶ್ರಯಗಳು ಕೊನೆಗೊಳ್ಳುತ್ತವೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ:

> ತೌಹೀದ್ (ಏಕದೇವ ವಿಶ್ವಾಸ) ಎಂದರೆ ಕೇವಲ ಬಾಯಿಯಲ್ಲಿ **ಲಾ ಇಲಾಹ ಇಲ್ಲಲ್ಲಾಹ್** (ಅಲ್ಲಾಹನ ಹೊರತು ಅನ್ಯ ಆರಾಧ್ಯನಿಲ್ಲ) ಎಂದು ಹೇಳಿ ಹೃದಯದಲ್ಲಿ ಸಾವಿರಾರು ವಿಗ್ರಹಗಳನ್ನು ಸ್ಥಾಪಿಸುವುದು ಅಲ್ಲ. ಯಾರು ತನ್ನ ಕೆಲಸ, ತನ್ನ ಕುತಂತ್ರ, ತನ್ನ ವಂಚನೆ ಮತ್ತು ತನ್ನ ಪ್ರಯತ್ನಕ್ಕೆ ಅಲ್ಲಾಹನಿಗೆ ಕೊಡಬೇಕಾದಂತಹ ಮಹತ್ವ ನೀಡುತ್ತಾನೋ ಅಥವಾ ಯಾವನಾದರೂ ಮನುಷ್ಯನ ಬಗ್ಗೆ ಭರವಸೆಯನ್ನು ಅಲ್ಲಾಹನ ಬಗ್ಗೆ ಭರವಸೆ ಇಡುವ ರೀತಿಯಲ್ಲಿ ಇಡುತ್ತಾನೋ ಅಥವಾ ಅಲ್ಲಾಹನಿಗೆ ನೀಡಬೇಕಾದ ಶ್ರೇಷ್ಠತೆಯನ್ನು ಸ್ವಂತಕ್ಕೆ ನೀಡುತ್ತಾನೋ ಅವನು ಅಲ್ಲಾಹನ ದೃಷ್ಟಿಯಲ್ಲಿ ಮೂರ್ತಿ ಪೂಜಕನಾಗಿದ್ದಾನೆ. ಚಿನ್ನ, ಬೆಳ್ಳಿ, ಹಿತ್ತಾಳೆ ಅಥವಾ ಕಲ್ಲುಗಳಿಂದ ಮಾಡಲ್ಪಡುವವುಗಳು ಮತ್ತು ಅವುಗಳ ಮೇಲೆ ಭರವಸೆ ಇಡಲ್ಪಡುವವುಗಳು ಮಾತ್ರ ವಿಗ್ರಹಗಳಲ್ಲ. ಪ್ರತಿಯೊಂದು ವಸ್ತು, ಮಾತು ಅಥವಾ ಕೆಲಸಕ್ಕೆ ಅಲ್ಲಾಹನಿಗೆ ಅರ್ಹವಾದ ಮಹತ್ವವನ್ನು ನೀಡುವುದಾದರೆ ಅದು ಅಲ್ಲಾಹನ ದೃಷ್ಟಿಯಲ್ಲಿ ಶಿರ್ಕ್ ಆಗುತ್ತದೆ..... ನೀವು ನೆನಪಿಟ್ಟುಕೊಳ್ಳಿರಿ; ಅಲ್ಲಾಹನು ಬಯಸುವ ನಿಜವಾದ ತೌಹೀದ್ (ಏಕದೇವ ವಿಶ್ವಾಸ) ಯಾವುದರ ಬಗ್ಗೆ ಪ್ರತಿಜ್ಞೆ ಮಾಡುವುದರೊಂದಿಗೆ ನಮ್ಮ ಮೋಕ್ಷವು ಅವಲಂಬಿಸಿದೆಯೋ ಅದು ಇದಾಗಿದೆ: ವಿಗ್ರಹ, ಮನುಷ್ಯ, ಸೂರ್ಯ, ಚಂದ್ರ, ಸ್ವಂತ ವ್ಯಕ್ತಿತ್ವ, ಸ್ವಂತ ಪ್ರಯತ್ನ, ಮೋಸ – ವಂಚನೆ ಮೊದಲಾದುವುಗಳು ಅಲ್ಲಾಹನಿಗೆ ಸರಿಸಾಟಿಗಳಾಗಲಾರವು. ಅಲ್ಲಾಹನ ಎದುರಿಗೆ ಯಾವುದನ್ನೂ ಶಕ್ತಿಶಾಲಿ ಎಂದು ಭಾವಿಸದೆ ಇರುವುದು. ಅಲ್ಲಾಹನ ಹೊರತು ಬೇರೆ ಯಾರನ್ನೂ ತನಗೆ ಜೀವನಾಧಾರ ಒದಗಿಸುವವರೆಂದು ಬಗೆಯದಿರುವುದು. ಯಾರನ್ನಾದರೂ ತನಗೆ ಗೌರವ ನೀಡಬಲ್ಲವನೆಂದೂ ತನ್ನನ್ನು ಹೀನಾಯಗೊಳಿಸಬಲ್ಲವನೆಂದೂ ಗ್ರಹಿಸದಿರುವುದು. ಅಲ್ಲಾಹನ ಹೊರತು ಯಾರನ್ನೂ ಸಹಾಯಕನೆಂದು ಗಣಿಸದಿರುವುದು ಮತ್ತು ಪ್ರೀತಿಯನ್ನು ಅಲ್ಲಾಹನಿಗೆ ಮೀಸಲಾಗಿಟ್ಟಿರುವುದು. ಆರಾಧನೆಯನ್ನು ಅವನಿಗೆ ಮಾತ್ರ ಮಾಡುವುದು. ತನ್ನ ವಿಧೇಯತೆಯನ್ನು

ಅಲ್ಲಾಹನಿಗೆ ವಿಶಿಷ್ಟವಾಗಿ ತೋರಿಸುವುದು. ತನ್ನ ಪ್ರತೀಕ್ಷೆಗಳನ್ನು ಅವನ ಬಗ್ಗೆ ಹೊಂದುವುದು. ಅವನಿಗೆ ಮಾತ್ರ ಭಯಪಡುವುದು.

ಯಾವುದೇ ತೌಹೀದ್ (ಏಕದೇವ ವಿಶ್ವಾಸ) ಈ ಕೆಳಗಿನ ಮೂರು ವೈಶಿಷ್ಟಗಳಿಲ್ಲದೆ ಪೂರ್ಣವಾಗಲಾರದು. ಅಲ್ಲಾಹನ ಅಸ್ತಿತ್ವದ ಕುರಿತು ಅವನು ಏಕನೆಂಬ ವಿಶ್ವಾಸ. ಎಂದರೆ ಅವನ ಮುಂದೆ ಉಳಿದೆಲ್ಲವೂ ನಶ್ವರವೆಂದು ನಂಬುವುದು. ಪ್ರತಿಯೊಂದು ವಸ್ತು ನಾಶವಾಗಲಿದೆ ಎಂದೂ ಅಸ್ತಿತ್ವಹೀನವಾಗಲಿದೆಯೆಂದೂ ಭಾವಿಸುವುದು. ಎರಡನೆಯದಾಗಿ, ಅಲ್ಲಾಹನ ಗುಣವಿಶೇಷಗಳ ಕುರಿತು ಏಕತ್ವದ ನಂಬಿಕೆ. ಎಂದರೆ ಪಾಲನೆ, ಪೋಷಣೆ ಮಾಡುವ ಗುಣ ಮತ್ತು ದೈವತ್ವ ಅಲ್ಲಾಹನ ಹೊರತು ಬೇರೆ ಯಾರಿಗೂ ಇಲ್ಲ ಎಂದು ನಂಬುವುದು. ಬಾಹ್ಯವಾಗಿ ಕಾಣುವ ಪಾಲಕರು ಅಥವಾ ಅನುಗ್ರಹದಾತರು ಅಲ್ಲಾಹನ ಕೈಗಳ ಮೂಲಕ ಸ್ಥಾಪಿಸಲ್ಪಟ್ಟ ಒಂದು ವ್ಯವಸ್ಥೆಯ ಭಾಗವಾಗಿದ್ದಾರೆ ಎಂದು ದೃಢವಾಗಿ ನಂಬುವುದು. ಮೂರನೆಯದಾಗಿ, ತನ್ನ ಪ್ರೀತಿ, ಸತ್ಯ, ನಿಷ್ಠೆ ಮೊದಲಾದುವುಗಳಲ್ಲಿ ಅಲ್ಲಾಹನ ಹೊರತು ಬೇರೆ ಯಾರಿಗೂ ಸಹಭಾಗಿತ್ವವನ್ನು ಕಲ್ಪಿಸದಿರುವುದು ಮತ್ತು ಅಲ್ಲಾಹನಲ್ಲಿಯೇ ಲೀನವಾಗಿರುವುದು.

**(ಸಿರಾಜುದ್ದೀನ್ ಈಸಾಯೀ ಕೆ ಚಾರ್ ಸವಾಲೋಂಕಾ ಜವಾಬ್; ರೂಹಾನೀ ಖಝಾಇನ್, ಸಂಪುಟ 12, ಪುಟ 349 – 350)**

ಈ ಬಗ್ಗೆ ನಾನು ಸಂಕ್ಷಿಪ್ತವಾಗಿ ಇದರ ಮೊದಲು ವಿವರಿಸಿದ್ದೇನೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಈ ಬಗ್ಗೆ ಹೇಳುತ್ತಾರೆ:

ಅಲ್ಲಾಹನ ಹೊರತು ಅವನ ಯಾವುದಾದರೂ ನಾಮದಲ್ಲಿ, ಯಾವುದಾದರೂ ಕೆಲಸದಲ್ಲಿ, ಯಾವುದಾದರೂ ಆರಾಧನೆಯಲ್ಲಿ ಅನ್ಯರನ್ನು ಸಹಭಾಗಿಗಳನ್ನಾಗಿ ಮಾಡುವುದು ಶಿರ್ಕ್ ಆಗಿದೆ. ಎಲ್ಲ ಒಳ್ಳೆಯ ಕೆಲಸಗಳನ್ನು ಅಲ್ಲಾಹನ ಸಂಪ್ರೀತಿಗಾಗಿ ಮಾಡುವುದರ ಹೆಸರು ಇಬಾದತ್ (ಆರಾಧನೆ) ಎಂದಾಗಿದೆ. ಅಲ್ಲಾಹನ ಹೊರತು ಬೇರೆ ಯಾವ ಸೃಷ್ಟಿಕರ್ತನೂ ಇಲ್ಲ ಎಂದು ಜನರು ಅಂಗೀಕರಿಸುತ್ತಾರೆ. ಜೀವಿತ ಮತ್ತು ಮರಣ ಅಲ್ಲಾಹನ ಕೈಗಳಲ್ಲಿ, ಅವನ ಸ್ವಾಧೀನದಲ್ಲಿ, ಅವನ ಅಧಿಕಾರಕ್ಕೊಳಪಟ್ಟಿದೆ ಎಂದು ಸಹ ಜನರು ನಂಬುತ್ತಾರೆ. ಹೀಗೆ ನಂಬಿದ ನಂತರ ಕೂಡ ಜನರು ಅನ್ಯರ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುತ್ತಾರೆ, ಸುಳ್ಳು ಹೇಳುತ್ತಾರೆ ಮತ್ತು ಪ್ರದಕ್ಷಿಣೆ ಮಾಡುತ್ತಾರೆ. ಅಲ್ಲಾಹನನ್ನು ಆರಾಧಿಸದೆ ಅನ್ಯರನ್ನು ಆರಾಧಿಸುತ್ತಾರೆ. ಅಲ್ಲಾಹನು ನಿರ್ದೇಶಿಸಿದ ಉಪವಾಸವನ್ನು ಬಿಟ್ಟು ಬೇರೆಯವರಿಗಾಗಿ ಉಪವಾಸವನ್ನು ಮಾಡುತ್ತಾರೆ. ಅಲ್ಲಾಹನು ವಿಧಿಸಿದ ನಮಾಝನ್ನು ಬಿಟ್ಟು ಅನ್ಯರಿಗೆ ಪ್ರಾರ್ಥನೆ ಮಾಡುತ್ತಾರೆ. ಅವರಿಗಾಗಿ ಝಕಾತ್ ಕೊಡುತ್ತಾರೆ. ಈ ಮಿಥ್ಯ ವಿಶ್ವಾಸಗಳನ್ನು ಕಿತ್ತೆಸೆಯಲು ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹರನ್ನು[ಸ] ಕಳುಹಿಸಿದನು.

**(ಖುತುಬಾತೆ ನೂರ್; ಪುಟ 7 – 8)**

## ಬೈಅತಿನ ಎರಡನೆಯ ಶರತ್ತು

**ಸುಳ್ಳು, ವ್ಯಭಿಚಾರ, ದುರ್ನೋಟ, ದೇವಾಜ್ಞೆಗಳ ಉಲ್ಲಂಘನೆ, ದೌರ್ಜನ್ಯ, ವಿಶ್ವಾಸ ವಂಚನೆ, ಶಾಂತಿಭಂಗ, ವಿದ್ರೋಹ ಮುಂತಾದವುಗಳಿಂದ ದೂರವಿರುವೆನು ಮತ್ತು ಭಾವೋದ್ರೇಕಗಳ ಸಂದರ್ಭಗಳಲ್ಲಿ ಅವು ಎಷ್ಟು ತೀವ್ರವಾಗಿದ್ದರೂ ಅವುಗಳಿಂದ ಸೋಲಿಸಲ್ಪಡಲಾರೆ.**

ಈ ಶರತ್ತಿನಲ್ಲಿ ಒಂಬತ್ತು ದುರ್ಗುಣಗಳನ್ನು ವಿವರಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿರುವೆನೆಂದು ವಾದಿಸುವ ಬೈಅತ್ ಮಾಡಿದ ಪ್ರತಿಯೊಬ್ಬನೂ ಈ ದುರ್ಗುಣಗಳಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾಗಿದೆ.

### ಅತ್ಯಂತ ದೊಡ್ಡ ದುರ್ಗುಣ – ಸುಳ್ಳು ಹೇಳುವುದು

ಅತ್ಯಂತ ದೊಡ್ಡ ದುರ್ಗುಣ ಸುಳ್ಳು ಹೇಳುವುದಾಗಿದೆ. ಹಝ್ರತ್ ಪೈಗಂಬರರೊಂದಿಗೆ(ಸ) ಒಬ್ಬನು "ನನಗೆ ಏನಾದರೂ ಉಪದೇಶ ನೀಡಿರಿ. ಅದರ ಪ್ರಕಾರ ನಾನು ವರ್ತಿಸುವೆನು. ನನ್ನಲ್ಲಿ ಅನೇಕ ದುರ್ಗುಣಗಳಿವೆ ಅವುಗಳನ್ನೆಲ್ಲ ಬಿಟ್ಟು ಬಿಡಲು ನನಗೆ ಸಾಧ್ಯವಾಗದು" ಎಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಯಾವಾಗಲೂ ಸತ್ಯ ಹೇಳುವೆನು ಮತ್ತು ಎಂದೂ ಸುಳ್ಳು ಹೇಳಲಾರೆನು ಎಂದು ಪ್ರತಿಜ್ಞೆ ಮಾಡು."

ಅನಂತರ ಆ ವ್ಯಕ್ತಿಯ ಎಲ್ಲ ದುರ್ಗುಣಗಳು ಒಂದೊಂದಾಗಿ ದೂರ ಸರಿದವು. ಆ ವ್ಯಕ್ತಿಗೆ ಯಾವುದಾದರೂ ದುಷ್ಕೃತ್ಯ ಮಾಡುವ ಯೋಚನೆ ಉಂಟಾದಾಗ ಅವನು ಹೀಗೆ ಯೋಚಿಸಿದನು: "ನಾನು ಹಿಡಿಯಲ್ಪಟ್ಟರೆ ಹಝ್ರತ್ ಪೈಗಂಬರರ(ಸ) ಮುಂದೆ ಹಾಜರುಗೊಳಿಸಲ್ಪಡುವೆನು. ನಾನು ಸುಳ್ಳು ಹೇಳುವುದಿಲ್ಲ ಎಂದು ಅವರಿಗೆ ವಾಗ್ದಾನ ಮಾಡಿದ್ದೇನೆ. ಸತ್ಯ ಹೇಳಿದರೆ ನಾನು ನಾಚಿಕೆಗೊಳಗಾಗುವೆನು ಮತ್ತು ಶಿಕ್ಷೆಯು ವಿಧಿಸಲ್ಪಡುವುದು."

ಈ ರೀತಿ ಆತನ ಎಲ್ಲ ದುರ್ಗುಣಗಳು ಕ್ರಮೇಣ ಕೊನೆಗೊಂಡವು. ವಾಸ್ತವದಲ್ಲಿ ಎಲ್ಲ ದುರ್ಗುಣಗಳ ಬೇರು ಸುಳ್ಳು ಹೇಳುವುದಾಗಿದೆ.

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

ذٰلِكَ وَمَنْ يُعَظِّمْ حُرُمٰتِ اللّٰهِ فَهُوَ خَيْرٌ لَّهٗ عِنْدَ رَبِّهٖ وَاُحِلَّتْ لَكُمُ الْاَنْعَامُ اِلَّا مَا يُتْلٰى
عَلَيْكُمْ فَاجْتَنِبُوا الرِّجْسَ مِنَ الْاَوْثَانِ وَاجْتَنِبُوْا قَوْلَ الزُّوْرِ

> ಅಲ್ಲಾಹನು ಗೌರವಿಸಿದವುಗಳನ್ನು ಯಾರು ಗೌರವಿಸುತ್ತಾನೋ ಅವನಿಗೆ ತನ್ನ ಪ್ರಭುವಿನ ಬಳಿ ಒಳಿತಿದೆ. ನಿಮಗೆ ವಿವರಿಸಿ ಕೊಡಲಾದವುಗಳನ್ನು ಹೊರತು ಬೇರೆಲ್ಲ ಚತುಷ್ಪಾದಿಗಳನ್ನು ನಿಮಗೆ ಧರ್ಮಬದ್ಧಗೊಳಿಸಲಾಗಿದೆ. ಆದುದರಿಂದ ವಿಗ್ರಹಾರಾಧನೆಯ ಕೆಡುಕಿನಿಂದ ನೀವು ದೂರವಿರಿ. ಸುಳ್ಳು ಹೇಳುವುದರಿಂದಲೂ ದೂರವಿದ್ದುಕೊಳ್ಳಿರಿ. **(22: 31)**

ಮೇಲಿನ ವಚನದಲ್ಲಿ ಶಿರ್ಕ್ (ಬಹುದೇವಾರಾಧನೆ) ಜೊತೆಯಲ್ಲಿ ಸುಳ್ಳು ಹೇಳುವುದನ್ನು ಇರಿಸಲಾಗಿದೆ. ಪವಿತ್ರ ಖುರ್‌ಆನಿನ ಇನ್ನೊಂದು ವಚನದಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

اَلَا لِلّٰهِ الدِّيْنُ الْخَالِصُ ۚ وَالَّذِيْنَ اتَّخَذُوْا مِنْ دُوْنِهٖٓ اَوْلِيَاۤءَ مَا نَعْبُدُهُمْ اِلَّا لِيُقَرِّبُوْنَآ اِلَى اللّٰهِ
زُلْفٰى اِنَّ اللّٰهَ يَحْكُمُ بَيْنَهُمْ فِيْ مَا هُمْ فِيْهِ يَخْتَلِفُوْنَ اِنَّ اللّٰهَ لَا يَهْدِيْ مَنْ هُوَ كٰذِبٌ كَفَّارٌ

> ಆಲಿಸಿರಿ; ಪ್ರಾಮಾಣಿಕವಾದ ವಿಧೇಯತೆ ಅಲ್ಲಾಹನಿಗೆ ಮಾತ್ರ ಸಲ್ಲುತ್ತದೆ. ಅಲ್ಲಾಹನ ಹೊರತು ಇತರರನ್ನೂ ಮಿತ್ರರನ್ನಾಗಿ ಮಾಡಿಕೊಂಡವರು (ಹೇಳುತ್ತಾರೆ:) 'ಅವರು ನಮ್ಮನ್ನು ಅಲ್ಲಾಹನಿಗೆ ಹೆಚ್ಚು ನಿಕಟಗೊಳಿಸಲಿಕ್ಕಾಗಿ ಮಾತ್ರವೇ ನಾವು ಅವರನ್ನು ಆರಾಧಿಸುತ್ತಿರುವುದು.' ಖಚಿತವಾಗಿಯೂ ಅವರ ಭಿನ್ನಾಭಿಪ್ರಾಯದ ಬಗ್ಗೆ ಅಲ್ಲಾಹನು ತೀರ್ಮಾನಿಸುವನು. ಕೃತಘ್ನನಾದ ಸುಳ್ಳುಗಾರನಿಗೆ ಅಲ್ಲಾಹನು ಖಂಡಿತವಾಗಿಯೂ ಮಾರ್ಗದರ್ಶನ ಮಾಡಲಾರನು.
>
> **(39: 4)**

ಸಹೀಹ್ ಮುಸ್ಲಿಮ್‌ನಲ್ಲಿರುವ ಒಂದು ಹದೀಸು ಹೀಗಿದೆ:

> ಅಬ್ದುಲ್ಲಾಹ್ ಬಿನ್ ಅಮರಿಬ್ನುಲ್ ಆಸ್[(ರ)] ಹೀಗೆ ವರದಿ ಮಾಡುತ್ತಾರೆ – ನಾಲ್ಕು ದುರ್ಗುಣಗಳು ಯಾರಲ್ಲಿ ಕಂಡು ಬರುತ್ತವೆಯೋ ಅವನು ಕಪಟ ವಿಶ್ವಾಸಿಯಾಗಿದ್ದಾನೆ. ಇವುಗಳಲ್ಲಿ ಯಾವುದಾದರೂ ಒಂದು ದುರ್ಗುಣವಿದ್ದರೆ ಅವನಲ್ಲಿ ಕಪಟ ವಿಶ್ವಾಸದ ಒಂದು ಅಂಶವು ಅವನು ಅದನ್ನು ತ್ಯಜಿಸುವ ವರೆಗೆ ಇರುತ್ತದೆ. ಆ ನಾಲ್ಕು ದುರ್ಗುಣಗಳು ಇವುಗಳಾಗಿವೆ:
>
> 1. ಮಾತನಾಡುವಾಗ ಸುಳ್ಳು ಹೇಳುತ್ತಾನೆ. (ಅವನ ಮಾತುಗಳಲ್ಲಿ ಸುಳ್ಳು ಮಿಶ್ರಿತವಾಗಿರುತ್ತದೆ. ಅವನು ಸುಳ್ಳು ಮಾತುಗಳನ್ನು ಹೇಳುತ್ತಾ ಇರುತ್ತಾನೆ).
> 2. ಅವನು ಒಡಂಬಡಿಕೆ ಮಾಡಿದರೆ ಅದರಲ್ಲಿ ವಿಶ್ವಾಸ ವಂಚನೆ ಮಾಡುತ್ತಾನೆ.
> 3. ವಾಗ್ದಾನ ಮಾಡಿದರೆ ವಾಗ್ದಾನವನ್ನು ಈಡೇರಿಸುವುದಿಲ್ಲ. (ಇದು ಸುಳ್ಳಿನ ಇನ್ನೊಂದು ರೂಪವಾಗಿದೆ).
> 4. ಅವನು ಜಗಳ ಮಾಡುವಾಗ ಬೈಯ್ಯುತ್ತಾನೆ. ಇವೆಲ್ಲ ಸುಳ್ಳಿಗೆ ಸಂಬಂಧಿಸಿವೆ.
>
> **(ಸಹೀಹ್ ಮುಸ್ಲಿಮ್)**

ಇನ್ನೊಂದು ಹದೀಸಿನಲ್ಲಿ ಹಝ್ರತ್ ಇಮಾಮ್ ಮಾಲಿಕ್[ರ] ಹೀಗೆ ಹೇಳುತ್ತಾರೆ:

> ಅಬ್ದುಲ್ಲಾ ಬಿನ್ ಮಸ್ಊದ್ ಹೀಗೆ ಹೇಳುತ್ತಾ ಇದ್ದರು – ನೀವು ಸತ್ಯಸಂಧತೆಯನ್ನು ಕೈಗೊಳ್ಳಬೇಕು. ಸತ್ಯವು ಒಳಿತಿನ ಕಡೆಗೆ ಮಾರ್ಗದರ್ಶನ ನೀಡುತ್ತದೆ. ಒಳಿತು ಸ್ವರ್ಗದ ಕಡೆಗೆ ಮಾರ್ಗದರ್ಶನ ನೀಡುತ್ತದೆ. ಸುಳ್ಳು ಹೇಳುವುದರಿಂದ ರಕ್ಷಿಸಿಕೊಳ್ಳಿರಿ. ಸುಳ್ಳು ಅವಿಧೇಯತೆಯ ಕಡೆಗೆ ಒಯ್ಯುತ್ತದೆ. ಅವಿಧೇಯತೆ ನರಕದ ಕಡೆಗೆ ಒಯ್ಯುತ್ತದೆ. ಅವನು ಸತ್ಯ ಹೇಳಿ ಅನುಸರಣೆ ತೋರುವವನಾದನು. ಸುಳ್ಳು ಹೇಳುವವನು ದುಷ್ಕೃತ್ಯ ನಿರತನಾದನು ಎಂದು ಹೇಳಲಾಗುತ್ತದೆ ಎಂದು ನಿಮಗೆ ತಿಳಿದಿಲ್ಲವೇ?
>
> **(ಮುಅತ್ತ ಇಮಾಮ್ ಮಾಲಿಕ್; ಬಾಬ್ ಮಾ ಜಾಅ ಫಿಸ್ಸಿದ್‌ಖಿ ವಲ್ ಕಿಧಿಬಿ)**

ಮುಸ್ನದ್ ಅಹ್ಮದ್ ಬಿನ್ ಹಂಬಲ್‌ರ ಒಂದು ಹದೀಸ್ ಹೀಗಿದೆ:

> ಹಝ್ರತ್ ಅಬೂಹುರೈರ[ರ] ಹೀಗೆ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಯಾರಾದರೂ ಒಬ್ಬನು ಮಗುವನ್ನು ಕರೆದು "ಇಲ್ಲಿಗೆ ಬಾ ನಿನಗೆ ನಾನು ಏನನ್ನಾದರೂ ಕೊಡುತ್ತೇನೆ" ಎಂದು ಹೇಳಿದ ನಂತರ ಮಗುವಿಗೆ ಏನನ್ನೂ ಕೊಡದಿದ್ದರೆ ಅವನು ಹೇಳಿದ್ದು ಸುಳ್ಳು ಎಂದು ಗಣಿಸಲ್ಪಡುವುದು.
>
> **(ಮಸ್ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 2, ಪುಟ 452 – ಬೈರೂತ್‌ನಲ್ಲಿ ಮುದ್ರಿತ)**

ಇದು ಉತ್ತಮ ತರಬೇತಿಗೆ ಅತ್ಯಾವಶ್ಯಕವಾಗಿದೆ. ಮಕ್ಕಳಿಗೆ ಉತ್ತಮ ತರಬೇತಿ ನೀಡುವಾಗ ತಮಾಷೆಗಾಗಿಯೂ ಸುಳ್ಳು ಹೇಳಬಾರದು. ತಮಾಷೆಗಾಗಿ ಸುಳ್ಳು ಹೇಳಿದರೆ ಮಕ್ಕಳು ಸಹ ಸುಳ್ಳು ಹೇಳಲು ತೊಡಗುವರು. ಅನಂತರ ಅದು ಅವರಿಗೆ ಅಭ್ಯಾಸವಾಗಿ ಬಿಟ್ಟರೆ ಸುಳ್ಳು ಹೇಳುವ ಬಗ್ಗೆ ಅವರಿಗೆ ಯಾವುದೇ ಹಿಂಜರಿಕೆ ಮತ್ತು ನಾಚಿಕೆಯಿಲ್ಲದಾಗುವುದು.

> ಹಝ್ರತ್ ಇಬ್ನು ಮಸ್ಊದ್[ರ] ಹೇಳುತ್ತಾರೆ: ಹಝ್ರತ್ ಪೈಗಂಬರ್[ಸ] ಹೇಳಿದರು – ಸತ್ಯವು ಒಳಿತಿನ ಕಡೆಗೆ ಕರೆದುಕೊಂಡು ಹೋಗುತ್ತದೆ ಮತ್ತು ಒಳಿತು ಸ್ವರ್ಗದ ಕಡೆಗೆ ಕೊಂಡೊಯ್ಯುತ್ತದೆ. ಯಾರು ಯಾವಾಗಲೂ ಸತ್ಯ ಹೇಳುತ್ತಾನೋ ಅಲ್ಲಾಹನು, ಸಿದ್ದೀಖ್ (ಸತ್ಯವಂತ) ಎಂದು ಅವನ ಹೆಸರು ಬರೆಯುತ್ತಾನೆ. ಸುಳ್ಳು ಹೇಳುವುದು ಪಾಪ ಮತ್ತು ದುಷ್ಕೃತ್ಯಗಳಿಗೆ ಒಯ್ಯುತ್ತದೆ. ಪಾಪ ಮತ್ತು ದುಷ್ಕೃತ್ಯಗಳು ನರಕದ ಕಡೆಗೆ ಒಯ್ಯುತ್ತವೆ. ಯಾರು ಯಾವಾಗಲೂ ಸುಳ್ಳು ಹೇಳುತ್ತಾನೋ ಅವನನ್ನು ಕದ್ದಾಬ್ (ಮಹಾ ಸುಳ್ಳುಗಾರ) ಎಂದು ಅಲ್ಲಾಹನು ಬರೆಯುತ್ತಾನೆ.
>
> **(ಬುಖಾರಿ – ಕಿತಾಬುಲ್ ಅದಬ್; ಬಾಬ್ ಖೌಲುಲ್ಲಾಹಿ ಇತ್ತಖುಲ್ಲಾಹ್ ವ ಕೂನೂ ಮಅಸ್ಸಾದಿಖೀನ್)**

ಹಝ಼್ರತ್ ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್ ವರದಿ ಮಾಡುತ್ತಾರೆ: ಒಬ್ಬ ಹಝ಼್ರತ್ ಪೈಗಂಬರರ(ಸ) ಮುಂದೆ ಹಾಜರಾಗಿ ಕೇಳಿದನು – "ಸ್ವರ್ಗಕ್ಕೆ ಒಯ್ಯುವ ಕೆಲಸ ಯಾವುದು?" ಆಗ ಹಝ಼್ರತ್ ಪೈಗಂಬರ್(ಸ) ಹೇಳಿದರು: ಸತ್ಯ ಹೇಳುವುದು. ಒಬ್ಬನು ಸತ್ಯ ಹೇಳುವವನಾದರೆ ಅವನು ಅನುಸರಣೆ ತೋರುವವನಾಗುತ್ತಾನೆ. ಅನುಸರಣೆ ತೋರುವವನಾದರೆ ಸತ್ಯವಿಶ್ವಾಸಿಯಾಗುತ್ತಾನೆ. ಒಬ್ಬನು ಸತ್ಯವಿಶ್ವಾಸಿಯಾದರೆ ಅವನು ಸ್ವರ್ಗವನ್ನು ಪ್ರವೇಶಿಸುತ್ತಾನೆ.

ಆ ವ್ಯಕ್ತಿ ಪುನಃ ಕೇಳಿದನು: ನರಕಕ್ಕೆ ಒಯ್ಯುವ ಕೆಲಸ ಯಾವುದು? ಆಗ ಹಝ಼್ರತ್ ಪೈಗಂಬರ್(ಸ) ಹೇಳಿದರು – ಸುಳ್ಳು ಹೇಳುವುದು. ಸುಳ್ಳು ಹೇಳುವವನು ಅನುಸರಣೆಗೇಡಿಯಾಗುತ್ತಾನೆ. ಅನುಸರಣೆಗೇಡಿಯಾಗುವವನು ಅವಿಶ್ವಾಸಿಯಾಗುತ್ತಾನೆ. ಅವಿಶ್ವಾಸಿಯಾಗಿ ಮುಂದುವರಿಯುವವನು ಕೊನೆಗೆ ನರಕವನ್ನು ಪ್ರವೇಶಿಸುತ್ತಾನೆ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 2, ಪುಟ 176 – ಬೈರೂತ್‌ನಲ್ಲಿ ಮುದ್ರಿತ)**

ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಪವಿತ್ರ ಖುರ್‌ಆನಿನಲ್ಲಿ ಸುಳ್ಳು ಹೇಳುವುದನ್ನು ಒಂದು ಮಲಿನ ವಸ್ತುವೆಂದೂ ಕೆಡುಕು ಎಂದೂ ಹೇಳಲಾಗಿದೆ.

فَاجْتَنِبُوا الرِّجْسَ مِنَ الْاَوْثَانِ وَاجْتَنِبُوْا قَوْلَ الزُّوْرِ

'ವಿಗ್ರಹಾರಾಧನೆಯ ಕೆಡುಕಿನಿಂದ ನೀವು ದೂರವಿರಿ. ಸುಳ್ಳು ಹೇಳುವುದರಿಂದಲೂ ದೂರವಿದ್ದುಕೊಳ್ಳಿರಿ.' **(22:31)**. ಇಲ್ಲಿ ಸುಳ್ಳು ಹೇಳುವುದನ್ನು ವಿಗ್ರಹಾರಾಧನೆಯೊಂದಿಗೆ ಪ್ರಸ್ತಾಪಿಸಲಾಗಿದೆ. ವಾಸ್ತವಿಕವಾಗಿ ಸುಳ್ಳು ಸಹ ಒಂದು ರೀತಿಯ ವಿಗ್ರಹವಾಗಿದೆ. ಸತ್ಯ ಬಿಟ್ಟು ಸುಳ್ಳಿನ ಕಡೆಗೆ ಹೋಗುವುದಾದರೂ ಏಕೆ? ವಿಗ್ರಹದೊಂದಿಗೆ ಯಾವುದೇ ಸತ್ಯವು ಇರುವುದಿಲ್ಲ. ಅದೇ ರೀತಿ ಸುಳ್ಳಿನೊಂದಿಗೆ ಕೃತ್ರಿಮತೆ ಹೊರತು ಬೇರೆ ಏನೂ ಇರುವುದಿಲ್ಲ. ಸುಳ್ಳು ಹೇಳುವವರ ಬಗ್ಗೆ ಅಪನಂಬಿಕೆ ಎಷ್ಟರ ಮಟ್ಟಿಗೆ ಇರುತ್ತದೆ ಎಂದರೆ ಸುಳ್ಳು ಹೇಳುವವನು ಸತ್ಯ ಹೇಳಿದರೂ ಅವನ ಮಾತಿನಲ್ಲಿ ಸುಳ್ಳಿನ ಮಿಶ್ರಣವಿದೆಯೆಂದು ಭಾವಿಸಲಾಗುತ್ತದೆ. ಸುಳ್ಳು ಹೇಳುವವರು, ತಾವು ಸುಳ್ಳು ಹೇಳುವುದನ್ನು ಕಡಿಮೆ ಮಾಡಬೇಕು ಎಂದು ಇಚ್ಛಿಸಿದರೂ ಸುಳ್ಳು ಅವರಿಂದ ಬೇಗನೆ ದೂರಸರಿಯದು. ಅವರು ದೀರ್ಘಕಾಲ ಸತ್ಯ ಹೇಳುವ ಅಭ್ಯಾಸ ಮಾಡಿಕೊಳ್ಳಬೇಕು. ಆಗ ಮಾತ್ರ ಸತ್ಯ ಹೇಳುವ ಸ್ವಭಾವ ಅವರಲ್ಲಿ ಉಂಟಾಗುವುದು.

**(ಮಲ್‌ಫೂಝ಼ಾತ್ – ಭಾಗ 3, ಪುಟ 350)**

ಹಝ್ರತ್ ಮಸೀಹ್ ಮೌಊದ್[ಅ] ಪುನಃ ಹೀಗೆ ಹೇಳುತ್ತಾರೆ:

ಮನುಷ್ಯನ ಸಹಜ ಗುಣಗಳಲ್ಲಿ ಒಂದು ಸತ್ಯಸಂಧತೆಯಾಗಿದೆ. ಅವನು ಸ್ವಾರ್ಥಪರವಾದ ಯಾವುದಾದರೂ ಪ್ರೇರಣೆಯಿಲ್ಲದಿದ್ದರೆ ಸುಳ್ಳು ಹೇಳಲು ಇಚ್ಛಿಸುವುದಿಲ್ಲ. ಸುಳ್ಳು ಹೇಳುವುದನ್ನು ಅವನು ಸ್ವಾಭಾವಿಕವಾಗಿ ವಿರೋಧಿಸುತ್ತಾನೆ. ಆದುದರಿಂದಲೇ ಸುಳ್ಳು ಹೇಳುವವನನ್ನು ಅವನು ತಿರಸ್ಕಾರ ಭಾವದಿಂದ ನೋಡುತ್ತಾನೆ. ಆದರೆ ಈ ಸಹಜ ಸ್ವಭಾವದ ರೂಪವನ್ನು ಒಂದು ಸದ್ಗುಣವೆಂದು ಪರಿಗಣಿಸಲಾಗದು. ಏಕೆಂದರೆ ಈ ಸ್ಥಿತಿಯನ್ನು ಶಿಶುಗಳಲ್ಲಿಯೂ ಹುಚ್ಚರಲ್ಲಿಯೂ ಕಾಣಬಹುದಾಗಿದೆ. ಸತ್ಯ ನಿಷ್ಠೆಗೆ ಭಂಗವನ್ನುಂಟುಮಾಡುವ ಸ್ವಾರ್ಥಪರವಾದ ಉದ್ದೇಶಗಳಿಂದ ಬೇರ್ಪಟ್ಟಿರದ ಕಾಲದವರೆಗೆ ಮನುಷ್ಯನಿಗೆ ಯಥಾರ್ಥದಲ್ಲಿ ಸತ್ಯಸಂಧನಾಗಲಿಕ್ಕೆ ಸಾಧ್ಯವಿಲ್ಲ. ಅವನು ತನಗೆ ಹಾನಿಯಿಲ್ಲದ ಸಂಗತಿಗಳ ಸಂಬಂಧಿಸಿ ಸತ್ಯ ನುಡಿದು, ತನ್ನ ಅಭಿಮಾನಕ್ಕೋ ಸಂಪತ್ತಿಗೋ ಜೀವಕ್ಕೋ ಹಾನಿಯಾಗುವುದೆಂದು ತೋರುವ ಸಂದರ್ಭದಲ್ಲಿ ಸುಳ್ಳು ಹೇಳುವನಾದರೆ ಅಥವಾ ಸತ್ಯ ನುಡಿಯದೆ ಮೌನವನ್ನವಲಂಬಿಸುವನಾದರೆ, ಅವನಿಗೆ ಒಂದು ಶಿಶುವಿಗಿಂತ, ಒಬ್ಬ ಹುಚ್ಚನಿಗಿಂತ ಯಾವುದೇ ಶ್ರೇಷ್ಠತೆ ಇಲ್ಲ. ಹತಬುದ್ಧಿಯ ಹುಚ್ಚನೂ ವಿವೇಕ ಬುದ್ಧಿ ಪಕ್ವವಾಗದ ಶಿಶುವೂ ಈ ರೀತಿ ಸತ್ಯ ಹೇಳುತ್ತಾರಷ್ಟೆ. ಬಾಹ್ಯವಾದ ಯಾವ ಪ್ರೇರಣೆಯೂ ಇಲ್ಲದೆ ಸುಮ್ಮ ಸುಮ್ಮನೆ ಸುಳ್ಳು ಹೇಳುವ ಯಾರನ್ನೂ ಈ ಪ್ರಪಂಚದಲ್ಲಿ ಕಾಣಲು ಸಾಧ್ಯವಿಲ್ಲ. ಆಪತ್ತು ಉಂಟಾದೀತು ಎಂದು ತೋರುವ ಘಟ್ಟದಲ್ಲಿ ಸತ್ಯನಿಷ್ಠೆಯನ್ನು ತ್ಯಜಿಸುವುದು ಯಥಾರ್ಥ ಸದ್ಗುಣಕ್ಕೆ ವಿರುದ್ಧವಾಗಿದೆ. ತನ್ನ ಜೀವ, ಸಂಪತ್ತು ಅಥವಾ ಅಭಿಮಾನ ಸಂದಿಗ್ಧ ಘಟ್ಟದಲ್ಲಿ ಇರುವಾಗಲೇ ಸತ್ಯನಿಷ್ಠೆ ತೋರಿಸಬೇಕಾದ ಅತ್ಯಂತ ಘನವತ್ತಾದ ಸಂದರ್ಭವಾಗಿದೆ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ನೀಡುವ ಪಾಠ ಇದಾಗಿದೆ:

فَاجْتَنِبُوا الرِّجْسَ مِنَ الْاَوْثَانِ وَاجْتَنِبُوْا قَوْلَ الزُّوْرِ

'ವಿಗ್ರಹಾರಾಧನೆಯನ್ನೂ ಮಿಥ್ಯ ನುಡಿಗಳನ್ನೂ ತ್ಯಜಿಸಿರಿ' **(22:31)** ಎಂದರೆ ಅಸತ್ಯನುಡಿ ಒಂದು ವಿಗ್ರಹವಾಗಿದೆ. ಅದರ ಭರವಸೆಯನ್ನಿಟ್ಟು ಕೊಂಡಿರುವವರು ದೇವನ ಆಶ್ರಯವನ್ನು ಕೈಬಿಡಬೇಕಾಗುತ್ತದೆ. ಅಸತ್ಯ ವಚನದ ಹೇತುವಾಗಿ ಅವರು ಪರಮಾತ್ಮನನ್ನು ಕಳೆದುಕೊಳ್ಳುತ್ತಾರೆ.

وَلَا يَأْبَ الشُّهَدَآءُ اِذَا مَا دُعُوْا

'ಸಾಕ್ಷ್ಯ ನುಡಿಯಲು ಕರೆಯಲ್ಪಟ್ಟಾಗ ನೀವು ಹೋಗಲು ನಿರಾಕರಿಸಬಾರದು.'

**(2:283)**

وَلَا تَكْتُمُوا الشَّهَادَةَ وَمَنْ يَّكْتُمْهَا فَإِنَّهُ آثِمٌ قَلْبُهُ

'ಸತ್ಯವಾದ ಸಾಕ್ಷ್ಯವನ್ನು ಮುಚ್ಚಿಡಬೇಡಿರಿ. ಯಾವಾತನು ಅದನ್ನು ಗೋಪ್ಯವಾಗಿರಿಸುವನೋ ಅವನ ಹೃದಯ ಪಾಪದಿಂದ ಕೂಡಿರುತ್ತದೆ.'

**(2:284)**

وَإِذَا قُلْتُمْ فَاعْدِلُوا وَلَوْ كَانَ ذَا قُرْبٰى

'ಮಾತನಾಡುವಾಗ ನೀವು ಸತ್ಯ ಹಾಗೂ ನ್ಯಾಯದಿಂದ ಮಾತನಾಡಿರಿ. ನಿಮ್ಮ ಬಂಧುಗಳಿಗೆ ವಿರುದ್ಧವಾಗಿ ಹೇಳಬೇಕಾದರೂ ಸರಿ.' **(6:153)**

كُونُوا قَوَّامِيْنَ بِالْقِسْطِ شُهَدَاءَ لِلّٰهِ وَلَوْ عَلٰى أَنْفُسِكُمْ أَوِ الْوَالِدَيْنِ وَالْأَقْرَبِيْنَ

'ನೀವು ಸತ್ಯ ಮತ್ತು ನ್ಯಾಯವನ್ನು ಬಿಗಿಯಾಗಿ ಹಿಡಿಯಿರಿ. ನಿಮ್ಮ ಸಾಕ್ಷ್ಯ ಅಲ್ಲಾಹುವಿಗಾಗಿರಲಿ. ಸತ್ಯ ಹೇಳುವ ಮೂಲಕ ನಿಮಗೆ ಜೀವಹಾನಿ ಉಂಟಾಗುವುದಾದರೂ ಅಥವಾ ನಿಮ್ಮ ಮಾತಾಪಿತರಿಗೆ ಕೇಡು ಉಂಟಾಗುವುದಾದರೂ ಅಥವಾ ಮಕ್ಕಳು ಮುಂತಾದ ನಿಕಟ ಬಂಧುಗಳಿಗೆ ನಷ್ಟ ಉಂಟಾಗುವುದಾದರೂ ಸುಳ್ಳು ನುಡಿಯಬಾರದು.' **(4:136)**

وَلَا يَجْرِمَنَّكُمْ شَنَاٰنُ قَوْمٍ عَلٰى أَلَّا تَعْدِلُوا

'ಯಾವುದಾದರೂ ಜನತೆಯ ವಿರೋಧವು ನಿಮ್ಮನ್ನು ಸತ್ಯಕ್ಕೆ ವಿರುದ್ಧವಾಗಿ ವರ್ತಿಸಲು ಪ್ರೇರೇಪಿಸದಿರಲಿ.' **(5:9)**

وَالصّٰدِقِيْنَ وَالصّٰدِقٰتِ

'ಸತ್ಯವಂತರಿಗೂ ಸತ್ಯವತಿಯರಿಗೂ ಮಹತ್ತಾದ ಪ್ರತಿಫಲ ಲಭಿಸುವುದು.'

**(33:36)**

وَتَوَاصَوْا بِالْحَقِّ وَتَوَاصَوْا بِالصَّبْرِ

'ಅವರು ಸತ್ಯ ಮತ್ತು ಸಹನೆಯ ಕುರಿತು ಅನ್ಯೋನ್ಯ ಉಪದೇಶಿಸುತ್ತಾರೆ.'

**(103:4)**

لَا يَشْهَدُوْنَ الزُّوْرَ

'ಅವರು ಅಸತ್ಯವಂತರ ಮಧ್ಯದಲ್ಲಿ ಕುಳಿತುಕೊಳ್ಳುವುದಿಲ್ಲ.' **(25:73)**

**(ಇಸ್ಲಾಮೀ ಉಸೂಲ್‌ಕೀ ಫಲಾಸಫೀ – ಕನ್ನಡ ಭಾಷಾಂತರ: ಇಸ್ಲಾಮ್ ಧರ್ಮ ತತ್ವಜ್ಞಾನ;**

**ರೂಹಾನೀ ಖಝಾಇನ್, ಸಂಪುಟ 10, ಪುಟ 360 – 361)**

## ವ್ಯಭಿಚಾರದಿಂದ ದೂರಸರಿಯಿರಿ

ಬೈಅತಿನ ಎರಡನೆಯ ಶರತ್ತಿನಲ್ಲಿ ವ್ಯಭಿಚಾರದಿಂದ ದೂರಸರಿಯಲು ಆದೇಶಿಸಲಾಗಿದೆ. ಈ ಬಗ್ಗೆ ಅಲ್ಲಾಹನು ಹೀಗೆ ಹೇಳಿದ್ದಾನೆ:

وَلَا تَقْرَبُوا الزِّنٰٓى اِنَّهٗ كَانَ فَاحِشَةً ؕ وَسَآءَ سَبِيْلًا

ನೀವು ವ್ಯಭಿಚಾರದ ಸಮೀಪಕ್ಕೆ ಹೋಗಬೇಡಿರಿ. ನಿಶ್ಚಯವಾಗಿಯೂ ಅದು ಅಶ್ಲೀಲಕರವೂ ದುಷ್ಟಮಾರ್ಗವೂ ಆಗಿದೆ. **(17:33)**

ಒಂದು ಹದೀಸಿನಲ್ಲಿ ಮುಹಮ್ಮದ್ ಬಿನ್ ಸೀರೀನ್ ವರದಿ ಮಾಡುತ್ತಾರೆ. ಹಝ್ರತ್ ರಸೂಲುಲ್ಲಾಹ್[ಸ] ಈ ಕೆಳಗಿನ ವಿಷಯಗಳ ಕುರಿತು ಉಪದೇಶಿಸಿದರು ಎಂದು ಹೇಳಿ ದೀರ್ಘವಾಗಿ ವಿವರಿಸಿದರು. ಅದರಲ್ಲಿ ಒಂದು ಉಪದೇಶ ಹೀಗಿದೆ: ಚಾರಿತ್ರ್ಯ ಪರಿಶುದ್ಧಿ ಮತ್ತು ಸತ್ಯ ಹೇಳುವುದು ವ್ಯಭಿಚಾರ ಮತ್ತು ಸುಳ್ಳು ಹೇಳುವುದಕ್ಕಿಂತಲೂ ಉತ್ತಮವೂ ಬಾಕಿಯಾಗಿ ಉಳಿಯುವಂತಹದೂ ಆಗಿದೆ.

**(ಸುನನ್ ದಾರು ಖುತ್ನಿ – ಕಿತಾಬುಲ್ ವಸಾಯಾ; ಬಾಬ್ ಮಾ ಯಸ್ತಹಿಬ್ಬು ಬಿಲ್ ವಸಿಯ್ಯತಿ ಮಿನತ್ತಶಹ್ಹುದಿ ವಲ್ ಕಮಾಲ್)**

ಈ ಹದೀಸಿನಲ್ಲಿ ಸುಳ್ಳು ಹೇಳುವುದನ್ನೂ ವ್ಯಭಿಚಾರವನ್ನೂ ಒಟ್ಟಿಗೆ ಪ್ರಸ್ತಾಪಿಸಲಾಗಿದೆ. ಸುಳ್ಳು ಹೇಳುವುದು ಎಷ್ಟು ದೊಡ್ಡ ಪಾಪಕೃತ್ಯವೆಂದು ಇದರಿಂದ ತಿಳಿಯುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ನೀವು ವ್ಯಭಿಚಾರದ ಸಮೀಪಕ್ಕೆ ಹೋಗಬೇಡಿರಿ ಎಂದು ಪವಿತ್ರ ಖುರ್‌ಆನ್ ಹೇಳಿದುದರ ತಾತ್ಪರ್ಯ ಹೀಗಿದೆ: ನಿಮ್ಮ ಹೃದಯಗಳಲ್ಲಿ ವ್ಯಭಿಚಾರದ ಯೋಚನೆ ಉಂಟಾಗಬಹುದಾದ ಸಂದರ್ಭಗಳಿಂದ ದೂರಸರಿಯಿರಿ. ವ್ಯಭಿಚಾರ ಸಂಭವಿಸಬಹುದೆಂಬ ಸಂಶಯವಿರಬಹುದಾದ ಮಾರ್ಗಗಳನ್ನು ನೀವು ಅವಲಂಬಿಸಬೇಡಿರಿ. ಯಾರು ವ್ಯಭಿಚಾರ ಮಾಡುತ್ತಾನೋ ಅವನು ಘೋರ ಅಪರಾಧ ಮಾಡುತ್ತಾನೆ. ವ್ಯಭಿಚಾರದ ಮಾರ್ಗ ಬಹಳ ಕೆಟ್ಟದ್ದಾಗಿದೆ. ಅದು ನಿಮ್ಮನ್ನು ನಿಮ್ಮ ಯಥಾರ್ಥ ಲಕ್ಷ್ಯವನ್ನು ತಲಪುವುದರಿಂದ ತಡೆಗಟ್ಟುತ್ತದೆ. ಅದು ನಿಮ್ಮ ಅಂತಿಮ ಗಮ್ಯಸ್ಥಾನಕ್ಕೆ ಬಹಳ ಅಪಾಯಕರವಾಗಿದೆ. ಯಾರಿಗೆ ಮದುವೆಯಾಗಲು ಸಾಧ್ಯವಾಗಿಲ್ಲವೋ ಅವನು ತನ್ನ ಚಾರಿತ್ರ್ಯವನ್ನು ಅನ್ಯ ಮಾರ್ಗವನ್ನು ಅವಲಂಬಿಸಿ ರಕ್ಷಿಸಿಕೊಳ್ಳಲಿ. ಉದಾಹರಣೆಗೆ, ಅಂತಹ ವ್ಯಕ್ತಿ ಉಪವಾಸ ಮಾಡಲಿ, ಕಡಿಮೆ ತಿನ್ನಲಿ ಮತ್ತು ಕಷ್ಟಪಟ್ಟು ಕೆಲಸ ಮಾಡಲಿ.

**(ಇಸ್ಲಾಮೀ ಉಸೂಲ್ ಕಿ ಫಲಾಸಫೀ; ರೂಹಾನೀ ಖಝಾಇನ್, ಸಂಪುಟ 10, ಪುಟ 342)**

ಹಝ್ರತ್ ಮಸೀಹ್ ಮೌಊದ್(ಅ), ವ್ಯಭಿಚಾರದ ಯೋಚನೆ ಉಂಟಾಗಬಹುದಾದ ವಸ್ತುಗಳಿಂದ ದೂರಸರಿಯಲು ಹೇಳಿದ್ದಾರೆ. ತರುಣರಲ್ಲಿ ಕೆಲವು ಸಾರಿ ಇದರ ಪರಿವೆ ಇರುವುದಿಲ್ಲ. ಅವರಿಗೆ ಚಲಚ್ಚಿತ್ರಗಳನ್ನು ನೋಡುವ ಅಭ್ಯಾಸವಿರುತ್ತದೆ. ನೋಡಲು ಯೋಗ್ಯವಲ್ಲದ ಚಲಚ್ಚಿತ್ರಗಳನ್ನು ನೋಡುತ್ತಾರೆ. ಅವು ಬಹಳ ಅಶ್ಲೀಲಕರವಾಗಿರುತ್ತವೆ. ಅವುಗಳನ್ನು ನೋಡುವುದರಿಂದ ದೂರಸರಿಯಬೇಕು. ಇದು ಸಹ ವ್ಯಭಿಚಾರದ ಒಂದು ರೀತಿಯಾಗಿದೆ.

## ದುರ್ನೋಟದಿಂದ ದೂರಸರಿಯಿರಿ

ಒಂದು ಹದೀಸಿನಲ್ಲಿ ಅಬೂ ರೈಹಾನ್(ರ) ವರದಿ ಮಾಡುತ್ತಾರೆ: ಅವರು ಒಂದು ರಾತ್ರಿ ಹಝ್ರತ್ ರಸೂಲುಲ್ಲಾಹ್(ಸ) ಹೀಗೆ ಹೇಳಿದುದನ್ನು ಆಲಿಸಿದರು – "ಅಲ್ಲಾಹನ ಮಾರ್ಗದಲ್ಲಿ ನಿದ್ರಿಸದೆ ಎಚ್ಚರದಿಂದಿರುವ ಕಣ್ಣಿಗೆ ಬೆಂಕಿಯ ಶಿಕ್ಷೆ (ನರಕ) ನಿಷಿದ್ಧಗೊಳಿಸಲ್ಪಟ್ಟಿದೆ. ಅಲ್ಲಾಹನಿಗೆ ಭಯಪಟ್ಟು ಕಣ್ಣೀರು ಸುರಿಸುವ ಕಣ್ಣಿಗೂ ಬೆಂಕಿಯ ಶಿಕ್ಷೆ (ನರಕ) ನಿಷಿದ್ಧಗೊಳಿಸಲ್ಪಟ್ಟಿದೆ."

ಅಬೂ ಶರೀಹ್ ಹೀಗೆ ವರದಿ ಮಾಡುತ್ತಾರೆ: ಒಬ್ಬ ವರದಿಗಾರ ಹೀಗೆ ಹೇಳಿದುದನ್ನು ನಾನು ಆಲಿಸಿದೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ನೋಡಬಾರದೆಂದು ಹೇಳಿದ ವಸ್ತುಗಳನ್ನು ನೋಡದೆ ದೃಷ್ಟಿಯನ್ನು ತಗ್ಗಿಸುವ ಕಣ್ಣಿಗೆ ಬೆಂಕಿಯ ಶಿಕ್ಷೆ (ನರಕ) ನಿಷಿದ್ಧಗೊಳಿಸಲ್ಪಟ್ಟಿದೆ. ಅಲ್ಲಾಹನ ಮಾರ್ಗದಲ್ಲಿ ಒಡೆಯಲ್ಪಟ್ಟ ಕಣ್ಣಿಗೂ ಬೆಂಕಿಯ ಶಿಕ್ಷೆ (ನರಕ) ನಿಷಿದ್ಧಗೊಳಿಸಲ್ಪಟ್ಟಿದೆ.

**(ಸುನನ್ ದಾರಿಮಿ – ಕಿತಾಬುಲ್ ಜಿಹಾದ್; ಬಾಬ್ ಫಿಲ್ಲದ್ಧೀ ಯಸ್‌ಹರು ಫೀ ಸಬೀಲಿಲ್ಲಾಹ್ ಹಾರಿಸಾ)**

ಒಂದು ಹದೀಸಿನಲ್ಲಿ ಉಬಾದ ಬಿನ್ ಸಾಮಿತ್(ರ) ಹೀಗೆ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು – ನೀವು ಆರು ವಿಷಯಗಳಿಗೆ ಸಂಬಂಧಿಸಿ ನನಗೆ ಖಾತರಿ ನೀಡಿರಿ. (ಹಝ್ರತ್ ರಸೂಲುಲ್ಲಾಹ್(ಸ) ಸ್ವರ್ಗಕ್ಕೆ ಹೋಗುವವರ ಬಗ್ಗೆ ಶುಭವಾರ್ತೆ ನೀಡುತ್ತಾ ಹೇಳಿದರು:)

ನೀವು ಮಾತನಾಡುವಾಗ ಸತ್ಯ ಹೇಳಿರಿ, ನೀವು ವಾಗ್ದಾನ ಮಾಡಿದರೆ ಅದನ್ನು ಈಡೇರಿಸಿರಿ, ನಿಮ್ಮ ಬಳಿ ಅಮಾನತ್ತಾಗಿ ಏನನ್ನಾದರೂ ಇರಿಸಿದರೆ ಅದನ್ನು ಕೇಳಿದ ಕೂಡಲೆ ಕೊಡಿರಿ. (ಆ ಬಗ್ಗೆ ವಿಳಂಬ ಸಲ್ಲದು). ನೀವು ನಿಮ್ಮ ರಹಸ್ಯ ಭಾಗಗಳನ್ನು ಸಂರಕ್ಷಿಸಿರಿ, ನೀವು ದೃಷ್ಟಿಯನ್ನು ತಗ್ಗಿಸಿರಿ, ನೀವು ನಿಮ್ಮ ಕೈಗಳನ್ನು ದೌರ್ಜನ್ಯದಿಂದ ತಡೆದಿಟ್ಟುಕೊಳ್ಳಿರಿ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 5, ಪುಟ 323 – ಬೈರೂತ್‌ನಲ್ಲಿ ಮುದ್ರಿತ)**

ಹಝ್ರತ್ ಅಬೂ ಸಯೀದ್ ಖುದ್‌ರೀ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು – ಮಾರ್ಗಗಳಲ್ಲಿ ಒಟ್ಟುಗೂಡಿ

ಕುಳಿತುಕೊಳ್ಳಬೇಡಿರಿ. ಆಗ ಶಿಷ್ಯರು ಹೇಳಿದರು: ಮಾರ್ಗಗಳಲ್ಲಿ ಕುಳಿತು ಕೊಳ್ಳಲು ನಾವು ನಿರ್ಬಂಧಿತರಾಗಿದ್ದೇವೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ ಮಾರ್ಗಗಳ ಹಕ್ಕುಗಳನ್ನು ನೀಡಿರಿ. ಮಾರ್ಗಗಳ ಹಕ್ಕುಗಳೇನೆಂದು ಪ್ರಶ್ನಿಸಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೋಗುವವರ ಮತ್ತು ಬರುವವರ ಸಲಾಮಿಗೆ ಉತ್ತರ ಕೊಡಿರಿ. ದೃಷ್ಟಿಯನ್ನು ತಗ್ಗಿಸಿರಿ, ರಸ್ತೆಯ ಕುರಿತು ವಿಚಾರಿಸುವವರಿಗೆ ಮಾರ್ಗದರ್ಶನ ನೀಡಿರಿ. ಒಳ್ಳೆಯ ಕೆಲಸಗಳನ್ನು ಮಾಡಲು ಆಜ್ಞಾಪಿಸಿರಿ. ಕೆಟ್ಟ ಕೆಲಸಗಳನ್ನು ತಡೆಯಿರಿ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 3, ಪುಟ 61 – ಬೈರೂತ್‌ನಲ್ಲಿ ಮುದ್ರಿತ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನ್ ಮನುಷ್ಯರ ಪ್ರಕೃತಿ, ಆವಶ್ಯಕತೆಗಳಿಗೆ ಮತ್ತು ಬಲಹೀನತೆಗಳಿಗೆ ಗಮನಕೊಟ್ಟು ಅನುಯೋಜ್ಯ ಉಪದೇಶ ನೀಡುತ್ತದೆ. ಅಲ್ಲಾಹನು ಹೇಳುತ್ತಾನೆ:

قُلْ لِّلْمُؤْمِنِيْنَ يَغُضُّوْا مِنْ اَبْصَارِهِمْ وَيَحْفَظُوْا فُرُوْجَهُمْ ذٰلِكَ اَزْكٰى لَهُمْ

**‘**ಸತ್ಯವಿಶ್ವಾಸಿಗಳೊಡನೆ ಹೇಳು – ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ಸೂಕ್ಷ್ಮಭಾಗಗಳನ್ನು ಕಾಪಾಡಲಿ. ಅದು ಅವರಿಗೆ ಪರಿಶುದ್ಧವಾದ ಮಾರ್ಗವಾಗಿದೆ.**’** **(24:31)**

ಈ ವಚನದಲ್ಲಿ ಬಳಸಲಾದ ಫುರೂಜ್ ಎಂಬ ಪದದ ಅರ್ಥದಲ್ಲಿ ಗುಪ್ತಾಂಗಗಳು ಮಾತ್ರವಲ್ಲ, ಶರೀರದ ಪ್ರತಿಯೊಂದು ದ್ವಾರವು ಸೇರಿದೆ. ಇವುಗಳಲ್ಲಿ ಕಿವಿ ಮೊದಲಾದುವುಗಳು ಸೇರುತ್ತವೆ. ಅನ್ಯ ಸ್ತ್ರೀಯರ ರಾಗಾಲಾಪನೆ ಕೇಳುವುದು ಸಹ ನಿಷಿದ್ಧವಾಗಿದೆ. ನೀವು ನೆನಪಿಡಿರಿ, ಸಾವಿರಾರು ಅನುಭವಗಳಿಂದ ಸಾಬೀತಾಗುವುದೇನೆಂದರೆ, ಯಾವುದರಿಂದ ಅಲ್ಲಾಹನು ತಡೆಯುತ್ತಾನೋ ಕೊನೆಗೆ ಮನುಷ್ಯನು ಅವುಗಳಿಂದ ತನ್ನನ್ನು ತಡೆದಿಡಲೇ ಬೇಕಾಗುತ್ತದೆ.

**(ಮಲ್‌ಫೂಝಾತ್ – ಭಾಗ 7, ಪುಟ 135)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

ಇಸ್ಲಾಮ್ ಧರ್ಮವು ಮಹಿಳೆಯರಿಗೂ ಪುರುಷರಿಗೂ ಶರತ್ತುಗಳನ್ನು ಕಡ್ಡಾಯಗೊಳಿಸಿದೆ. ಮಹಿಳೆಯರು ಪರದೆ ಧರಿಸಬೇಕೆಂದು ಆಜ್ಞಾಪಿಸಿದ ಹಾಗೆ ಪುರುಷರು ದೃಷ್ಟಿಯನ್ನು ತಗ್ಗಿಸಿಡಬೇಕೆಂದು ಸಹ ಆಜ್ಞಾಪಿಸಿದೆ. ನಮಾಝ್, ಉಪವಾಸ, ಝಕಾತ್, ಧರ್ಮಬದ್ಧ ಮತ್ತು ನಿಷಿದ್ಧ ವಸ್ತುಗಳ ವ್ಯತ್ಯಾಸ, ಅಲ್ಲಾಹನ ಆಜ್ಞೆ ಪಾಲಿಸಲು ತನ್ನ ಅಭ್ಯಾಸಗಳನ್ನೂ ಆಚಾರ ವಿಚಾರಗಳನ್ನೂ ಬಿಟ್ಟು ಬಿಡುವುದು ಮೊದಲಾದುವು ಇಸ್ಲಾಮ್ ಧರ್ಮವನ್ನು ಪ್ರವೇಶಿಸಲು

ಇರುವ ಬಾಗಿಲನ್ನು ಬಹಳ ಸಂಕುಚಿತವಾಗಿ ಮಾಡುವಂತಹ ಕಟ್ಟುನಿಟ್ಟಿನ ನಿಯಮಗಳಾಗಿವೆ. ಆದುದರಿಂದ ಪ್ರತಿಯೊಬ್ಬನು ಆ ಬಾಗಿಲಿನ ಮೂಲಕ ಪ್ರವೇಶಿಸಲು ಸಮರ್ಥನಾಗಲಾರನು.

**(ಮಲ್‌ಫೂಝ್ಞಾತ್; ಭಾಗ 5, ಪುಟ 614 – ಹೊಸ ಮುದ್ರಣ)**

ಪುರುಷರು ತಮ್ಮ ದೃಷ್ಟಿಯನ್ನು ಯಾವಾಗಲೂ ತಗ್ಗಿಸಿ ಇಡಬೇಕೆಂದು ಮೇಲಿನ ಉಲ್ಲೇಖದಿಂದ ತಿಳಿಯಬಹುದು. ಲಜ್ಜೆ ಎಂಬುದು ಕೇವಲ ಮಹಿಳೆಯರಿಗೆ ಮಾತ್ರ ಇರುವುದಲ್ಲ. ಪುರುಷರೂ ಲಜ್ಜೆವುಳ್ಳವರಾಗಬೇಕು.

ಪುನಃ ಅವರು ಹೇಳುತ್ತಾರೆ:

ಅಲ್ಲಾಹನು ಚಾರಿತ್ರ್ಯ (ಇಹ್‌ಸಾನ್) ಎಂಬ ನೈತಿಕ ಗುಣವನ್ನು ಗಳಿಸಲು ಉತ್ಕೃಷ್ಟವಾದ ಉಪದೇಶಗಳನ್ನು ನೀಡಿರುವನಲ್ಲದೆ ಮನುಷ್ಯನಲ್ಲಿ ಈ ಸದ್ಗುಣಗಳು ಸ್ಥಾಯಿಯಾಗಿ ಇರಲು ಐದು ಉಪಾಯಗಳನ್ನೂ ಸೂಚಿಸಿದ್ದಾನೆ. (1) ದೃಷ್ಟಿಯನ್ನು ನಿಯಂತ್ರಿಸುವುದು. (2) ಅನ್ಯ ಮಹಿಳೆಯರ ಮಧುರ ಧ್ವನಿಗಳನ್ನು ಆಲಿಸದಿರುವುದು. (3) ಅನ್ಯ ಸ್ತ್ರೀಯರ ಶೃಂಗಾರ ಕಥೆಗಳನ್ನು ಕೇಳದಿರುವುದು. (4) ಕೆಟ್ಟ ಕೆಲಸಗಳಿಗೆ ಪ್ರೇರೇಪಿಸುವಂತಹ ಸನ್ನಿವೇಶ ಗಳಿಂದ ದೂರವಿರುವುದು. (5) ಅವಿವಾಹಿತರು ಉಪವಾಸ ಮಾಡುವುದು ಇತ್ಯಾದಿ.

ಮನುಷ್ಯನ ಚಾರಿತ್ರ್ಯ ಸಂರಕ್ಷಣೆಗೆ ಮಾರ್ಗೋಪಾಯಗಳನ್ನು ಒಳಗೊಂಡ ಪವಿತ್ರ ಖುರ್‌ಆನಿನ ಈ ಉತ್ಕೃಷ್ಟ ಉಪದೇಶಗಳು ಇಸ್ಲಾಮಿನ ಒಂದು ವೈಶಿಷ್ಟ್ಯವೆಂದು ನಿಸ್ಸಂಶಯವಾಗಿ ಹೇಳಬಹುದು. ಇಲ್ಲಿ ಒಂದು ವಿಷಯ ನೆನಪಿಡಬೇಕಾಗಿದೆ. ಕಾಮವಿಕಾರಗಳ ಉದ್ಭವ ಸ್ಥಾನವಾಗಿರುವ ಹಾಗೂ ಪರಿಪೂರ್ಣವಾದ ಪರಿವರ್ತನೆಯಿಂದಲ್ಲದೆ ವರ್ಜಿಸಲು ಅಸಾಧ್ಯವಾಗಿರುವ ಮನುಷ್ಯನ ಪ್ರಾಕೃತಾವಸ್ಥೆಯ ಇಚ್ಛೆಯು ಸಂದರ್ಭವಶಾತ್ ಚುರುಕುಗೊಂಡು ಅವನನ್ನು ಅಪಾಯದೆಡೆಗೆ ಕೊಂಡೊಯ್ಯುತ್ತದೆ. ಆ ಕಾರಣದಿಂದಲೇ ಸದುದ್ದೇಶದಿಂದಾದರೆ ಪರಸ್ತ್ರೀಯರನ್ನು ನೋಡಬಹುದೆಂದಾಗಲಿ, ಅವರ ಸೌಂದರ್ಯವನ್ನು ದರ್ಶಿಸಬಹುದೆಂದಾಗಲಿ, ಅವರ ನೃತ್ಯ ನಾಟ್ಯ ಮೊದಲಾದುವುಗಳನ್ನು ನೋಡಿ ಆನಂದಿಸಬಹುದೆಂದಾಗಲಿ ಅತ್ಯುನ್ನತನಾದ ದೇವನು ಅಪ್ಪಣೆ ಕೊಡಲಿಲ್ಲ. ಹಾಗೆಯೇ ಅನ್ಯ ಸ್ತ್ರೀಯರ ಮಧುರ ಗಾನವನ್ನಾಗಲಿ, ಶೃಂಗಾರ ಕಥೆಗಳನ್ನಾಗಲಿ, ಸದುದ್ದೇಶದಿಂದ ಆಲಿಸಬಹುದೆಂದು ಕಲಿಸಲಿಲ್ಲ. ತದ್ವಿರುದ್ಧವಾಗಿ ಸದ್ಭಾವದಿಂದಾಗಲಿ, ದುರ್ಭಾವದಿಂದಾಗಲಿ, ಅವರ ಮಧುರಗಾನಗಳನ್ನೋ ಶೃಂಗಾರ ಕಥೆಗಳನ್ನೋ ಕೇಳಬಾರದೆಂದು ಪವಿತ್ರ ಖುರ್‌ಆನ್ ಶಕ್ತಿಯುತವಾಗಿ ಉಪದೇಶಿಸುತ್ತದೆ. ಒಟ್ಟಾರೆ ನಾವು ಎಡವಿ ಬೀಳದಿರಲಿಕ್ಕಾಗಿ ಅವರ ಸೌಂದರ್ಯವನ್ನು ನೋಡುವುದನ್ನೂ ಅವರ

ಮಧುರ ಸ್ವರವನ್ನು ಕೇಳುವುದನ್ನೂ ಮನಸಾ ದ್ವೇಷಿಸಬೇಕು. ಏಕೆಂದರೆ ಅನಿಯಂತ್ರಿತವಾದ ದೃಷ್ಟಿ ಸನ್ಮಾರ್ಗ ಭ್ರಂಶಕ್ಕೆ ಕಾರಣವಾಗುವುದೆಂಬುದು ನಿಸ್ಸಂದೇಹವಾಗಿದೆ. ನಮ್ಮ ಕಣ್ಣು ಮತ್ತು ಹೃದಯವನ್ನು ಸದಾ ಪಾವನವಾಗಿಡಲು ಈ ಮಹತ್ತಾದ ಉಪದೇಶವನ್ನು ನೀಡಲಾಗಿದೆ. ಹಸಿದ ಒಂದು ನಾಯಿಯ ಮುಂದೆ ರೊಟ್ಟಿಯನ್ನಿಟ್ಟು ಅದಕ್ಕೆ ರೊಟ್ಟಿಯ ವಿಚಾರ ಮನಸ್ಸಿನಲ್ಲಿ ಉಂಟಾಗಲಿಕ್ಕಿಲ್ಲವೆಂದು ಹೇಳುವುದು ತಪ್ಪಭಿಪ್ರಾಯವಾಗಿದೆ. ಒಟ್ಟಾರೆ, ವಿಷಯಾಸಕ್ತಿಗೆ ಗೂಢವಾಗಿಯಾದರೂ ಚುರುಕುಗೊಳ್ಳುವ ಸಂದರ್ಭ ಲಭಿಸದಿರಲಿಕ್ಕೂ ದುರ್ಮೋಹಕ್ಕೆ ಪ್ರೇರಣೆಯನ್ನುಂಟುಮಾಡುವ ಅವಕಾಶ ಉಂಟಾಗದಿರಲಿಕ್ಕೂ ಪವಿತ್ರ ಖುರ್‌ಆನ್ ಉದ್ದೇಶಿಸುತ್ತದೆ.

**(ಇಸ್ಲಾಮೀ ಉಸೂಲ್‌ಕೀ ಫಲಾಸಫೀ – ಕನ್ನಡ ಭಾಷಾಂತರ: ಇಸ್ಲಾಮ್ ಧರ್ಮ ತತ್ವಜ್ಞಾನ; ರೂಹಾನೀ ಖಝಾಇನ್, ಸಂಪುಟ 10, ಪುಟ 343 – 344)**

## ಆಜ್ಞೋಲ್ಲಂಘನೆ ಮತ್ತು ದುರ್ಮಾರ್ಗಗಳಿಂದ ದೂರಸರಿಯಿರಿ

ಬೈಅತಿನ ಎರಡನೆಯ ಶರತ್ತಿನಲ್ಲಿ ದೇವಾಜ್ಞೆಗಳ ಉಲ್ಲಂಘನೆ ಮತ್ತು ದುರ್ಮಾರ್ಗಗಳಿಂದ ದೂರಸರಿಯುವುದರ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ:

وَاعْلَمُوْٓا اَنَّ فِيْكُمْ رَسُوْلَ اللّٰهِ ؕ لَوْ يُطِيْعُكُمْ فِيْ كَثِيْرٍ مِّنَ الْاَمْرِ لَعَنِتُّمْ وَلٰكِنَّ اللّٰهَ حَبَّبَ اِلَيْكُمُ
الْاِيْمَانَ وَزَيَّنَهٗ فِيْ قُلُوْبِكُمْ وَكَرَّهَ اِلَيْكُمُ الْكُفْرَ وَالْفُسُوْقَ وَالْعِصْيَانَ ؕ اُولٰٓئِكَ هُمُ الرّٰشِدُوْنَ

ತಿಳಿದುಕೊಳ್ಳಿರಿ, ಅಲ್ಲಾಹನ ಸಂದೇಶವಾಹಕ ನಿಮ್ಮ ಬಳಿಯಲ್ಲಿದ್ದಾರೆ. ಹೆಚ್ಚಿನ ವಿಚಾರಗಳಲ್ಲಿ ಅವರು ನಿಮ್ಮ ಇಚ್ಛೆಯಂತೆ ವರ್ತಿಸಿರುತ್ತಿದ್ದರೆ ನೀವು ಖಂಡಿತವಾಗಿಯೂ ಹಾನಿಗೀಡಾಗುತ್ತಿದ್ದಿರಿ. ಆದರೆ ಅಲ್ಲಾಹನು ಸತ್ಯವಿಶ್ವಾಸವನ್ನು ನಿಮಗೆ ಪ್ರಿಯಗೊಳಿಸಿ ನಿಮ್ಮ ಹೃದಯಗಳಿಗೆ ಅದನ್ನು ಆಕರ್ಷಕವಾಗಿ ಮಾಡಿರುವನು. ಅವಿಶ್ವಾಸವನ್ನೂ ದುರ್ಮಾರ್ಗವನ್ನೂ ಧಿಕ್ಕಾರವನ್ನೂ ನೀವು ದ್ವೇಷಿಸುವಂತೆ ಮಾಡಿರುವನು. ಅಂತಹ ಜನರೇ ನೇರವಾದ ಮಾರ್ಗವನ್ನು ಪಡೆದವರು. **(49:8)**

ಒಂದು ಹದೀಸಿನಲ್ಲಿ ಅಸ್‌ವದ್ ಎಂಬವರು ಅಬೂಹುರೈರರಿಂದ(ರ) ವರದಿ ಮಾಡುತ್ತಾರೆ. ಅವರು ಹೇಳಿದರು: ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಹೇಳಿದರು – ನಿಮ್ಮಲ್ಲಿ ಯಾರಾದರೂ ಉಪವಾಸದಲ್ಲಿದ್ದರೆ ಅಶ್ಲೀಲ ಮಾತುಗಳನ್ನು ಆಡಬಾರದು. ಅಲ್ಲಾಹನ ಆಜ್ಞೆಗಳ ಉಲ್ಲಂಘನೆಯ ಮಾತು ಆಡಬಾರದು. ಅಜ್ಞಾನದ ಮಾತು ಆಡಬಾರದು. ಯಾರಾದರೂ ಅವನೊಂದಿಗೆ ಅಜ್ಞಾನದಿಂದ ವರ್ತಿಸಿದರೆ ಹೇಳಲಿ: ನನ್ನನ್ನು ಕ್ಷಮಿಸಿರಿ. ನಾನು ಉಪವಾಸ ಮಾಡುತ್ತಿದ್ದೇನೆ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 2, ಪುಟ 356 – ಬೈರೂತ್‌ನಲ್ಲಿ ಮುದ್ರಿತ)**

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಹೇಳಿದರು: ಸತ್ಯವಿಶ್ವಾಸಿಯನ್ನು ಬೈಯ್ಯುವುದು ಫಿಸ್‌ಖ್ ಆಗಿದೆ. ಅವನೊಂದಿಗೆ ಯುದ್ಧ ಮಾಡುವುದು ಕುಫ್ರ್ (ಅವಿಶ್ವಾಸ) ಆಗಿದೆ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 1, ಪುಟ 439)**

ಅಬ್ದುರ್ರಹ್ಮಾನ್ ಬಿನ್ ಶಿಬ್‌ಲ್ ಹೀಗೆ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು – ವ್ಯಾಪಾರಿಗಳು **ಫಾಜಿರ್** (ಅಲ್ಲಾಹನ ಆಜ್ಞೆ ಉಲ್ಲಂಘಿಸುವರು) ಆಗಿರುತ್ತಾರೆ. ಆಗ ಕೇಳಲಾಯಿತು – ಏನು ವ್ಯಾಪಾರ ಮಾಡುವುದು ಅನುಮತಿಸಲ್ಪಟ್ಟಿಲ್ಲವೇ? ಆಗ ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ವ್ಯಾಪಾರ ಅನುಮತಿಸಲಾಗಿದೆ. ಆದರೆ ವ್ಯಾಪಾರಿಗಳು ಸುಳ್ಳು ಹೇಳುತ್ತಾರೆ. ಅಲ್ಲಾಹನ ಪ್ರಮಾಣ ಮಾಡಿ ಹೆಚ್ಚು ಹೆಚ್ಚಾಗಿ ಬೆಲೆ ಹೇಳುತ್ತಾರೆ. ಹಝ್ರತ್ ರಸೂಲುಲ್ಲಾಹ್[ಸ] ಮುಂದುವರಿಸಿ ಹೇಳಿದರು: **ಫಾಸಿಖ್** (ಅಲ್ಲಾಹನ ಆಜ್ಞೆ ಪಾಲಿಸದವರು) ನರಕವಾಸಿಗಳು ಆಗುವರು. ಆಗ ಪ್ರಶ್ನಿಸಲಾಯಿತು – **ಫುಸ್ಸಾಖ್** (ಫಾಸಿಖ್ ಪದದ ಬಹುವಚನ) ಯಾರು? ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಮಹಿಳೆಯರು ಫುಸ್ಸಾಖ್ (ಆಜ್ಞೆಯನ್ನು ಉಲ್ಲಂಘಿಸುವವರು) ಆಗಿರುತ್ತಾರೆ. ಆಗ ಪ್ರಶ್ನಿಸಲಾಯಿತು – ಏನು ಮಹಿಳೆಯರು ನಮ್ಮ ಮಾತೆಯರು, ಸಹೋದರಿಯರು ಮತ್ತು ಪತ್ನಿಯರಲ್ಲವೇ? ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಏಕೆ ಅಲ್ಲ? ಆದರೆ ಅವರಿಗೆ ಏನನ್ನಾದರೂ ಕೊಟ್ಟರೆ ಅವರು ಕೃತಜ್ಞತೆ ಸೂಚಿಸುವುದಿಲ್ಲ. ಅವರು ಅಲ್ಲಾಹನ ಪರೀಕ್ಷೆಗೆ ಗುರಿಯಾದರೆ ಅವರು ಸಹನೆದೋರುವುದಿಲ್ಲ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 2, ಪುಟ 428)**

ಇದು ವ್ಯಾಪಾರಿಗಳು ಯೋಚಿಸಬೇಕಾದ ವಿಷಯವಾಗಿದೆ. ವ್ಯಾಪಾರ ಪಾರದರ್ಶಕವಾಗಿರಬೇಕು. ಇದು ಬೈಅತಿನ ಶರತ್ತುಗಳಲ್ಲಿ ಒಂದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಪವಿತ್ರ ಖುರ್‌ಆನ್‌ನಿಂದ ಹೀಗೆ ಸಾಬೀತಾಗುತ್ತದೆ – ಅವಿಶ್ವಾಸಿಗಿಂತ ಮುಂಚೆ ಫಾಸಿಖ್‌ಗೆ (ದೇವನ ಆಜ್ಞೆ ಉಲ್ಲಂಘಿಸುವವನಿಗೆ) ಶಿಕ್ಷೆ ಕೊಡಲಾಗುತ್ತದೆ..... ಒಂದು ಜನಾಂಗವು ಅಲ್ಲಾಹನ ಆಜ್ಞೆಗಳನ್ನು ಕಡೆಗಣಿಸುವವರಾದರೆ ಅವರ ಮೇಲೆ ಬೇರೆ ಒಂದು ಜನಾಂಗಕ್ಕೆ ಆಧಿಪತ್ಯ ನೀಡುವುದು ಅಲ್ಲಾಹನ ನಡೆವಳಿಕೆಯಾಗಿದೆ.

**(ಮಲ್‌ಫೂಝಾತ್; ಸಂಪುಟ 2, ಪುಟ 653, ಹೊಸ ಮುದ್ರಣ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

ಅಲ್ಲಾಹನ ಆಜ್ಞೆಗಳ ಉಲ್ಲಂಘನೆಯು ಮಿತಿಮೀರಿ ಹೋದಾಗ, ಅಲ್ಲಾಹನ ಆಜ್ಞೆಗಳ ಕಡೆಗಣಿಸುವಿಕೆ ಮತ್ತು ಅಲ್ಲಾಹನ ಚಿಹ್ನೆಗಳ ಬಗ್ಗೆ ತಾತ್ಸಾರ ಅವರಲ್ಲಿ ತಲೆದೋರಿದಾಗ, ಜನರು ಲೌಕಿಕ ವಿಷಯಗಳಲ್ಲಿಯೇ ಮುಳುಗಿದಾಗ ಅಲ್ಲಾಹನು ಅಂತಹ ಜನರನ್ನು ಹಲಾಕೂ ಖಾನ್, ಚೆಂಗೀಝ್ ಖಾನ್ ಮೊದಲಾದವರಿಂದ ನಾಶಗೊಳಿಸಿದನು. ಆ ಕಾಲದಲ್ಲಿ ಆಕಾಶದಿಂದ **'ಅಯ್ಯುಹಲ್ ಕುಪ್ಫಾರು ಉಖ್ತುಲುಲ್ ಫುಜ್ಜಾರ್'** (ಅವಿಶ್ವಾಸಿಗಳೇ, ಅಲ್ಲಾಹನ ಆಜ್ಞೆಗಳನ್ನು ಧಿಕ್ಕರಿಸುವವರನ್ನು ಕೊಲ್ಲಿರಿ.) ಎಂಬ ಶಬ್ದ ಕೇಳಿಸಿತು ಎಂದು ಬರೆಯಲಾಗಿದೆ. ಒಟ್ಟಿನಲ್ಲಿ, ಅಲ್ಲಾಹನ ಆಜ್ಞೆಗಳನ್ನು ಕಡೆಗಣಿಸುವ ಫಾಸಿಖ್, ಫಾಜಿರ್ ಆಗಿರುವ ಮನುಷ್ಯ ಅಲ್ಲಾಹನ ದೃಷ್ಟಿಯಲ್ಲಿ ಅವಿಶ್ವಾಸಿಗಿಂತ ಹೆಚ್ಚು ಕೀಳು ಮಟ್ಟದವನೂ ತಿರಸ್ಕಾರ ಯೋಗ್ಯನೂ ಆಗಿರುವನು.

**(ಮಲ್‌ಫೂಝಾತ್; ಭಾಗ 3, ಪುಟ 108 – ಹೊಸ ಮುದ್ರಣ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ದೌರ್ಜನ್ಯಗಾರನೂ ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುವವನೂ ಆಗಿರುವವನ ಪ್ರಾರ್ಥನೆಗಳು ಸ್ವೀಕರಿಸಲ್ಪಡುವುದಿಲ್ಲ. ಏಕೆಂದರೆ ಅವನು ಅಲ್ಲಾಹನನ್ನು ಕಡೆಗಣಿಸುತ್ತಾನೆ. ಅಲ್ಲಾಹನು ಅವನನ್ನೂ ಕಡೆಗಣಿಸುತ್ತಾನೆ. ಒಬ್ಬ ಪುತ್ರನು ತನ್ನ ಪಿತನನ್ನು ಗೌರವಿಸದಿದ್ದರೆ ಮತ್ತು ಅಯೋಗ್ಯನಾಗಿದ್ದರೆ ಪಿತನು ಅವನ ಬಗ್ಗೆ ಗಮನ ಕೊಡಲಾರನು. ಹೀಗಿರುವಾಗ ಅಲ್ಲಾಹನು ತನ್ನನ್ನು ಕಡೆಗಣಿಸುವವನನ್ನು ಹೇಗೆ ತಾನೆ ಗಮನಿಸುವನು?

**(ತಫ್‌ಸೀರ್ ಹಝ್ರತ್ ಮಸೀಹ್ ಮೌಊದ್[ಅ]; ಸಂ. 3, ಪು. 611 – ಹೊಸ ಮುದ್ರಣ)**

## ದೌರ್ಜನ್ಯ ಮಾಡಬೇಡಿರಿ

ಬೈಅತಿನ ಎರಡನೆಯ ಶರತ್ತಿನಲ್ಲಿ ದೌರ್ಜನ್ಯ ಮಾಡಬಾರದೆಂದು ಹೇಳಲಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

فَاخۡتَلَفَ الۡاَحۡزَابُ مِنۡۢ بَیۡنِہِمۡ ۚ فَوَیۡلٌ لِّلَّذِیۡنَ ظَلَمُوۡا مِنۡ عَذَابِ یَوۡمٍ اَلِیۡمٍ

ಆದರೆ ಅವರ ಪಕ್ಷಗಳು ಪರಸ್ಪರ ಮತಬೇಧ ಹೊಂದಿದುವು. ಆದುದರಿಂದ ಯಾತನಾಮಯವಾದ ದಿನದ ಶಿಕ್ಷೆ ಮೂಲಕ ದೌರ್ಜನ್ಯಗಾರರಿಗೆ ನಾಶವಿದೆ.

**(43:66)**

ಹಝ್ರತ್ ಜಾಬಿರ್[ರ] ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು – ನೀವು ದೌರ್ಜನ್ಯ ಮಾಡಬೇಡಿರಿ. ದೌರ್ಜನ್ಯವು ಪುನರುತ್ಥಾನದ ದಿನದಂದು ಅಂಧಕಾರದ ರೂಪದಲ್ಲಿ ನಿಮ್ಮ ಮುಂದೆ ಬರುವುದು. ದುರಾಸೆ,

ಜಿಪುಣತೆ ಮತ್ತು ಅಸೂಯೆಯಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ದುರಾಸೆ, ಜಿಪುಣತೆ ಮತ್ತು ಅಸೂಯೆ ನಿಮಗಿಂತ ಮೊದಲಿದ್ದವರನ್ನು ನಾಶಗೊಳಿಸಿತು. ಅವುಗಳು ರಕ್ತಪಾತ ಮಾಡಿಸಿದುವು ಮತ್ತು ಗೌರವಿಸಬೇಕಾದ ವಸ್ತುಗಳು ಅವುಗಳ ಕಾರಣದಿಂದ ಅಪವಿತ್ರಗೊಳಿಸಲ್ಪಟ್ಟವು.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್ – ಸಂಪುಟ 3, ಪುಟ 323)**

ಅನ್ಯರ ಹಕ್ಕುಗಳನ್ನು ನೀಡದೆ ಇರುವುದು ದೌರ್ಜನ್ಯವಾಗಿದೆ. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ವರದಿ ಮಾಡುತ್ತಾರೆ:

ನಾನು ಹಝ್ರತ್ ರಸೂಲುಲ್ಲಾಹ್‌ರನ್ನು[ಸ] ಕೇಳಿದೆ, ಯಾವ ದೌರ್ಜನ್ಯ ಎಲ್ಲದಕ್ಕಿಂತಲೂ ದೊಡ್ಡದಾಗಿದೆ? ಆಗ ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಯಾವುದಾದರೂ ವ್ಯಕ್ತಿ ತನ್ನ ಸಹೋದರನ ಹಕ್ಕಿಗೆ ಸೇರಿದ ಜಮೀನಿನಿಂದ ಒಂದು ಮೊಳ ತೆಗೆದುಕೊಳ್ಳುವುದು ಎಲ್ಲದಕ್ಕಿಂತ ದೊಡ್ಡ ದೌರ್ಜನ್ಯವಾಗಿದೆ. ಯಾರಾದರೂ ದೌರ್ಜನ್ಯದಿಂದ ಅನ್ಯರ ಜಮೀನಿನ ಒಂದು ಕಲ್ಲನ್ನಾದರೂ ಕಿತ್ತುಕೊಂಡರೆ ಅದರ ಕೆಳಗಿರುವ ಭೂಮಿಯ ಎಲ್ಲ ಪದರುಗಳು ನೊಗವಾಗಿ ಪುನರುತ್ಥಾನದ ದಿನ ಅವನ ಕೊರಳಿಗೆ ಹಾಕಲ್ಪಡುವುದು. ಭೂಮಿಯು ಎಷ್ಟು ಆಳವಾಗಿದೆ ಎಂಬುದು ಅದನ್ನು ಸೃಷ್ಟಿಸಿದವನಿಗೆ ಹೊರತು ಬೇರೆ ಯಾರಿಗೂ ತಿಳಿಯದು.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್ – ಸಂಪುಟ 1, ಪುಟ 396)**

ಕೆಲವರು ತಮ್ಮ ಸಹೋದರಿಯರ, ಸಹೋದರರ ಮತ್ತು ನೆರೆಹೊರೆಯವರ ಹಕ್ಕುಗಳನ್ನು ನೀಡುವುದಿಲ್ಲ. ಜಗಳ ಮಾಡಿ ಜಮೀನನ್ನು ಅನ್ಯಾಯದಿಂದ ಸ್ವಾಧೀನಪಡಿಸಿಕೊಳ್ಳುತ್ತಾರೆ. ಅವರು ಜಮೀನನ್ನು ವಶಪಡಿಸಿಕೊಳ್ಳುತ್ತಾರೆ. ಅಂತಹ ಜನರು ಅದರ ಬಗ್ಗೆ ಚಿಂತಿಸಬೇಕು. ನಾವು ಬೈಅತ್ ಮಾಡುವಾಗ ಯಾರ ಹಕ್ಕನ್ನೂ ಅನ್ಯಾಯದಿಂದ ಸ್ವಾಧೀನಪಡಿಸಿಕೊಳ್ಳಲಾರೆವು, ದೌರ್ಜನ್ಯ ಮಾಡಲಾರೆವು ಎಂದು ಪ್ರತಿಜ್ಞೆ ಮಾಡಿರುವುದರಿಂದ ಅಹ್ಮದಿಯರಾದ ನಾವು ಈ ಬಗ್ಗೆ ಬಹಳ ಹೆಚ್ಚಿಗೆ ಭಯಪಡಬೇಕಾದ ಸಂಗತಿಯಾಗಿದೆ.

ಒಂದು ಹದೀಸಿನಲ್ಲಿ ಹಝ್ರತ್ ಅಬೂಹುರೈರ[ರ] ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಕೇಳಿದರು: **ಮುಫ್‌ಲಿಸ್** (ನಿರ್ಗತಿಕ) ಎಂದರೆ ಯಾರು ಎಂದು ನಿಮಗೆ ಗೊತ್ತಿದೆಯೋ? ನಾವು ಹೇಳಿದೆವು: ಯಾರ ಬಳಿಯಲ್ಲಿ ಹಣ ಮತ್ತು ಸಾಮಗ್ರಿಗಳಿಲ್ಲವೋ ಆತನೇ ಮುಫ್‌ಲಿಸ್ (ನಿರ್ಗತಿಕ). ಆಗ ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ನನ್ನ ಸಮುದಾಯದ ಮುಫ್‌ಲಿಸ್ ಯಾರೆಂದರೆ ಅವನು ಪುನರುತ್ಥಾನದ ದಿನ ನಮಾಝ್, ಉಪವಾಸ, ಝಕಾತ್ ಮೊದಲಾದವುಗಳನ್ನು ತೆಗೆದುಕೊಂಡು ಬರುವನು. ಆದರೆ ಅವನು ಯಾರಿಗಾದರೂ ಬೈದಿರಬಹುದು, ಯಾರ ಮೇಲೆಯಾದರೂ

ಸುಳ್ಳು ದೋಷಾರೋಪ ಮಾಡಿರಬಹುದು, ಯಾರದಾದರೂ ಹಣವನ್ನು ತಿಂದು ಹಾಕಿರಬಹುದು, ಅನ್ಯಾಯದಿಂದ ಯಾರದಾದರೂ ರಕ್ತಪಾತ ಮಾಡಿರಬಹುದು ಅಥವಾ ಯಾರನ್ನಾದರೂ ಕೊಂದಿರಬಹುದು. ಇಂತಹ ದೌರ್ಜನ್ಯ ಪೀಡಿತರಿಗೆ ಅವನು (ದೌರ್ಜನ್ಯಗಾರನು) ಮಾಡಿದ ಸತ್ಕಾರ್ಯಗಳ ಪುಣ್ಯವು ನೀಡಲ್ಪಡುವುದು. ಆ ದೌರ್ಜನ್ಯ ಪೀಡಿತರ ಹಕ್ಕುಗಳು ಸಂದಾಯವಾಗುವ ಮೊದಲು ದೌರ್ಜನ್ಯಗಾರನ ಸತ್ಕಾರ್ಯಗಳ ಪುಣ್ಯವು ಮುಗಿದು ಹೋದರೆ ಆ ಜನರ ಪಾಪಗಳ ಹೊಣೆಗಾರಿಕೆ ಅವನ ಮೇಲೆ ಹೊರಿಸಲ್ಪಡುವುದು. ಅದರ ಫಲಸ್ವರೂಪವಾಗಿ ಸ್ವರ್ಗಕ್ಕೆ ಬದಲಾಗಿ ನರಕಕ್ಕೆ ಅವನು ಹಾಕಲ್ಪಡುವನು. ಇಂತಹ ಮನುಷ್ಯನೇ ಮುಫ್‌ಲಿಸ್ (ನಿರ್ಗತಿಕ) ಆಗಿದ್ದಾನೆ.

**(ಮುಸ್ಲಿಮ್ – ಕಿತಾಬುಲ್ ಬರ್ರ್ ವಸ್ಸಿಲತ್ ಬಾಬ್ ತಹ್‌ರೀಮುಝ್ಝುಲ್ಮ್)**

ನೀವು ಯೋಚಿಸಿರಿ, ನೀವು ಚಿಂತಿಸಿರಿ. ನಮ್ಮಲ್ಲಿ ಪ್ರತಿಯೊಬ್ಬನು ಚಿಂತಿಸಬೇಕಾಗಿದೆ. ಯಾರು ಮೇಲೆ ವಿವರಿಸಿದಂತೆ ವರ್ತಿಸುತ್ತಾರೋ ಅವರು ಭಯಪಡಬೇಕಾಗಿದೆ. ನಮ್ಮಲ್ಲಿ ಯಾರೂ ಮೇಲೆ ವಿವರಿಸಿದ ಮುಫ್‌ಲಿಸ್ ಸ್ಥಿತಿಯಲ್ಲಿ ಅಲ್ಲಾಹನ ಮುಂದೆ ಹಾಜರಾಗುವುದರಿಂದ ಅಲ್ಲಾಹನು ರಕ್ಷಿಸಲಿ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಇಲ್ಲಿ ಹಾಜರಾಗಿರುವ ಮತ್ತು ತಮ್ಮ ಸ್ಥಳಗಳಲ್ಲಿ ವಾಸ ಮಾಡುತ್ತಿರುವ ನನ್ನ ಜಮಾಅತಿಗೆ ಸೇರಿದ ಎಲ್ಲರೂ ನನ್ನ ಈ ಉಪದೇಶವನ್ನು ಗಮನವಿಟ್ಟು ಆಲಿಸಬೇಕು. ಈ ಜಮಾಅತಿಗೆ ಸೇರಿ ನನ್ನ ಶಿಷ್ಯರಾಗಿರುವ ಜನರಿಗೆ ನಾನು ಹೇಳಬಯಸುತ್ತೇನೆ – ಅವರು ಉತ್ತಮ ನಡತೆಯಲ್ಲಿಯೂ ಉತ್ತಮ ವರ್ತನೆಯಲ್ಲಿಯೂ ಭಯಭಕ್ತಿಯಲ್ಲಿಯೂ ಉನ್ನತ ಮಟ್ಟವನ್ನು ತಲಪಬೇಕು. ಯಾವುದೇ ಕಲಹ, ಉದ್ಧಟ ವರ್ತನೆ ಮತ್ತು ಕೆಟ್ಟ ಕೆಲಸ ಅವರ ಸಮೀಪಕ್ಕೆ ಬರಲು ಸಾಧ್ಯವಾಗಬಾರದು. ಐದು ಹೊತ್ತಿನ ನಮಾಝ್ ಸಾಮೂಹಿಕವಾಗಿ ಅನುಷ್ಠಿಸಬೇಕು. ಅವರು ಸುಳ್ಳು ಹೇಳಬಾರದು. ಯಾರಿಗೂ ನಾಲಗೆಯಿಂದ ನೋವನ್ನುಂಟುಮಾಡಬಾರದು. ಯಾವುದೇ ರೀತಿಯ ಕೆಟ್ಟ ಕೆಲಸ ಮಾಡಬಾರದು. ಯಾವುದೇ ರೀತಿಯ ಅಕ್ರಮ, ದೌರ್ಜನ್ಯ, ಕಲಹ ಮತ್ತು ಹಿಂಸಾಚಾರದ ಯೋಚನೆ ಕೂಡ ಹೃದಯದಲ್ಲಿ ಉಂಟಾಗಬಾರದು. ಒಟ್ಟಿನಲ್ಲಿ ಎಲ್ಲ ರೀತಿಯ ಪಾಪಕೃತ್ಯಗಳಿಂದಲೂ ಅಪರಾಧಗಳಿಂದಲೂ ದೂರವಿರಬೇಕು. ಅಹಿತಕರ ಕೆಲಸ ಮತ್ತು ಅಹಿತಕರ ಮಾತುಗಳಿಂದಲೂ ಭಾವೋದ್ರೇಕದಿಂದ ಕೂಡಿದ ನಿರರ್ಥಕ ಕೆಲಸಗಳಿಂದಲೂ ದೂರಸರಿಯಬೇಕು. ಪರಿಶುದ್ಧ ಹೃದಯರಾದ, ಯಾವುದೇ ಹಾನಿ ಮಾಡದ, ವಿನೀತರಾದ ಅಲ್ಲಾಹನ ದಾಸರಾಗಬೇಕು. ಯಾವುದೇ ವಿಷದ ಅಂಶವು ಅವರಲ್ಲಿ ಇಲ್ಲದಂತಾಗಲಿ... ಎಲ್ಲ ಮನುಷ್ಯರ ಹಿತಕಾಂಕ್ಷೆ ಅವರ ಸಿದ್ಧಾಂತವಾಗಲಿ. ಅವರು ಅಲ್ಲಾಹನಿಗೆ

ಭಯಪಡುವವರಾಗಲಿ. ಅವರು ತಮ್ಮ ನಾಲಗೆಗಳನ್ನೂ ಕೈಗಳನ್ನೂ ಹೃದಯದ ಯೋಚನೆಗಳನ್ನೂ ಪ್ರತಿಯೊಂದು ಮಲಿನ, ಕಲಹಕಾರಕ ರೀತಿಗಳಿಂದ ಮತ್ತು ವಂಚನೆಯಿಂದ ರಕ್ಷಿಸಿಕೊಳ್ಳಲಿ. ಐದು ಹೊತ್ತಿನ ನಮಾಝನ್ನು ತಪ್ಪದೆ ನಿರ್ವಹಿಸಲಿ. ದೌರ್ಜನ್ಯ, ಅನ್ಯಾಯ, ಅನ್ಯರ ಹಕ್ಕುಗಳ ಅಪಹಾರ, ಅಪ್ರಾಮಾಣಿಕತೆ, ಲಂಚ ಮತ್ತು ಪಕ್ಷಪಾತದಿಂದ ದೂರಸರಿಯಲಿ. ಕೆಟ್ಟವರ ಜೊತೆಯಲ್ಲಿ ಕುಳಿತುಕೊಳ್ಳಬಾರದು. ನಿಮ್ಮೊಂದಿಗೆ ಸಂಪರ್ಕವಿರಿಸುವ ವ್ಯಕ್ತಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸದವನು, ದೌರ್ಜನ್ಯ ಮಾಡುವವನು, ಕೆಟ್ಟ ಕೆಲಸ ಮಾಡುವವನು, ದುಸ್ವಭಾವಗಳನ್ನು ಹೊಂದಿದವನು ಅಥವಾ ಜನರ ಹಕ್ಕುಗಳ ಕುರಿತು ಯಾವುದೇ ಗಮನಹರಿಸದವನು ಆಗಿರುವನೆಂದು ಕಾಲಕ್ರಮೇಣ ಸಾಬೀತಾದರೆ ಅಥವಾ ನೀವು ಯಾರ ಬೈಅತ್ ಮಾಡಿ ಶಿಷ್ಯರಾಗಿರುವಿರೋ ಅವರನ್ನು ಬೈಯ್ಯುವ, ದೋಷಾರೋಪ ಮಾಡುವ ತನ್ನ ಸ್ವಭಾವವನ್ನು ಮುಂದುವರಿಸಿ ಅಲ್ಲಾಹನ ದಾಸರಿಗೆ ಮೋಸಮಾಡಲು ಅವನು ಬಯಸುತ್ತಾ ಇದ್ದರೆ ಅಂತಹ ಕೆಟ್ಟ ಮನುಷ್ಯನನ್ನು ದೂರಸರಿಸುವುದು ಕಡ್ಡಾಯವಾಗಿದೆ. ಅಂತಹ ಅಪಾಯಕಾರಿ ಮನುಷ್ಯನ ಸಹವಾಸವನ್ನು ಮಾಡಬಾರದು.

ಯಾವುದೇ ಧರ್ಮದ, ಯಾವುದೇ ಜನಾಂಗದ, ಯಾವುದೇ ಗುಂಪಿನ ವ್ಯಕ್ತಿಗೆ ಹಾನಿ ಉಂಟುಮಾಡಲು ಉದ್ದೇಶಿಸಬಾರದು. ಪ್ರತಿಯೊಬ್ಬರ ಸತ್ಯಸಂಧರಾದ ಹಿತೈಷಿಗಳಾಗಬೇಕು. ಅಕ್ರಮಿಗಳಿಗೂ ಪುಂಡರಿಗೂ ಕಲಹಗಾರರಿಗೂ ಕೆಟ್ಟ ಕೆಲಸ ಮಾಡುವವರಿಗೂ ನಿಮ್ಮ ಸಭೆಗಳಲ್ಲಿ ಪ್ರವೇಶ ನೀಡಬಾರದು. ಅಂತಹ ಜನರು ನಿಮ್ಮ ಸ್ಥಳಗಳಲ್ಲಿ ವಾಸಿಸಬಾರದು. ಅವರು ಎಂದಾದರೂ ನೀವು ದಾರಿತಪ್ಪಿ ಹೋಗುವುದಕ್ಕೆ ಕಾರಣಕರ್ತರೂ ಆಗಬಹುದು.

ಇವು ನಾನು ಆರಂಭದಿಂದಲೇ ಹೇಳುತ್ತಿದ್ದ ಶರತ್ತುಗಳಾಗಿವೆ. ನನ್ನ ಜಮಾಅತಿನ ಪ್ರತಿಯೊಬ್ಬನು ನನ್ನ ಈ ಉಪದೇಶವನ್ನು ಪಾಲಿಸುವುದು ಕಡ್ಡಾಯವಾಗಿದೆ. ನಿಮ್ಮ ಸಭೆಗಳಲ್ಲಿ ಯಾವುದೇ ಕೊಳಕು ವರ್ತನೆ, ಗೇಲಿಮಾತು ಮತ್ತು ಪರಿಹಾಸ ಇರಬಾರದು. ನೀವು ಪರಿಶುದ್ಧ ಹೃದಯರಾಗಿ, ಪರಿಶುದ್ಧ ಪ್ರಕೃತಿ ಹೊಂದಿ, ಪರಿಶುದ್ಧ ಯೋಚನೆಯೊಂದಿಗೆ ನಡೆಯಿರಿ. ನೆನಪಿಡಿರಿ ಪ್ರತಿಯೊಂದು ಕೆಡುಕು ಎದುರಿಸಲು ಯೋಗ್ಯವಾಗಿರುವುದಿಲ್ಲ. ಆದುದರಿಂದ ನೀವು ಬಹುತೇಕ ಸಂದರ್ಭಗಳಲ್ಲಿ ಕ್ಷಮೆ ಮತ್ತು ಕಡೆಗಣಿಸುವ ಸ್ವಭಾವ ಹೊಂದಿರಿ. ನೀವು ಸಹನೆ ಮತ್ತು ತಾಳ್ಮೆ ತೋರಿರಿ. ಯಾವುದೇ ಅನ್ಯಾಯದ ರೀತಿಯಲ್ಲಿ ಆಕ್ರಮಣ ಮಾಡಬೇಡಿರಿ. ನಿಮ್ಮ ಭಾವೋದ್ರೇಕಗಳನ್ನು ಹತೋಟಿಯಲ್ಲಿಡಿರಿ. ಯಾವುದಾದರೂ ವಾದ ಪ್ರತಿವಾದ ಮಾಡುವುದಾದರೆ ಅಥವಾ ಧಾರ್ಮಿಕ ಮಾತುಕತೆ ನಡೆಸುವುದಾದರೆ ಸೌಮ್ಯವಾಗಿ ಮತ್ತು ಸಭ್ಯ ರೀತಿಯಲ್ಲಿ ಮಾತನಾಡಿರಿ. ಯಾರಾದರೂ ಅಜ್ಞಾನದಿಂದ ವರ್ತಿಸಿದರೆ ಸಲಾಮ್ ಹೇಳಿ ಅಂತಹ ಸಭೆಯಿಂದ ಎದ್ದು ಹೋಗಿರಿ. ನಿಮ್ಮನ್ನು ಸತಾಯಿಸಿದರೆ, ನಿಮ್ಮನ್ನು ಬೈಯುತ್ತಾ ಇದ್ದರೆ, ನಿಮ್ಮ ಬಗ್ಗೆ ಕೆಟ್ಟ ಮಾತುಗಳನ್ನು ಆಡುತ್ತಿದ್ದರೆ ನೀವು

ಜಾಗರೂಕರಾಗಿರಿ. ನೀವು ಮೌಢ್ಯವನ್ನು ಮೌಢ್ಯದಿಂದ ಎದುರಿಸಬೇಡಿರಿ. ಹಾಗೆ ಎದುರಿಸಿದರೆ ನೀವು ಸಹ ಅವರ ಹಾಗೆಯೇ ಗಣಿಸಲ್ಪಡುವಿರಿ. ಅಲ್ಲಾಹನು ನಿಮ್ಮನ್ನು ಲೋಕಕ್ಕೆ ಒಳಿತಿನ ಮತ್ತು ಸತ್ಯದ ಮಾದರಿಯಾಗುವಂತಹ ಜಮಾಅತಾಗಿ ಮಾಡಲು ಬಯಸುತ್ತಾನೆ. ಆದುದರಿಂದ ಕೆಟ್ಟ ಸ್ವಭಾವ ಹೊಂದಿದ, ಉದ್ಧಟ ವರ್ತನೆಯ, ಕಲಹಗಾರನಾದ ವ್ಯಕ್ತಿಯನ್ನು ನಿಮ್ಮ ಮಧ್ಯದಿಂದ ಕೂಡಲೆ ಹೊರಗೆ ಹಾಕಬೇಕು. ಯಾರು ವಿನೀತರಾಗಿ, ಒಳ್ಳೆಯ ವರ್ತನೆ ಹೊಂದಿ, ಸಾತ್ವಿಕನಾಗಿ ತಾಳ್ಮೆ, ಮೃದುಮಾತು, ಉತ್ತಮ ಸ್ವಭಾವ, ಒಳ್ಳೆಯ ಪ್ರಕೃತಿ ಹೊಂದಿ ಜೀವಿಸುವುದಿಲ್ಲವೋ ಅವನು ಬೇಗನೆ ನಮ್ಮಿಂದ ದೂರಸರಿದು ಹೋಗುವನು. ಅಂತಹ ವ್ಯಕ್ತಿ ನಮ್ಮೊಂದಿಗಿರುವುದನ್ನು ಅಲ್ಲಾಹನು ಬಯಸುವುದಿಲ್ಲ. ಅವನು ನಿಶ್ಚಯವಾಗಿಯೂ ಅದೃಷ್ಟಹೀನನಾಗಿ ಸಾಯುವನು. ಏಕೆಂದರೆ ಅವನು ಒಳ್ಳೆಯ ಮಾರ್ಗವನ್ನು ಅವಲಂಬಿಸಿರಲಿಲ್ಲ. ಆದುದರಿಂದ ನೀವು ಜಾಗರೂಕರಾಗಿರಿ. ನೀವು ವಾಸ್ತವಿಕವಾಗಿ ಒಳ್ಳೆಯ ಹೃದಯವಂತರೂ ವಿನೀತ ಸ್ವಭಾವದವರೂ ಸತ್ಯಸಂಧರೂ ಆಗಿರಿ. ನೀವು ಐದು ಹೊತ್ತಿನ ನಮಾಝ್ ಮತ್ತು ನಿಮ್ಮ ಸ್ವಭಾವ ಗುಣದ ಮೂಲಕ ಗುರುತಿಸಲ್ಪಡುವಿರಿ. ಯಾರಲ್ಲಿ ಕೆಡುಕಿನ ಬೀಜವಿದೆಯೋ ಅವನು ಈ ಉಪದೇಶವನ್ನು ಅನುಸರಿಸುವವನಾಗಲಾರನು.

**(ಇಶ್ತಿಹಾರ್ 29–5–1898; ತಬ್ಲೀಗ್ ರಿಸಾಲತ್, ಸಂಪುಟ 7, ಪುಟ 42 – 43)**

## ವಿಶ್ವಾಸ ವಂಚನೆ ಮಾಡಬೇಡಿರಿ

ವಿಶ್ವಾಸ ವಂಚನೆಯ ಕುರಿತು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

وَلَا تُجَادِلْ عَنِ الَّذِيْنَ يَخْتَانُوْنَ اَنْفُسَهُمْ اِنَّ اللّٰهَ لَا يُحِبُّ مَنْ كَانَ خَوَّانًا اَثِيْمًا

ಆತ್ಮ ವಂಚನೆ ಮಾಡುವವರ ಪರವಾಗಿ ನೀನು ವಾದಿಸಬಾರದು. ವಿಶ್ವಾಸ ಘಾತುಕನೂ ಮಹಾಪಾಪಿಯೂ ಆದವನನ್ನು ಅಲ್ಲಾಹನು ಮೆಚ್ಚಲಾರನು.

**(4:108)**

ಒಂದು ಹದೀಸಿನಲ್ಲಿ ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಯಾರಾದರೂ ನಿಮ್ಮ ಬಳಿ ಒಂದು ವಸ್ತುವನ್ನು ಅಮಾನತಾಗಿ ಇರಿಸಿದರೆ ಅದನ್ನು ಮರಳಿ ಕೊಡಿರಿ. ನಿಮ್ಮೊಂದಿಗೆ ವಂಚನೆಯಿಂದ ವರ್ತಿಸಿದವನೊಂದಿಗೆ ಕೂಡ ವಂಚನೆಯಿಂದ ಎಂದೂ ವರ್ತಿಸಬೇಡಿರಿ.

**(ಅಬೂ ದಾವೂದ್; ಕಿತಾಬುಲ್ ಬುಯೂಅ್, ಬಾಬ್ ಫಿರ್ರಜುಲಿ ಯಅ್‌ಖುಧ್ ಹಖ್ಖಿಹೂ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಅಹಿಂಸಾತ್ಮಕ ಗುಣಗಳ ಯಾದಿಯಲ್ಲಿ ಸೇರಿದ ಎರಡನೆಯ ಸದ್ಗುಣಕ್ಕೆ ಅರಬಿ ಭಾಷೆಯಲ್ಲಿ ಅಮಾನತ್ ಎಂದೂ ದಿಯಾನತ್ ಎಂದೂ ಹೇಳುತ್ತಾರೆ. ಇದಕ್ಕೆ ವಿಶ್ವಸ್ತತೆ ಅಥವಾ ಪ್ರಾಮಾಣಿಕತೆ ಎಂದು ಅರ್ಥ ಕೊಡಬಹುದು. ಇದು ಅನ್ಯರ ಸಂಪತ್ತನ್ನು ವಂಚನೆಯಿಂದಲೋ ಅನ್ಯಾಯವಾಗಿಯೋ ಸ್ವಾಧೀನಪಡಿಸಿ ದ್ರೋಹವನ್ನುಂಟು ಮಾಡುವುದಕ್ಕೆ ಒಪ್ಪದ ಸದ್ಗುಣವಾಗಿದೆ. ಇದು ಸಹ ಮನುಷ್ಯನ ಸಹಜ ಗುಣಗಳಲ್ಲೊಂದಾಗಿದೆ. ಈ ಕಾರಣದಿಂದಲೇ ದುಸ್ವಭಾವಗಳಿಗೆ ಬಲಿಯಾಗದ ಶುದ್ಧ ಪ್ರಕೃತಿಯ ಮೊಲೆಯುಣ್ಣುವ ಮಗುವು ತನ್ನ ತಾಯಿಯ ಹೊರತು ಅನ್ಯ ಸ್ತ್ರೀಯ ಮೊಲೆ ಕುಡಿಯುವುದಕ್ಕೆ ವೈಮನಸ್ಯ ತೋರಿಸಿ ಅನ್ಯರ ವಸ್ತುವಿನಲ್ಲಿ ವಿರಕ್ತಿಯನ್ನು ತೋರಿಸುತ್ತದೆ.

**(ಇಸ್ಲಾಮೀ ಉಸೂಲ್‌ಕೀ ಫಲಾಸಫಿ; ರೂಹಾನೀ ಖಝಾಇನ್, ಸಂಪುಟ 10, ಪುಟ 344,**

## ಶಾಂತಿಭಂಗ ಮಾಡಬೇಡಿರಿ

ಶಾಂತಿಭಂಗದ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ:

وَابْتَغِ فِيْمَآ اٰتٰكَ اللّٰهُ الدَّارَ الْاٰخِرَةَ وَلَا تَنْسَ نَصِيْبَكَ مِنَ الدُّنْيَا وَاَحْسِنْ كَمَآ اَحْسَنَ اللّٰهُ
اِلَيْكَ وَلَا تَبْغِ الْفَسَادَ فِي الْاَرْضِ ؕ اِنَّ اللّٰهَ لَا يُحِبُّ الْمُفْسِدِيْنَ

ಅಲ್ಲಾಹನು ನಿನಗೆ ನೀಡಿದವುಗಳಿಂದ ಪಾರತ್ರಿಕ ಗೃಹವನ್ನು ನೀನು ಹುಡುಕು. ಐಹಿಕ ಜೀವಿತದ ನಿನ್ನ ಪಾಲನ್ನು ನೀನು ಮರೆಯಬಾರದು. ಅಲ್ಲಾಹನು ನಿನಗೆ ಒಳಿತು ಮಾಡಿದಂತೆ ನೀನು ಸಹ (ಜನರಿಗೆ) ಒಳಿತು ಮಾಡು. ಭೂಮಿಯಲ್ಲಿ ಗಲಭೆ ಗೊಂದಲವನ್ನು ಸೃಷ್ಟಿಸಲು ಪ್ರಯತ್ನಿಸಬೇಡ. ಖಂಡಿತವಾಗಿಯೂ ಅಲ್ಲಾಹನು ಗಲಭೆ ಗೊಂದಲಗಾರರನ್ನು ಪ್ರೀತಿಸುವುದಿಲ್ಲ. **(28:78)**

ಹಝ್ರತ್ ಮುಆಝ್ ಬಿನ್ ಜಬಲ್[ರ] ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಯುದ್ಧ ಎರಡು ರೀತಿಯಲ್ಲಿದೆ. ಒಂದನೆಯದು, ಅಲ್ಲಾಹನ ತೃಪ್ತಿಯನ್ನು ಗಳಿಸಲು ಇಮಾಮರ ನೇತೃತ್ವದಲ್ಲಿ ಮಾಡುವ ಯುದ್ಧ. ಹಾಗೆ ಯುದ್ಧ ಮಾಡುವ ವ್ಯಕ್ತಿ ತನ್ನ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾನೆ ಮತ್ತು ತನ್ನೊಂದಿಗೆ ಪ್ರಯಾಣ ಮಾಡುವವರಿಗೆ ಸೌಲಭ್ಯಗಳನ್ನು ಒದಗಿಸಿಕೊಡುತ್ತಾನೆ ಹಾಗೂ ಗಲಭೆಗಳಿಂದ ತನ್ನನ್ನು ತಡೆದಿಡುತ್ತಾನೆ. ಅಂತಹ ವ್ಯಕ್ತಿಯ ನಿದ್ರೆ, ಎಚ್ಚರ ಎಲ್ಲವೂ ಅನುಗ್ರಹಕ್ಕೆ ಅರ್ಹವಾಗುತ್ತವೆ. ಎರಡನೆಯದು, ಒಬ್ಬನು ಹೆಮ್ಮೆಯಿಂದ, ತೋರಿಕೆಗಾಗಿ ಮತ್ತು ತನ್ನ ಶೌರ್ಯದ ಕಥೆ ಹೇಳಲು ಮಾಡುವ ಯುದ್ಧವಾಗಿದೆ. ಅಂತಹ ವ್ಯಕ್ತಿ ಇಮಾಮರಿಗೆ ಅವಿಧೇಯನಾಗಿರುತ್ತಾನೆ. ಭೂಮಿಯಲ್ಲಿ ಶಾಂತಿಭಂಗ ಮಾಡುತ್ತಾನೆ. ಅಂತಹ ವ್ಯಕ್ತಿ ಮೊದಲನೆಯ ವ್ಯಕ್ತಿಗೆ ಸಮಾನನಾಗಿರುವುದಿಲ್ಲ.

**(ಸುನನ್ ಅಬೀದಾವೂದ್; ಕಿತಾಬುಲ್ ಜಿಹಾದ್; ಬಾಬ್ ಫೀಮನ್ ಯಗ್‌ಝೂ ವ ಯಲ್‌ತಮಿಸ್)**

ಹಝ್ರತ್ ಅಸ್ಮಾ ಬಿನ್ತ್ ಯಝೀದ್[ರ] ಹಝ್ರತ್ ನಬಿ[ಸ] ಹೇಳಿದ್ದಾಗಿ ಹೀಗೆ ವರದಿ ಮಾಡುತ್ತಾರೆ: ನಿಮಗೆ ಅತ್ಯುತ್ತಮ ಜನರ ಕುರಿತು ಹೇಳುತ್ತೇನೆ. ಅಂಥವರು ಒಳ್ಳೆಯದನ್ನು ಕಾಣುವಾಗ ಅಲ್ಲಾಹನನ್ನು ಸ್ಮರಿಸುತ್ತಾ ಇರುತ್ತಾರೆ. ನಬಿ[ಸ] ಮತ್ತೆ ಹೀಗೆ ಹೇಳಿದರು: ಅತ್ಯಂತ ಕೆಟ್ಟ ಜನರು ಚಾಡಿ ಹೇಳಲು ನಡೆದಾಡುತ್ತಾರೆ. ಪ್ರೀತಿಸುವವರ ಮಧ್ಯೆ ಒಡಕನ್ನುಂಟುಮಾಡುತ್ತಾರೆ. ನಿಷ್ಠಾವಂತರಾಗಿ ಅನುಸರಣೆದೋರುವ ಜನರು ಪಾಪಕೃತ್ಯಗಳನ್ನು ಮಾಡುವವರಾಗಲಿ ಎಂದು ಅವರು ಬಯಸುತ್ತಾರೆ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 6, ಪುಟ 459 – ಬೈರೂತ್ ಮುದ್ರಣ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಅಲ್ಲಾಹನು ಸ್ಥಾಪಿಸಿದ ಜಮಾಅತಿಗೆ ನೀವು ಸೇರಿದ ಕಾರಣ ನಿಮ್ಮನ್ನು ಬಿಟ್ಟು ನಿಮ್ಮಿಂದ ಬೇರೆಯಾಗುವವರ ವಿರುದ್ಧ ನೀವು ಜಗಳ ಮಾಡಬೇಡಿರಿ. ಅವರಿಗಾಗಿ ಅವರ ಅನುಪಸ್ಥಿತಿಯಲ್ಲಿ ಪ್ರಾರ್ಥಿಸಿರಿ. ಅಲ್ಲಾಹನು ಅನುಗ್ರಹಿಸಿ ನಿಮಗೆ ದಯಪಾಲಿಸಿದ ಸೂಕ್ಷ್ಮ ದೃಷ್ಟಿ ಮತ್ತು ಜ್ಞಾನವನ್ನು ಅವರಿಗೂ ನೀಡಲಿ. ನೀವು ನಿಮ್ಮ ಪರಿಶುದ್ಧ ಮಾದರಿ ಮತ್ತು ಉತ್ತಮ ನಡೆವಳಿಕೆಯಿಂದ ಒಳ್ಳೆಯ ಮಾರ್ಗವನ್ನು ಅವಲಂಬಿಸಿರುವಿರಿ ಎಂದು ಸಾಬೀತುಗೊಳಿಸಿರಿ. ನೋಡಿರಿ, ನಿಮ್ಮನ್ನು ಪದೇ ಪದೇ ಉಪದೇಶಿಸಲಿಕ್ಕಾಗಿ ಅಲ್ಲಾಹನಿಂದ ನಾನು ನೇಮಿಸಲ್ಪಟ್ಟಿದ್ದೇನೆ. ನೀವು ಎಲ್ಲ ವಿಧಗಳ ಕಲಹ, ಗಲಭೆ ಗೊಂದಲಗಳ ಸ್ಥಳಗಳಿಂದ ನಿಮ್ಮನ್ನು ದೂರಸರಿಸಿರಿ. ನೀವು ಬೈಗಳನ್ನು ಆಲಿಸಿ ಸಹನೆದೋರಿರಿ. ಕೆಡುಕಿಗೆ ಉತ್ತರ ಒಳಿತಿನಿಂದ ನೀಡಿರಿ. ಯಾರಾದರೂ ಗಲಭೆ ಗೊಂದಲ, ಕಲಹ ಮಾಡಲು ಉದ್ದೇಶಿಸಿದರೆ ನೀವು ಆ ಸ್ಥಳದಿಂದ ತಪ್ಪಿಸಿಕೊಳ್ಳುವುದು ಮತ್ತು ಮೃದುವಾಗಿ ಉತ್ತರ ನೀಡುವುದು ಉತ್ತಮವಾಗಿದೆ. ಈ ಜಮಾಅತಿಗೆ ಸೇರಿದ ವ್ಯಕ್ತಿ ಯಾರೊಂದಿಗಾದರೂ ಜಗಳ ಮಾಡಿದನೆಂದು ನನಗೆ ಸಮಾಚಾರ ದೊರೆತರೆ ನಾನು ಆ ರೀತಿಯ ವರ್ತನೆಯನ್ನು ಖಂಡಿತವಾಗಿಯೂ ಇಷ್ಟಪಡುವುದಿಲ್ಲ. ಲೋಕಕ್ಕೆ ಮಾದರಿಯಾಗಬೇಕಾದ ಈ ಜಮಾಅತ್ ತಖ್ವಾದ (ಭಯಭಕ್ತಿ) ಮಾರ್ಗವನ್ನು ತೊರೆಯುವುದನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ಯಾವನಾದರೂ ವ್ಯಕ್ತಿ ಈ ಜಮಾಅತಿಗೆ ಸೇರಿದ ನಂತರ ಸಹನೆಯಿಂದ ವರ್ತಿಸದಿದ್ದರೆ ನೆನಪಿಡಲಿ ಅವನು ಈ ಜಮಾಅತಿಗೆ ಸೇರಿದವನಲ್ಲ. ಇದನ್ನು ಅಲ್ಲಾಹನು ಸಹ ಅನುಮೋದಿಸುತ್ತಾನೆ. ನನ್ನನ್ನು ಶತ್ರುಗಳು ಬೈಯ್ಯುವುದು ನಿಮ್ಮನ್ನು ರೊಚ್ಚಿಗೆಬ್ಬಿಸಲು ಹೇತುವಾಗುವುದಾದರೆ ನೀವು ಆ ವಿಷಯವನ್ನು ಅಲ್ಲಾಹನ ನಿರ್ಧಾರಕ್ಕೆ ಬಿಡಿರಿ. ನೀವು ಆ ಬಗ್ಗೆ ತೀರ್ಪು ನೀಡಲಾರಿರಿ. ನನ್ನ ವಿಷಯ ಅಲ್ಲಾಹನಿಗೆ ವಹಿಸಿಕೊಡಿರಿ. ನೀವು ಬೈಗಳನ್ನು ಕೇಳಿದ ನಂತರವೂ ಸಹನೆ ಮತ್ತು ತಾಳ್ಮೆಯನ್ನು ಅವಲಂಬಿಸಿರಿ.

**(ಮಲ್‌ಫೂಝಾತ್; ಸಂಪುಟ 4, ಪುಟ 157 – ಹೊಸ ಮುದ್ರಣ)**

## ವಿದ್ರೋಹದಿಂದ ದೂರಸರಿಯಿರಿ

ಬೈಅತಿನ ಎರಡನೆಯ ಶರತ್ತಿನಲ್ಲಿ ವಿದ್ರೋಹದಿಂದ ದೂರಸರಿಯುವ ಪ್ರತಿಜ್ಞೆಯನ್ನು ಮಾಡಲಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

وَقَاتِلُوْهُمْ حَتّٰى لَا تَكُوْنَ فِتْنَةٌ وَّيَكُوْنَ الدِّيْنُ لِلّٰهِ

'ವಿದ್ರೋಹ ಕೊನೆಗೊಂಡು ಧರ್ಮಸ್ವೀಕಾರಕ್ಕಿರುವ ತಡೆಗಳು ನಿವಾರಿಸಲ್ಪಟ್ಟು ಆಡಳಿತವು ಅಲ್ಲಾಹನ ಧರ್ಮಪ್ರಕಾರ ಆಗುವ ವರೆಗೆ ಯುದ್ಧ ಮಾಡಿರಿ.' **(2:194)** ಎಂದು ಪವಿತ್ರ ಖುರ್‌ಆನಿನಲ್ಲಿ ಹೇಳಲಾಗಿದೆ.

ಪವಿತ್ರ ಖುರ್‌ಆನಿನಲ್ಲಿ ಇನ್ನೊಂದು ಕಡೆ ಹೀಗೆ ಹೇಳಿದೆ:

قُلْ قِتَالٌ فِيْهِ كَبِيْرٌ ط وَصَدٌّ عَنْ سَبِيْلِ اللّٰهِ وَكُفْرٌ بِهٖ وَالْمَسْجِدِ الْحَرَامِ ق وَاِخْرَاجُ اَهْلِهٖ مِنْهُ اَكْبَرُ
عِنْدَ اللّٰهِ وَالْفِتْنَةُ اَكْبَرُ مِنَ الْقَتْلِ ط وَلَا يَزَالُوْنَ يُقَاتِلُوْنَكُمْ حَتّٰى يَرُدُّوْكُمْ عَنْ دِيْنِكُمْ اِنِ اسْتَطَاعُوْا

ಆದರಣೀಯ ಮಾಸದಲ್ಲಿ ಯುದ್ಧ ಮಾಡುವುದು ಪಾಪಕರವಾಗಿದೆ. ಆದರೆ, ಅಲ್ಲಾಹನ ಮಾರ್ಗದಿಂದ ತಡೆಯುವುದು ಮತ್ತು ಅವಿಶ್ವಾಸವನ್ನು ಅವಲಂಬಿಸುವುದು ಅಲ್ಲಾಹನ ಉತ್ತಮ ದಾಸರನ್ನು ಮಸ್‌ಜಿದುಲ್ ಹರಾಮ್ (ಪವಿತ್ರ ಮಸ್‌ಜಿದ್ ಕಅ್‌ಬ)ದಿಂದ ಹೊರಹಾಕುವುದು ಅದಕ್ಕಿಂತ ದೊಡ್ಡ ಪಾಪವಾಗಿದೆ. ವಿದ್ರೋಹವನ್ನು ಹಬ್ಬಿಸುವುದು ಎಂದರೆ ಶಾಂತಿಭಂಗ ಮಾಡುವುದು ಕೊಲೆಗಿಂತ ದೊಡ್ಡ ಪಾಪಕೃತ್ಯವಾಗಿದೆ. **(2:218)**

**(ಜಂಗೇ ಮುಖದ್ದಸ್; ರೂಹಾನೀ ಖಝಾಇನ್, ಭಾಗ 6, ಪುಟ 255)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಇಂದು ಅಜ್ಞಾನಿಗಳೂ ಅಕ್ರಮಿಗಳೂ ಆದ ಕೆಲವು ಹಿಂದುಗಳು ಮತ್ತು ಮುಸ್ಲಿಮರು ಸರಕಾರದ ವಿರುದ್ಧ ವಿದ್ರೋಹದ ವಾಸನೆ ಬರುವಂತಹ ಕೆಲಸ ಮಾಡುತ್ತಾ ಇದ್ದಾರೆ. ವಿದ್ರೋಹದ ಬಣ್ಣವು ಈ ಜನರ ಪ್ರಕೃತಿಯಲ್ಲಿ ಉಂಟಾಗುವುದೆಂದು ನಾನು ಶಂಕಿಸುತ್ತೇನೆ. ಈ ಕಾರಣದಿಂದ, ಪಂಜಾಬ್ ಮತ್ತು ಹಿಂದುಸ್ಥಾನದ ವಿವಿಧ ಕಡೆಗಳಲ್ಲಿ ಅಲ್ಲಾಹನ ಅನುಗ್ರಹದಿಂದ ಅನೇಕ ಲಕ್ಷಗಳನ್ನು ತಲಪಿರುವ ನನ್ನ ಜಮಾಅತಿನ ಸದಸ್ಯರು, ನಾನು ಕಳೆದ 26 ವರ್ಷಗಳಿಂದ ಭಾಷಣ ಮತ್ತು ಬರಹಗಳ ಮೂಲಕ ಮನವರಿಕೆ ಮಾಡಿಕೊಡುತ್ತಾ ಇರುವ ನನ್ನ ಉಪದೇಶಗಳನ್ನು ಚೆನ್ನಾಗಿ ನೆನಪಿಡಲಿ. ಅದೇನೆಂದರೆ, ಅವರು ಸರಕಾರವನ್ನು ಪೂರ್ಣವಾಗಿ ಅನುಸರಿಸಬೇಕು. ಏಕೆಂದರೆ ಇದು ನಮಗೆ ಉಪಕಾರ ಮಾಡುವ ಸರಕಾರವಾಗಿದೆ.... ಆದ್ದರಿಂದ ಈ ಸರಕಾರದ ವಿರುದ್ಧ ಹೃದಯದಲ್ಲಿ ವಿದ್ರೋಹದ ಭಾವನೆ ಹೊಂದಿರುವ ವ್ಯಕ್ತಿ ನನ್ನ ಜಮಾಅತಿನಲ್ಲಿ ಸೇರಿದವನಲ್ಲ. ಯಾವ ಸರಕಾರವು ನಮ್ಮನ್ನು ದೌರ್ಜನ್ಯಗಾರರ

ಹಿಡಿತದಿಂದ ರಕ್ಷಿಸುತ್ತಾ ಇದೆಯೋ, ಯಾವ ಸರಕಾರದ ನೆರಳಿನಲ್ಲಿ ನಮ್ಮ ಜಮಾಅತ್ ಅಭಿವೃದ್ಧಿ ಹೊಂದುತ್ತಾ ಇದೆಯೋ, ಅದರ ಉಪಕಾರಕ್ಕೆ ನಾವು ಕೃತಜ್ಞತೆ ಅರ್ಪಿಸದಿದ್ದರೆ ನಾವು ಅಯೋಗ್ಯರಾಗುವೆವು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಉಪಕಾರಕ್ಕೆ ಪ್ರತಿಯಾಗಿ ಉಪಕಾರ ಮಾಡಬೇಕು." ಹದೀಸಿನಲ್ಲಿಯೂ ಹೀಗೆ ಹೇಳಲಾಗಿದೆ: "ಯಾರು ಮನುಷ್ಯನಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಅರ್ಪಿಸುವುದಿಲ್ಲ." ನೀವು ಈ ಸರಕಾರದ ನೆರಳಿನಿಂದ ಹೊರಹೋಗುವುದಾದರೆ ನೀವು ವಾಸಿಸಬಹುದಾದ ಸ್ಥಳ ಯಾವುದು? ಯೋಚಿಸಿರಿ. ನಿಮಗೆ ಆಶ್ರಯವನ್ನು ನೀಡಬಹುದಾದ ಯಾವುದಾದರೊಂದು ಸರಕಾರದ ಹೆಸರನ್ನಾದರೂ ಹೇಳಿರಿ. ಪ್ರತಿಯೊಂದು ಮುಸ್ಲಿಮ್ ಸರಕಾರ ನಿಮ್ಮನ್ನು ಕೊಲ್ಲಲು ಹಲ್ಲು ಕಡಿಯುತ್ತಾ ಇದೆ. ಏಕೆಂದರೆ ಅವರ ದೃಷ್ಟಿಯಲ್ಲಿ ನೀವು ಅವಿಶ್ವಾಸಿಗಳೂ ಧರ್ಮತ್ಯಾಗಿಗಳೂ ಆಗಿದ್ದೀರಿ. ಆದ್ದರಿಂದ ನೀವು ಅಲ್ಲಾಹನ ಈ ಅನುಗ್ರಹವನ್ನು ಪರಿಗಣಿಸಿರಿ.

.....ಯಾವುದಾದರೂ ರಕ್ತಪಾತ ಮಾಡುವ ಮಹ್‌ದೀ ಆಗಮಿಸಿ ಕ್ರೈಸ್ತ ದೊರೆಗಳನ್ನು ದಸ್ತಗಿರಿ ಮಾಡುವರು ಎಂಬ ಕೃತ್ರಿಮವಾದ ನಂಬಿಕೆಯನ್ನು ಹರಡಿದ್ದರಿಂದ ನಮ್ಮ ವಿರೋಧಿಗಳಾದ ಮುಸ್ಲಿಮರ ಹೃದಯಗಳು ಕಳಂಕಿತವೂ ಕಠಿಣವೂ ಆಗಿವೆ. ಹೀಗೆ ನಂಬುವವರು ಅಪಾಯಕಾರಿ ಮನುಷ್ಯರಾಗಿದ್ದಾರೆ. ಯಾವುದಾದರೂ ಕಾಲದಲ್ಲಿ ಇಂತಹ ವಿಶ್ವಾಸಗಳು ವಿದ್ರೋಹ ಮಾಡಲು ಅಜ್ಞಾನಿಗಳಿಗೆ ಹೇತುವಾಗಬಹುದು. ನಿಶ್ಚಯವಾಗಿಯೂ ಅವರು ವಿದ್ರೋಹಿಗಳಾಗುವರು. ಮುಸ್ಲಿಮರು ಇಂತಹ ನಂಬಿಕೆಗಳಿಂದ ಬಿಡುಗಡೆ ಹೊಂದಬೇಕೆಂಬುವುದೇ ನಮ್ಮ ಪ್ರಯತ್ನವಾಗಿದೆ. ಯಾವ ಧರ್ಮದಲ್ಲಿ ಮಾನವರ ಕುರಿತು ಸಹಾನುಭೂತಿ ಇಲ್ಲವೋ ಆ ಧರ್ಮ ದೇವನ ಕಡೆಯಿಂದ ಬಂದದ್ದು ಎಂದು ಹೇಳಲು ಸಾಧ್ಯವಿಲ್ಲ. 'ನೀವು ಭೂಮಿಯಲ್ಲಿ ದಯೆದೋರಿರಿ. ಅದರ ಫಲವಾಗಿ ಆಕಾಶದಲ್ಲಿ ನಿಮ್ಮ ಮೇಲೆ ದಯೆ ತೋರಿಸಲ್ಪಡುವುದು' ಎಂದು ಅಲ್ಲಾಹನು ನಮಗೆ ಕಲಿಸಿದ್ದಾನೆ.

**(ಮಜ್‌ಮೂಅ ಇಶ್ತಿಹಾರಾತ್; ಭಾಗ 3, ಪುಟ 582 – 585)**

## ಭಾವೋದ್ರೇಕಗಳಿಂದ ಸೋಲಿಸಲ್ಪಡಬೇಡಿರಿ

ಬೈಅತಿನ ಎರಡನೆಯ ಶರತ್ತಿನಲ್ಲಿ ಭಾವೋದ್ರೇಕಗಳಿಂದ ಸೋಲಿಸಲ್ಪಡದ ಬಗ್ಗೆ ಗಮನ ಹರಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಆಧ್ಯಾತ್ಮಿಕವಾದ ನಾಲ್ಕನೆಯ ಮಟ್ಟದ ಕುರಿತು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: ಸತ್ಯವಿಶ್ವಾಸಿಗಳು ತಮ್ಮ ಸೂಕ್ಷ್ಮ ಭಾಗಗಳನ್ನು ಕಾಪಾಡುತ್ತಾರೆ. ಮೂರನೆಯ ಮಟ್ಟದಿಂದ ಮೇಲಕ್ಕೇರುವ

ಸತ್ಯವಿಶ್ವಾಸಿ ತನ್ನನ್ನು ಭಾವೋದ್ರೇಕಗಳಿಂದ ಮತ್ತು ನಿಷಿದ್ಧ ಕಾಮದಿಂದ ರಕ್ಷಿಸಿಕೊಳ್ಳುತ್ತಾನೆ. ಈ ಆಧ್ಯಾತ್ಮಿಕ ಮಟ್ಟವು ಮೂರನೆಯ ಆಧ್ಯಾತ್ಮಿಕ ಮಟ್ಟಕ್ಕಿಂತ ಉನ್ನತ ಸ್ಥಾನದಲ್ಲಿದೆ. ಕಾರಣ, ಮೂರನೆಯ ಮಟ್ಟಕ್ಕೆ ತಲಪಿದ ಸತ್ಯವಿಶ್ವಾಸಿ ತನಗೆ ಅತ್ಯಂತ ಪ್ರಿಯವಾದ ತನ್ನ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುತ್ತಾನೆ. ಆದರೆ ನಾಲ್ಕನೆಯ ಮಟ್ಟವನ್ನು ತಲಪಿದ ಸತ್ಯವಿಶ್ವಾಸಿಯು ಅವನಿಗೆ ಸಂಪತ್ತಿಗಿಂತಲೂ ಹೆಚ್ಚು ಪ್ರಿಯವಾದುದನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುತ್ತಾನೆ. ಎಂದರೆ ತನ್ನ ಶಾರೀರಿಕ ಕಾಮನೆಗಳನ್ನು ಈಡೇರಿಸಲು ತನಗೆ ಪ್ರಿಯವಾದ ಸಂಪತ್ತನ್ನು ನೀರಿನ ಹಾಗೆ ಖರ್ಚು ಮಾಡುವಷ್ಟರ ಮಟ್ಟಿಗೆ ಆತನಿಗೆ ಶಾರೀರಿಕ ಕಾಮನೆಗಳಲ್ಲಿ ಪ್ರೀತಿಯಿರುತ್ತದೆ. ಅವನು ಅವುಗಳನ್ನು ಈಡೇರಿಸಲು ಸಾವಿರಾರು ರೂಪಾಯಿಗಳನ್ನು ನಾಶಮಾಡುತ್ತಾನೆ. ಅವನು ಅವುಗಳ ಈಡೇರುವಿಕೆಗೆ ಸಂಪತ್ತನ್ನು ಖರ್ಚು ಮಾಡುವುದರಿಂದ ಹಿಂಜರಿಯುವುದಿಲ್ಲ. ಕೊಳಕು ಸ್ವಭಾವದ ಜಿಪುಣ ಜನರು ಹಸಿವೆಯಿಂದ ಬಳಲುವ ಬಡವನಿಗೆ ಮತ್ತು ಬಟ್ಟೆಯಿಲ್ಲದ ನಗ್ನನಿಗೆ ಒಂದು ಪೈಸೆಯನ್ನೂ ಕೊಡಲು ಮುಂದಾಗದಿದ್ದರೂ ತಮ್ಮ ಶಾರೀರಿಕ ಕಾಮನೆಗಳನ್ನು ತಣಿಸಲು ವ್ಯಭಿಚಾರಿ ಸ್ತ್ರೀಯರಿಗೆ ಸಾವಿರಾರು ರೂಪಾಯಿಗಳನ್ನು ಕೊಟ್ಟು ತಮ್ಮ ಮನೆಗಳನ್ನು ಬರಿದಾಗಿಸುತ್ತಾರೆ. ಇದರಿಂದ ತಿಳಿಯುವುದೇನೆಂದರೆ, ಶಾರೀರಿಕ ಭಾವೋದ್ರೇಕಗಳ ಜಲಪ್ರಳಯವು ಜಿಪುಣತೆಯಂತಹ ಕೊಳಕನ್ನು ಹರಿಸಿಕೊಂಡು ಹೋಗುವಷ್ಟು ತೀವ್ರವಾಗಿರುತ್ತದೆ. ಆದುದರಿಂದ ಸಹಜವಾಗಿ ಸ್ಪಷ್ಟವಾಗುವುದು ಏನೆಂದರೆ: ಜಿಪುಣತನವನ್ನು ಹೋಗಲಾಡಿಸಿ ತನಗೆ ಪ್ರಿಯವಾದ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುವ ಸತ್ಯವಿಶ್ವಾಸಿಗಿಂತ ತನ್ನ ಶಾರೀರಿಕ ಭಾವೋದ್ರೇಕಗಳ ಚಂಡಮಾರುತಗಳಿಂದ ತನ್ನನ್ನು ರಕ್ಷಿಸಿಕೊಳ್ಳುವವನು ಅತ್ಯಂತ ಬಲಿಷ್ಠನೂ ಶೈತಾನನನ್ನು ಎದುರಿಸುವುದರಲ್ಲಿ ಅತ್ಯಂತ ಬಲಶಾಲಿಯೂ ಅತ್ಯಂತ ಹೆಚ್ಚು ನಿಷ್ಠೆಯಿಂದ ಇರುವವನೂ ಆಗಿದ್ದಾನೆ. ಏಕೆಂದರೆ ಅವನು **ನಫ್ಸೇ ಅಮ್ಮಾರ** (ದುರ್ಮಾರ್ಗಕ್ಕೆ ಪ್ರೇರೇಪಿಸುವ ಆತ್ಮ) ಎಂಬ ಹಳೆಯ ಘಟಸರ್ಪವನ್ನು ತನ್ನ ಪಾದಗಳ ಕೆಳಗೆ ತುಳಿದು ಹಾಕುತ್ತಾನೆ. ಜಿಪುಣತೆಯು ಇಂದ್ರಿಯ ವಿಕಾರಗಳನ್ನು ಈಡೇರಿಸುವ ಉತ್ಸಾಹದಲ್ಲಿ ಮತ್ತು ತೋರಿಕೆಗಾಗಿ ಕೆಲಸ ಮಾಡುವಾಗ ದೂರಸರಿಯಬಹುದು. ಆದರೆ ಇಂದ್ರಿಯ ವಿಕಾರಗಳ ಚಂಡಮಾರುತ ಅತ್ಯಂತ ತೀವ್ರವೂ ಹೆಚ್ಚು ಕಾಲ ಬೀಸುವುದೂ ಆಗಿದೆ. ಅದು ಅಲ್ಲಾಹನ ದಯೆಗೆ ಪಾತ್ರವಾಗುವ ಮೂಲಕ ಮಾತ್ರವೇ ದೂರಸರಿಸಲ್ಪಡಲು ಸಾಧ್ಯವಾಗುವುದು. ಯಾವ ರೀತಿ ಶರೀರದ ಎಲ್ಲ ಅಂಗಗಳ ಪೈಕಿ ಎಲುಬು ಅತ್ಯಂತ ಬಲಯುತವಾಗಿಯೂ ದೀರ್ಘಕಾಲ ಬಾಕಿಯಾಗಿ ಉಳಿಯುವುದೂ ಆಗಿದೆಯೋ ಇದೇ ರೀತಿ ಈ ಚಂಡಮಾರುತವನ್ನು ದೂರಸರಿಸುವ ವಿಶ್ವಾಸದ ಶಕ್ತಿ ಅತ್ಯಂತ ಬಲಿಷ್ಠವೂ ಹೆಚ್ಚು ಬಾಳಿಕೆ ಬರುವುದೂ ಆಗಿದೆ. ಅದು ಶೈತಾನನಂತಹ ಶತ್ರುವನ್ನು ದೀರ್ಘಕಾಲ ಎದುರಿಸಿ ಅಲ್ಲಾಹನ

ದಯೆಯಿಂದ ಸೋಲಿಸುತ್ತದೆ. ಶಾರೀರಿಕ ಭಾವೋದ್ರೇಕಗಳ ಚಂಡಮಾರುತ ಎಷ್ಟು ಭಯಾನಕವೂ ತೀವ್ರವೂ ಆಗಿರುತ್ತದೆ ಎಂದರೆ ಅಲ್ಲಾಹನ ವಿಶಿಷ್ಟ ದಯೆಯ ಮೂಲಕ ಹೊರತು ಅದನ್ನು ತಗ್ಗಿಸಲು ಸಾಧ್ಯವಾಗದು. ಇದೇ ಕಾರಣದಿಂದ ಹಝ್‌ರತ್ ಯೂಸುಫ್[ಅ] ಹೇಳಿದರು:

وَمَآ اُبَرِّئُ نَفْسِیْ اِنَّ النَّفْسَ لَاَمَّارَةٌۢ بِالسُّوْٓءِ اِلَّا مَا رَحِمَ رَبِّیْ

'ನಾನು ನನ್ನ ಆತ್ಮವನ್ನು ದೋಷಮುಕ್ತವೆಂದು ಪರಿಗಣಿಸುವುದಿಲ್ಲ. ಆತ್ಮವು ಅತ್ಯಂತ ಕೆಟ್ಟ ಕೆಲಸದ ಆಜ್ಞೆ ನೀಡುವುದಾಗಿದೆ. ಅಲ್ಲಾಹನು ದಯದೋರದಿದ್ದರೆ ಅದರ ಆಕ್ರಮಣದಿಂದ ರಕ್ಷಣೆ ಪಡೆಯುವುದು ಅಸಾಧ್ಯವಾಗಿದೆ.' **(12:54)**

ಪವಿತ್ರ ಖುರ್‌ಆನಿನ ಮೇಲಿನ ವಚನದ **ಇಲ್ಲಾ ಮಾ ರಹಿಮ ರಬ್ಬೀ** (ಅಲ್ಲಾಹನು ದಯೆದೋರಿದವರು ಹೊರತು) ಎಂಬ ಪದಗಳನ್ನೇ ಹಝ್‌ರತ್ ನೂಹ್‌ರ[ಅ] ಕಾಲದಲ್ಲಿ ಚಂಡಮಾರುತದಿಂದ ರಕ್ಷಣೆ ಪಡೆಯುವವರ ಕುರಿತು ಪ್ರಯೋಗಿಸಲಾಗಿದೆ. ಅಲ್ಲಿ ಅಲ್ಲಾಹನು ಹೇಳುತ್ತಾನೆ: 'ಇಂದು ಅಲ್ಲಾಹನ ಶಿಕ್ಷೆಯಿಂದ ರಕ್ಷೆ ಹೊಂದುವವರು ಯಾರೂ ಇಲ್ಲ – ಅಲ್ಲಾಹನು ದಯೆದೋರಿದವರು ಹೊರತು' ಒಟ್ಟಿನಲ್ಲಿ, ಇಂದ್ರಿಯ ವಿಕಾರಗಳ ಚಂಡಮಾರುತ ತನ್ನ ತೀವ್ರತೆಯಲ್ಲಿ ಮತ್ತು ಭಯಾನಕತೆಯಲ್ಲಿ ಹಝ್‌ರತ್ ನೂಹ್‌ರ[ಅ] ಕಾಲದ ಚಂಡಮಾರುತಕ್ಕೆ ಸಮವಾಗಿದೆ ಎಂದು ಇದು ಸೂಚಿಸುತ್ತದೆ.

**(ಬರಾಹೀನೆ ಅಹ್ಮದಿಯಾ; ಭಾಗ – 5, ರೂಹಾನೀ ಖಝಾಇನ್, ಸಂ. 21, ಪು. 205 – 206)**

ಮೇಲೆ ಹೇಳಿದುದರ ಸಾರಾಂಶ ಹೀಗಿದೆ: ನಿಮ್ಮ ಶಾರೀರಿಕ ಭಾವೋದ್ರೇಕಗಳು ಯಾವಾಗಲೂ ನಿಮ್ಮ ಮೇಲೆ ಜಯಗಳಿಸಲು ಪ್ರಯತ್ನಿಸುತ್ತಾ ಇರುವುವು. ಅವುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಅಲ್ಲಾಹನ ದಯೆಯನ್ನು ಕೋರುತ್ತಾ ಅವುಗಳಿಂದ ರಕ್ಷೆ ಪಡೆಯಿರಿ.

ಈಗಿನ ಕಾಲದಲ್ಲಿ ಶಾರೀರಿಕ ಆಶಾಭಿಲಾಷೆಗಳನ್ನು ಈಡೇರಿಸುವ ಅನೇಕ ಮಾರ್ಗಗಳು ತೆರೆಯಲ್ಪಟ್ಟಿವೆ. ಆದುದರಿಂದ ಮೊದಲಿಗಿಂತ ಹೆಚ್ಚಾಗಿ ಪ್ರಾರ್ಥನೆ ಮಾಡುವ, ಅಲ್ಲಾಹನ ಕಡೆಗೆ ಬಾಗುವ ಮತ್ತು ಅವನಿಂದ ದಯೆಯನ್ನು ಬೇಡಿಕೊಳ್ಳುವ ಆವಶ್ಯಕತೆ ಇದೆ.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

اَلَا لِلّٰهِ الدِّيْنُ الْخَالِصُ ؕ وَالَّذِيْنَ اتَّخَذُوْا مِنْ دُوْنِهٖۤ اَوْلِيَآءَ ۘ مَا نَعْبُدُهُمْ اِلَّا لِيُقَرِّبُوْنَاۤ اِلَى اللّٰهِ
زُلْفٰى ؕ اِنَّ اللّٰهَ يَحْكُمُ بَيْنَهُمْ فِىْ مَا هُمْ فِيْهِ يَخْتَلِفُوْنَ ؕ اِنَّ اللّٰهَ لَا يَهْدِىْ مَنْ هُوَ كٰذِبٌ كَفَّارٌ

ಆಲಿಸಿರಿ, ಪ್ರಾಮಾಣಿಕವಾದ ವಿಧೇಯತೆ ಅಲ್ಲಾಹನಿಗೆ ಮಾತ್ರ ಸಲ್ಲುತ್ತದೆ. ಅಲ್ಲಾಹನ ಹೊರತು ಇತರರನ್ನೂ ಮಿತ್ರರನ್ನಾಗಿ ಮಾಡಿಕೊಂಡವರು

(ಹೇಳುತ್ತಾರೆ:) ಅವರು ನಮ್ಮನ್ನು ಅಲ್ಲಾಹನಿಗೆ ಹೆಚ್ಚು ನಿಕಟಗೊಳಿಸಲಿಕ್ಕಾಗಿ ಮಾತ್ರವೇ ನಾವು ಅವರನ್ನು ಆರಾಧಿಸುತ್ತಿರುವುದು. ಖಚಿತವಾಗಿಯೂ ಅವರ ಭಿನ್ನಾಭಿಪ್ರಾಯದ ಬಗ್ಗೆ ಅಲ್ಲಾಹನು ತೀರ್ಮಾನಿಸುವನು. ಕೃತಘ್ನನಾದ ಸುಳ್ಳುಗಾರನಿಗೆ ಅಲ್ಲಾಹನು ಖಂಡಿತವಾಗಿಯೂ ಮಾರ್ಗದರ್ಶನ ನೀಡಲಾರನು.

**(39:4)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ತೌರಾತ್ (ಪ್ರವಾದಿ ಮೂಸಾರ(ಅ) ಗ್ರಂಥ), ಇಂಜೀಲ್ (ಪ್ರವಾದಿ ಈಸಾರ(ಅ) ಗ್ರಂಥ) ಮತ್ತು ಖುರ್‌ಆನ್ ಇವು ಮೂರು ಒಮ್ಮತ ಸೂಚಿಸಿರುವ ಅಲ್ಲಾಹನ ಅಸ್ತಿತ್ವವನ್ನು ನಂಬಿರಿ. ಈ ಮೂರು ಗ್ರಂಥಗಳ ಒಮ್ಮತದ ಸಾಕ್ಷ್ಯದಿಂದ ಸಾಬೀತಾಗದ ದೇವನನ್ನು ನೀವೇ ಸ್ವತಃ ಸೃಷ್ಟಿಸಬೇಡಿರಿ. ನಿಮ್ಮ ಬುದ್ಧಿ ಮತ್ತು ಮನಸ್ಸಾಕ್ಷಿ ಸಾಕ್ಷ್ಯ ನೀಡುವುದನ್ನು ಮತ್ತು ದೈವಿಕ ಗ್ರಂಥಗಳು ಒಮ್ಮತವನ್ನು ಸೂಚಿಸುವ ಸಂಗತಿಗಳನ್ನು ಸಮ್ಮತಿಸಿರಿ. ದೈವಿಕ ಗ್ರಂಥಗಳಲ್ಲಿ ಒಡಕನ್ನುಂಟುಮಾಡುವ ರೀತಿಯಲ್ಲಿ ದೇವನ ಕುರಿತು ನಂಬಿಕೆ ಹೊಂದಬೇಡಿರಿ. ನೀವು ವ್ಯಭಿಚಾರ ಮಾಡಬೇಡಿರಿ, ಸುಳ್ಳು ಹೇಳಬೇಡಿರಿ, ದುರ್ನೋಟ ಬೀರಬೇಡಿರಿ, ದೈವಿಕ ಆಜ್ಞೆಗಳ ಉಲ್ಲಂಘನೆ, ದೌರ್ಜನ್ಯ, ವಿಶ್ವಾಸವಂಚನೆ, ಶಾಂತಿಭಂಗ ಮತ್ತು ವಿದ್ರೋಹದ ಮಾರ್ಗಗಳಿಂದ ದೂರಸರಿಯಿರಿ. ನೀವು ಭಾವೋದ್ರೇಕಗಳಿಂದ ಸೋಲಿಸಲ್ಪಡಬೇಡಿರಿ. ಐದು ಹೊತ್ತಿನ ನಮಾಝ್ ಮಾಡಿರಿ. ಏಕೆಂದರೆ ಮನುಷ್ಯನ ಪ್ರಕೃತಿಯಲ್ಲಿ ಐದು ರೀತಿಗಳಲ್ಲಿ ಕ್ರಾಂತಿ ಉಂಟಾಗುತ್ತದೆ. ನೀವು ರಸೂಲುಲ್ಲಾಹ್‌ರಿಗೆ(ಸ) ಕೃತಜ್ಞತೆ ಅರ್ಪಿಸಿರಿ. ಅವರಿಗಾಗಿ ದುರೂದ್ ಪ್ರಾರ್ಥನೆ ಸಲ್ಲಿಸಿರಿ. ಅವರೇ ಅಂಧಕಾರದ ಕಾಲದ ನಂತರ ಹೊಸದಾಗಿ ಅಲ್ಲಾಹನನ್ನು ಗುರುತಿಸುವ ಮಾರ್ಗವನ್ನು ಕಲಿಸಿದರು.

ನನ್ನ ಈ ಸಿದ್ಧಾಂತಗಳು ನನ್ನ ಜಮಾಅತಿನ ವೈಶಿಷ್ಟ್ಯಗಳಾಗಿವೆ. ಮಾನವರ ಕುರಿತು, ಸಹಾನುಭೂತಿ, ಮಾನವರಿಗೆ ಹಿಂಸೆ ನೀಡುವುದನ್ನು ತ್ಯಜಿಸುವುದು, ಸರಕಾರಿ ಅಧಿಕಾರಿಗಳನ್ನು ವಿರೋಧಿಸದೆ ಇರುವುದು – ಇವು ನನ್ನ ಜಮಾಅತಿನ ಅಸ್ತಿಭಾರಗಳಾಗಿವೆ. ಬೇರೆ ಮುಸ್ಲಿಮರಲ್ಲಿ ಇವುಗಳನ್ನು ಕಾಣಲಾರಿರಿ. ಅವರ ಸಿದ್ಧಾಂತಗಳು ಅವರ ಸ್ವಯಂಕೃತ ಅಪರಾಧಗಳ ಕಾರಣದಿಂದಾಗಿ ಬೇರೆ ರೀತಿಯದ್ದಾಗಿವೆ. ಅವುಗಳನ್ನು ಇಲ್ಲಿ ವಿವರಿಸುವ ಆವಶ್ಯವಿಲ್ಲ. ಅವುಗಳನ್ನು ವಿವರಿಸುವ ಸಂದರ್ಭವೂ ಇದಲ್ಲ.

**(ಝಮೀಮ ತಿರ್‌ಯಾಖುಲ್ ಖುಲೂಬ್; ರೂಹಾನೀ ಖಝಾಇನ್, ಸಂ. 15, ಪು 524 – 526)**

# ಬೈಅತಿನ ಮೂರನೆಯ ಶರತ್ತು

**ಅಲ್ಲಾಹನ ಮತ್ತು ಹಝ್ರತ್ ರಸೂಲುಲ್ಲಾಹ್‌ರ(ಸ) ಆಜ್ಞೆಗಳ ಪ್ರಕಾರ ಐದು ಹೊತ್ತಿನ ನಮಾಝ್ಗನ್ನು ತಪ್ಪದೆ ಅನುಷ್ಠಿಸುತ್ತಾ ಇರುವೆನು. ತಹಜ್ಜುದ್ ನಮಾಝನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಅನುಷ್ಠಿಸುವುದನ್ನು, ಹಝ್ರತ್ ಮುಹಮ್ಮದ್ ರಸೂಲ್‌ರಿಗಾಗಿ(ಸ) ದುರೂದ್ (ಸಲಾತ್ ಮತ್ತು ಸಲಾಮ್) ಪ್ರಾರ್ಥನೆ ಮಾಡುವುದನ್ನು ಮತ್ತು ಪ್ರತಿದಿನ ತನ್ನ ಪಾಪಗಳಿಗಾಗಿ ಕ್ಷಮೆಯನ್ನು ಯಾಚಿಸುವುದನ್ನು (ಇಸ್ತಿಗ್‌ಫಾರ್) ತನ್ನ ಸ್ಥಿರ ಪ್ರವೃತ್ತಿಗಳಾಗಿ ಮಾಡಿಕೊಳ್ಳುವೆನು ಮತ್ತು ಅಲ್ಲಾಹನು ನೀಡಿದ ಅನುಗ್ರಹಗಳನ್ನು ಹೃತ್ಪೂರ್ವಕವಾದ ಪ್ರೀತಿಯಿಂದ ನೆನಪಿಸಿ ಅವನ ಸ್ತುತಿಯನ್ನು ತನ್ನ ಪ್ರತಿದಿನದ ಕಾರ್ಯಕ್ರಮವನ್ನಾಗಿ ಮಾಡಿಕೊಳ್ಳುವೆನು.**

## ಐದು ಹೊತ್ತಿನ ನಮಾಝ್ಗನ್ನು ಅನುಷ್ಠಿಸಿರಿ

ಈ ಶರತ್ತಿನಲ್ಲಿ ವಿವರಿಸಲಾದ ವಿಷಯಗಳಲ್ಲಿ ಪ್ರಥಮ ಸ್ಥಾನದಲ್ಲಿರುವುದು ಅಲ್ಲಾಹನ ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ(ಸ) ಆಜ್ಞೆಗಳ ಪ್ರಕಾರ ಐದು ಹೊತ್ತಿನ ನಮಾಝನ್ನು ತಪ್ಪದೆ ಅನುಷ್ಠಿಸುವುದೆಂಬ ಪ್ರತಿಜ್ಞೆಯಾಗಿದೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆ ಪುರುಷರಿಗೂ ಮಹಿಳೆಯರಿಗೂ ಅನ್ವಯಿಸುತ್ತದೆ. ಹತ್ತು ವರ್ಷಗಳ ವಯಸ್ಸನ್ನು ತಲಪಿದ ಮಕ್ಕಳು ಸಹ ಸಮಯಕ್ಕೆ ಸರಿಯಾಗಿ ನಮಾಝ್ಗನ್ನು ಅನುಷ್ಠಿಸಬೇಕೆಂದು ಆಜ್ಞಾಪಿಸಲಾಗಿದೆ. ಪುರುಷರು ಸಾಮೂಹಿಕವಾಗಿ ನಮಾಝ್ ಮಾಡಬೇಕೆಂದೂ ಮಸೀದಿಗಳಿಗೆ ಹೋಗಿ ಅದನ್ನು ಯಾವಾಗಲೂ ನಮಾಝ್ ಮಾಡುವವರಿಂದ ತುಂಬುವಂತೆ ಮಾಡಬೇಕೆಂದೂ ಮಸೀದಿಗಳಲ್ಲಿ ನಮಾಝ್ ಮಾಡುವುದರಿಂದ ಸಿಗುವ ಅನುಗ್ರಹವನ್ನು ಗಳಿಸಬೇಕೆಂದೂ ಆಜ್ಞಾಪಿಸಲಾಗಿದೆ. ಐದು ಹೊತ್ತಿನ ನಮಾಝ್ ಬಗ್ಗೆ ಯಾವುದೇ ರಿಯಾಯಿತಿ ಇಲ್ಲ. ಪ್ರಯಾಣಕಾಲದಲ್ಲಿ ಮತ್ತು ರೋಗಿಯಾಗಿರುವಾಗ ಕೆಲವು ರಿಯಾಯಿತಿಗಳಿವೆ. ಎರಡು ನಮಾಝ್‌ಗಳನ್ನು ಒಟ್ಟಿಗೆ ಸೇರಿಸಿ ರಕ್‌ಅತ್‌ಗಳನ್ನು ಕಡಿಮೆ ಮಾಡಿ ಪ್ರಯಾಣ ಕಾಲದಲ್ಲಿ ನಮಾಝ್ ಮಾಡಬಹುದು. ರೋಗಿಯಾಗಿರುವಾಗ ಮಸೀದಿಗೆ ಹೋಗುವ ಬಗ್ಗೆ ರಿಯಾಯಿತಿ ಇದೆ. ಸಾಮೂಹಿಕವಾಗಿ ಮಾಡುವ ನಮಾಝ್‌ಗೆ ಎಷ್ಟು ಪ್ರಾಮುಖ್ಯತೆ ನೀಡಲಾಗಿದೆ ಎಂದು ಮೇಲಿನ ಮಾತುಗಳಿಂದ ತಿಳಿಯಬಹುದು. ಸಾಮೂಹಿಕ ನಮಾಝಿನ ಪ್ರಾಮುಖ್ಯತೆಯ ಕುರಿತು ನಾನು ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದೆ ಇಡುವೆನು. ಆದರೆ ನಾನು ಹೇಳಲು ಬಯಸುವುದೇನೆಂದರೆ, ಬೈಅತ್ ಮಾಡಿದ ಪ್ರತಿಯೊಬ್ಬ ತನ್ನನ್ನು ಪರಿಶೀಲಿಸಿ "ನಾವು ನಮ್ಮನ್ನು ಮಾರಾಟ ಮಾಡುವ ಪ್ರತಿಜ್ಞೆ

ಮಾಡಿದ್ದೇವೆ. ಆದರೆ ನಾವು ಪವಿತ್ರ ಖುರ್‌ಆನಿನ ಈ ಸ್ಪಷ್ಟವಾದ ಆಜ್ಞೆಯನ್ನು ಪಾಲಿಸುತ್ತಿದ್ದೇವೆಯೋ" ಎಂದು ನೋಡಬೇಕಾಗಿದೆ. ಪ್ರತಿಯೊಬ್ಬ ಅಹ್ಮದೀ ತನ್ನ ಆತ್ಮಕ್ಕೆ ಸ್ವತಃ ಉಪದೇಶಕನಾಗಿರುತ್ತಾನೆ. ಪ್ರತಿಯೊಬ್ಬ ಅಹ್ಮದೀ ಸ್ವತಃ ತನ್ನನ್ನು ಪರಿಶೀಲಿಸಬೇಕು. ಸ್ವತಃ ಇಣುಕಿ ನೋಡಬೇಕು. ನಾವೆಲ್ಲರೂ ನಮ್ಮನ್ನು ಸ್ವತಃ ಪರಿಶೀಲಿಸತೊಡಗಿದರೆ ಬೃಹತ್ತಾದ ಒಂದು ಕ್ರಾಂತಿ ಉಂಟಾಗಬಹುದಾಗಿದೆ.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

وَاَقِيْمُوا الصَّلٰوةَ وَاٰتُوا الزَّكٰوةَ وَاَطِيْعُوا الرَّسُوْلَ لَعَلَّكُمْ تُرْحَمُوْنَ

ನಿಮ್ಮ ಮೇಲೆ ಕರುಣೆ ತೋರಿಸಲ್ಪಡಲಿಕ್ಕೋಸ್ಕರ ನೀವು ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿರಿ, ಝಕಾತ್ ನೀಡಿರಿ ಮತ್ತು ಪ್ರವಾದಿಗೆ ವಿಧೇಯರಾಗಿದ್ದುಕೊಳ್ಳಿರಿ.

**(24:57)**

اِنَّنِيْٓ اَنَا اللّٰهُ لَآ اِلٰهَ اِلَّآ اَنَا فَاعْبُدْنِيْ ۙ وَاَقِمِ الصَّلٰوةَ لِذِكْرِيْ

ದಿಟವಾಗಿಯೂ ನಾನೇ ಅಲ್ಲಾಹ್, ನನ್ನ ಹೊರತು ಬೇರೆ ದೇವನಿಲ್ಲ. ಆದುದರಿಂದ ನನ್ನನ್ನು ಆರಾಧಿಸು; ನನ್ನ ಸ್ಮರಣೆಗೋಸ್ಕರ ಪ್ರಾರ್ಥನೆಯನ್ನು ನಿಷ್ಠೆಯಿಂದ ಸಲ್ಲಿಸು. **(20:15)**

ಇದೇ ರೀತಿ ಪವಿತ್ರ ಖುರ್‌ಆನಿನಲ್ಲಿ ನಮಾಝ್ ಕುರಿತು ಅನೇಕ ಆಜ್ಞೆಗಳು ಬಂದಿವೆ.

ಒಂದು ಹದೀಸ್‌ನಲ್ಲಿ ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೀಗೆ ಹೇಳಿದರು: ನಮಾಝನ್ನು ಬಿಡುವುದರಿಂದ ಮನುಷ್ಯನು ಶಿರ್ಕ್ (ಬಹುದೇವಾರಾಧನೆ) ಮತ್ತು ಅವಿಶ್ವಾಸಕ್ಕೆ ಸಮೀಪವಾಗುತ್ತಾನೆ.

**(ಮುಸ್ಲಿಮ್ ಕಿತಾಬುಲ್ ಈಮಾನ್ – ಬಾಬ್ ಇತ್‌ಲಾಖು ಇಸ್‌ಮುಲ್ ಕುಫ್ರಿ ಅಲಾ ಮನ್ ತರಕಸ್ಸಲಾತ್)**

ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ನನ್ನ ಕಣ್ಣುಗಳ ತಂಪು ನಮಾಝ್ ಆಗಿದೆ. ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಪುನರುತ್ಥಾನದ ದಿನ ಎಲ್ಲಕ್ಕಿಂತಲೂ ಮೊದಲು ನಮಾಝ್ ಕುರಿತು ಲೆಕ್ಕ ತೆಗೆಯಲಾಗುವುದು. ಈ ಲೆಕ್ಕ ಸರಿಯಾಗಿದ್ದರೆ ಅಂತಹ ವ್ಯಕ್ತಿ ಜಯಶಾಲಿಯಾದನು. ಅವನು ಮೋಕ್ಷ ಗಳಿಸಿದನು. ಈ ಲೆಕ್ಕದಲ್ಲಿ ನ್ಯೂನತೆಯಿದ್ದರೆ ಅಂತಹ ವ್ಯಕ್ತಿ ಸೋತು ಹೋಗುವವನು. ಅವನು ನಷ್ಟವನ್ನು ಅನುಭವಿಸುವನು. ಒಬ್ಬನ ಕಡ್ಡಾಯ ನಮಾಝ್‌ಗಳಲ್ಲಿ ಕೊರತೆ ಇದ್ದರೆ ಅಲ್ಲಾಹನು ಹೇಳುವನು: ನನ್ನ ದಾಸನು ಐಚ್ಛಿಕ (ನಫ್ಲ್) ನಮಾಝ್‌ಗಳನ್ನು ಮಾಡಿರುವನೋ ಎಂದು ನೋಡಿರಿ. ಐಚ್ಛಿಕ ನಮಾಝ್‌ಗಳನ್ನು ಅನುಷ್ಠಿಸಿದ್ದರೆ ಕಡ್ಡಾಯ ನಮಾಝ್‌ಗಳ

ಕೊರತೆಯನ್ನು ಅವುಗಳಿಂದ ಭರ್ತಿಮಾಡಲಾಗುವುದು. ಇದೇ ರೀತಿ ಇತರ ಕೃತ್ಯಗಳ ಪರಿಶೀಲನೆ ನಡೆಯುವುದು. ಅವು ಎಷ್ಟರ ಮಟ್ಟಿಗೆ ಇವೆ ಎಂದು ನೋಡಲಾಗುವುದು.

**(ತಿರ್‌ಮಿಧೀ ಕಿತಾಬುಸ್ಸಲಾತ್ – ಬಾಬ್ ಅನ್ ಅವ್ವಲ ಮಾ ಯುಹಾಸಬು ಬಿಹಿಲ್‌ಅಬ್ದ)**

ಇನ್ನೊಂದು ಹದೀಸ್ ಹೀಗಿದೆ: ಹಝ್ರತ್ ಅಬೂಹುರೈರ[ರ] ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಒಬ್ಬನ ಮನೆಯ ಮುಂದೆ ನೀರಿನ ಒಂದು ಕಾಲುವೆ ಹರಿಯುತ್ತಿದ್ದು ಅದರ ನೀರಿನಲ್ಲಿ ಪ್ರತಿದಿನ ಐದು ಸಾರಿ ಒಬ್ಬನು ಸ್ನಾನ ಮಾಡುತ್ತಿದ್ದರೆ ಅವನ ಶರೀರದಲ್ಲಿ ಕೊಳೆಯು ಬಾಕಿಯಾಗಿ ಉಳಿಯುವುದೇ? ಶಿಷ್ಯರು ಹೇಳಿದರು: ಯಾವ ಕೊಳೆಯೂ ಬಾಕಿಯಾಗಿ ಉಳಿಯದು. ಆಗ ಹಝ್ರತ್ ನಬಿ[ಸ] ಹೇಳಿದರು: ಐದು ಸಲ ಮಾಡುವ ನಮಾಝಿನ ಉದಾಹರಣೆ ಇದೇ ರೀತಿಯಾಗಿದೆ. ಅಲ್ಲಾಹನು ಅವುಗಳನ್ನು ಅನುಷ್ಠಿಸುವವನ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ಬಲಹೀನತೆಗಳನ್ನು ದೂರಸರಿಸುತ್ತಾನೆ.

**(ಬುಖಾರಿ – ಕಿತಾಬು ಮವಾಖೀತುಸ್ಸಲಾತಿ ಬಾಬುಸ್ಸಲಾತಿಲ್‌ಖಮ್‌ಸಿ ವ ಕಫ್ಫಾರತು ಲಿಲ್‌ಖತಾ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಮಾಝ್ ಅನುಷ್ಠಿಸಿರಿ, ನಮಾಝ್ ಅನುಷ್ಠಿಸಿರಿ. ಅದು ಎಲ್ಲ ರೀತಿಯ ಸಾತ್ವಿಕತೆಯ ಕೀಲಿಗೈ ಆಗಿದೆ.

**(ಇಝಾಲಯೆ ಔಹಾಮ್; ರೂಹಾನೀ ಖಝಾಇನ್, ಸಂಪುಟ 3, ಪುಟ 829)**

ಹುಝೂರ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಮಾಝಿನ ತಿರುಳು ಮತ್ತು ಆತ್ಮ ದುಆ (ಪ್ರಾರ್ಥನೆ) ಆಗಿದೆ.

**(ಅಯ್ಯಾಮುಸುಲ್‌ಹ್; ರೂಹಾನೀ ಖಝಾಇನ್, ಸಂಪುಟ 14, ಪುಟ 241)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

ನನ್ನ ಜಮಾಅತಿಗೆ ಸೇರಿದವರೆಂದು ತಮ್ಮನ್ನು ಗಣಿಸುವ ಎಲ್ಲ ಜನರೇ, ನೀವು ಸತ್ಯವಾಗಿ ತಖ್ವಾದ (ಭಯಭಕ್ತಿಯ) ಮಾರ್ಗದಲ್ಲಿ ಹೆಜ್ಜೆ ಹಾಕುತ್ತಾ ಇದ್ದರೆ ಮಾತ್ರ ನೀವು ನನ್ನ ಜಮಾಅತಿಗೆ ಸೇರಿದವರೆಂದು ಆಕಾಶದಲ್ಲಿ ಗಣಿಸಲ್ಪಡುವಿರಿ. ನೀವು ನಿಮ್ಮ ನಮಾಝನ್ನು ಭಯಭೀತರಾಗಿಯೂ ಪೂರ್ಣ ಪ್ರಜ್ಞೆಯಿಂದಲೂ ಅಲ್ಲಾಹನನ್ನು ನೋಡುತ್ತಿರುವಂತೆ ಅನುಷ್ಠಿಸಿರಿ. ನೀವು ನಿಮ್ಮ ಉಪವಾಸಗಳನ್ನು ಅಲ್ಲಾಹನ ಸಂಪ್ರೀತಿಗಳಿಸಲು ಸತ್ಯಸಂಧವಾಗಿ ಪೂರ್ಣಗೊಳಿಸಿರಿ. ಝಕಾತ್ ಕೊಡಲು ಬದ್ಧನಾದವನು ಝಕಾತ್ ಕೊಡಲಿ. ಯಾರ ಮೇಲೆ ಹಜ್ಜ್ ಕಡ್ಡಾಯವಾಗಲ್ಪಟ್ಟಿದೆಯೋ ಅವನು ಯಾವುದೇ ತಡೆ

ಇಲ್ಲದಿದ್ದರೆ ಹಜ್ಜ್ ಮಾಡಲಿ. ಒಳಿತನ್ನು ತಕ್ಕುದಾದ ಶ್ರದ್ಧೆಯಿಂದ ಅನುಷ್ಠಿಸಿರಿ. ಕೆಡುಕನ್ನು ಅಸಹ್ಯಪಡುತ್ತಾ ತ್ಯಜಿಸಿರಿ. ತಖ್ವಾ (ಭಯಭಕ್ತಿ) ರಹಿತವಾದ ಸತ್ಕರ್ಮ ಅಲ್ಲಾಹನಿಗೆ ತಲಪುವುದಿಲ್ಲವೆಂದು ದೃಢವಾಗಿ ನೆನಪಿಡಿರಿ. ಪ್ರತಿಯೊಂದು ಒಳಿತಿನ ಬೇರು ತಖ್ವಾ ಆಗಿದೆ. ಯಾವ ಕೃತ್ಯದಲ್ಲಿ ಈ ಬೇರು ನಾಶವಾಗಿಲ್ಲವೋ ಆ ಕೃತ್ಯ ಸಹ ನಾಶವಾಗಲಾರದು.

**(ಕಿಶ್ತೀ ನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 15)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಮಾಝ್ ಎಂದರೇನು? ಅದು ತಸ್‌ಬೀಹ್ (ಅಲ್ಲಾಹನ ಪರಿಶುದ್ಧಿಯ ಕೀರ್ತನೆ), ತಹ್‌ಮೀದ್ (ಅಲ್ಲಾಹನ ಸ್ತುತಿ), ತಖ್‌ದೀಸ್ (ಅಲ್ಲಾಹನ ಪರಿಶುದ್ಧಿಯ ವರ್ಣನೆ) ಮತ್ತು ಇಸ್ತಿಗ್‌ಫಾರ್ (ಕ್ಷಮಾಯಾಚನೆ) ಇವುಗಳನ್ನೊಳಗೊಂಡ ನಮ್ರತೆಯ ಪ್ರಾರ್ಥನೆ ಆಗಿದೆ. ಆದುದರಿಂದ ನೀವು ನಮಾಝ್ ಮಾಡುವಾಗ ಅಜ್ಞಾನಿಗಳ ಹಾಗೆ ನಿಮ್ಮ ಪ್ರಾರ್ಥನೆಯನ್ನು ಕೇವಲ ಅರಬಿ ಶಬ್ದಗಳಿಗೆ ಸೀಮಿತಗೊಳಿಸದಿರಿ. ಅವರ ನಮಾಝ್ ಮತ್ತು ಇಸ್ತಿಗ್‌ಫಾರ್ ಕೇವಲ ಆಚಾರಗಳಾಗಿವೆ. ಅವುಗಳಲ್ಲಿ ವಾಸ್ತವಿಕಾಂಶ ಏನೂ ಇಲ್ಲ. ನೀವು ನಮಾಝ್ ಮಾಡುವಾಗ ಅಲ್ಲಾಹನ ವಚನವಾದ ಪವಿತ್ರ ಖುರ್‌ಆನ್ ಭಾಗಗಳನ್ನು ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ[ಸ] ದುಆಗಳನ್ನು ಹೊರತುಪಡಿಸಿ ಉಳಿದ ಎಲ್ಲ ಸಾಮಾನ್ಯ ಪ್ರಾರ್ಥನೆಗಳನ್ನು ನಿಮ್ಮ ಸ್ವಂತ ಭಾಷೆಯಲ್ಲಿ ವಿನೀತರಾಗಿ ಮಾಡಿರಿ. ಅದರ ಫಲವಾಗಿ ನಿಮ್ಮ ಹೃದಯಗಳಲ್ಲಿ ವಿನಯದ ಪ್ರಭಾವ ಉಂಟಾಗಲಿ.

**(ಕಿಶ್ತೀ ನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 68 – 69)**

ಪುನಃ ಅವರು ಹೇಳಿದರು:

ನಮಾಝ್ ಎಂತಹ ಕೃತ್ಯವೆಂದರೆ ಅದರ ಮೂಲಕ ಆಕಾಶ ಮನುಷ್ಯನ ಕಡೆಗೆ ಬಾಗುತ್ತದೆ. ನಮಾಝನ್ನು ಕ್ರಮಬದ್ಧವಾಗಿ ಅನುಷ್ಠಿಸುವವನು, ತಾನು ಮೃತನಾಗಿರುವೆನು; ತನ್ನ ಆತ್ಮ ಹಾರಿ ಅಲ್ಲಾಹನ ಆಸ್ಥಾನದಲ್ಲಿ ಬಿದ್ದಿದೆ ಎಂದು ಭಾವಿಸುತ್ತಾನೆ..... ಯಾವ ಮನೆಯಲ್ಲಿ ಇಂತಹ ನಮಾಝನ್ನು ಅನುಷ್ಠಿಸಲಾಗುತ್ತದೆಯೋ ಆ ಮನೆ ಎಂದೂ ನಾಶವಾಗಲಾರದು. ಹದೀಸಿನಲ್ಲಿ ಹೀಗೆ ಬರೆದಿದೆ: ಹಝ್ರತ್ ನೂಹ್‌ರ[ಅ] ಕಾಲದಲ್ಲಿ ನಮಾಝ್ ಮಾಡುವವರಿರುತ್ತಿದ್ದರೆ ಆ ಜನಾಂಗ ನಾಶವಾಗುತ್ತಿರಲಿಲ್ಲ. ಹಜ್ಜ್, ಉಪವಾಸ ಮತ್ತು ಝಕಾತ್ ಕೆಲವು ಪೂರ್ವಾಪೇಕ್ಷಿತ ಶರತ್ತುಗಳೊಂದಿಗೆ ಕಡ್ಡಾಯವಾಗುತ್ತವೆ. ಆದರೆ ನಮಾಝಿಗೆ ಯಾವುದೇ ಪೂರ್ವಾಪೇಕ್ಷಿತ ಶರತ್ತುಗಳಿಲ್ಲ. ಹಜ್ಜ್, ಉಪವಾಸ, ಝಕಾತ್ ಮೊದಲಾದುವು ವರ್ಷದಲ್ಲಿ ಒಂದೊಂದು ಸಾರಿ ಅನುಷ್ಠಿಸಲ್ಪಡುತ್ತವೆ. ಆದರೆ ನಮಾಝ್ ಪ್ರತಿದಿನ ಐದು

ಬಾರಿ ಅನುಷ್ಠಿಸಲು ಆಜ್ಞಾಪಿಸಲಾಗಿದೆ. ಆದುದರಿಂದ ನಮಾಝನ್ನು ಪೂರ್ಣ ರೂಪದಲ್ಲಿ ಅನುಷ್ಠಿಸುವ ತನಕ ಅದರಿಂದ ದೊರಕುವ ಅನುಗ್ರಹಗಳು ಲಭಿಸಲಾರವು ಮತ್ತು ಬೈಅತ್ ಮಾಡಿದುದರ ಯಾವುದೇ ಲಾಭವು ದೊರಕಲಾರದು.

**(ಮಲ್‌ಫೂಝಾತ್; ಸಂಪುಟ 3, ಪುಟ 627 – ಹೊಸ ಮುದ್ರಣ)**

ಅವರು ಮತ್ತೂ ಹೇಳುತ್ತಾರೆ:

ನಮಾಝ್ ಪ್ರತಿಯೊಬ್ಬ ಮುಸ್ಲಿಮನಿಗೆ ಕಡ್ಡಾಯಗೊಳಿಸಲಾಗಿದೆ. ಹದೀಸಿನಲ್ಲಿ ಹೀಗೆ ಬರೆದಿದೆ: ಹಝ್‌ರತ್ ರಸೂಲುಲ್ಲಾಹ್‌ರ(ಸ) ಬಳಿಗೆ ಒಂದು ಸಮೂಹ ಬಂದು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಹೇಳಿದರು: 'ನಮಗೆ ನಮಾಝನ್ನು ಮಾಡದಿರಲು ಅನುಮತಿಸಬೇಕು. ಏಕೆಂದರೆ ನಾವು ಮೃಗಗಳನ್ನು ಸಾಕುವ ಕೆಲಸ ಮಾಡುತ್ತಿದ್ದೇವೆ. ನಮ್ಮ ಬಟ್ಟೆ ಬರೆಗಳ ಶುಚಿತ್ವದ ಖಾತರಿ ಇರುವುದಿಲ್ಲ ಮತ್ತು ನಮಗೆ ಬಿಡುವು ಸಹ ಇರುವುದಿಲ್ಲ.' ಆಗ ಹಝ್‌ರತ್ ರಸೂಲುಲ್ಲಾಹ್(ಸ) ಹೇಳಿದರು: ನಮಾಝ್ ಇಲ್ಲದಿದ್ದರೆ ಬೇರೆ ಏನಿದೆ? ನಮಾಝ್ ಇಲ್ಲದ ಧರ್ಮ ಧರ್ಮವೇ ಅಲ್ಲ. ನಮಾಝ್ ಎಂದರೇನು? ತನ್ನ ಬಲಹೀನತೆಯನ್ನು ಅಲ್ಲಾಹನ ಮುಂದಿರಿಸುವುದು, ಅವನಿಂದ ತನ್ನ ಬೇಡಿಕೆಗಳನ್ನು ಈಡೇರಿಸಲು ಕೇಳಿಕೊಳ್ಳುವುದು, ಅವನ ಆಜ್ಞೆಗಳ ಪಾಲನೆಗಾಗಿ ಸನ್ನದ್ಧನಾಗಿ ನಿಲ್ಲುವುದು, ಅಲ್ಲಾಹನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುವುದು ಮತ್ತು ಅವನಿಂದ ತನ್ನ ಆವಶ್ಯಕತೆಗಳನ್ನು ಬೇಡುವುದು. ಒಬ್ಬ ಭಿಕ್ಷುಕನ ಹಾಗೆ ಭಿಕ್ಷೆ ನೀಡುವವನನ್ನು ಹೊಗಳುವುದು. ಅಲ್ಲಾಹನ ಮಹಾಶಕ್ತಿಯನ್ನು ಕೊಂಡಾಡಿ ಅವನ ದಯೆ ಹರಿಯುವಂತೆ ಮಾಡುವುದು ಮತ್ತು ಬೇಡಿಕೊಳ್ಳುವುದು. ಇದೇ ನಮಾಝ್ ಆಗಿದೆ. ಯಾವ ಧರ್ಮದಲ್ಲಿ ಇದು ಇಲ್ಲವೋ ಅದು ಧರ್ಮವೇ ಅಲ್ಲ.

ಮನುಷ್ಯನಿಗೆ ಸದಾ ಅವನು ತೃಪ್ತಿಗೊಳ್ಳುವ ಮಾರ್ಗಗಳನ್ನು ಬೇಡುವ ಮತ್ತು ಅವನ ಅನುಗ್ರಹಗಳನ್ನು ಕೋರುವ ಆವಶ್ಯಕತೆಯಿದೆ. ಏಕೆಂದರೆ ಅವನ ಸಹಾಯದಿಂದಲೇ ಏನನ್ನಾದರೂ ಮಾಡಲು ಸಾಧ್ಯವಾಗುವುದು. ಅಲ್ಲಾಹನೊಡನೆ ಹೀಗೆ ಹೇಳಬೇಕು – ದೇವಾ, ನಾವು ನಿನ್ನವರಾಗುವಂತೆ ನೀನು ನಮಗೆ ಸೌಭಾಗ್ಯ ನೀಡು. ನಿನ್ನ ಸಂಪ್ರೀತಿಯ ಮಾರ್ಗದಲ್ಲಿ ನೆಲೆನಿಂತುಕೊಂಡು ನಿನ್ನ ಸಂಪ್ರೀತಿ ಗಳಿಸುವಂತೆ ಮಾಡು. ಅಲ್ಲಾಹನ ಮೇಲೆ ಪ್ರೀತಿ, ಅವನ ಭಯ, ಅವನ ನೆನಪು ಹೃದಯದಲ್ಲಿ ನೆಲೆನಿಲ್ಲಿಸುವುದರ ಹೆಸರೇ ನಮಾಝ್ ಆಗಿದೆ. ಧರ್ಮ ಎಂದರೆ ಇದೇ ಆಗಿದೆ.

ಯಾರು ನಮಾಝಿನಿಂದ ಮುಕ್ತಿ ಪಡೆಯಲು ಬಯಸುತ್ತಾನೋ ಅವನು ಮೃಗಕ್ಕಿಂತಲೂ ಹೆಚ್ಚಿಗೆ ಏನು ಮಾಡಿದ್ದಾನೆ? ಅದೇ ರೀತಿ ತಿನ್ನುವುದು, ಕುಡಿಯುವುದು ಮತ್ತು ಮೃಗಗಳ ಹಾಗೆ ನಿದ್ರಿಸುತ್ತಾ ಇರುವುದು. ಇದು

ಖಂಡಿತವಾಗಿಯೂ ಧರ್ಮವಲ್ಲ. ಇದು ಅವಿಶ್ವಾಸಿಗಳ ಗುಣಗಳಾಗಿವೆ. **ಜೊ ದಮೇ ಗಾಫಿಲ್ ವೊ ದಮೇ ಕಾಫಿರ್** (ಅಜ್ಞಾನದ ಒಂದು ಕ್ಷಣ, ಅವಿಶ್ವಾಸದ ಒಂದು ಕ್ಷಣದಂತೆ) ಎಂಬ ಮಾತು ಸರಿಯೇ ಆಗಿದೆ.

**(ತಫ್‌ಸೀರ್ ಹಝ್ರತ್ ಮಸೀಹ್ ಮೌಊದ್[ಅ]; ಸಂಪುಟ 3, ಪುಟ 611 – 612)**

ನಮಾಝಿನಲ್ಲಿ ಶ್ರದ್ಧೆಯನ್ನು ಗಳಿಸುವುದು ಹೇಗೆ ಎಂಬುದರ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಹೀಗೆ ಪ್ರಾರ್ಥಿಸಿರಿ – ಅಲ್ಲಾಹ್, ನಾನು ಎಂತಹ ಅಂಧನು ಮತ್ತು ದೃಷ್ಟಿಹೀನನೆಂದು ನೀನು ನೋಡುತ್ತಿರುವೆ. ನಾನೀಗ ಮೃತನಾದ ಸ್ಥಿತಿಯಲ್ಲಿದ್ದೇನೆ. ಸ್ವಲ್ಪ ಕಾಲದ ನಂತರ ನಿನ್ನ ಕರೆ ಬಂದರೆ ನಾನು ನಿನ್ನ ಕಡೆಗೆ ಬರುವೆನು ಎಂದು ನಾನು ತಿಳಿದಿರುವೆನು. ಆಗ ಯಾರಿಗೂ ನನ್ನನ್ನು ತಡೆಯಲು ಸಾಧ್ಯವಿಲ್ಲ. ಆದರೆ ನನ್ನ ಹೃದಯ ಕುರುಡಾಗಿದೆ. ನೀನು ಪ್ರಕಾಶದ ಜ್ವಾಲೆಯನ್ನು ಅದರ ಮೇಲೆ ಇಳಿಸಿ ನಿನ್ನ ಪ್ರೀತಿ ಮತ್ತು ಉತ್ಸಾಹ ಅದರಲ್ಲಿ ಉಂಟಾಗುವಂತೆ ಮಾಡು. ನೀನು ಅನುಗ್ರಹಿಸು. ನಾನು ಅಂಧನಾಗಿ ಎಬ್ಬಿಸಲ್ಪಡದಿರಲಿಕ್ಕೂ ಸೇರದಿರಲಿಕ್ಕೂ ನನ್ನನ್ನು ಅನುಗ್ರಹಿಸು.

ಮೇಲಿನ ರೀತಿಯಲ್ಲಿ ಪ್ರಾರ್ಥಿಸಿ ಅದರ ಮೇಲೆ ಸ್ಥಿರತೆ ಕೈಗೊಳ್ಳುವುದಾದರೆ ಹೀಗೆ ಪ್ರಾರ್ಥಿಸುವವನ ನಿರಾಸಕ್ತಿಯ ನಮಾಝಿನ ಮೇಲೆ ಆಕಾಶದಿಂದ ಒಂದು ವಸ್ತು ಬಂದೆರಗುವುದಾಗಿ ಅವನು ಕಾಣುವನು. ಆಗ ಅವನ ನಮಾಝಿನಲ್ಲಿ ಭಯಭಕ್ತಿ ಉಂಟಾಗುವುದು.

**(ಮಲ್‌ಫೂಝಾತ್; ಭಾಗ 2, ಪುಟ 616 – ಹೊಸ ಮುದ್ರಣ)**

## ತಹಜ್ಜುದ್ ನಮಾಝನ್ನು ಅನುಷ್ಠಿಸುವುದು

ಬೈಅತಿನ ಮೂರನೆಯ ಶರತ್ತಿನಲ್ಲಿ ತಹಜ್ಜುದ್ ನಮಾಝನ್ನು ಅನುಷ್ಠಿಸುವ ಬಗ್ಗೆ ಹೇಳಲಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ:

وَمِنَ الَّيۡلِ فَتَهَجَّدۡ بِهٖ نَافِلَةً لَّكَ ۖ عَسٰۤى اَنۡ يَّبۡعَثَكَ رَبُّكَ مَقَامًا مَّحۡمُوۡدًا

ರಾತ್ರಿಯ ಕೊನೆಯ ಜಾವದಲ್ಲಿ ಸಹ ನೀನು ಅದರಿಂದ (ಖುರ್‌ಆನ್‌ನಿಂದ ಪಾರಾಯಣ ಮಾಡಿ) ತಹಜ್ಜುದ್ ನಮಾಝ್ ನಿರ್ವಹಿಸು – ನಿನಗೆ ಅದೊಂದು ಐಚ್ಛಿಕ ಪುಣ್ಯ ಕರ್ಮವೆಂಬಂತೆ. (ಆ ಮೂಲಕ) ನಿನ್ನ ಪ್ರಭು ಪ್ರಶಂಸಾರ್ಹವಾದೊಂದು ಸ್ಥಾನಕ್ಕೆ ನಿನ್ನನ್ನು ಎತ್ತಲೂಬಹುದು. **(17:80)**

ಹಝ್ರತ್ ಬಿಲಾಲ್[ರ] ವರದಿ ಮಾಡುತ್ತಾರೆ – ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ನೀವು ತಹಜ್ಜುದ್ ನಮಾಝನ್ನು ನಿಯತವಾಗಿ ಅನುಷ್ಠಿಸಬೇಕು. ಅದು ಹಿಂದಿನ ಕಾಲದ ಸಾತ್ವಿಕರ ರೀತಿಯಾಗಿದೆ ಮತ್ತು ಅಲ್ಲಾಹನ ಸಾಮೀಪ್ಯಗಳಿಸಲು ಇರುವ ಮಾರ್ಗವೂ ಆಗಿದೆ. ಈ ಸ್ವಭಾವ

ಪಾಪಕೃತ್ಯಗಳನ್ನು ತಡೆಯುತ್ತದೆ, ಕೆಡುಕುಗಳನ್ನು ಕೊನೆಗೊಳಿಸುತ್ತದೆ ಮತ್ತು ಶಾರೀರಿಕ ರೋಗಗಳಿಂದ ರಕ್ಷಿಸುತ್ತದೆ. **(ತಿರ್‌ಮಿಧೀ ಅಬ್‌ವಾಬುದ್ದಅವಾತ್)**

ಒಂದು ಹದೀಸಿನಲ್ಲಿ ಹಝ್ರತ್ ಅಬೂಹುರೈರ(ರ) ಹೀಗೆ ವರದಿ ಮಾಡುತ್ತಾರೆ – ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ರಾತ್ರಿಯ ಕೊನೆಯ ಜಾವದಲ್ಲಿ ಅಲ್ಲಾಹನು ಭೂಮಿಯ ಹತ್ತಿರದ ಆಕಾಶಕ್ಕೆ ಇಳಿಯುತ್ತಾನೆ ಮತ್ತು ಹೇಳುತ್ತಾನೆ – ಯಾರಾದರೂ ನನ್ನನ್ನು ಪ್ರಾರ್ಥಿಸುವವನಿದ್ದಾನೆಯೇ? ನಾನು ಅವನ ಪ್ರಾರ್ಥನೆಯನ್ನು ಅಂಗೀಕರಿಸುವೆನು. ಯಾರಾದರೂ ಕ್ಷಮೆಯನ್ನು ಕೋರುತ್ತಿರುವನಾದರೆ ನಾನು ಅವನನ್ನು ಕ್ಷಮಿಸುವೆನು. ಯಾರಾದರೂ ನನ್ನಿಂದ ಆಹಾರ ಬೇಡುತ್ತಿದ್ದರೆ ನಾನು ಅವನಿಗೆ ಆಹಾರ ಕೊಡುವೆನು. ಯಾರಾದರೂ ತನ್ನ ಕಷ್ಟವನ್ನು ದೂರಸರಿಸಲು ಪ್ರಾರ್ಥಿಸುವನಾದರೆ ನಾನು ಅವನ ಕಷ್ಟವನ್ನು ದೂರಸರಿಸುವೆನು. ಅಲ್ಲಾಹನು ಹೀಗೆಯೇ ಹೇಳುತ್ತಾ ಇರುತ್ತಾನೆ. ಮುಂಜಾನೆಯ ತನಕ ಇದು ಮುಂದುವರಿಯುತ್ತದೆ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 2, ಪುಟ 521 – ಬೈರೂತ್‌ನಲ್ಲಿ ಮುದ್ರಿತ)**

ಅನೇಕ ಜನರು ಅವರ ಪರವಾಗಿ ದುಆ ಮಾಡಲು ನನಗೆ ಪತ್ರಗಳನ್ನು ಬರೆಯುತ್ತಾರೆ. ಅವರು ಸಹ ಮೇಲಿನ ರೀತಿಯಲ್ಲಿ ವರ್ತಿಸಿದರೆ ಅಲ್ಲಾಹನ ಅನುಗ್ರಹಗಳ ಮಳೆಯು ಸುರಿಯುತ್ತಿರುವುದನ್ನು ಕಾಣುವರು.

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ – ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಅಲ್ಲಾಹನು ಹೇಳುತ್ತಾನೆ – ಯಾರು ನನ್ನ ಸ್ನೇಹಿತನನ್ನು ದ್ವೇಷಿಸುತ್ತಾನೋ ನಾನು ಅವನ ವಿರುದ್ಧ ಯುದ್ಧದ ಘೋಷಣೆ ಮಾಡುತ್ತೇನೆ. ನಾನು ಕಡ್ಡಾಯಗೊಳಿಸಿದ, ನನಗೆ ಇಷ್ಟವಿರುವ ಪ್ರಕಾರ ವರ್ತಿಸಿ ನನ್ನ ಸಾಮೀಪ್ಯವನ್ನು ನನ್ನ ದಾಸನು ಎಷ್ಟರ ಮಟ್ಟಿಗೆ ಗಳಿಸಬಲ್ಲನೋ ಅಷ್ಟರ ಮಟ್ಟಿಗೆ ಬೇರೆ ಯಾವ ರೀತಿಯಲ್ಲೂ ಗಳಿಸಲು ಸಾಧ್ಯವಿಲ್ಲ. ಐಚ್ಛಿಕ ಆರಾಧನೆಗಳ ಮೂಲಕ ನನ್ನ ದಾಸನು ನನಗೆ ಸಮೀಪವಾಗುತ್ತಾನೆ. ನಾನು ಅವನನ್ನು ಪ್ರೀತಿಸಲು ಪ್ರಾರಂಭಿಸುತ್ತೇನೆ. ನಾನು ಅವನನ್ನು ನನ್ನ ಸ್ನೇಹಿತನನ್ನಾಗಿ ಮಾಡಿದಾಗ ನಾನು ಅವನ ಕಿವಿಯಾಗುತ್ತೇನೆ. ಅದರ ಮೂಲಕ ಅವನು ಆಲಿಸುತ್ತಾನೆ. ನಾನು ಅವನ ಕಣ್ಣುಗಳಾಗುತ್ತೇನೆ ಅವುಗಳ ಮೂಲಕ ಅವನು ನೋಡುತ್ತಾನೆ. ನಾನು ಅವನ ಕೈಗಳಾಗುತ್ತೇನೆ. ಅವುಗಳ ಮೂಲಕ ಅವನು ಹಿಡಿಯುತ್ತಾನೆ. ನಾನು ಅವನ ಪಾದಗಳಾಗುತ್ತೇನೆ. ಅವುಗಳ ಮೂಲಕ ಅವನು ನಡೆಯುತ್ತಾನೆ. ನಾನೇ ಅವನ ಕಾರ್ಯನಿರ್ವಾಹಕನಾಗುತ್ತೇನೆ. ಅವನು ನನ್ನಿಂದ ಏನನ್ನಾದರೂ ಬೇಡಿದರೆ ನಾನು ಅವನಿಗೆ ಅದನ್ನು ಕೊಡುತ್ತೇನೆ. ಅವನು ನನ್ನಿಂದ ಆಶ್ರಯ ಬೇಡಿದರೆ ನಾನು ಅವನಿಗೆ ಆಶ್ರಯವನ್ನು ನೀಡುತ್ತೇನೆ.

**(ಬುಖಾರಿ ಕಿತಾಬುರ್ರಿಖಾಖ್ ಬಾಬುತ್ತವಾಝುಅ್)**

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ – ಹಝ್ರತ್ ರಸೂಲುಲ್ಲಾಹ್ ಹೇಳಿದರು: ನಮಾಝ್ ಮಾಡಲಿಕ್ಕೆ ರಾತ್ರಿ ಎದ್ದು ತನ್ನ ಪತ್ನಿಯನ್ನೂ ಎಬ್ಬಿಸುವವನ ಮೇಲೆ ಅಲ್ಲಾಹನು ಕರುಣೆದೋರಲಿ. ಅವಳು ಏಳದಿದ್ದರೆ ಅವಳನ್ನು ಎಬ್ಬಿಸಲು ಅವನು ಅವಳ ಮುಖಕ್ಕೆ ನೀರು ಚಿಮುಕಿಸುತ್ತಾನೆ. ಇದೇ ರೀತಿ ನಮಾಝ್ ಮಾಡಲಿಕ್ಕೆ ರಾತ್ರಿ ಎದ್ದು ತನ್ನ ಪತಿಯನ್ನೂ ಎಬ್ಬಿಸುವವಳ ಮೇಲೆ ಅಲ್ಲಾಹನು ಕರುಣೆದೋರಲಿ. ಅವನು ಏಳದಿದ್ದರೆ ಅವನನ್ನು ಎಬ್ಬಿಸಲು ಅವಳು ಅವನ ಮುಖಕ್ಕೆ ನೀರು ಚಿಮುಕಿಸುತ್ತಾಳೆ.

**(ಅಬೂದಾವೂದ್ ಕಿತಾಬುಸ್ಸಲಾತ್)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಮ್ಮ ಜಮಾಅತಿನ ಜನರು ತಹಜ್ಜುದ್ ನಮಾಝನ್ನು ತಮ್ಮ ಮೇಲೆ ಕಡ್ಡಾಯ ಮಾಡಬೇಕು. ಹೆಚ್ಚಿಗೆ ಸಾಧ್ಯವಿಲ್ಲವಾದರೆ ಎರಡು ರಕ್‌ಅತ್ ಆದರೂ ನಮಾಝ್ ಮಾಡಲಿ. ಈ ಎರಡು ರಕ್‌ಅತ್‌ಗಳಲ್ಲೂ ದುಆ ಮಾಡಲು ಸಂದರ್ಭ ಸಿಗುತ್ತದೆ. ಆ ಸಮಯದಲ್ಲಿ ಮಾಡುವ ಪ್ರಾರ್ಥನೆಗಳಿಂದ ಒಂದು ವಿಶಿಷ್ಟ ಪ್ರಭಾವ ಉಂಟಾಗುತ್ತದೆ. ಕಾರಣ, ಆಗ ಹೃದಯದಿಂದ ಪ್ರಾರ್ಥನೆ ಸತ್ಯವಾದ ನೋವಿನಿಂದಲೂ ಉತ್ಸಾಹದಿಂದಲೂ ಬಂದಿರುತ್ತದೆ. ಒಂದು ವಿಶಿಷ್ಟ ನೋವು ಮತ್ತು ಹೃದಯ ವೇದನೆ ಇಲ್ಲದಿದ್ದರೆ ನಿದ್ರೆಯಿಂದ ಎಚ್ಚೆತ್ತು ಹೇಗೆ ತಾನೆ ಪ್ರಾರ್ಥಿಸಲು ಸಾಧ್ಯ? ಈ ಸಮಯದಲ್ಲಿ ತಹಜ್ಜುದ್ ನಮಾಝಿಗಾಗಿ ಏಳುವುದರಿಂದ ಹೃದಯದಲ್ಲಿ ಪ್ರಾರ್ಥನೆಯ ಕುರಿತು ನೋವು, ಅಳಲು ಉಂಟಾಗುತ್ತದೆ ಮತ್ತು ಪ್ರಾರ್ಥನೆ ಸ್ವೀಕರಿಸಲ್ಪಡಲು ಸಹಾಯಕವಾಗುತ್ತದೆ. ಆದರೆ ನಮಾಝಿಗಾಗಿ ಏಳಲು ಉದಾಸೀನತೆ ಮತ್ತು ನಿರ್ಲಕ್ಷ್ಯವಿದ್ದರೆ ಅದು ಹೃದಯದಲ್ಲಿ ಉರಿಯಿಲ್ಲವೆಂಬುದನ್ನು ಸೂಚಿಸುತ್ತದೆ. ನಿದ್ರೆ ತಾತ್ಕಾಲಿಕವಾಗಿ ದುಃಖವನ್ನು ದೂರಸರಿಸುತ್ತದೆ. ಆದರೆ ಯಾರಾದರೂ ನಿದ್ರೆಯಿಂದ ಎಚ್ಚೆತ್ತರೆ, ನಿದ್ರೆಗಿಂತ ಬಲವಾದ ಯಾವುದೋ ನೋವು ಮತ್ತು ದುಃಖ ಅವನನ್ನು ಎಚ್ಚರಗೊಳಿಸಿದೆ ಎಂದು ತಿಳಿದುಬರುತ್ತದೆ.

**(ಮಲ್‌ಫೂಝಾತ್; ಭಾಗ 2, ಪುಟ 182 – ಹೊಸ ಮುದ್ರಣ)**

ಅವರು ಪುನಃ ಹೇಳುತ್ತಾರೆ:

ರಾತ್ರಿ ಎದ್ದು ಪ್ರಾರ್ಥನೆ ಮಾಡಿರಿ. ಅಲ್ಲಾಹನು ನಿಮಗೆ ತನ್ನ ದಾರಿ ತೋರಿಸುವವನಾಗಲಿ. ಹಝ್ರತ್ ರಸೂಲುಲ್ಲಾಹ್‌ರ(ಸ) ಶಿಷ್ಯರು ಸಹ ಕ್ರಮೇಣ ತರಬೇತಿ ಪಡೆದರು. ಅವರು ಮೊದಲು ಹೇಗಿದ್ದರು? ಒಬ್ಬ ರೈತನು ಬಿತ್ತಿದ ಬೀಜದ ಹಾಗಿದ್ದರು. ಅದಕ್ಕೆ ಹಝ್ರತ್ ರಸೂಲುಲ್ಲಾಹ್(ಸ) ನೀರು ಹಾಯಿಸಿದರು. ಅವರು ಶಿಷ್ಯರಿಗಾಗಿ ಪ್ರಾರ್ಥಿಸಿದರು. ಬೀಜವು

ಒಳ್ಳೆಯ ಗುಣಮಟ್ಟದ್ದಾಗಿತ್ತು. ಭೂಮಿ ಫಲವತ್ತಾಗಿತ್ತು. ಈ ಕಾರಣದಿಂದ ನೀರು ಹಾಯಿಸುವಿಕೆಯಿಂದ ಫಲವು ಉತ್ತಮವಾಗಿ ದೊರಕಿತು. ಹಝ್ರತ್ ರಸೂಲುಲ್ಲಾಹ್(ಸ) ವರ್ತಿಸುತ್ತಿದ್ದ ಹಾಗೆ ಶಿಷ್ಯರು ವರ್ತಿಸುತ್ತಿದ್ದರು. ಅವರು ಹಗಲಿನ ಅಥವಾ ರಾತ್ರಿಯ ಪ್ರತೀಕ್ಷೆ ಮಾಡುತ್ತಿರಲಿಲ್ಲ. ನೀವು ಸತ್ಯವಾದ ಹೃದಯದಿಂದ ತೌಬ (ಪಶ್ಚಾತ್ತಾಪದೊಂದಿಗೆ ಅಲ್ಲಾಹನ ಕಡೆಗೆ ತಿರುಗುವುದು) ಮಾಡಿರಿ. ತಹಜ್ಜುದ್‌ಗಾಗಿ ಏಳಿರಿ. ದುಆ ಮಾಡಿರಿ. ಹೃದಯವನ್ನು ಸರಿಪಡಿಸಿರಿ. ಬಲಹೀನತೆಗಳನ್ನು ಬಿಟ್ಟು ಬಿಡಿರಿ. ಅಲ್ಲಾಹನ ಸಂಪ್ರೀತಿಗೆ ಅನುಗುಣವಾಗಿ ನಿಮ್ಮ ಮಾತು ಮತ್ತು ಕೃತಿಗಳನ್ನು ಮಾಡಿರಿ.

**(ಮಲ್‌ಫೂಝಾತ್; ಸಂಪುಟ 1, ಪುಟ 28 – ಹೊಸ ಮುದ್ರಣ)**

## ಹಝ್ರತ್ ರಸೂಲುಲ್ಲಾಹ್‌ರಿಗಾಗಿ(ಸ) ದುರೂದ್ (ಸಲಾತ್, ಸಲಾಮ್) ಪ್ರಾರ್ಥನೆಯನ್ನು ಮಾಡುವುದನ್ನು ತನ್ನ ಸ್ಥಿರ ಪ್ರವೃತ್ತಿಯಾಗಿ ಮಾಡಿರಿ

ಬೈಅತಿನ ಮೂರನೆಯ ಶರತ್ತಿನಲ್ಲಿ ಹಝ್ರತ್ ರಸೂಲುಲ್ಲಾಹ್‌ರಿಗೆ(ಸ) ದುರೂದ್ (ಸಲಾತ್, ಸಲಾಮ್) ಪ್ರಾರ್ಥನೆ ಮಾಡುವುದಾಗಿಯೂ ಅದನ್ನು ತನ್ನ ಸ್ಥಿರ ಪ್ರವೃತ್ತಿಯನ್ನಾಗಿ ಮಾಡಿಕೊಳ್ಳುವ ಪ್ರತಿಜ್ಞೆ ಮಾಡಿಸಲಾಗುತ್ತದೆ. ಈ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

إِنَّ اللّٰهَ وَمَلٰٓئِكَتَهٗ يُصَلُّوْنَ عَلَى النَّبِيِّ ؕ يٰٓاَيُّهَا الَّذِيْنَ اٰمَنُوْا صَلُّوْا عَلَيْهِ وَسَلِّمُوْا تَسْلِيْمًا

ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹ ಬಯಸುತ್ತಾರೆ. ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ. **(33:57)**

ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್ ಇಬ್ನುಲ್ ಆಸ್(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ನೀವು ಅಝಾನ್‌ಗೆ ಕರೆ ನೀಡುವವನ ಅಝಾನ್ ಕೇಳುತ್ತಾ ಇರುವಾಗ ನೀವು ಸಹ ಆ ವಾಕ್ಯಗಳನ್ನು ಪುನರಾವರ್ತಿಸಿರಿ. ಅನಂತರ ನನಗಾಗಿ ಅಲ್ಲಾಹನಲ್ಲಿ ದುರೂದ್ ಪ್ರಾರ್ಥನೆ ಅರ್ಪಿಸಿರಿ. ಯಾರು ನನಗಾಗಿ ದುರೂದ್ ಪ್ರಾರ್ಥನೆ (ರಸೂಲ್‌ರ(ಸ) ಮೇಲೆ ಅಲ್ಲಾಹನ ಅನುಗ್ರಹ ವರ್ಷಿಸಲಿಕ್ಕಾಗಿ ಮಾಡುವ ಪ್ರಾರ್ಥನೆ) ಮಾಡುತ್ತಾರೋ ಅಲ್ಲಾಹನು ಅವನಿಗೆ ಹತ್ತುಪಟ್ಟು ಅನುಗ್ರಹಗಳನ್ನು ಸುರಿಸುವನು. ಅನಂತರ ಹೇಳಿದರು: ನನಗೆ ಅಲ್ಲಾಹನಿಂದ ವಸೀಲ ಬೇಡಿಕೊಳ್ಳಿರಿ. ಅದು ಸ್ವರ್ಗದ ಪದವಿಗಳಲ್ಲಿ ಒಂದಾಗಿದೆ. ಅದು ಅಲ್ಲಾಹನ ದಾಸರಲ್ಲಿ ಒಬ್ಬನಿಗೆ ಮಾತ್ರ ಸಿಗುವುದು. ಆ ದಾಸ ನಾನೇ ಆಗುವೆನು ಎಂದು ನಾನು ಆಶಿಸುತ್ತೇನೆ. ಯಾರು ನನಗಾಗಿ ಅಲ್ಲಾಹನಿಂದ ವಸೀಲವನ್ನು ಬೇಡಿಕೊಂಡರೋ ಅಂತಹ ವ್ಯಕ್ತಿಗೆ ಶಫಾಅತ್ (ರಸೂಲ್‌ರ(ಸ) ಶಿಫಾರಸು) ಅನುಮತನೀಯವಾಗುವುದು.

**(ಸಹೀಹ್ ಮುಸ್ಲಿಮ್)**

ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು, ಅವನ ಸಮೀಪಕ್ಕೆ ತಲಪಲು, ಪ್ರಾರ್ಥನೆಗಳು ಅಲ್ಲಾಹನಿಂದ ಸ್ವೀಕರಿಸಲ್ಪಡಲು ನಾವು ಹಝ್‌ರತ್ ರಸೂಲುಲ್ಲಾಹ್‌ರ(ಸ) ವಸೀಲವನ್ನು (ಮಧ್ಯಸ್ಥಿಕೆಯನ್ನು) ಅವಲಂಬಿಸಬೇಕು. ಅದಕ್ಕಿರುವ ಅತ್ಯುತ್ತಮ ಮಾರ್ಗ ಹದೀಸಿನಲ್ಲಿ ವಿವರಿಸಲ್ಪಟ್ಟ ಪ್ರಕಾರ ಮತ್ತು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ಹೇಳಿದ ಪ್ರಕಾರ ದುರೂದ್ ಪ್ರಾರ್ಥನೆ ಮಾಡುವುದಾಗಿದೆ. ಅದು ಹೀಗಿದೆ:

اَللّٰهُمَّ صَلِّ عَلٰى مُحَمَّدٍ وَعَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ
حَمِيْدٌ مَّجِيْدٌ ۔اَللّٰهُمَّ بَارِكْ عَلٰى مُحَمَّدٍ وَعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ
اِبْرَاهِيْمَ اِنَّكَ حَمِيْدٌ مَّجِيْدٌ

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್.**

ಹೇ ಅಲ್ಲಾಹ್, ನೀನು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗೂ ಅವರ ಕುಟುಂಬಕ್ಕೆ ಸೇರಿದವರಿಗೂ ಶುಭಾಶೀರ್ವಾದಗಳನ್ನು ನೀಡು – ಹಝ್‌ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್‌ರಿಗೂ ಅವರ ಕುಟುಂಬದವರಿಗೂ ಶುಭಾಶೀರ್ವಾದಗಳನ್ನು ನೀಡಿದ ಹಾಗೆ. ನಿಶ್ಚಯವಾಗಿಯೂ ನೀನು ಸ್ತುತಿಸಲ್ಪಡುವವನೂ ಮಹತ್ವಶಾಲಿಯೂ ಆಗಿರುವೆ.

ಹೇ ಅಲ್ಲಾಹ್, ನೀನು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು – ಹಝ್‌ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್‌ರಿಗೂ ಅವರ ಕುಟುಂಬದವರಿಗೂ ನೀನು ಅನುಗ್ರಹ ದಯಪಾಲಿಸಿದ ಹಾಗೆ. ನಿಶ್ಚಯವಾಗಿಯೂ ನೀನು ಸ್ತುತಿಸಲ್ಪಡುವವನೂ ಮಹತ್ವಶಾಲಿಯೂ ಆಗಿರುವೆ.

ಹಝ್‌ರತ್ ಆಮಿರ್ ಬಿನ್ ರಬೀಅ(ರ) ವರದಿ ಮಾಡುತ್ತಾರೆ – ಹಝ್‌ರತ್ ರಸೂಲುಲ್ಲಾಹ್(ಸ) ಹೇಳಿದರು: ಯಾವ ಮುಸ್ಲಿಮನು ನನಗಾಗಿ ದುರೂದ್ ಪ್ರಾರ್ಥನೆ ಮಾಡುತ್ತಾನೋ ಅವನು ದುರೂದ್ ಪ್ರಾರ್ಥನೆ ಮಾಡುತ್ತಿರುವಷ್ಟು ಸಮಯ ದೇವದೂತರು ಅವನಿಗೆ ದುರೂದ್ ಪ್ರಾರ್ಥನೆ ಮಾಡುತ್ತಾ ಇರುತ್ತಾರೆ. ಅವನು ಪ್ರಾರ್ಥನೆಯನ್ನು ಕಡಿಮೆ ಮಾಡಿದರೂ ಹೆಚ್ಚಿಗೆ ಮಾಡಿದರೂ ಅದು ಅವನ ಇಷ್ಟ.

ಹಝ್‌ರತ್ ಉಮರಿಬ್ನುಲ್ ಖತ್ತಾಬ್(ರ) ಹೇಳುತ್ತಾರೆ: ದುರೂದ್ ಪ್ರಾರ್ಥನೆ ಮಾಡುವ ತನಕ ಇತರ ಪ್ರಾರ್ಥನೆಗಳು ಆಕಾಶ ಮತ್ತು ಭೂಮಿಯ

ಮಧ್ಯದಲ್ಲಿ ನಿಂತು ಬಿಡುತ್ತವೆ. ಯಾವುದೇ ಪ್ರಾರ್ಥನೆ ದುರೂದ್ ಪ್ರಾರ್ಥನೆಯ ಜೊತೆಗಿಲ್ಲದಿದ್ದರೆ ಅಲ್ಲಾಹನ ಸನ್ನಿಧಿಗೆ ತಲಪಲಾರದು.

**(ತಿರ್‌ಮಿಧೀ – ಕಿತಾಬುಸ್ಸಲಾತ್)**

ಹಝ್ರತ್ ಅಬ್ದುಲ್ಲ ಬಿನ್ ಮಸ್‌ಊದ್[ರ] ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಪುನರುತ್ಥಾನದ ದಿನ ಜನರಲ್ಲಿ ನನಗೆ ಅತ್ಯಂತ ಸಮೀಪ ನನಗೆ ಎಲ್ಲರಿಗಿಂತಲೂ ಹೆಚ್ಚು ದುರೂದ್ ಪ್ರಾರ್ಥನೆ ಮಾಡಿದವರಾಗಿರುವರು.

**(ತಿರ್‌ಮಿಧೀ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ದುರೂದ್ ಪ್ರಾರ್ಥನೆಯ ಅನುಗ್ರಹದ ಬಗ್ಗೆ ತನ್ನ ಸ್ವಂತ ಅನುಭವದ ಕುರಿತು ವಿವರಿಸುತ್ತಾ ಹೇಳಿದರು:

ಒಂದು ಸಂದರ್ಭದಲ್ಲಿ ದುರೂದ್ ಶರೀಫ್ ಪ್ರಾರ್ಥನೆ ಮಾಡುವುದರಲ್ಲಿ ದೀರ್ಘಕಾಲದ ತನಕ ನಾನು ತಲ್ಲೀನನಾಗಿದ್ದೆ. ಏಕೆಂದರೆ ಅಲ್ಲಾಹನನ್ನು ತಲಪುವ ಮಾರ್ಗಗಳು ಸೂಕ್ಷ್ಮವಾಗಿವೆ ಎಂದೂ ಹಝ್ರತ್ ರಸೂಲುಲ್ಲಾಹ್‌ರ[ಸ] ವಸೀಲ (ಮಧ್ಯಸ್ಥಿಕೆ) ಇಲ್ಲದೆ ತಲಪುವುದು ಸಾಧ್ಯವಾಗದೆಂದೂ ನಾನು ದೃಢವಾಗಿ ನಂಬಿದ್ದೆನು. ಈ ಬಗ್ಗೆ ಅಲ್ಲಾಹನು ಸಹ ಹೇಳುತ್ತಾನೆ:

وَابْتَغُوا إِلَيْهِ الْوَسِيلَةَ "ವಸೀಲದ ಮೂಲಕ ಅಲ್ಲಾಹನನ್ನು ಹುಡುಕಿರಿ" ದೀರ್ಘಕಾಲ ದುರೂದ್ ಪ್ರಾರ್ಥನೆ ಮಾಡಿದ ನಂತರ ನಾನು ಒಂದು ದಿವ್ಯ ದರ್ಶನವನ್ನು ಕಂಡೆನು. ಅದು ಹೀಗಿದೆ: ನೀರು ಹೊತ್ತು ತರುವ ಇಬ್ಬರು ಬಂದರು. ಅವರಲ್ಲೊಬ್ಬ ಒಳಗಿನ ಮಾರ್ಗದಿಂದ, ಇನ್ನೊಬ್ಬ ಹೊರಗಿನ ಮಾರ್ಗದಿಂದ ನನ್ನ ಮನೆಗೆ ಪ್ರವೇಶಿಸಿದರು. ಅವರ ಭುಜಗಳಲ್ಲಿ ಪ್ರಕಾಶದಿಂದ ತುಂಬಿದ ಹೂಜಿಗಳಿದ್ದುವು. ಅವರು ಹೇಳಿದರು – ಈ ಅನುಗ್ರಹಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗೆ ನೀವು ಅರ್ಪಿಸಿದ ದುರೂದ್ ಪ್ರಾರ್ಥನೆಗಳ ಪ್ರತಿಫಲವಾಗಿವೆ.

**(ಹಖೀಖತುಲ್ ವಹ್ಯ್; ಟಿಪ್ಪಣಿ, ಪುಟ 128, ರೂಹಾನೀ ಖಝಾಇನ್, ಸಂ. 22)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ದುರೂದ್ ಶರೀಫಿನ ಕಾರಣದಿಂದ ಅಲ್ಲಾಹನ ಅನುಗ್ರಹಗಳು ಪ್ರಕಾಶದ ರೂಪದಲ್ಲಿ ಹಝ್ರತ್ ರಸೂಲುಲ್ಲಾಹ್‌ರ[ಸ] ಕಡೆಗೆ ಹೋಗುತ್ತವೆ. ಅಲ್ಲಿ ಅವರ ಹೃದಯದಲ್ಲಿ ಹೀರಲ್ಪಡುತ್ತದೆ. ಅಲ್ಲಿಂದ ಅಗಣಿತ ನಾಲೆಗಳ ಮೂಲಕ ಪ್ರತಿಯೊಬ್ಬ ಹಕ್ಕುದಾರನಿಗೆ ಅವನ ಪರಿಶ್ರಮಕ್ಕೆ ಅನುಸಾರವಾಗಿ ತಲಪುತ್ತದೆ. ನಿಶ್ಚಯವಾಗಿಯೂ ಯಾವುದೇ ಅನುಗ್ರಹ ಹಝ್ರತ್ ರಸೂಲುಲ್ಲಾಹ್‌ರ[ಸ]

ಮೂಲಕ ಹೊರತು ಯಾರಿಗೂ ತಲಪಲಾರದು. ದುರೂದ್ ಶರೀಫ್ ಎಂದರೇನು? ಅದು ಹಝ್ರತ್ ರಸೂಲುಲ್ಲಾಹ್‌ರ(ಸ) ಸಿಂಹಾಸನವನ್ನು ಅಲ್ಲಾಡಿಸುವುದಾಗಿದೆ. ಅದರಿಂದ ಪ್ರಕಾಶದ ತೊರೆಗಳು ಹೊರಡುತ್ತವೆ. ಅಲ್ಲಾಹನ ಅನುಗ್ರಹವನ್ನು ಗಳಿಸಲು ಬಯಸುವವರು ಆವಶ್ಯಕವಾಗಿ ಹೆಚ್ಚು ಹೆಚ್ಚಾಗಿ ದುರೂದ್ ಶರೀಫನ್ನು ಓದಬೇಕು. ಅದರಿಂದ ಅನುಗ್ರಹವು ಸೆಳೆಯಲ್ಪಡುವುದು.

**(ಅಲ್‌ಹಕಮ್; 28–2–1903, ಪುಟ 7)**

ಅವರು ಪುನಃ ಹೇಳುತ್ತಾರೆ:

ಮನುಷ್ಯನು ಅಲ್ಲಾಹನ ಗುಲಾಮನಾಗಿದ್ದಾನೆ. ಗುಲಾಮನ ಕೆಲಸ ಮಾಲಿಕನು ಆಜ್ಞಾಪಿಸಿದುದನ್ನು ಮಾಡುವುದಾಗಿದೆ. ಆದುದರಿಂದ ನೀವು ಹಝ್ರತ್ ರಸೂಲುಲ್ಲಾಹ್‌ರ(ಸ) ಅನುಗ್ರಹ ಗಳಿಸಲು ಬಯಸುವಿರಾದರೆ ಅಗತ್ಯವಾಗಿ ಅವರ ಗುಲಾಮರಾಗಿರಿ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: قُلْ يَاعِبَادِيَ الَّذِينَ أَسْرَفُوا عَلَىٰ أَنْفُسِهِمْ (ನನ್ನ ಸಂದೇಶವಾಗಿ ಅವರೊಡನೆ) ನೀನು ಹೇಳು: ತಮ್ಮ ಸ್ವಂತ ಆತ್ಮಕ್ಕೆ ದ್ರೋಹವೆಸಗಿದ ನನ್ನ ದಾಸರೇ....**(39:54)** ಇಲ್ಲಿ ದಾಸರೆಂದರೆ ಗುಲಾಮರೇ ಆಗಿದ್ದಾರೆ. ಎಲ್ಲ ಸೃಷ್ಟಿಗಳಲ್ಲ.

ಹಝ್ರತ್ ರಸೂಲುಲ್ಲಾಹ್‌ರ(ಸ) ಗುಲಾಮರಾಗಬೇಕಾದರೆ ಅವರಿಗೆ ದುರೂದ್ ಪ್ರಾರ್ಥನೆ ಮಾಡುವುದು ಆವಶ್ಯಕವಾಗಿದೆ. ಅವರ ಯಾವುದೇ ಆಜ್ಞೆಯನ್ನು ನಿರಾಕರಿಸದೆ ಅನುಷ್ಠಾನಕ್ಕೆ ತರಬೇಕು. ಎಲ್ಲ ಆಜ್ಞೆಗಳನ್ನು ಪಾಲಿಸಬೇಕು.

**(ಅಲ್ ಬದ್ರ್, 24/4/1903)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಾಡಿದ ಒಂದು ದುರೂದ್ ಪ್ರಾರ್ಥನೆ ಹೀಗಿದೆ:

**ಅಲ್ಲಾಹುಮ್ಮ ಸಲ್ಲಿ ವ ಸಲ್ಲಿಮ್ ವ ಬಾರಿಕ್ ಅಲೈಹಿ ವ ಆಲಿಹೀ ಬಿಅದದಿ ಹಮ್ಮಿಹೀ ವ ಗ಼ಮ್ಮಿಹೀ ವ ಹುಝ್‌ನಿಹೀ ಲಿಹಾಧಿಹಿಲ್ ಉಮ್ಮತಿ ವ ಅನ್‌ಝಿಲ್ ಅಲೈಹಿ ಅನ್‌ವಾರ ರಹ್ಮತಿಕ ಇಲಲ್ ಅಬದಿ.**

ಅರ್ಥ: ಹೇ ಅಲ್ಲಾಹ್, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗೆ ಸಲಾತ್, ಸಲಾಮ್ ಮತ್ತು ಅನುಗ್ರಹ ನೀಡು ಮತ್ತು ಅವರ ಕುಟುಂಬದವರಿಗೆ ಸಹ. ಅವರಿಗೆ ಈ ಸಮುದಾಯದ ಬಗ್ಗೆ ಇದ್ದ ಸಹಾನುಭೂತಿ, ದುಃಖ ಮತ್ತು ಶೋಕದ ಪರಿಮಾಣದಷ್ಟು ನೀನು ನಿನ್ನ ಅನುಗ್ರಹಗಳ ಪ್ರಕಾಶವನ್ನು ಅವರ ಮೇಲೆ ಯಾವಾಗಲೂ ಸುರಿಸುತ್ತಾ ಇರು.

**(ಬರಕಾತುದ್ದುಆ; ರೂಹಾನೀ ಖಝ಼ಾಇನ್, ಸಂ. 6, ಪುಟ 11)**

## ಕ್ಷಮೆ ಯಾಚಿಸುವುದನ್ನು (ಇಸ್ತಿಗ್‌ಫಾರ್) ಸ್ಥಿರ ಪ್ರವೃತ್ತಿಯಾಗಿ ಮಾಡಿಕೊಳ್ಳಬೇಕು

ಬೈಅತಿನ ಮೂರನೆಯ ಶರತ್ತಿನಲ್ಲಿ ಕ್ಷಮೆಯನ್ನು ಯಾಚಿಸುವ ಕುರಿತು ಎಂದರೆ ಇಸ್ತಿಗ್‌ಫಾರ್ ಕುರಿತು ಹೇಳಲಾಗಿದೆ.

ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

فَقُلْتُ اسْتَغْفِرُوْا رَبَّكُمْ اِنَّهٗ كَانَ غَفَّارًا

يُّرْسِلِ السَّمَاءَ عَلَيْكُمْ مِّدْرَارًا

وَّيُمْدِدْكُمْ بِاَمْوَالٍ وَّبَنِيْنَ وَيَجْعَلْ لَّكُمْ جَنّٰتٍ وَّيَجْعَلْ لَّكُمْ اَنْهٰرًا

ನಾನು ಹೇಳಿದೆ: ನೀವು ಪಾಪವಿಮುಕ್ತಿಗೋಸ್ಕರ ನಿಮ್ಮ ಪ್ರಭುವಿಗೆ ಮೊರೆಯಿಡಿರಿ. ನಿಸ್ಸಂಶಯವಾಗಿಯೂ ಅವನು ಅತಿಯಾಗಿ ಕ್ಷಮೆ ನೀಡುವವನಾಗಿದ್ದಾನೆ. ಅವನು ನಿಮಗೆ ಧಾರಾಳ ಮಳೆ ನೀಡುವ ಮೋಡಗಳನ್ನು ಕಳುಹಿಸುವನು. ಸಂಪತ್ತಿನಿಂದಲೂ ಸಂತತಿಗಳಿಂದಲೂ ಅವನು ನಿಮಗೆ ನೆರವು ನೀಡುವನು. ತೋಟಗಳನ್ನೂ ನದಿಗಳನ್ನೂ ಅವನು ನಿಮಗೆ ದಯಪಾಲಿಸುವನು.

**(71: 11 – 13)**

فَسَبِّحْ بِحَمْدِ رَبِّكَ وَاسْتَغْفِرْهُ اِنَّهٗ كَانَ تَوَّابًا

ನೀನು ನಿನ್ನ ಪ್ರಭುವಿನ ಸ್ತುತಿಕೀರ್ತನೆ ಮಾಡುವುದರೊಂದಿಗೆ ಅವನ ಪಾವಿತ್ರ್ಯವನ್ನು ಕೊಂಡಾಡು ಮತ್ತು ಅವನೊಡನೆ ಕ್ಷಮೆಯಾಚನೆ ಮಾಡು. ನಿಶ್ಚಯವಾಗಿಯೂ ಅವನು (ಭಕ್ತದಾಸರ ಕಡೆಗೆ) ಕನಿಕರದಿಂದ ಪದೇ ಪದೇ ತಿರುಗುವವನಾಗಿದ್ದಾನೆ. **(110: 4)**

ಒಂದು ಹದೀಸಿನಲ್ಲಿ ಅಬೀ ಬುರ್ದ ಬಿನ್ ಅಬೀ ಮೂಸಾ ತನ್ನ ಪಿತ ಅಬೂ ಮೂಸರಿಂದ ತಿಳಿದುದಾಗಿ ವರದಿ ಮಾಡುತ್ತಾರೆ – ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ನನ್ನ ಸಮುದಾಯಕ್ಕೆ ಎರಡು ಅಮಾನತ್‌ಗಳನ್ನು ನೀಡಿದುದರ ಕುರಿತು ಅಲ್ಲಾಹನು ನನಗೆ ತಿಳಿಸಿರುವನು. ಅದು ಹೀಗಿದೆ:

وَمَا كَانَ اللّٰهُ لِيُعَذِّبَهُمْ وَاَنْتَ فِيْهِمْ وَمَا كَانَ اللّٰهُ مُعَذِّبَهُمْ وَهُمْ يَسْتَغْفِرُوْنَ

ನೀನು ಅವರೊಂದಿಗೆ ಇರುವಾಗ ಅಲ್ಲಾಹನು ಅವರನ್ನು ಶಿಕ್ಷಿಸುವಂತಿರಲಿಲ್ಲ. ಅವರು ಪಾಪ ವಿಮುಕ್ತಿಗಾಗಿ ಪ್ರಾರ್ಥಿಸುವ ಸಂದರ್ಭದಲ್ಲಿಯೂ ಅಲ್ಲಾಹನು ಶಿಕ್ಷಿಸುವವನಾಗಿರಲಿಲ್ಲ. **(8:34)**

ನಾನು ಅವರನ್ನು ಬಿಟ್ಟು ಹೋಗುವಾಗ ಇಸ್ತಿಗ್‌ಫಾರನ್ನು (ಕ್ಷಮೆಯ ಯಾಚನೆಯ ಪ್ರಾರ್ಥನೆಯನ್ನು) ಅವರಲ್ಲಿ ಪುನರುತ್ಥಾನದ ತನಕ ಬಿಟ್ಟು ಹೋಗುವೆನು.

**(ತಿರ್‌ಮಿಧೀ).**

ಹಝ್ರತ್ ಇಬ್ನು ಅಬ್ಬಾಸ್[ರ] ಹೀಗೆ ವರದಿ ಮಾಡುತ್ತಾರೆ – ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: "ಯಾರು ಇಸ್ತಿಗ್‌ಫಾರ್ (ಕ್ಷಮೆ ಯಾಚನೆಯ) ಪ್ರಾರ್ಥನೆಗೆ ಅಂಟಿಕೊಂಡಿರುತ್ತಾನೋ, ಪ್ರಾರ್ಥನೆ ಮಾಡುತ್ತಾ ಇರುತ್ತಾನೋ ಅಲ್ಲಾಹನು ಅವನಿಗೆ ಪ್ರತಿಯೊಂದು ಇಕ್ಕಟ್ಟಿನಿಂದ ಹೊರಬರುವ ದಾರಿ ತೆರೆದು ಕೊಡುತ್ತಾನೆ. ಅವನ ಪ್ರತಿಯೊಂದು ಕಷ್ಟಕ್ಕೆ ಪರಿಹಾರದ ಮಾರ್ಗ ಉಂಟುಮಾಡುತ್ತಾನೆ. ಅವನು ಊಹಿಸದ ಮಾರ್ಗಗಳಿಂದ ಅವನಿಗೆ ಜೀವನಾಧಾರ ದೊರಕುವಂತೆ ಮಾಡುತ್ತಾನೆ."

**(ಸುನನ್ ಅಬೂದಾವೂದ್)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಸತ್ಯವಿಶ್ವಾಸದ ಬೇರುಗಳನ್ನು ಬಲಿಷ್ಠಗೊಳಿಸುವ **"ಇಸ್ತಿಗ್‌ಫಾರ್"**ನ ಕುರಿತು ಪವಿತ್ರ ಖುರ್‌ಆನಿನಲ್ಲಿ ಎರಡು ಅರ್ಥಗಳಲ್ಲಿ ಪ್ರಸ್ತಾಪಿಸಲಾಗಿದೆ. ಒಂದನೆಯದಾಗಿ, ಅಲ್ಲಾಹನಿಂದ ದೂರಸರಿದಿರುವಾಗ ಪಾಪಗಳು ಘಟಿಸುವ ಕಾರಣದಿಂದ ತನ್ನ ಹೃದಯದಲ್ಲಿ ಅಲ್ಲಾಹನ ಪ್ರೀತಿಯನ್ನು ತುಂಬಿಸಿ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿ ಅವನಿಂದ ಸಹಾಯ ಪಡೆದು ತಡೆಯುವುದು. ಈ ಇಸ್ತಿಗ್‌ಫಾರ್ ಅಲ್ಲಾಹನ ಸಾಮೀಪ್ಯ ಗಳಿಸಿದ ಜನರದ್ದಾಗಿದೆ. ಒಂದು ಸಲ ಕಣ್ಣು ಮುಚ್ಚಿ ತೆರೆಯುವಷ್ಟು ಕಾಲದಲ್ಲಿ ಸಹ ಅಲ್ಲಾಹನಿಂದ ದೂರಸರಿಯುವಿಕೆಯು ತಮ್ಮ ನಾಶಕ್ಕೆ ಕಾರಣವೆಂದು ಅರಿತಿರುವ ಅಲ್ಲಾಹನ ವರಿಷ್ಠ ದಾಸರದ್ದಾಗಿದೆ. ಆದುದರಿಂದ ಅವರು ಅಲ್ಲಾಹನು ತನ್ನ ಪ್ರೀತಿಯೊಂದಿಗೆ ತಮ್ಮನ್ನು ವಹಿಸಲಿಕ್ಕಾಗಿ ಇಸ್ತಿಗ್‌ಫಾರ್ ಮಾಡುತ್ತಾ ಇರುತ್ತಾರೆ. ಎರಡನೆಯ ರೀತಿಯ ಇಸ್ತಿಗ್‌ಫಾರ್, ಪಾಪದಿಂದ ಹೊರಬಂದು ಅಲ್ಲಾಹನ ಕಡೆಗೆ ಓಡುವುದು ಮತ್ತು ಮರವು ಭೂಮಿಯಲ್ಲಿ ಆಳವಾಗಿ ಬೇರೂರಿ ನಿಲ್ಲುವ ಹಾಗೆ ಹೃದಯವು ಅಲ್ಲಾಹನ ಪ್ರೀತಿಯ ಸೆರೆಯಾಳಾಗಲು ಪ್ರಯತ್ನಿಸುವುದರ ಮೂಲಕ ಪರಿಶುದ್ಧವಾದ ಬೆಳವಣಿಗೆ ಪಡೆದು ಪಾಪವೆಂಬ ಒಣಗುವಿಕೆ ಮತ್ತು ಅಧಃಪತನದಿಂದ ರಕ್ಷಣೆ ಪಡೆಯುವುದು. ಈ ಎರಡು ರೀತಿಗಳನ್ನೂ ಇಸ್ತಿಗ್‌ಫಾರ್ ಎನ್ನಲಾಗುತ್ತದೆ. ಇಸ್ತಿಗ್‌ಫಾರ್ ಎಂಬ ಪದ ಗ಼ಫರ ಎಂಬ ಪದದಿಂದ ಉತ್ಪತ್ತಿಯಾಗಿದೆ. ಅದರ ಅರ್ಥ ಮರೆಮಾಡುವುದು ಮತ್ತು ಅದುಮಿಡುವುದಾಗಿದೆ. ಒಟ್ಟಿನಲ್ಲಿ ಇಸ್ತಿಗ್‌ಫಾರ್ ಎಂದರೆ ಅಲ್ಲಾಹನ ಪ್ರೀತಿಯಲ್ಲಿ ತನ್ನನ್ನು ಸ್ಥಾಪಿಸುವವನ ಪಾಪಗಳನ್ನು ಅಲ್ಲಾಹನು ತಡೆಗಟ್ಟುತ್ತಾನೆ. ಮಾನವೀಯ ಬಲಹೀನತೆಯ ಬೇರುಗಳು ಬಹಿರಂಗವಾಗಿ ನಗ್ನವಾಗಿ ಪ್ರಕಟವಾಗದಂತೆ ನೋಡಿ ಅವನನ್ನು ತನ್ನ ದೇವತ್ವದ ಹೊದಿಕೆಯಲ್ಲಿ ಹೊದಿಸಿಕೊಂಡು ತನ್ನ ಪರಿಶುದ್ಧಿಯಿಂದ ಪಾಲನ್ನು ನೀಡುತ್ತಾನೆ ಅಥವಾ ಯಾವುದಾದರೂ ಬೇರು ಪಾಪದ ಘಟಿಸುವಿಕೆಯ ಕಾರಣದಿಂದ ನಗ್ನವಾದರೆ ಅದನ್ನು ಮರೆಮಾಡಿ ಅದರ ನಗ್ನತೆಯ ಕೆಟ್ಟ ಪರಿಣಾಮದಿಂದ ರಕ್ಷಿಸಲಾಗುತ್ತದೆ. ಅಲ್ಲಾಹನು ಪ್ರಕಾಶದ

ಉದ್ಭವ ಸ್ಥಾನವಾದ ಕಾರಣ ಅವನ ಪ್ರಕಾಶ ಪ್ರತಿಯೊಂದು ಅಂಧಕಾರವನ್ನು ದೂರಸರಿಸಲು ಸನ್ನದ್ಧವಾಗಿ ಇರುತ್ತದೆ. ಆದುದರಿಂದ ಪರಿಶುದ್ಧ ಜೀವಿತವನ್ನು ಪಡೆಯಲು ನಾವು ಭಯದ ಸ್ಥಿತಿಯಿಂದ ಹೆದರಿಕೊಂಡು ಪರಿಶುದ್ಧಿಯ ನೀರಿನ ಝರಿಯ ಕಡೆಗೆ ಎರಡು ಕೈಗಳನ್ನೂ ಚಾಚುವುದೇ ಸರಿಯಾದ ಮಾರ್ಗವಾಗಿದೆ. ಆಗ ಆ ನೀರಿನ ಝರಿಯು ನಮ್ಮ ಕಡೆಗೆ ಚಲಿಸುವುದು ಮತ್ತು ಎಲ್ಲ ಕೊಳಕನ್ನು ಒಮ್ಮೆಯೇ ತೆಗೆದುಕೊಂಡು ಹೋಗುವುದು. ನಾವು ವಾಸ್ತವಿಕವಾಗಿ ಅಲ್ಲಾಹನ ಮಾರ್ಗದಲ್ಲಿ ಮರಣವನ್ನು ಸ್ವೀಕರಿಸಿ ನಮ್ಮನ್ನು ಅವನ ಮುಂದೆ ಇರಿಸಬೇಕು. ಅಲ್ಲಾಹನ ಸಂಪ್ರೀತಿ ಗಳಿಸಲು ಇದಕ್ಕಿಂತ ದೊಡ್ಡ ಬಲಿದಾನ ಬೇರೆ ಇಲ್ಲ.

**(ಸಿರಾಜುದ್ದೀನ್ ಈಸಾಯೀ ಕೆ ಚಾರ್ ಸವಾಲೋಂಕಾ ಜವಾಬ್; ರೂಹಾನೀ ಖಝಾಇನ್, ಸಂ. 12)**

ಅವರು ಪುನಃ ಹೇಳುತ್ತಾರೆ:

ಅಲ್ಲಾಹನಿಂದ ಶಕ್ತಿಯನ್ನು ಬೇಡಿಕೊಳ್ಳುವಾಗ ಎಂದರೆ ಇಸ್ತಿಗ್‌ಫಾರ್ ಮಾಡುವಾಗ ರೂಹುಲ್ ಖುದ್ಸ್ (ಪವಿತ್ರ ಆತ್ಮದ) ಸಹಾಯದಿಂದ ಬಲಹೀನತೆಗಳು ದೂರಸರಿಯುತ್ತವೆ ಮತ್ತು ಪಾಪ ಕೃತ್ಯಗಳಿಂದ ಅಲ್ಲಾಹನ ಪ್ರವಾದಿಗಳೂ ಸಂದೇಶವಾಹಕರೂ ರಕ್ಷಣೆ ಪಡೆಯುವ ಹಾಗೆ ರಕ್ಷಣೆ ಪಡೆಯುತ್ತಾರೆ. ಪಾಪ ಕೃತ್ಯ ಮಾಡಿದವರು ಇಸ್ತಿಗ್‌ಫಾರ್ ಮಾಡಿದರೆ ಅವರಿಗೆ ಇಸ್ತಿಗ್‌ಫಾರ್ ನೀಡುವ ಲಾಭವೇನೆಂದರೆ ಅವರು ಪಾಪದ ಫಲದಿಂದ, ಅಂದರೆ ಶಿಕ್ಷೆಯಿಂದ ರಕ್ಷಿಸಲ್ಪಡುತ್ತಾರೆ. ಏಕೆಂದರೆ ಪ್ರಕಾಶ ಆಗಮಿಸುವಾಗ ಅಂಧಕಾರ ಬಾಕಿಯಾಗಿ ಉಳಿಯಲು ಸಾಧ್ಯವಿಲ್ಲ. ಅಪರಾಧಿಗಳಾಗಿರುವವರು ಇಸ್ತಿಗ್‌ಫಾರ್ ಮಾಡದಿದ್ದರೆ, ಎಂದರೆ ಅಲ್ಲಾಹನಿಂದ ಶಕ್ತಿಯನ್ನು ಬೇಡಿಕೊಳ್ಳದಿದ್ದರೆ, ಅವರು ತಮ್ಮ ಅಪರಾಧಗಳ ಶಿಕ್ಷೆಯನ್ನು ಪಡೆಯುತ್ತಾ ಇರುತ್ತಾರೆ.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19)**

ಅವರು ಇನ್ನೂ ಹೇಳುತ್ತಾರೆ:

ಕೆಲವು ಜನರಿಗೆ ಪಾಪಕೃತ್ಯದ ಅರಿವು ಇರುತ್ತದೆ. ಬೇರೆ ಕೆಲವರಿಗೆ ಪಾಪಕೃತ್ಯದ ಅರಿವಿರುವುದಿಲ್ಲ. ಆದುದರಿಂದ ಅಲ್ಲಾಹನು ಇಸ್ತಿಗ್‌ಫಾರ್ ಮಾಡುವ ವ್ಯವಸ್ಥೆಯನ್ನು ಶಾಶ್ವತವಾಗಿ ಮಾಡಿರುವನು, ಎಂದರೆ ಮನುಷ್ಯನು ಪ್ರತಿಯೊಂದು ಪಾಪ ಕೃತ್ಯಕ್ಕಾಗಿ, ಅದು ಬಹಿರಂಗವಾಗಿದ್ದರೂ ರಹಸ್ಯವಾಗಿದ್ದರೂ ಅವನಿಗೆ ತಿಳಿದಿದ್ದರೂ ತಿಳಿಯದೆ ಇದ್ದರೂ ಪಾದ, ನಾಲಗೆ, ಮೂಗು, ಕಿವಿ, ಕಣ್ಣು ಮೊದಲಾದವುಗಳ ಎಲ್ಲ ರೀತಿಯ ಪಾಪ ಕೃತ್ಯಗಳಿಗಾಗಿಯೂ ಇಸ್ತಿಗ್‌ಫಾರ್ ಮಾಡುತ್ತಾ ಇರಬೇಕು. ಇಂದಿನ ಕಾಲದಲ್ಲಿ ಹಝ್ರತ್ ಆದಮ್ ಅಲೈಹಿಸ್ಸಲಾಮ್‌ರ ಈ ಪ್ರಾರ್ಥನೆ ಮಾಡಬೇಕು:

رَبَّنَا ظَلَمْنَا اَنْفُسَنَا وَاِنْ لَّمْ تَغْفِرْ لَنَا وَتَرْحَمْنَا لَنَكُوْنَنَّ مِنَ الْخَاسِرِيْنَ

**ರಬ್ಬನಾ ಝ್ಬಲಮ್‌ನಾ ಅನ್‌ಘುಸನಾ ವ ಇನ್‌ಲಮ್ ತಗ್‌ಫಿರ್‌ಲನಾ**

**ವ ತರ್‌ಹಮ್‌ನಾ ಲನಕೂನನ್ನ ಮಿನಲ್ ಖ್ವಾಸಿರೀನ್.**

ಅರ್ಥ: ನಮ್ಮ ಪ್ರಭೂ, ನಾವೇ ನಮ್ಮ ಮೇಲೆ ಅಕ್ರಮವಾಗಿ ವರ್ತಿಸಿದೆವು. ನೀನು ನಮ್ಮನ್ನು ಕ್ಷಮಿಸಿಬಿಟ್ಟು ನಮ್ಮ ಮೇಲೆ ಕರುಣೆ ತೋರಿಸದಿದ್ದರೆ ಖಂಡಿತವಾಗಿಯೂ ನಾವು ನಷ್ಟ ಹೊಂದಿದವರಾಗುವೆವು. **(7: 24)**

ಈ ಪ್ರಾರ್ಥನೆ ಮೊದಲೇ ಸ್ವೀಕರಿಸಲ್ಪಟ್ಟದ್ದಾಗಿದೆ. ನೀವು ನಿರ್ಲಕ್ಷ್ಯದಿಂದ ಜೀವಿಸಬೇಡಿರಿ. ಯಾರು ನಿರ್ಲಕ್ಷ್ಯದಿಂದ ಜೀವಿಸುವುದಿಲ್ಲವೋ ಅಂತಹ ವ್ಯಕ್ತಿ ಅವನ ಶಕ್ತಿಗೆ ಮೀರಿದ ವಿಪತ್ತುಗಳಲ್ಲಿ ಸಿಲುಕುವುದಿಲ್ಲ. ಯಾವುದೇ ವಿಪತ್ತು ಅಲ್ಲಾಹನ ಅನುಮತಿ ಇಲ್ಲದೆ ಬರುವುದಿಲ್ಲ. ಈ ಬಗ್ಗೆ ನನಗೆ ಅಲ್ಲಾಹನು ಈ ಪ್ರಾರ್ಥನೆಯನ್ನು ಕಲಿಸಿರುವನು:

**ರಬ್ಬೀ ಕುಲ್ಲು ಶೈಇನ್ ಖ್ವಾದಿಮುಕ ರಬ್ಬಿ**

**ಫಹ್‌ಫಝ್ನೀ ವನ್‌ಸುರ್‌ನೀ ವರ್‌ಹಮ್‌ನೀ.**

ಅರ್ಥ: ಹೇ ನನ್ನ ಪ್ರಭು, ಎಲ್ಲವೂ ನಿನ್ನ ಸೇವಕರಾಗಿವೆ. ಹೇ ನನ್ನ ಪ್ರಭು ನನ್ನನ್ನು ಸಂರಕ್ಷಿಸು, ನನಗೆ ನೆರವು ನೀಡು, ನನ್ನ ಮೇಲೆ ದಯೆದೋರು.

**(ಮಲ್‌ಫೂಝಾತ್; ಸಂಪುಟ 2, ಪುಟ 577 – ಹೊಸ ಮುದ್ರಣ)**

## ಇಸ್ತಿಗ್‌ಫಾರ್ ಮತ್ತು ತೌಬ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

وَّاَنِ اسْتَغْفِرُوْا رَبَّكُمْ ثُمَّ تُوْبُوْٓا اِلَيْهِ

ನಿಮ್ಮ ಪ್ರಭುವಿನಿಂದ ಕ್ಷಮೆಯನ್ನು ಯಾಚಿಸಿರಿ ಮತ್ತು ಪಶ್ಚಾತ್ತಾಪಪಟ್ಟು ಅವನೆಡೆಗೆ ಮರಳಿರಿ. **(11:4)**

ನೀವು ನೆನಪಿಡಿರಿ, ಎರಡು ವಸ್ತುಗಳನ್ನು ಈ ಸಮುದಾಯಕ್ಕೆ ನೀಡಲಾಗಿದೆ. ಒಂದು, ಶಕ್ತಿಯನ್ನು ಗಳಿಸಲಿಕ್ಕೋಸ್ಕರ. ಇನ್ನೊಂದು, ಗಳಿಸಿದ ಶಕ್ತಿಯನ್ನು ಕೃತಿರೂಪದಲ್ಲಿ ಪ್ರದರ್ಶಿಸಲಿಕ್ಕೋಸ್ಕರ. ಶಕ್ತಿಯನ್ನು ಗಳಿಸಲು ಇಸ್ತಿಗ್‌ಫಾರ್ ಇದೆ. ಅದನ್ನು ಬೇರೆ ಶಬ್ದಗಳಲ್ಲಿ ಸಹಾಯದ ಬೇಡಿಕೆ ಎಂದು ಹೇಳುತ್ತಾರೆ. ಸೂಫೀ ಸಂತರು ಹೀಗೆ ಬರೆದಿದ್ದಾರೆ: ಗದೆಯಂತಹ ಭಾರವಾದ ವಸ್ತುಗಳನ್ನು ಎತ್ತಿಕೊಂಡು ವ್ಯಾಯಾಮ ಮಾಡುವಾಗ ಶಾರೀರಿಕ ಶಕ್ತಿಯು ವರ್ಧಿಸುವ ಹಾಗೆಯೇ, ಆಧ್ಯಾತ್ಮಿಕ ಗದೆಯು ಇಸ್ತಿಗ್‌ಫಾರ್ ಆಗಿದೆ. ಅದರಿಂದ ಆತ್ಮಕ್ಕೆ ಒಂದು ಶಕ್ತಿ ಸಿಗುತ್ತದೆ ಮತ್ತು ಹೃದಯದಲ್ಲಿ ಸ್ಥಿರತೆ ಉಂಟಾಗುತ್ತದೆ.

ಯಾರು ಶಕ್ತಿಯನ್ನು ಗಳಿಸಲು ಬಯಸುತ್ತಾನೋ ಅವನು ಇಸ್ತಿಗ್ಫಾರ್ ಮಾಡಲಿ. ಗ಼ಫರ ಎಂದರೆ ಪರದೆ ಹಾಕುವುದು ಮತ್ತು ದಮನಿಸುವುದು ಎಂಬ ಅರ್ಥಗಳನ್ನು ಹೊಂದಿದೆ. ಇಸ್ತಿಗ಼್ಫಾರ್ ಮೂಲಕ ಮನುಷ್ಯನು ಅಲ್ಲಾಹುವಿನಿಂದ ದೂರಸರಿಸುವ ವಿಕಾರಗಳನ್ನೂ ಯೋಚನೆಗಳನ್ನೂ ಮುಚ್ಚಿಬಿಡಲು ಮತ್ತು ದಮನಿಸಲು ಪ್ರಯತ್ನಿಸುತ್ತಾನೆ. ಇಸ್ತಿಗ಼್ಫಾರ್ ಎಂದರೆ ಮನುಷ್ಯನ ಮೇಲೆ ಆಕ್ರಮಣ ಮಾಡಿ ಅವನನ್ನು ನಾಶಗೊಳಿಸಲು ಬಯಸುವ ವಿಷಕರವಾದ ಪದಾರ್ಥಗಳ ಮೇಲೆ ಜಯಗಳಿಸುವುದು ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವ ಮಾರ್ಗದಲ್ಲಿರುವ ತಡೆಗಳನ್ನು ನಿವಾರಿಸಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದು.

ಇನ್ನೊಂದು ಸಂಗತಿಯನ್ನೂ ನೆನಪಿಡಬೇಕು. ಅಲ್ಲಾಹನು ಮನುಷ್ಯರಲ್ಲಿ ಎರಡು ರೀತಿಯ ಸತ್ವಗಳನ್ನು ಇರಿಸಿದ್ದಾನೆ. ಒಂದು ವಿಷಕರವಾದ ಸತ್ವ. ಅದರ ನಿರ್ವಾಹಕ ಶೈತಾನ್ ಆಗಿದ್ದಾನೆ. ಇನ್ನೊಂದು ವಿಷವನ್ನು ನಿವಾರಿಸುವ (ತಿರ್‌ಯಾಖೀ) ಸತ್ವ. ಮನುಷ್ಯನು ಅಹಂಕಾರದಿಂದ ವರ್ತಿಸುವಾಗ, ತನ್ನನ್ನು ದೊಡ್ಡ ಸ್ಥಾನ ಪಡೆದವನೆಂದು ಭಾವಿಸುವಾಗ ಮತ್ತು ವಿಷ ನಿವಾರಕ ಒರತೆಯಿಂದ ಅವನು ಸಹಾಯ ಪಡೆಯದೆ ಇರುವಾಗ ವಿಷಕರವಾದ ಶಕ್ತಿ ಜಯಗಳಿಸುತ್ತದೆ. ಆದರೆ ಮನುಷ್ಯನು ತನ್ನನ್ನು ಸಾಮಾನ್ಯನೆಂದು ಗಣಿಸುವಾಗ ಮತ್ತು ತನಗೆ ಅಲ್ಲಾಹನ ಸಹಾಯ ಆವಶ್ಯಕವಾಗಿದೆ ಎಂದು ಗ್ರಹಿಸುವಾಗ ಅಲ್ಲಾಹನ ಕಡೆಯಿಂದ ಒಂದು ಒರತೆ ಸೃಷ್ಟಿಸಲ್ಪಡುತ್ತದೆ. ಆಗ ಆತ್ಮವು ಕರಗಿ ಹರಿಯುತ್ತದೆ. ಇದೇ ಇಸ್ತಿಗ಼್ಫಾರ್ ಆಗಿದೆ. ಎಂದರೆ ಅಲ್ಲಾಹನಿಂದ ಶಕ್ತಿಯನ್ನು ಪಡೆದು ವಿಷ ಸತ್ವದ ಮೇಲೆ ಜಯಗಳಿಸುವುದು.

**(ಮಲ್‌ಫೂಝಾತ್; ಸಂಪುಟ 1)**

## ಅಲ್ಲಾಹನನ್ನು ಸ್ತುತಿಸುತ್ತಾ ಇರಬೇಕು

ಬೈಅತಿನ ಮೂರನೆಯ ಶರತ್ತಿನಲ್ಲಿ ಅಲ್ಲಾಹನನ್ನು ಯಾವಾಗಲೂ ಸ್ತುತಿಸುತ್ತಾ ಇರುವ ಕುರಿತು ಪ್ರಸ್ತಾಪಿಸಲಾಗಿದೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ:

اَلۡحَمۡدُ لِلّٰہِ رَبِّ الۡعٰلَمِیۡنَ

ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.

ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. **(1:2)**

اَلۡحَمۡدُ لِلّٰہِ الَّذِیۡ لَہٗ مَا فِی السَّمٰوٰتِ وَ مَا فِی الۡاَرۡضِ وَ لَہُ الۡحَمۡدُ فِی الۡاٰخِرَۃِ ؕ وَ ہُوَ الۡحَکِیۡمُ الۡخَبِیۡرُ

**ಅಲ್‌ಹಮ್ದುಲಿಲ್ಲಾಹಿಲ್ಲದೀ಼ ಲಹೂ ಮಾಫಿಸ್ಸಮಾವಾತಿ ವ ಮಾಫಿಲ್‌ಅರ್‌ಝಿ ವ ಲಹುಲ್‌ಹಮ್‌ದು ಫಿಲ್‌ಆಖಿರತಿ ವ ಹುವಲ್ ಹಕೀಮುಲ್‌ಖಬೀರ್.**

ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಎಲ್ಲವೂ ಯಾರಿಗೆ ಸೇರುತ್ತವೆಯೋ ಆ ಅಲ್ಲಾಹನಿಗೆ ಸರ್ವ ಸ್ತುತಿ ಸ್ತೋತ್ರಗಳು. ಪರಲೋಕದಲ್ಲೂ ಅವನಿಗೆಯೇ ಸರ್ವ ಸ್ತುತಿ ಸ್ತೋತ್ರಗಳು. ಅವನು ವಿವೇಕಶಾಲಿಯೂ ಸರ್ವಜ್ಞನೂ ಆಗಿದ್ದಾನೆ.

**(34: 2)**

ಹಝ್‌ರತ್ ಅಬೂ ಹುರೈರ(ರ) ಹೇಳುತ್ತಾರೆ – ಹಝ್‌ರತ್ ರಸೂಲುಲ್ಲಾಹ್(ಸ) ಹೇಳಿದರು: ಪ್ರತಿಯೊಂದು ಮುಖ್ಯ ಕೆಲಸ ಅಲ್ಲಾಹನ ಸ್ತುತಿಗೆ ಹೊರತಾಗಿ ಪ್ರಾರಂಭಿಸಿದರೆ ಅದು ನಿಷ್ಫಲವಾಗುವುದು.

ಇನ್ನೊಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಪ್ರತಿಯೊಂದು ಮಾತು ಅಲ್ಲಾಹನ ಸ್ತುತಿಯೊಂದಿಗೆ ಪ್ರಾರಂಭಿಸದಿದ್ದರೆ ಅದು ಅನುಗ್ರಹ ರಹಿತವೂ ನಿಷ್ಪ್ರಯೋಜಕವೂ ಆಗುತ್ತದೆ.

**(ಸುನನ್ ಇಬ್ನು ಮಾಜ – ಅಬ್‌ವಾಬುನ್ನಿಕಾಹ್;**
**ಸುನನ್ ಅಬೂ ದಾವೂದ್ – ಕಿತಾಬುಲ್ ಅದಬ್)**

ಒಂದು ಹದೀಸಿನಲ್ಲಿ ನುಅ್‌ಮಾನ್ ಬಿನ್ ಬಶೀರ್(ರ) ವರದಿ ಮಾಡುತ್ತಾರೆ – ಹಝ್‌ರತ್ ರಸೂಲುಲ್ಲಾಹ್(ಸ) ಮಿಂಬರ್‌ನಲ್ಲಿ ನಿಂತುಕೊಂಡು ಹೇಳಿದರು: ಯಾರು ಸ್ವಲ್ಪ ಅನುಗ್ರಹ ದೊರೆತಾಗ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವನಿಗೆ ಹೆಚ್ಚು ಅನುಗ್ರಹ ದೊರೆತರೂ ಕೃತಜ್ಞತೆ ಅರ್ಪಿಸಲಾರನು. ಯಾರು ಜನರಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವನು ಅಲ್ಲಾಹನ ಅನುಗ್ರಹಗಳಿಗಾಗಿ ಕೃತಜ್ಞತೆ ಅರ್ಪಿಸಲಾರನು. ಅಲ್ಲಾಹನು ಮಾಡಿದ ಅನುಗ್ರಹಗಳನ್ನು ಉತ್ತಮವಾಗಿ ಪ್ರಸ್ತಾಪಿಸುವುದು ಸಹ ಕೃತಜ್ಞತೆ ಅರ್ಪಣೆಯಾಗಿದೆ. ಅಲ್ಲಾಹನ ಅನುಗ್ರಹಗಳ ಕುರಿತು ಉತ್ತಮವಾಗಿ ಪ್ರಸ್ತಾಪಿಸದಿರುವುದು ಕೃತಘ್ನತೆ ಆಗಿದೆ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್ – ಸಂಪುಟ 4, ಪುಟ 278 – ಬೈರೂತ್ ಮುದ್ರಿತ)**

ಹಝ್‌ರತ್ ಮುಆಧ್ ಬಿನ್ ಜಬಲ್ ವರದಿ ಮಾಡುತ್ತಾರೆ – ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಅವರ ಕೈ ಹಿಡಿದು ಹೇಳಿದರು: ಅಲ್ಲಾಹನಾಣೆ, ನಾನು ನಿನ್ನನ್ನು ಪ್ರೀತಿಸುತ್ತೇನೆ. ನಾನು ನಿನಗೆ ಉಪದೇಶಿಸುತ್ತೇನೆ – ಪ್ರತಿಯೊಂದು ನಮಾಝ್ ಅನುಷ್ಠಿಸಿದ ನಂತರ ಈ ದುಆ ಮಾಡಲು ಮರೆಯದಿರು:

**ಅಲ್ಲಾಹುಮ್ಮ ಅಯಿನ್ನೀ ಅಲಾ ಧಿಕ್ರಿಕ ವ ಶುಕ್ರಿಕ ವ ಹುಸ್‌ನಿ ಇಬಾದತಿಕ.**

ಹೇ ಅಲ್ಲಾಹ್, ನಿನ್ನನ್ನು ಸ್ಮರಿಸಲು, ನಿನಗೆ ಕೃತಜ್ಞತೆ ಅರ್ಪಿಸಲು ಮತ್ತು ನಿನ್ನನ್ನು ಚೆನ್ನಾಗಿ ಆರಾಧಿಸಲು ನನಗೆ ನೀನು ಸಹಾಯ ಮಾಡು.

**(ಸುನನ್ ಅಬೀ ದಾವೂದ್ – ಕಿತಾಬುಲ್ ವಿತ್ರ್)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ವಾಸ್ತವದಲ್ಲಿ ಎಲ್ಲ ಸ್ತುತಿಗಳಿಗೆ ಮತ್ತು ಗುಣವಿಶೇಷಗಳಿಗೆ ಅರ್ಹನು ಅಲ್ಲಾಹನು ಮಾತ್ರವಾಗಿದ್ದಾನೆ ಎಂದು ಮನುಷ್ಯನು ಗಾಢವಾಗಿ ಚಿಂತಿಸಿದರೆ ತಿಳಿಯುವುದು. ಯಾವನೇ ಮನುಷ್ಯ ಅಥವಾ ಇತರ ಸೃಷ್ಟಿ ವಾಸ್ತವಿಕವಾಗಿ ಮತ್ತು ನಿಜವಾಗಿ ಸ್ತುತಿಗೆ ಅರ್ಹತೆ ಪಡೆದಿಲ್ಲ. ಮನುಷ್ಯನು ಸ್ವಾರ್ಥ ರಹಿತವಾಗಿ ನೋಡುವವನಾದರೆ ಅವನಿಗೆ ಸ್ಪಷ್ಟವಾಗುವುದೇನೆಂದರೆ, ಯಾರಾದರೂ ಸ್ತುತಿಗೆ ಅರ್ಹನಾಗಬೇಕಾದರೆ ಅವನಿಗೆ ಈ ಕೆಳಗಿನ ಗುಣಗಳು ಇರಬೇಕು:
>
> ಯಾವುದೇ ಸೃಷ್ಟಿಯು ಅಸ್ತಿತ್ವಕ್ಕೆ ಬಂದಿರದ ಕಾಲದಲ್ಲಿ ಅವನು ಸೃಷ್ಟಿಕರ್ತನಾಗಿ ವರ್ತಿಸಿರಬೇಕು ಅಥವಾ ಯಾವುದೇ ಸೃಷ್ಟಿಯು ಅಸ್ತಿತ್ವಕ್ಕೆ ಬರದಿರದ ಕಾಲದಲ್ಲಿ ಸೃಷ್ಟಿಸಿದ ವಸ್ತುಗಳನ್ನು ಸಂರಕ್ಷಿಸಲು, ಅವುಗಳ ಆರೋಗ್ಯವನ್ನು ಕಾಪಾಡಲು ಜೀವನಾಧಾರ ಒದಗಿಸಲು ಆವಶ್ಯಕವಾದ ಸಾಮಗ್ರಿಗಳನ್ನು ಒದಗಿಸಿದವನಾಗಿರಬೇಕು ಅಥವಾ ವಿವಿಧ ಆಪತ್ತು ಮತ್ತು ವಿಪತ್ತುಗಳಿಂದ ತಾನು ಸೃಷ್ಟಿಸಿದವುಗಳನ್ನು ರಕ್ಷಿಸಿರಬೇಕು. ಕಷ್ಟಪಡುವವನ ಕಷ್ಟಕ್ಕೆ ತಕ್ಕ ಪ್ರತಿಫಲ ಕೊಡುವವನಾಗಿರಬೇಕು. ಕೆಲಸ ಮಾಡುವವನಿಗೆ ಕೂಲಿ ಕೊಡುವುದು ಕೆಲಸ ಮಾಡಿದವನ ಹಕ್ಕಿಗೆ ಸೇರಿದ್ದರೂ ಅದನ್ನು ಪೂರ್ಣ ರೂಪದಲ್ಲಿ ಕೊಡುವುದು ಸ್ತುತ್ಯರ್ಹವಾಗುತ್ತದೆ. ಮೇಲೆ ವಿವರಿಸಿದ ಗುಣಗಳು ಉನ್ನತ ಮಟ್ಟದವುಗಳಾಗಿದ್ದು ಸ್ತುತಿಗೆ ಅರ್ಹತೆಯನ್ನು ನೀಡುತ್ತವೆ. ಈಗ ನೀವು ಚಿಂತಿಸಿರಿ. ಸತ್ಯದಲ್ಲಿ ಈ ಎಲ್ಲ ಸ್ತುತಿಗೆ ಅರ್ಹತೆ ಪಡೆದಿರುವವನು ಅಲ್ಲಾಹನು ಮಾತ್ರವೆಂದು ನೀವು ಕಾಣುವಿರಿ. ಅವನು ಪರಿಪೂರ್ಣವಾಗಿ ಈ ಗುಣಗಳಿಂದ ಕೂಡಿರುವನು. ಬೇರೆ ಯಾರಲ್ಲೂ ಈ ಗುಣಗಳಿಲ್ಲ..... ಒಟ್ಟಾರೆ ಹೇಳುವುದಾದರೆ, ಅಲ್ಲಾಹನು ಪರಿಪೂರ್ಣ ಅಸ್ತಿತ್ವವನ್ನು ಪಡೆದುದರಿಂದ ಅಲ್ಲಾಹನೇ ಅತ್ಯುನ್ನತವಾದ ಸ್ತುತಿಗೆ ಅರ್ಹನಾಗಿದ್ದಾನೆ. ಬೇರೆ ಯಾರಿಗೂ ಈ ಅರ್ಹತೆ ಇಲ್ಲ. ಬೇರೆ ಯಾರಿಗಾದರೂ ಸ್ತುತಿಗೆ ಅರ್ಹತೆ ಸಿಗುವುದಾದರೆ ಅದು ಅಲ್ಲಾಹನ ಮೂಲಕವಾಗಿದೆ. ಇದು ಸಹ ಅಲ್ಲಾಹನ ದಯೆಯಾಗಿದೆ. ಅವನು ಏಕನೂ ಸಹಭಾಗಿಗಳಿಲ್ಲದವನೂ ಆಗಿದ್ದರೂ ಅವನು ಕೆಲವರನ್ನು ತನ್ನ ಮೂಲಕ ತನ್ನ ಸ್ತುತಿಯಲ್ಲಿ ಪಾಲು ಪಡೆಯುವಂತೆ ಮಾಡುತ್ತಾನೆ.

**(ರೂಇದಾದ್ ಜಲ್ಸಯೆ ದುಆ; ರೂಹಾನೀ ಖಝಾಇನ್, ಸಂಪುಟ 15, ಪುಟ 598 – 602)**

ಜಮಾಅತಿಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್[(ಅ)] ಹೇಳುತ್ತಾರೆ:

> ಆಕಾಶದಲ್ಲಿರುವ ದೇವದೂತರು ಸಹ ನಿಮ್ಮನ್ನು ಪ್ರಶಂಸಿಸಬೇಕೆಂದು ನೀವು ಬಯಸುವಿರಾದರೆ ನೀವು ಪೆಟ್ಟುಗಳನ್ನು ತಿಂದು ಸಂತೋಷಪಡಿರಿ. ಬೈಗಳನ್ನು ಕೇಳಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿರಿ. ನೀವು ಸೋತುಹೋದರೂ ಅಲ್ಲಾಹನೊಂದಿಗಿನ ಸಂಬಂಧ ಮುರಿಯಬೇಡಿರಿ. ನೀವು ಅಲ್ಲಾಹನ

ಕೊನೆಯ ಜಮಾಅತ್ ಆಗಿದ್ದೀರಿ. ಆದ್ದರಿಂದ ನೀವು ಅತ್ಯಂತ ಶ್ರೇಷ್ಠ ಮಟ್ಟದ ಒಳ್ಳೆಯ ಕೆಲಸ ಮಾಡಿರಿ. ನಿಮ್ಮ ಪೈಕಿ ಉದಾಸೀನತೆ ತೋರಿಸುವವನು ಕೊಳಕು ವಸ್ತುವಿನ ಹಾಗೆ ಜಮಾಅತಿನ ಹೊರಗೆ ಎಸೆಯಲ್ಪಡುವನು. ಅವನು ಖೇದಿಸುತ್ತಾ ಸಾಯುವನು. ಅವನು ಅಲ್ಲಾಹನಿಗೆ ಯಾವ ಹಾನಿಯನ್ನೂ ಉಂಟುಮಾಡಲಾರನು. ನೋಡಿರಿ, ನಿಮ್ಮ ದೇವನು ನಿಜವಾಗಿಯೂ ಅಸ್ತಿತ್ವದಲ್ಲಿದ್ದಾನೆ ಎಂದು ನಾನು ಬಹಳ ಸಂತೋಷದಿಂದ ನಿಮಗೆ ತಿಳಿಸುತ್ತೇನೆ. ಎಲ್ಲರೂ ಅವನ ಸೃಷ್ಟಿಗಳಾಗಿದ್ದರೂ ಅವನನ್ನು ಯಾರು ಆಯ್ಕೆ ಮಾಡುತ್ತಾನೋ ಅಂತಹವನನ್ನು ಅಲ್ಲಾಹನು ಆಯ್ಕೆ ಮಾಡುತ್ತಾನೆ. ಯಾರು ಅಲ್ಲಾಹನ ಬಳಿಗೆ ಹೋಗುತ್ತಾನೋ ಅವನ ಸಮೀಪಕ್ಕೆ ಅಲ್ಲಾಹನು ಬರುತ್ತಾನೆ. ಯಾರು ಅಲ್ಲಾಹನಿಗೆ ಗೌರವ ನೀಡುತ್ತಾನೋ ಅಲ್ಲಾಹನು ಸಹ ಅವನಿಗೆ ಗೌರವ ನೀಡುತ್ತಾನೆ. ನೀವು ನಿಮ್ಮ ಹೃದಯಗಳನ್ನು ಸರಿಪಡಿಸಿ ನಿಮ್ಮ ನಾಲಗೆ, ಕಣ್ಣು ಮತ್ತು ಕಿವಿಗಳನ್ನು ಪರಿಶುದ್ಧಗೊಳಿಸಿ ಅಲ್ಲಾಹನ ಕಡೆಗೆ ಬನ್ನಿರಿ. ಆಗ ಅವನು ನಿಮ್ಮನ್ನು ಸ್ವೀಕರಿಸುವನು.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 15)**

ಅವರು ಪುನಃ ಹೇಳುತ್ತಾರೆ:

ಅಲ್ಲಾಹನು ನಿಮ್ಮನ್ನು ನಾಶಮಾಡುವನೆಂದು ನೀವು ಭಾವಿಸಬೇಡಿರಿ. ನೀವು ಅಲ್ಲಾಹನಿಂದ ಭೂಮಿಯಲ್ಲಿ ಬಿತ್ತಲ್ಪಟ್ಟ ಒಂದು ಬೀಜವಾಗಿರುವಿರಿ. ಈ ಬೀಜ ಮೊಳಕೆಯೊಡೆದು ಬೆಳೆಯುವುದು ಮತ್ತು ಅದರ ಕೊಂಬೆಗಳು ಎಲ್ಲ ಕಡೆಗಳಿಂದ ಹೊರಬಂದು ಒಂದು ಹೆಮ್ಮರವಾಗುವುದು ಎಂದು ಅಲ್ಲಾಹನು ಹೇಳುತ್ತಾನೆ. ಅಲ್ಲಾಹನ ಮಾತುಗಳನ್ನು ನಂಬುವವನು ಮತ್ತು ಮಧ್ಯದಲ್ಲಿ ಬರುವ ಪರೀಕ್ಷೆಗಳಿಗೆ ಹೆದರದವನು ಅನುಗ್ರಹೀತನು. ಏಕೆಂದರೆ, ಬೈಅತ್ ಪ್ರತಿಜ್ಞೆ ಮಾಡಿದವರಲ್ಲಿ ಯಾರು ಸತ್ಯವಂತರು ಯಾರು ಸುಳ್ಳುಗಾರರೆಂದು ಅಲ್ಲಾಹನು ಪರೀಕ್ಷಿಸಲಿಕ್ಕಾಗಿ ಪರೀಕ್ಷೆಗಳು ಬರುವುದು ಆವಶ್ಯಕವಾಗಿದೆ. ಯಾವುದಾದರೂ ಪರೀಕ್ಷೆಯಿಂದ ಎಡವಿ ಬೀಳುವವನು ಅಲ್ಲಾಹನಿಗೆ ಯಾವ ಹಾನಿಯನ್ನೂ ಉಂಟುಮಾಡಲಾರನು. ಅವನ ದೌರ್ಭಾಗ್ಯ ಅವನನ್ನು ನರಕಕ್ಕೆ ತಲಪಿಸುವುದು. ಅವನು ಹುಟ್ಟದೇ ಇರುತ್ತಿದ್ದರೆ ಅವನಿಗೆ ಉತ್ತಮವಾಗಿತ್ತು. ಆದರೆ ಯಾರು ಕೊನೆಯ ತನಕ ಸಹನೆದೋರುತ್ತಾರೋ ಅವರ ಮೇಲೆ ಕಷ್ಟಗಳ ಭೂಕಂಪ ಬಂದೆರಗಿದರೂ ಅವರ ಮೇಲೆ ವಿಪತ್ತುಗಳ ಬಿರುಗಾಳಿ ಬೀಸಿದರೂ ಜನರು ಪರಿಹಾಸ ಮಾಡಿದರೂ ಅವರೊಂದಿಗೆ ಲೋಕವು ತೀವ್ರವಾದ ತಿರಸ್ಕಾರ ಭಾವದಿಂದ ವರ್ತಿಸಿದರೂ ಅವರು ಕೊನೆಗೆ ಜಯಗಳಿಸುವರು. ಅನುಗ್ರಹಗಳ ಬಾಗಿಲುಗಳು ಅವರಿಗೆ ತೆರೆಯಲ್ಪಡುವುವು.

ನಾನು ನನ್ನ ಜಮಾಅತಿಗೆ ಹೀಗೆ ತಿಳಿಸಬೇಕೆಂದು ಅಲ್ಲಾಹನು ನನ್ನನ್ನು ಸಂಬೋಧಿಸಿ ಹೇಳಿದ್ದಾನೆ: ಯಾರ ವಿಶ್ವಾಸದಲ್ಲಿ ಲೌಕಿಕವಾದ ಯಾವುದೇ

ಸ್ವಾರ್ಥವಿಲ್ಲವೋ ಯಾರ ವಿಶ್ವಾಸದಲ್ಲಿ ಕಾಪಟ್ಯ ಮತ್ತು ಭೀರುತ್ವವಿಲ್ಲವೋ ಯಾರ ವಿಶ್ವಾಸವು ಅನುಸರಣೆಯ ಯಾವುದೇ ಮಟ್ಟದಿಂದ ವಂಚಿತವಾಗಿಲ್ಲವೋ ಅಂತಹ ಜನರು ಅಲ್ಲಾಹನಿಗೆ ಪ್ರಿಯ ಜನರಾಗಿದ್ದಾರೆ. ಅವರ ಹೆಜ್ಜೆಯೇ ಸತ್ಯದ ಹೆಜ್ಜೆಯಾಗಿದೆ ಎಂದು ಅಲ್ಲಾಹನು ಹೇಳುತ್ತಾನೆ:

**(ಅಲ್ ವಸಿಯ್ಯತ್; ರೂಹಾನೀ ಖಝಾಇನ್, ಸಂಪುಟ 10, ಪುಟ 309)**

ಅಲ್ಲಾಹನು ನಮ್ಮೆಲ್ಲರನ್ನು ಇಂತಹ ವಿಶ್ವಾಸದಲ್ಲಿ ನೆಲೆನಿಲ್ಲಲು ಸೌಭಾಗ್ಯ ನೀಡಲಿ. ಅಲ್ಲಾಹನು ನಮ್ಮನ್ನು ನಿಜವಾದ ಅರ್ಥದಲ್ಲಿ ಸತ್ಯವಂತರಾದ ಅಹ್ಮದೀ ಮುಸ್ಲಿಮರನ್ನಾಗಿ ಮಾಡಲಿ. ನಾವು ನಮ್ಮ ಬೈಅತ್ ಪ್ರತಿಜ್ಞೆ ಪಾಲಿಸುವವರನ್ನಾಗಿಯೂ ಅದರ ಪ್ರಕಾರ ವರ್ತಿಸುವವರನ್ನಾಗಿಯೂ ಮಾಡಲಿ. ಅಲ್ಲಾಹನನ್ನು ಮತ್ತು ಅವನ ರಸೂಲ್‌ರನ್ನು[ಸ] ಸತ್ಯಸಂಧವಾಗಿಯೂ ಪರಿಪೂರ್ಣವಾಗಿಯೂ ಅನುಸರಿಸುವವರನ್ನಾಗಿ ಮಾಡಲಿ. ಹಝ್ರತ್ ಮಸೀಹ್ ಮೌಊದ್‌ರ[ಅ] ಪ್ರಿಯ ಜಮಾಅತಿಗೆ ಕಳಂಕ ಉಂಟುಮಾಡುವ ಯಾವುದೇ ಕೆಲಸ ನಾವು ಮಾಡದಂತಾಗಲಿ. ಹೇ, ಅಲ್ಲಾಹ್ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮ ಕುಂದುಕೊರತೆಗಳನ್ನು ಮರೆಮಾಡು. ನಮ್ಮನ್ನು ನಿನ್ನ ಆಜ್ಞೆಗಳನ್ನು ಪಾಲಿಸುವವರನ್ನಾಗಿಯೂ ನಿನಗೆ ನಿಷ್ಠೆಯುಳ್ಳವರನ್ನಾಗಿಯೂ ಮಾಡು. ನಮ್ಮನ್ನು ನಮ್ಮ ಬೈಅತ್ ಪ್ರತಿಜ್ಞೆಗಳಲ್ಲಿ ಸ್ಥಿರವಾಗಿರುವಂತೆ ಮಾಡು. ನಮ್ಮನ್ನು ನಿನಗೆ ಪ್ರಿಯರಾದವರೊಂದಿಗೆ ಸೇರಿಸು. ನಮ್ಮ ಸಂತಾನ ಸಹ ಈ ಪ್ರತಿಜ್ಞೆ ಈಡೇರಿಸುವಂತೆ ಸೌಭಾಗ್ಯ ನೀಡು. ನೀನು ನಮ್ಮನ್ನು ನಿನ್ನಿಂದ ಎಂದೂ ದೂರಸರಿಸದಿರು. ನಮಗೆ ನಿನ್ನ ಕುರಿತು ಸತ್ಯವಾದ ಜ್ಞಾನ ದಯಪಾಲಿಸು. ಹೇ ಅರ್‌ಹಮುರ್ರಾಹಿಮೀನ್ (ದಯೆದೋರುವವರಲ್ಲಿ ಅತ್ಯಂತ ಹೆಚ್ಚು ದಯೆದೋರುವವ) ನಮ್ಮ ಮೇಲೆ ದಯೆದೋರು. ನಮ್ಮ ಎಲ್ಲ ಪ್ರಾರ್ಥನೆಗಳನ್ನು ಸ್ವೀಕರಿಸು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತಿನ ಜನರಿಗೆ ಮತ್ತು ಜಮಾಅತಿಗೆ ಮುಂದೆ ಸೇರುವ ಜನರಿಗೆ ಮಾಡಿದ ಎಲ್ಲ ಪ್ರಾರ್ಥನೆಗಳ ವಾರೀಸುದಾರರನ್ನಾಗಿ ನಮ್ಮನ್ನು ಮಾಡು.

**(27/7/2003ರಂದು ಲಂಡನ್ ಜಲ್ಸದಲ್ಲಿ ಮಾಡಿದ ಸಮಾಪನಾ ಭಾಷಣದಿಂದ)**

.....ಇದು ಅತ್ಯಂತ ಮುಖ್ಯ ಮತ್ತು ಆವಶ್ಯಕ ವಿಷಯವಾಗಿದೆ. ಇಂದಿನ ಕಾಲದಲ್ಲಿ ಇದರ ಆವಶ್ಯಕತೆ ಹೆಚ್ಚಿಗೆ ಇದೆಯೆಂದು ತೋರುತ್ತದೆ. ಕಾರಣ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಿಂದ ದೂರ ಸಾಗುತ್ತಿದ್ದೇವೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಂತಿಂತಹ ಶಿಷ್ಯರ (ಸಹಾಬಿಯ) ಸಂತಾನಕ್ಕೆ ಸೇರಿದವರೆಂದು ನಾವು ಅಭಿಮಾನದಿಂದ ಹೇಳುತ್ತೇವೆ. ಆದರೆ ನಮ್ಮ ತಂದೆ ತಾತಂದಿರ ಬಲಿದಾನಗಳ ಕುರಿತು ಹೆಚ್ಚು ದೃಷ್ಟಿ ಹಾಯಿಸುವುದಿಲ್ಲ. ಮುಂದಿನ ಪೀಳಿಗೆಗೆ ದೈಹಿಕ ರಕ್ತವು ಹರಿದಿದೆ. ಆದರೆ ಆಧ್ಯಾತ್ಮಿಕತೆಯ ಮಟ್ಟವು ಕಡಿಮೆಯಾಗಿದೆ. ಇದು

ಸ್ವಾಭಾವಿಕವಾಗಿದೆ. ನುಬುವ್ವತಿನ ಕಾಲದಿಂದ ದೂರ ಹೋದ ಹಾಗೆ ಕೆಲವು ಬಲಹೀನತೆಗಳು ತಲೆದೋರುತ್ತವೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ಜಮಾಅತ್‌ಗಳು ಕಾಲಘಟ್ಟ ಮತ್ತು ಸ್ಥಿತಿಗತಿಗಳ ಬಗ್ಗೆ ಅತ್ತುಕೊಂಡು ಅಲ್ಲಿಯೇ ಸ್ಥಗಿತಗೊಳ್ಳುವುದಿಲ್ಲ. ಅವರು ಪ್ರಯತ್ನ ಮುಂದುವರಿಸುತ್ತಾ ಇರುತ್ತಾರೆ. ನಾವು ಭಾಗ್ಯಶಾಲಿಗಳು. ನಮ್ಮ ಬಗ್ಗೆ ಶುಭವಾರ್ತೆಗಳು ಮತ್ತು ಭವಿಷ್ಯವಾಣಿಗಳು ಇವೆ. ಮುಹಮ್ಮದೀ ಮಸೀಹರ ಜಮಾಅತಿಗೆ ಸೇರಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ(ಸ) ಉಪದೇಶಗಳನ್ನು ಲೋಕದಾದ್ಯಂತ ಹರಡುವ ಕೆಲಸ ನಮಗೆ ವಹಿಸಿಕೊಡಲಾಗಿದೆ. ನಾವು ತೌಹೀದ್‌ನಲ್ಲಿ (ಏಕದೇವ ವಿಶ್ವಾಸದಲ್ಲಿ) ಸ್ಥಿರವಾಗಿ ನಿಂತರೆ ನಾವು ನಿಶ್ಚಯವಾಗಿಯೂ ಹೀಗೆ ಮಾಡುವುದು ವಿಧಿಸಲ್ಪಟ್ಟಿದೆ. ಈ ಉಪದೇಶಗಳಲ್ಲಿ ನಾವು ಸ್ಥಿರವಾಗಿ ನಿಲ್ಲಬೇಕಲ್ಲದೆ ನಮ್ಮ ಸಂತಾನಗಳನ್ನೂ ಇದರಲ್ಲಿ ನಿಲ್ಲುವಂತೆ ಮಾಡಬೇಕು. ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಉಲ್ಲೇಖವನ್ನು ನಿಮ್ಮ ಮುಂದಿರಿಸುತ್ತೇನೆ. ತನಗೆ ಬೈಅತ್ ಮಾಡುವವರಿಂದ ಅವರೇನು ಬಯಸುತ್ತಾರೆಂಬುದು ಇದರಿಂದ ನಿಮಗೆ ಸ್ಪಷ್ಟವಾಗುವುದು. ಅನಂತರ ಬೈಅತಿನ ನಾಲ್ಕನೆಯ ಶರತ್ತಿನ ಕುರಿತು ವಿವರಿಸುವೆನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ನನ್ನ ಕೈಯಲ್ಲಿ ತೌಬದ ಬೈಅತ್ ಮಾಡುವುದು ಒಂದು ಮರಣವನ್ನು ಇಚ್ಛಿಸುತ್ತದೆ. ನೀವು ಹೊಸ ಜೀವಿತಕ್ಕಾಗಿ ಒಂದು ಹೊಸ ಹುಟ್ಟನ್ನು ಪಡೆಯಲು ಇದು ಆವಶ್ಯಕವಾಗಿದೆ.
>
> ನೀವು ಹೃತ್ಪೂರ್ವಕವಾಗಿ ಬೈಅತ್ ಮಾಡುವುದಿಲ್ಲವಾದರೆ ಅದರಿಂದ ಪರಿಣಾಮವೇನೂ ಸಿಗಲಾರದು. ನನ್ನ ಬೈಅತನ್ನು ಮಾಡುವಾಗ ನೀವು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡಬೇಕೆಂದು ಅಲ್ಲಾಹನು ಬಯಸುತ್ತಾನೆ. ಯಾರು ಸತ್ಯವಾದ ಹೃದಯದೊಂದಿಗೆ ನನ್ನನ್ನು ಸ್ವೀಕರಿಸುತ್ತಾನೋ ಮತ್ತು ತನ್ನ ಪಾಪಗಳ ಕುರಿತು ಪಶ್ಚಾತ್ತಾಪಗೊಂಡು ಅಲ್ಲಾಹನ ಕಡೆಗೆ ತಿರುಗುತ್ತಾನೋ (ತೌಬ ಮಾಡುತ್ತಾನೋ) **ಗ಼ಫೂರ್** (ಕ್ಷಮಿಸುವವನೂ) **ರಹೀಮ್** (ದಯೆದೋರುವವನೂ) ಆಗಿರುವ ಅಲ್ಲಾಹನು ಅವನ ಪಾಪಗಳನ್ನು ಆವಶ್ಯಕವಾಗಿ ಕ್ಷಮಿಸುವನು ಮತ್ತು ಅವನು ತಾಯಿಯ ಹೊಟ್ಟೆಯಿಂದ ಹೊರಗೆ ಬಂದ ಶಿಶುವಿನ ಹಾಗೆ ನಿಷ್ಕಳಂಕನಾಗುತ್ತಾನೆ. ಆಗ ದೇವದೂತರು ಅವನನ್ನು ಸಂರಕ್ಷಿಸುತ್ತಾರೆ.

**(ಮಲ್‌ಫೂಝಾತ್; ಸಂಪುಟ 3, ಪುಟ 262)**

# ಬೈಅತಿನ ನಾಲ್ಕನೆಯ ಶರತ್ತು

**ಭಾವೋದ್ರೇಕಗಳಿಗೆ ಒಳಗಾಗಿ ಸಾಮಾನ್ಯವಾಗಿ ದೇವಸೃಷ್ಟಿಗಳಲ್ಲಿ ಯಾರಿಗೂ ಮುಸ್ಲಿಮರಿಗೆ ವಿಶಿಷ್ಟವಾಗಿಯೂ ನಾಲಗೆಯಿಂದಾಗಲಿ, ಕೈಗಳಿಂದಾಗಲಿ ಅಥವಾ ಬೇರೆ ಯಾವುದೇ ರೀತಿಯಲ್ಲಿ ಅನ್ಯಾಯವಾಗಿ ಕಷ್ಟಕೊಡಲಾರೆನು.**

ಈ ಶರತ್ತಿನಲ್ಲಿ (ಸ್ಪಷ್ಟವಾಗುವ ಹಾಗೆ,) ಸಿಟ್ಟಿನಲ್ಲಿ ಮತ್ತು ಕೋಪೋದ್ರಿಕ್ತವಾಗಿ ಅಹಂಕಾರದಿಂದ ಸುಳ್ಳು ಅಭಿಮಾನದ ಪ್ರಕಟಣೆಗಾಗಿ ತನ್ನ ಕೈಗಳಿಂದಾಗಲಿ ನಾಲಗೆಯಿಂದಾಗಲಿ ಯಾರಿಗೂ ಕಷ್ಟಕೊಡಬಾರದೆಂದು ಪ್ರತಿಜ್ಞೆ ಮಾಡಿಸಲಾಗಿದೆ. ಮುಸ್ಲಿಮರಲ್ಲಿ ಯಾರಿಗೂ ಕಷ್ಟಕೊಡಬಾರದೆಂಬುದು ನಮಗೆ ಕಡ್ಡಾಯವಾದ ಶರತ್ತಾಗಿದೆ. ನಾವು ವಿಶಿಷ್ಟವಾಗಿ ಈ ಶರತ್ತನ್ನು ಪಾಲಿಸಬೇಕು. ನಮ್ಮ ಪ್ರಿಯ ಯಜಮಾನರಾದ ಹಝ್ರತ್ ಮುಹಮ್ಮದ್ ಮುಸ್ತಫಾರೊಂದಿಗೆ(ಸ) ಸಂಬಂಧ ಹೊಂದಿರುವವರಿಗೆ ಕೆಡುಕು ಉಂಟುಮಾಡುವ ಕುರಿತು ನಾವು ಯೋಚಿಸಲಾರೆವು. ಆದರೆ ಇಂದಿನ ಕಾಲದಲ್ಲಿ ನಾಮಧಾರಿ ಮುಸ್ಲಿಮ್ ಮತಪಂಡಿತರು ಇಸ್ಲಾಮ್ ಧರ್ಮಕ್ಕೆ ಕಳಂಕ ಉಂಟುಮಾಡುವವರಾಗಿದ್ದಾರೆ. ಅವರು ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅತ್ಯಂತ ಹೆಚ್ಚು ವಿರೋಧಿಸುತ್ತಾ ಇದ್ದಾರೆ. ನಾವು ಅಂತಹ ಜನರ ವಿರುದ್ಧ ಸರ್ವಶಕ್ತನಾದ ಅಲ್ಲಾಹನಿಂದ, ಅವನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುತ್ತಾ ಸಹಾಯವನ್ನು ಕೋರುತ್ತಾ ಹೀಗೆ ಪ್ರಾರ್ಥಿಸುತ್ತೇವೆ: "ಹೇ ನಮ್ಮ ಅಲ್ಲಾಹ್, ನೀನೇ ಅವರನ್ನು ಹಿಡಿಗೂಡು." ಹೀಗೆ ಪ್ರಾರ್ಥಿಸುವುದು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರು(ಸ) ಅವರನ್ನು ಅತ್ಯಂತ ನೀಚರೆಂದು ಹೇಳಿದ ಕಾರಣಕ್ಕಾಗಿದೆ. ಯಾರ ಮೇಲೆಯೂ ಅನಾವಶ್ಯಕ ಕೋಪವಾಗಲಿ, ವೈರವಾಗಲಿ ನಮಗೆ ಇಲ್ಲ. ನಾವು ಅಲ್ಲಾಹನ ಉಪದೇಶಗಳಿಗನುಸಾರವಾಗಿ ವರ್ತಿಸುವವರಾಗಿದ್ದೇವೆ. ಕೋಪವನ್ನು ನಿಯಂತ್ರಿಸಲು ಅಲ್ಲಾಹನು ನಮ್ಮನ್ನು ಹೀಗೆ ಉಪದೇಶಿಸಿದ್ದಾನೆ:

الَّذِيْنَ يُنْفِقُوْنَ فِي السَّرَّآءِ وَالضَّرَّآءِ وَالْكٰظِمِيْنَ الْغَيْظَ وَالْعَافِيْنَ عَنِ النَّاسِ وَاللّٰهُ
يُحِبُّ الْمُحْسِنِيْنَ

ಅವರು (ಸಜ್ಜನರು) ಏಳಿಗೆಯ ಕಾಲದಲ್ಲಿಯೂ ಕಷ್ಟಕಾಲದಲ್ಲಿಯೂ ದೇವಮಾರ್ಗದಲ್ಲಿ ಧನವನ್ನು ಖರ್ಚು ಮಾಡುವವರೂ ಕೋಪವನ್ನು ನಿಯಂತ್ರಿಸುವವರೂ ಜನರಿಗೆ ಕ್ಷಮೆ ನೀಡುವವರೂ ಆಗಿದ್ದಾರೆ. ಸಜ್ಜನರನ್ನು ಅಲ್ಲಾಹನು ಇಷ್ಟಪಡುತ್ತಾನೆ. **(3: 135)**

ಹಝ್ರತ್ ಇಮಾಮ್ ಹುಸೈನ್‌ರ(ರ) ಒಬ್ಬ ಗುಲಾಮನು ಪವಿತ್ರ ಖುರ್‌ಆನಿನ ಈ ವಚನದ ಲಾಭಪಡೆದು ಸ್ವತಂತ್ರನಾದನು. ಈ ಬಗ್ಗೆ ಹೀಗೆ

ವರದಿಯಾಗಿದೆ: ಗುಲಾಮನಿಂದ ಯಾವುದೋ ಬಿಸಿ ಪದಾರ್ಥ, ನೀರು ಅಥವಾ ಬೇರೆ ಯಾವುದೋ ಕುಡಿಯುವ ದ್ರಾವಕ ಅವರ ಮೇಲೆ ಸುರಿಯಿತು. ಆಗ ಹಝ್ರತ್ ಇಮಾಮ್ ಹುಸೈನ್(ರ) ಬಹಳ ಸಿಟ್ಟಿನಿಂದ ಅವನ ಕಡೆಗೆ ನೋಡಿದರು. ಆ ಗುಲಾಮನು ಚುರುಕು ಬುದ್ಧಿಯವನೂ ಪವಿತ್ರ ಖುರ್‌ಆನ್ ಬಗ್ಗೆ ತಿಳಿದವನೂ ಪ್ರಜ್ಞಾವಂತನೂ ಆಗಿದ್ದನು. ಅವನು ಕೂಡಲೇ ಹೇಳಿದನು: ಸತ್ಯವಿಶ್ವಾಸಿಗಳ ಕುರಿತು وَالْكٰظِمِيْنَ الْغَيْظَ **"ವಲ್ ಕಾಝಿಮೀನಲ್ ಗೈಝ್"** (ಅವರು ಕೋಪವನ್ನು ನಿಯಂತ್ರಿಸುವವರು) ಎಂದು ಹೇಳಲಾಗಿದೆ. ಆಗ ಹಝ್ರತ್ ಇಮಾಮ್ ಹುಸೈನ್(ರ) **"ಸರಿ"** ಎಂದು ಹೇಳಿ ಕೋಪವನ್ನು ನಿಯಂತ್ರಿಸಿದರು. ಆಗ ಗುಲಾಮನು ಹೀಗೆ ಯೋಚಿಸಿದನು – ಹಝ್ರತ್ ಇಮಾಮ್ ಹುಸೈನ್(ರ) ಈಗ ಕೋಪವನ್ನು ನಿಯಂತ್ರಿಸಿರಬಹುದು. ಆದರೆ ಮನಸ್ಸಿನಲ್ಲಿಟ್ಟುಕೊಂಡು ಇನ್ನು ಮುಂದೆ ಯಾವುದಾದರೂ ತಪ್ಪು ಮಾಡಿದ ಸಂದರ್ಭದಲ್ಲಿ ನನ್ನನ್ನು ಹೊಡೆಯಬಹುದು. ಆದುದರಿಂದ ಅವನು ಕೂಡಲೆ ಹೇಳಿದನು: وَالْعَافِيْنَ عَنِ النَّاسِ **"ವಲ್‌ಆಫೀನ ಅನಿನ್ನಾಸ್"** (ಸತ್ಯವಿಶ್ವಾಸಿಗಳು ಜನರನ್ನು ಕ್ಷಮಿಸುತ್ತಾರೆ). ಆಗ ಹಝ್ರತ್ ಇಮಾಮ್ ಹುಸೈನ್(ರ) ಹೇಳಿದರು: "ಸರಿ, ನಾನು ಕ್ಷಮಿಸಿದ್ದೇನೆ." ಆಗ ಆ ಗುಲಾಮನು ಕೂಡಲೆ ಹೇಳಿದನು: وَاللّٰهُ يُحِبُّ الْمُحْسِنِيْنَ **"ವಲ್ಲಾಹು ಯುಹಿಬ್ಬುಲ್ ಮುಹ್‌ಸಿನೀನ್"** ಪರೋಪಕಾರ ಮಾಡುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ. ಆಗ ಇಮಾಮ್ ಹುಸೈನ್(ರ) ಹೇಳಿದರು: ನಾನು ನಿನ್ನನ್ನು ಬಿಡುಗಡೆ ಮಾಡುತ್ತೇನೆ. ಆ ಕಾಲದಲ್ಲಿ ಗುಲಾಮರನ್ನು ಖರೀದಿಸಲಾಗುತ್ತಿತ್ತು. ಅವರಿಗೆ ಇಷ್ಟು ಸುಲಭವಾಗಿ ಸ್ವಾತಂತ್ರ್ಯವೂ ಲಭಿಸುತ್ತಿರಲಿಲ್ಲ. ಆದರೆ ಗುಲಾಮನ ಚುರುಕು ಬುದ್ಧಿ, ಜ್ಞಾನ ಮತ್ತು ಮಾಲಿಕನ ತಖ್ವಾ (ಭಯಭಕ್ತಿ) ಪ್ರಯೋಜನಕರವಾಯಿತು. ಸ್ವಾತಂತ್ರ್ಯವು ಲಭಿಸಿತು. ಇದು ಇಸ್ಲಾಮಿನ ಉಪದೇಶದಿಂದ ಲಭಿಸಿದುದಾಗಿದೆ.

## ಕ್ಷಮೆ ನೀಡಿರಿ

ಹಝ್ರತ್ ಮಸೀಹ್ ಮೌಊದ್(ಅ) ಪರೋಪಕಾರಾತ್ಮಕ ಸ್ವಭಾವಗಳು ಅಡಕವಾದ ಎರಡನೇ ವರ್ಗದಲ್ಲಿ ಒಳಗೊಂಡ ನೈತಿಕ ಗುಣಗಳ ಬಗ್ಗೆ ಹೇಳುತ್ತಾರೆ:

> ಪರೋಪಕಾರಾತ್ಮಕ ಸದ್ಗುಣಗಳಲ್ಲಿ ಒಂದನೆಯದು **"ಅಫ್ವ್"** ಅಥವಾ ಕ್ಷಮಾಗುಣವಾಗಿದೆ. ಎಂದರೆ ತಪ್ಪನ್ನು ಕ್ಷಮಿಸುವ ಸ್ವಭಾವ. ಅಪರಾಧಿಯನ್ನು ನ್ಯಾಯವಿಧಿಯ ಮೂಲಕ ಶಿಕ್ಷಿಸಬಹುದು ಅಥವಾ ಸೆರೆಯಲ್ಲಿಡಬಹುದು ಅಥವಾ ಅವನಿಗೆ ದಂಡ ಹೊರಿಸಬಹುದು ಅಥವಾ ದೌರ್ಜನ್ಯ ಪೀಡಿತನು ತಾನೇ ಅವನಿಗೆ ತಕ್ಕ ಶಿಕ್ಷೆ ಕೊಡಬಹುದು. ಆದರೆ ಅಪರಾಧವನ್ನು ಕ್ಷಮಿಸುವುದರಿಂದ ಅವನಿಗೆ ಒಳಿತುಂಟಾಗುವುದಾದರೆ, ಪ್ರತಿಕಾರವನ್ನು ಮಾಡದೆ ಕ್ಷಮೆ ನೀಡುವುದು ಯಥಾರ್ಥದಲ್ಲಿ ಅವನಿಗೆ ಮಾಡುವ ಒಂದು ಉಪಕಾರವಾದೀತು. ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

وَالۡکٰظِمِیۡنَ الۡغَیۡظَ وَالۡعَافِیۡنَ عَنِ النَّاسِ ಸಂದರ್ಭ ನೋಡಿ ಕೋಪವನ್ನು ತಡೆಹಿಡಿಯುವವರೂ ಜನರಿಗೆ ಕ್ಷಮೆಯನ್ನು ನೀಡುವವರೂ ಅವರಾಗಿದ್ದಾರೆ. **(3:135)**

وَجَزٰٓؤُا سَیِّئَۃٍ سَیِّئَۃٌ مِّثۡلُہَا فَمَنۡ عَفَا وَاَصۡلَحَ فَاَجۡرُہٗ عَلَی اللّٰہِ

ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಶಿಕ್ಷೆಯಾಗಿದೆ. ಆದರೆ ಯಾರು ಸಂದರ್ಭಕ್ಕನುಸಾರವಾಗಿ ಕ್ಷಮೆ ನೀಡಿ ಒಳಿತಿಗೆ ಕಾರಣಕರ್ತನಾಗುತ್ತಾನೋ ಅದರ ಪ್ರತಿಫಲ ಅವನಿಗೆ ಅಲ್ಲಾಹನಿಂದ ಲಭಿಸುವುದು. **(42:41)**

**(ಇಸ್ಲಾಮೀ ಉಸೂಲ್‌ಕಿ ಫಲಾಸಫಿ; ರೂಹಾನೀ ಖಝಾಇನ್, ಸಂ. 10, ಪು. 351)**

ಒಂದು ಪ್ರಸಿದ್ಧ ಹದೀಸಿದೆ. ಬಹುತೇಕ ಜನರು ಅದನ್ನು ಆಲಿಸಿರಬಹುದು. ಹಝ್ರತ್ ರಸೂಲುಲ್ಲಾಹ್[ಸ] ತನ್ನ ಎದೆಯ ಕಡೆಗೆ ತೋರಿಸಿ ಹೇಳಿದರು: **"**ತಖ್ವಾ (ಭಯಭಕ್ತಿ) ಇಲ್ಲಿದೆ.**"** ಎಂದರೆ ಅಪ್ರತಿಮವೂ ನೈಜವೂ ಆದ ತಖ್ವಾ (ಭಯಭಕ್ತಿ) ರಸೂಲುಲ್ಲಾಹ್‌ರ[ಸ] ಪರಿಶುದ್ಧವಾದ ಹೃದಯದಲ್ಲಿದೆ. ಆ ಹೃದಯದಲ್ಲಿ ತಖ್ವಾ ಹೊರತು ಬೇರೆ ಏನೂ ಇಲ್ಲ.

ಆದುದರಿಂದ ಸತ್ಯವಿಶ್ವಾಸಿಗಳ ಜಮಾಅತ್ ಆಗಿರುವ ನಿಮಗೆ ಯಾವಾಗಲೂ ಇರುವ ಆಜ್ಞೆ ಏನೆಂದರೆ, ನೀವು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ[ಸ] ಜೀವಿತದ ಉತ್ತಮ ಮಾದರಿಯನ್ನು ಅವಲಂಬಿಸಬೇಕು. ನೀವು ನಿಮ್ಮ ಹೃದಯಗಳನ್ನು ಪರಿಶೀಲಿಸಿರಿ. ನೀವು ಹಝ್ರತ್ ರಸೂಲುಲ್ಲಾಹ್‌ರ[ಸ] ಜೀವಿತದ ಉತ್ತಮ ಮಾದರಿಯನ್ನು ಅನುಸರಿಸುತ್ತಾ ನಿಮ್ಮನ್ನು ತಖ್ವಾದಿಂದ ತುಂಬಿಸಲು ಪ್ರಯತ್ನಿಸುತ್ತಾ ಇರುವಿರೇನು? ಏನು ನಿಮ್ಮ ಹೃದಯದಲ್ಲಿಯೂ ಅಲ್ಲಾಹನ ಭಯ ಮತ್ತು ಅದರ ಫಲಸ್ವರೂಪವಾಗಿ ಅವನ ಸೃಷ್ಟಿಗಳ ಬಗ್ಗೆ ಸಹಾನುಭೂತಿ ಮತ್ತು ಹಿತಕಾರಿ ಭಾವನೆ ಇದೆಯೋ?

ನಾನು ಹದೀಸಿನ ಪೂರ್ಣರೂಪ ಮುಂದಿರಿಸುತ್ತೇನೆ:

ಹಝ್ರತ್ ಅಬೂಹುರೈರ[ರ] ವರದಿ ಮಾಡುತ್ತಾರೆ – ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಹೇಳಿದರು: "ನೀವು ಪರಸ್ಪರ ಅಸೂಯೆಪಡಬೇಡಿರಿ. ಪರಸ್ಪರ ಜಗಳ ಮಾಡಬೇಡಿರಿ. ಪರಸ್ಪರ ದ್ವೇಷಪಡಬೇಡಿರಿ. ಒಬ್ಬರಿನ್ನೊಬ್ಬರೊಂದಿಗೆ ಹಗೆತನ ಹೊಂದಬೇಡಿರಿ. ನಿಮ್ಮಲ್ಲಿ ಒಬ್ಬನು ಒಂದು ವಸ್ತುವಿನ ವ್ಯಾಪಾರ ಮಾಡುವಾಗ ಅದೇ ವಸ್ತುವಿನ ವ್ಯಾಪಾರಕ್ಕೆ ಯಾರೂ ಮುಂದಾಗಬೇಡಿರಿ. ಅಲ್ಲಾಹನ ದಾಸರೇ ನೀವು ಪರಸ್ಪರ ಸಹೋದರರಂತೆ ವರ್ತಿಸಿರಿ. ಮುಸ್ಲಿಮನು ಮುಸ್ಲಿಮನ ಸಹೋದರನಾಗಿದ್ದಾನೆ. ಅವನು ತನ್ನ ಸಹೋದರನ ಮೇಲೆ ದೌರ್ಜನ್ಯ ಮಾಡುವುದಿಲ್ಲ. ಅವನನ್ನು ಹೀನಾಯಗೊಳಿಸುವುದಿಲ್ಲ. ಅವನನ್ನು ತಾತ್ಸಾರ ಭಾವದಿಂದ ಕಾಣುವುದಿಲ್ಲ. ಅನಂತರ ಹಝ್ರತ್ ರಸೂಲುಲ್ಲಾಹ್[ಸ]

ತನ್ನ ಎದೆಗೆ ತೋರಿಸುತ್ತಾ ಮೂರು ಸಾರಿ ಹೇಳಿದರು: **"ಅತ್ತಖ್ವಾ ಹಾಹುನ"** – ತಖ್ವಾ ಇಲ್ಲಿದೆ. ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನನ್ನು ತಾತ್ಸಾರ ಭಾವದಿಂದ ಕಾಣುವನಾದರೆ ಅದು ಅವನಿಗೆ ಕೆಡುಕನ್ನುಂಟುಮಾಡಲು ಸಾಕಾಗುವುದು. ಒಬ್ಬ ಮುಸ್ಲಿಮನಿಗೆ ಇನ್ನೊಬ್ಬ ಮುಸ್ಲಿಮನ ರಕ್ತ, ಸಂಪತ್ತು ಮತ್ತು ಗೌರವ ನಿಷಿದ್ಧವಾಗಿದೆ."

**(ಸಹೀಹ್ ಮುಸ್ಲಿಮ್)**

## ಯಾರಿಗೂ ಕಷ್ಟ ಕೊಡಬೇಡಿರಿ

ನಾಲಗೆಯಿಂದಾಗಲೀ ಕೈಗಳಿಂದಾಗಲೀ ಅಥವಾ ಬೇರೆ ಯಾವುದೇ ರೀತಿಯಲ್ಲಿ ಅನ್ಯಾಯವಾಗಿ ಯಾರಿಗೂ ಕಷ್ಟಕೊಡಬಾರದೆಂದು ನಾಲ್ಕನೆಯ ಶರತ್ತಿನಲ್ಲಿ ಹೇಳಿದೆ. ಈ ಶರತ್ತಿನ ಕುರಿತು ಇನ್ನಷ್ಟು ವಿವರಣೆ ನೀಡುತ್ತೇನೆ: ನಾನು ಈ ಮೊದಲು ಪ್ರಸ್ತಾಪಿಸಿದ ಹದೀಸಿನಲ್ಲಿ "ಅಸೂಯೆಪಡಬಾರದು" ಎಂದು ಹೇಳಲಾಗಿದೆ. ಅಸೂಯೆ ಹೆಚ್ಚುತ್ತಾ ಹೋಗಿ ಅದು ಶತ್ರುತ್ವದ ತನಕ ತಲಪುತ್ತದೆ. ಅಸೂಯೆಯ ಕಾರಣ ಎಲ್ಲ ಸಮಯದಲ್ಲೂ ಹೃದಯದಲ್ಲಿ ತಾನು ಅಸೂಯೆಪಡುವವನಿಗೆ ಹಾನಿಯನ್ನುಂಟುಮಾಡಬೇಕು ಎಂಬ ಯೋಚನೆ ಇರುತ್ತದೆ. ಅಸೂಯೆ ಎಂಬ ರೋಗದಿಂದ ಬೇರೆಯವರಿಗೆ ಹಾನಿ ಉಂಟಾಗುತ್ತದಲ್ಲದೆ, ಅಸೂಯೆಪಡುವವನು ಸಹ ಅದರ ಬೆಂಕಿಯಲ್ಲಿ ಬೇಯುತ್ತಾ ಇರುತ್ತಾನೆ. ಚಿಕ್ಕ ಚಿಕ್ಕ ಸಂಗತಿಗಳಿಂದ ಅಸೂಯೆ ಉಂಟಾಗುತ್ತದೆ. "ಅವನ ವ್ಯಾಪಾರ ಏಕೆ ಒಳ್ಳೆಯದಾಗಿದೆ," "ಅವನ ಬಳಿ ನನಗಿಂತ ಹೆಚ್ಚು ಹಣವಿದೆ," "ಅವನ ಮನೆ ನನ್ನ ಮನೆಗಿಂತ ಉತ್ತಮವಾಗಿದೆ," "ಅವನ ಮಕ್ಕಳು ನನ್ನ ಮಕ್ಕಳಿಗಿಂತ ಹೆಚ್ಚು ಸಮರ್ಥರು" ಎಂದೆಲ್ಲ ಅಸೂಯೆ ಪಡುತ್ತಾರೆ.

ಮಹಿಳೆಯರ ಸ್ಥಿತಿ ಹೇಗಿದೆ ಎಂದರೆ "ಅವಳ ಬಳಿ ಒಳ್ಳೆಯ ಆಭರಣಗಳಿವೆ" ಎಂದು ಅಸೂಯೆ ಪ್ರಾರಂಭವಾಗುತ್ತದೆ.

ಧರ್ಮಕ್ಕೆ ಸಂಬಂಧಿಸಿದ ಕೆಲಸದಲ್ಲಿ ಬೇರೆಯವರು ಮಾಡುವ ಸೇವೆಯನ್ನು ನೋಡಿ ಸ್ಪರ್ಧಾಮನೋಭಾವ ಉಂಟಾಗಬೇಕು. ನಾವು ಸಹ ಮುಂದೆ ಬಂದು ಧಾರ್ಮಿಕ ಸೇವಕರಾಗಲಿಕ್ಕೆ ಪ್ರಯತ್ನ ಇರಬೇಕಾಗಿದೆ. ಆದರೆ ಅದಕ್ಕೆ ಪ್ರತಿಯಾಗಿ ಸೇವೆ ಮಾಡುವವರ ಕಾಲೆಳೆಯಲು; ಯಾವುದಾದರೂ ರೀತಿಯಲ್ಲಿ ಸೇವೆ ಮಾಡುವವರ ವಿರುದ್ಧ ದೂರು ನೀಡಿ ಅವರನ್ನು ಸೇವೆಯಿಂದ ವಂಚಿತರನ್ನಾಗಿ ಮಾಡುವ ಪ್ರಯತ್ನವನ್ನು ಅಸೂಯೆಗಾರರು ಮಾಡುತ್ತಾರೆ.

ಈ ಹದೀಸಿನಲ್ಲಿ ಜಗಳ ಮಾಡಬಾರದು ಎಂದು ಸಹ ಹೇಳಲಾಗಿದೆ. ಚಿಕ್ಕಪುಟ್ಟ ವಿಷಯಗಳಿಗಾಗಿ ಜಗಳ ಪ್ರಾರಂಭವಾಗುತ್ತದೆ. ಉದಾಹರಣೆಗೆ, ಜಲ್ಸಾದ ಸ್ವಯಂ ಸೇವಕನೊಬ್ಬನು ಯಾವನಾದರೂ ಹುಡುಗನಿಗೆ ಅವನ ನಿರಂತರವಾದ

ಉಪದ್ರದ ಕಾರಣ ಸ್ವಲ್ಪ ಬಲಪ್ರಯೋಗಿಸಿ ಅವನನ್ನು ತಡೆದರೆ ಅಥವಾ ಅವನಿಗೆ ಎಚ್ಚರಿಕೆ ನೀಡಿ "ನೀನು ನಿನ್ನ ಉಪದ್ರವವನ್ನು ಮುಂದುವರಿಸಿದರೆ ನಿನಗೆ ಶಿಕ್ಷೆ ನೀಡುವೆನು" ಎಂದು ಹೇಳಿದರೆ ಆಗ ಅಲ್ಲೇ ಕುಳಿತ ತಂದೆ ತಾಯಂದಿರು ಕೂಡಲೇ ಕೈ ಎತ್ತುತ್ತಾರೆ. ಸ್ವಯಂ ಸೇವಕನನ್ನು ಅಸಭ್ಯವಾಗಿ ನಿಂದಿಸುತ್ತಾರೆ. ನಿಮ್ಮ ಈ ರೀತಿಯ ವರ್ತನೆಯಿಂದ ನೀವು ನಿಮ್ಮ ಬೈಅತ್ ಪ್ರತಿಜ್ಞೆ ಮುರಿಯುತ್ತೀರಿ. ನೀವು ನಿಮ್ಮ ಸ್ವಭಾವ ಗುಣವನ್ನು ಕೆಡಿಸಿದಿರಿ ಮತ್ತು ಹೊಸ ಪೀಳಿಗೆಯ ಹೃದಯದಲ್ಲಿ ಜಮಾಅತ್ ವ್ಯವಸ್ಥೆಯನ್ನು ಗೌರವಿಸುವುದನ್ನು ಕೊನೆಗೊಳಿಸಿದಿರಿ ಹಾಗೂ ಅವರ ಮನಸ್ಸಿನಿಂದ ಸರಿ ಮತ್ತು ತಪ್ಪು ಏನೆಂದು ಗುರುತಿಸದಂತೆ ಮಾಡುವಿರಿ.

ಹದೀಸಿನಲ್ಲಿ ಒಬ್ಬರಿನ್ನೊಬ್ಬರೊಂದಿಗೆ ಹಗೆತನ ಹೊಂದಬಾರದೆಂದು ಹೇಳಿದೆ. ಚಿಕ್ಕ ಚಿಕ್ಕ ವಿಷಯಗಳಲ್ಲಿ ಹಗೆಯು ಪ್ರಾರಂಭವಾಗುತ್ತದೆ. ಹೃದಯವು ದ್ವೇಷ ಮತ್ತು ಶತ್ರುತ್ವದಿಂದ ತುಂಬಿ ಹೋಗುತ್ತದೆ. ಹಗೆತನದ ಸೇಡು ತೀರಿಸಿಕೊಳ್ಳಲು ಸಂದರ್ಭಕ್ಕೆ ಕಾಯಲಾಗುತ್ತದೆ. ಆದರೆ ಹಗೆತನ ಹೊಂದಬಾರದು, ದ್ವೇಷ ಹೊಂದಬಾರದು ಎಂಬುದಾಗಿದೆ ಆಜ್ಞೆ. ಒಬ್ಬ ಶಿಷ್ಯ ಹಝ್ರತ್ ರಸೂಲುಲ್ಲಾಹ್‌ರೊಂದಿಗೆ[ಸ] ಕೇಳಿದರು: "ನಾನು ಮರೆತು ಹೋಗದಂತಹ ಸಂಕ್ಷಿಪ್ತ ಉಪದೇಶವನ್ನು ನನಗೆ ನೀಡಿರಿ." ಆಗ ಅವರಿಗೆ ಹೇಳಲಾಯಿತು: "ನೀವು ಕೋಪವನ್ನು ಉಪೇಕ್ಷಿಸಿರಿ." ಪುನಃ ಅವರಿಗೆ ಹೇಳಲಾಯಿತು: "ನೀವು ಕೋಪವನ್ನು ಉಪೇಕ್ಷಿಸಿರಿ." ಸಿಟ್ಟು ಮಾಡಬಾರದೆಂದು ಯಾವಾಗಲೂ ನೆನಪಿನಲ್ಲಿರಿಸಿದರೆ ದ್ವೇಷ ಮತ್ತು ಹಗೆತನ ತಾನಾಗಿಯೇ ಹೊರಟು ಹೋಗುವುದು.

ಬೇರೆಯವರಿಗೆ ಹಾನಿಯನ್ನುಂಟುಮಾಡಿ ಅವರಿಗೆ ನೋವನ್ನುಂಟು ಮಾಡುವ ಇನ್ನೊಂದು ಕೆಲಸ ಒಬ್ಬ ಮಾಡಿದ ವ್ಯಾಪಾರವನ್ನು ಹಾಳು ಮಾಡಲು ಅದರ ಮೇಲೆ ಪುನಃ ವ್ಯಾಪಾರ ಮಾಡುವುದಾಗಿದೆ. ಹದೀಸಿನಲ್ಲಿ ಇದನ್ನು ವಿರೋಧಿಸಲಾಗಿದೆ. ಒಬ್ಬ ಖರೀದಿಸಿದ ವಸ್ತುವನ್ನು ಹೆಚ್ಚು ಬೆಲೆ ನೀಡಿ ಖರೀದಿಸಿ ಮೊದಲು ವ್ಯಾಪಾರ ಮಾಡಿದವನ ವ್ಯಾಪಾರವನ್ನು ಹಾಳು ಮಾಡುವುದು. ಹೀಗೆ ಮಾಡುವವರಿಗೆ ಸ್ವಂತ ಲಾಭವೇನೂ ಇರುವುದಿಲ್ಲ. ಇಲ್ಲಿ ಇನ್ನೊಂದು ಸಂಗತಿಯನ್ನು ಸಹ ಸೂಚಿಸಲು ಬಯಸುತ್ತೇನೆ. ಒಬ್ಬನು ವಿವಾಹ ಸಂಬಂಧದ ಬಗ್ಗೆ ಸಂದೇಶವನ್ನು ಕಳುಹಿಸಿದ ಸಂದರ್ಭದಲ್ಲಿ ಅಲ್ಲಿಗೆಯೇ ಇನ್ನೊಂದು ಸಂದೇಶ ಕಳುಹಿಸುವುದು ನಿಷಿದ್ಧವಾಗಿದೆ. ಅಹ್ಮದಿಯರು ಹೀಗೆ ಮಾಡಬಾರದು.

ದೌರ್ಜನ್ಯ ಮಾಡಬಾರದೆಂದು ಸಹ ಈ ಹದೀಸಿನಲ್ಲಿ ಹೇಳಲಾಗಿದೆ. ಯಾರನ್ನೂ ತಾತ್ಸಾರ ಭಾವದಿಂದ ಕಾಣಬಾರದೆಂದೂ ಯಾರನ್ನೂ ಹೀನೈಸಬಾರದೆಂದೂ ಹೇಳಲಾಗಿದೆ. ದೌರ್ಜನ್ಯಗಾರನು ಎಂದೂ ಅಲ್ಲಾಹನ ಸಾಮೀಪ್ಯವನ್ನು ಗಳಿಸಲಾರನು. ನೀವು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಬೈಅತ್ ಮಾಡಿ ಅಲ್ಲಾಹನು ನೇಮಿಸಿದ ಮಹಾನುಭಾವರನ್ನು ನಂಬುತ್ತಿರುವಾಗ

ನೀವು ದೌರ್ಜನ್ಯ ಮಾಡಿ ಅನ್ಯರ ಹಕ್ಕುಗಳನ್ನು ಅನ್ಯಾಯದಿಂದ ಸ್ವಾಧೀನ ಪಡಿಸಿಕೊಳ್ಳುವುದು ಹೇಗೆ ತಾನೆ ಸರಿಯಾಗುವುದು? ಸಹೋದರರಿಗೆ ಅವರ ಹಕ್ಕುಗಳನ್ನು ಕೊಡದಿರುವುದು, ಸಹೋದರಿಯರಿಗೆ ಅವರು ಬೇರೆ ಕುಟುಂಬದಲ್ಲಿ ಮದುವೆಯಾದ ಕಾರಣ ತಮ್ಮ ಪಿತ್ರಾರ್ಜಿತ ಸ್ವತ್ತು ಅನ್ಯ ಕುಟುಂಬಕ್ಕೆ ಹೋಗುವುದು ಎಂಬ ಭಯದಿಂದ ಹಕ್ಕುಗಳನ್ನು ಕೊಡದಿರುವುದು. ಇದು ಗ್ರಾಮಗಳಲ್ಲಿ ಇರುವ ಸಂಪ್ರದಾಯವಾಗಿದೆ. ಪತ್ನಿಯರಿಗೆ ಹಿಂಸೆ ನೀಡುವುದು, ಅವರ ಹಕ್ಕುಗಳ ಬಗ್ಗೆ ನಿರಾಸಕ್ತಿ, ಪತ್ನಿಯರು ತಮ್ಮ ಪತಿಯಂದಿರ ಹಕ್ಕುಗಳ ಬಗ್ಗೆ ನಿರಾಸಕ್ತಿ – ದೈನಂದಿನ ಜೀವಿತದಲ್ಲಿ ಇಂತಹ ಸಂಗತಿಗಳು ಪ್ರಕಟವಾಗುತ್ತವೆ. ಅವು ದೌರ್ಜನ್ಯದ ಗುಂಪಿಗೆ ಸೇರುತ್ತವೆ.

ಇಂತಹ ಹಲವು ಘಟನೆಗಳು ನಡೆಯುತ್ತವೆ. ಅದರ ಮೂಲಕ ಇತರರನ್ನು ತಾತ್ಸಾರ ಭಾವದಿಂದ ಕಾಣುವುದು ಸ್ಪಷ್ಟವಾಗುತ್ತದೆ. ಒಂದು ಕಡೆ ಬೈಅತ್ ಮಾಡಿ ಎಲ್ಲ ಕೆಡುಕುಗಳನ್ನು ಬಿಟ್ಟುಬಿಡುವುದಾಗಿ ಪ್ರತಿಜ್ಞೆ, ಇನ್ನೊಂದು ಕಡೆ ಈ ರೀತಿಯ ವರ್ತನೆ. ಒಬ್ಬ ಮುಸ್ಲಿಮನು ಇನ್ನೊಬ್ಬನನ್ನು ತಾತ್ಸಾರ ಭಾವದಿಂದ ಕಾಣಬಾರದೆಂಬ ಸ್ಪಷ್ಟವಾದ ಆಜ್ಞೆಯಿದೆ. ಇದೇ ರೀತಿ ಇನ್ನೊಬ್ಬ ಮುಸ್ಲಿಮನ ರಕ್ತ, ಸಂಪತ್ತು, ಗೌರವವೂ ನಿಷಿದ್ಧವಾಗಿದೆ. ನೀವು ಈ ಕಾಲದಲ್ಲಿ ಅಲ್ಲಾಹನಿಂದ ನೇಮಿಸಲ್ಪಟ್ಟವರನ್ನು ನಂಬಿ ಇಸ್ಲಾಮಿನ ಉಪದೇಶಗಳನ್ನು ಎಲ್ಲರಿಗಿಂತ ಹೆಚ್ಚು ನಿಷ್ಠೆಯಿಂದ ಪಾಲಿಸುವಿರಾಗಿ ವಾದಿಸುತ್ತೀರಿ. ನೀವು ಮೇಲೆ ವಿವರಿಸಿದ ರೀತಿಯಲ್ಲಿ ವರ್ತಿಸುವುದನ್ನು ಸಹಿಸಲು ಹೇಗೆ ತಾನೆ ಸಾಧ್ಯ? ಹೀಗೆ ವರ್ತಿಸಿದ ನಂತರ ಸಹ ನೀವು ಹಝ್ರತ್ ಮಸೀಹ್ ಮೌಊದರ[ಅ] ಜಮಾಅತಿನಲ್ಲಿ ಸೇರಿರುವುದಾದರೂ ಹೇಗೆ? ಈ ಸಂಗತಿಗಳನ್ನು ಹಗುರವಾಗಿ ಗಣಿಸದೆ ಹಝ್ರತ್ ರಸೂಲುಲ್ಲಾಹ್‌ರ[ಸ] ಶಿಷ್ಯರು ಹೇಗೆ ವರ್ತಿಸುತ್ತಿದ್ದರು ಮತ್ತು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಅವರು ತಮ್ಮಲ್ಲಿ ಎಂತಹ ಬದಲಾವಣೆಗಳನ್ನು ಉಂಟುಮಾಡಿದರು ಎಂದು ನೋಡಿರಿ. ಇದರ ಬಗ್ಗೆ ಕೆಲವು ಹದೀಸುಗಳನ್ನು ವಿವರಿಸುತ್ತೇನೆ:

> ಹಝ್ರತ್ ಅಬೂಧ಼ರ್ ಗಫ಼ಾರಿ[ರ] ವರದಿ ಮಾಡುತ್ತಾರೆ: ಅವರು ತನ್ನ ಒಂದು ಕೊಳದಿಂದ ಅನ್ಯರಿಗೆ ನೀರನ್ನು ಕೊಡುತ್ತಿದ್ದರು. ಒಂದು ಕುಟುಂಬಕ್ಕೆ ಸೇರಿದ ಕೆಲವರು ಅವರ ಬಳಿಗೆ ಬಂದರು. ಅವರಲ್ಲಿ ಒಬ್ಬನು ಹೇಳಿದನು: ನಿಮ್ಮ ಪೈಕಿ ಯಾರು ಅಬೂಧ಼ರ್ ಬಳಿಗೆ ಹೋಗಿ ಅವರ ತಲೆಗೂದಲು ಹಿಡಿದು ಎಳೆಯುವರು? ಒಬ್ಬನು ಹೇಳಿದನು: ನಾನು ಹಾಗೆ ಮಾಡುವೆನು. ಆ ವ್ಯಕ್ತಿ ಕೊಳದ ಬಳಿಗೆ ಹೋಗಿ ಅಬೂಧ಼ರ್‌ರಿಗೆ ತೊಂದರೆ ಕೊಡಲು ತೊಡಗಿದನು. ಆಗ ನಿಂತಿದ್ದ ಅಬೂಧ಼ರ್ ಕುಳಿತರು, ಅನಂತರ ಮಲಗಿದರು. ಆಗ ವ್ಯಕ್ತಿ ಕೇಳಿದನು: ನೀವು ಏಕೆ ಮೊದಲು ಕುಳಿತಿರಿ? ಅನಂತರ ಮಲಗಿದಿರಿ? ಆಗ ಅಬೂಧ಼ರ್ ಹೇಳಿದರು: ಹಝ್ರತ್ ರಸೂಲುಲ್ಲಾಹ್[ಸ] ನಮಗೆ ಹೀಗೆ ಉಪದೇಶಿಸಿದ್ದರು: ನಿಮ್ಮಲ್ಲಿ ಯಾರಿಗಾದರೂ ಕೋಪ ಬಂದರೆ

ಆಗ ಆತ ನಿಂತಿದ್ದರೆ ಕುಳಿತುಕೊಳ್ಳಬೇಕು. ಆಗ ಕೋಪ ಹೊರಟು ಹೋದರೆ ಸರಿ, ಇಲ್ಲದಿದ್ದರೆ ಮಲಗಬೇಕು.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್; ಸಂಪುಟ 5)**

ಇನ್ನೊಂದು ಹದೀಸಿನಲ್ಲಿ ವರದಿಗಾರರು ಹೀಗೆ ಹೇಳುತ್ತಾರೆ: ನಾವು ಉರ್ವ ಬಿನ್ ಮುಹಮ್ಮದ್‌ರ ಸಮೀಪ ಕುಳಿತಿದ್ದೆವು. ಅವರ ಸಮೀಪ ಒಬ್ಬ ಬಂದು ಅವರಿಗೆ ಕೋಪ ಹುಟ್ಟಿಸುವಂತಹ ಮಾತನ್ನಾಡಿದಾಗ ಅವರಿಗೆ ತೀವ್ರವಾಗಿ ಕೋಪ ಬಂತು. ಆಗ ಅವರು ಎದ್ದು ನಿಂತು ವುಝು ಮಾಡಿದ ನಂತರ ನಮ್ಮ ಬಳಿಗೆ ಮರಳಿ ಬಂದರು. ಅವರು ಹೇಳಿದರು – ನನ್ನ ತಂದೆಯವರು ಹಝ್ರತ್ ರಸೂಲುಲ್ಲಾಹ್‌ರ[ಸ] ಶಿಷ್ಯರಾದ ನನ್ನ ಅಜ್ಜನವರಾದ ಅತಿಯ್ಯರ ಮೂಲಕ ತಿಳಿದ ಸಂಗತಿ ಹೇಳಿದ್ದಾರೆ. ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಸಿಟ್ಟು ಶೈತಾನನ ಕಡೆಯಿಂದ ಬರುತ್ತದೆ. ಶೈತಾನನನ್ನು ಬೆಂಕಿಯಿಂದ ಸೃಷ್ಟಿಸಲಾಗಿದೆ. ಬೆಂಕಿಯನ್ನು ನೀರಿನ ಮೂಲಕ ನಂದಿಸಲಾಗುವುದು. ಆದುದರಿಂದ ನಿಮ್ಮವರಲ್ಲಿ ಯಾರಿಗಾದರೂ ಸಿಟ್ಟು ಬಂದರೆ ಅವನು ವುಝು ಮಾಡಬೇಕು.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ 4)**

ಹಝ್ರತ್ ಝಿಯಾದ್ ತನ್ನ ಚಿಕ್ಕಪ್ಪ ಉತ್‌ಬ[ರ] ಅವರಿಂದ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೀಗೆ ದುಆ ಮಾಡುತ್ತಿದ್ದರು: ಹೇ ಅಲ್ಲಾಹ್ ಕೆಟ್ಟ ಸ್ವಭಾವದಿಂದ, ಕೆಟ್ಟ ಕೆಲಸಗಳಿಂದ ಮತ್ತು ಕೆಟ್ಟ ಆಶೆಗಳಿಂದ ರಕ್ಷಣೆಗಾಗಿ ನಿನ್ನ ಅಭಯವನ್ನು ಯಾಚಿಸುತ್ತೇನೆ.

**(ತಿರ್‌ಮಿಧೀ)**

ಹಝ್ರತ್ ಮಸೀಹ್ ಮೌಊದ್[ಅ] ಈ ಬಗ್ಗೆ ಹೇಳುತ್ತಾರೆ:

ಇಲ್ಲಿ ಹಾಜರಿರುವ ಅಥವಾ ತಮ್ಮ ಸ್ಥಳಗಳಲ್ಲಿ ವಾಸವಿರುವ ನನ್ನ ಎಲ್ಲ ಅನುಯಾಯಿಗಳು ನನ್ನ ಈ ಉಪದೇಶವನ್ನು ಗಮನವಿಟ್ಟು ಆಲಿಸಲಿ. ಅವರು ಈ ಜಮಾಅತಿನಲ್ಲಿ ಸೇರಿ ನನ್ನ ಶಿಷ್ಯಸಂಬಂಧ ಹೊಂದಿದ್ದಾರೆ. ಅದರ ಉದ್ದೇಶವೇನೆಂದರೆ, ಅವರು ಉತ್ತಮ ನಡೆವಳಿಕೆ ಹೊಂದಿದವರೂ ಸಭ್ಯರೂ ಭಯಭಕ್ತಿಯ ಉನ್ನತ ಪದವಿಗೆ ತಲಪಿದವರೂ ಆಗಬೇಕು. ಯಾವುದೇ ರೀತಿಯ ಶಾಂತಿಭಂಗ, ಉದ್ಧಟ ವರ್ತನೆ ಮತ್ತು ಕೆಟ್ಟ ಕೃತ್ಯ ಅವರ ಸಮೀಪ ಬರಲು ಸಾಧ್ಯವಾಗಬಾರದು. ಅವರು ಐದು ಹೊತ್ತಿನ ನಮಾಝನ್ನು ಸಾಮೂಹಿಕವಾಗಿ ಅನುಷ್ಠಿಸುವವರಾಗಬೇಕು. ಅವರು ಸುಳ್ಳು ಹೇಳಬಾರದು. ಅವರು ಯಾರಿಗೂ ನಾಲಗೆಯಿಂದ ನೋವನ್ನುಂಟುಮಾಡಬಾರದು. ಅವರು ಯಾವುದೇ ಕೆಟ್ಟ ಕೆಲಸ ಮಾಡುವವರಾಗಬಾರದು. ಯಾವುದೇ ರೀತಿಯ ಉದ್ಧಟ ವರ್ತನೆ, ದೌರ್ಜನ್ಯ ಮತ್ತು ಗಲಭೆ – ಗೊಂದಲ ಮೊದಲಾದವುಗಳ

ಯೋಚನೆ ಕೂಡ ಅವರ ಹೃದಯಗಳಲ್ಲಿ ಉಂಟಾಗಬಾರದು. ಒಟ್ಟಿನಲ್ಲಿ ಎಲ್ಲ ರೀತಿಯ ಪಾಪಗಳು ಮತ್ತು ಅಪರಾಧಗಳು, ಅಹಿತಕರ ಕೆಲಸ, ಅಹಿತಕರ ಮಾತು, ಎಲ್ಲ ರೀತಿಯ ಶಾರೀರಿಕ ಉದ್ರೇಕಗಳು, ಅನಾವಶ್ಯಕ ಕೃತ್ಯಗಳು ಮೊದಲಾದವುಗಳಿಂದ ತಮ್ಮನ್ನು ತಡೆಗಟ್ಟಬೇಕು. ಅವರು ಪರಿಶುದ್ಧ ಹೃದಯರು ಮತ್ತು ಯಾವುದೇ ಕೇಡುಂಟುಮಾಡದ ವಿನೀತರಾದ ದಾಸರಾಗಲಿ. ಯಾವುದೇ ವಿಷದ ಅಂಶವು ಅವರಲ್ಲಿ ಇಲ್ಲದಿರಲಿ... ಎಲ್ಲ ಮನುಷ್ಯರ ಬಗ್ಗೆ ಸಹಾನುಭೂತಿ ಅವರ ಸಿದ್ಧಾಂತವಾಗಲಿ. ಅವರು ಅಲ್ಲಾಹನಿಗೆ ಭಯಪಡಲಿ. ಅವರು ತಮ್ಮ ನಾಲಗೆ, ಕೈ ಮತ್ತು ಹೃದಯದ ಯೋಚನೆಗಳನ್ನು ಎಲ್ಲ ವಿಧಗಳ ಕೊಳಕು ಮತ್ತು ಶಾಂತಿಭಂಗಕರ ರೀತಿಗಳಿಂದ ಹಾಗೂ ವಿಶ್ವಾಸವಂಚನೆಯಿಂದ ರಕ್ಷಿಸಿಕೊಳ್ಳಲಿ. ಐದು ಹೊತ್ತಿನ ನಮಾಝನ್ನು ನಿಯತವಾಗಿ ಅನುಷ್ಠಿಸಲಿ. ದೌರ್ಜನ್ಯ, ಅತಿರೇಕ ವರ್ತನೆ, ಧನಾಪಹಾರ ಮತ್ತು ಲಂಚ, ಹಕ್ಕುಗಳ ಧ್ವಂಸ, ಅನಾವಶ್ಯಕ ಪಕ್ಷಪಾತ ಮೊದಲಾದವುಗಳಿಂದ ದೂರಸರಿಯಲಿ. ಕೆಟ್ಟ ಜನರೊಂದಿಗೆ ಕುಳಿತುಕೊಳ್ಳದಿರಲಿ. ನಿಮ್ಮೊಂದಿಗೆ ನಿರಂತರ ಸಂಪರ್ಕವಿರುವ ವ್ಯಕ್ತಿಯು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವನಲ್ಲ ಎಂದು ಕಾಲಕ್ರಮೇಣ ಸಾಬೀತಾದರೆ..... ಅಥವಾ ಜನರ ಹಕ್ಕುಗಳ ಬಗ್ಗೆ ಯಾವುದೇ ಪರಿವೆ ಇಲ್ಲದವನಾಗಿದ್ದರೆ, ದೌರ್ಜನ್ಯಗಾರ, ಅಕ್ರಮಿ ಮತ್ತು ಕೆಟ್ಟ ಸ್ವಭಾವದವನಾಗಿದ್ದರೆ ಮತ್ತು ನೀವು ಯಾರ ಬೈಅತ್ ಮಾಡಿ ಅವರ ಶಿಷ್ಯರಾಗಿರುವಿರೋ ಅವರ ಬಗ್ಗೆ ಅನ್ಯಾಯದಿಂದ ವಿನಾಕಾರಣ ಬೈಯುವನಾದರೆ, ಸುಳ್ಳು ಆರೋಪ ಮಾಡುವನಾದರೆ, ಸುಳ್ಳು ಸೃಷ್ಟಿಸುವನಾದರೆ ಮತ್ತು ಜನರಿಗೆ ಮೋಸ ಮಾಡಲು ಉದ್ದೇಶಿಸುವನಾದರೆ ಅಂತಹ ಕೆಟ್ಟ ವ್ಯಕ್ತಿಯನ್ನು ನಿಮ್ಮ ಮಧ್ಯದಿಂದ ದೂರಸರಿಸುವುದು ಆವಶ್ಯಕವಾಗುತ್ತದೆ. ಅಂತಹ ಅಪಾಯಕಾರಿ ವ್ಯಕ್ತಿಯಿಂದ ದೂರಸರಿಯಿರಿ.

ಯಾವುದೇ ಧರ್ಮದ ಯಾವುದೇ ಜನಾಂಗದ ಯಾವುದೇ ಗುಂಪಿನ ಜನರಿಗೆ ಹಾನಿ ಉಂಟುಮಾಡುವ ನಿರ್ಧಾರ ಮಾಡಬೇಡಿರಿ. ಪ್ರತಿಯೊಬ್ಬರಿಗೆ ಸತ್ಯಸಂಧವಾದ ಸದುಪದೇಶ ನೀಡುವವರಾಗಿರಿ. ಅಕ್ರಮಿಗಳಿಗೂ ಪುಂಡರಿಗೂ ಕಲಹ ಉಂಟುಮಾಡುವವರಿಗೂ ಕೆಟ್ಟ ನಡತೆಯುಳ್ಳವರಿಗೂ ಖಂಡಿತವಾಗಿಯೂ ನಿಮ್ಮ ಸಮಾವೇಶಗಳಲ್ಲಿ ಭಾಗವಹಿಸಲು ಬಿಡಬಾರದು. ಅಂತಹ ಜನರು ನಿಮ್ಮ ಮನೆಗಳಲ್ಲಿ ವಾಸಿಸಬಾರದು. ಯಾವುದೇ ಸಮಯದಲ್ಲಿ ನೀವು ಮುಗ್ಗರಿಸಿ ಬೀಳುವಂತೆ ಅವರು ಮಾಡಬಹುದು.

ಇವೆಲ್ಲ ನಾನು ಆರಂಭದಿಂದಲೇ ಹೇಳುತ್ತಾ ಇದ್ದ ಶರತ್ತುಗಳಾಗಿವೆ. ನನ್ನ ಜಮಾಅತಿಗೆ ಸೇರಿದ ಪ್ರತಿಯೊಬ್ಬನು ನನ್ನ ಎಲ್ಲ ಉಪದೇಶಗಳನ್ನು ಅನುಸರಿಸಬೇಕು. ನಿಮ್ಮ ಸಭೆಗಳಲ್ಲಿ ಯಾವುದೇ ಕೊಳಕು ವರ್ತನೆ, ಗೇಲಿಮಾತು ಮತ್ತು ಪರಿಹಾಸ ಇರಬಾರದು. ಒಳ್ಳೆಯ ಹೃದಯ, ಪರಿಶುದ್ಧ ಸ್ವಭಾವ, ಪರಿಶುದ್ಧ ಯೋಚನೆಯೊಂದಿಗೆ ನಡೆಯಿರಿ. ಪ್ರತಿಯೊಂದು ಕೆಡುಕು

ಎದುರಿಸಲು ಯೋಗ್ಯವಾಗಿರುವುದಿಲ್ಲ ಎಂದು ನೆನಪಿಡಿರಿ. ಆದುದರಿಂದ ಬಹುತೇಕ ಸಮಯ ಕ್ಷಮೆ ಮತ್ತು ಕಡೆಗಣಿಸುವಿಕೆ ಅಭ್ಯಾಸ ಮಾಡಿಕೊಳ್ಳಿರಿ. ಸಹನೆ ಮತ್ತು ತಾಳ್ಮೆಯಿಂದ ವರ್ತಿಸಿರಿ. ಯಾರನ್ನೂ ಅನ್ಯಾಯವಾಗಿ ಆಕ್ರಮಿಸಬೇಡಿರಿ. ನಿಮ್ಮ ಶಾರೀರಿಕ ಭಾವೋದ್ರೇಕಗಳನ್ನು ಹತೋಟಿಯಲ್ಲಿರಿಸಿರಿ. ಯಾವುದೇ ಧಾರ್ಮಿಕ ವಾದಪ್ರತಿವಾದ ನಡೆಯುವುದಾದರೆ ಅಥವಾ ಯಾವುದೇ ಧಾರ್ಮಿಕ ಮಾತುಕತೆ ನಡೆಸುವುದಾದರೆ ಸೌಮ್ಯ ಮತ್ತು ಸಭ್ಯ ರೀತಿಯಲ್ಲಿ ವರ್ತಿಸಿರಿ. ಯಾರಾದರೂ ಅಜ್ಞಾನದಿಂದ ವರ್ತಿಸುವರಾದರೆ ಸಲಾಮ್ ಹೇಳಿ ಅಂತಹ ಸಭೆಗಳಿಂದ ಎದ್ದು ಹೋಗಿರಿ. ನಿಮ್ಮನ್ನು ಸತಾಯಿಸಿದರೆ, ನಿಮ್ಮನ್ನು ಬೈಯುತ್ತಾ ಇದ್ದರೆ, ನಿಮ್ಮ ಬಗ್ಗೆ ಕೆಟ್ಟ ಮಾತುಗಳನ್ನು ಆಡುತ್ತಿದ್ದರೆ ನೀವು ಜಾಗರೂಕರಾಗಿರಿ. ನೀವು ಮೌಢ್ಯವನ್ನು ಮೌಢ್ಯದಿಂದ ಎದುರಿಸಬೇಡಿರಿ. ಹಾಗೆ ಎದುರಿಸಿದರೆ ನೀವು ಸಹ ಅವರ ಹಾಗೆಯೇ ಗಣಿಸಲ್ಪಡುವಿರಿ. ಅಲ್ಲಾಹನು ನಿಮ್ಮನ್ನು ಲೋಕಕ್ಕೆ ಒಳಿತಿನ ಮತ್ತು ಸತ್ಯದ ಮಾದರಿಯಾಗುವಂತಹ ಜಮಾಅತಾಗಿ ಮಾಡಲು ಬಯಸುತ್ತಾನೆ. ಆದುದರಿಂದ ಕೆಟ್ಟ ಸ್ವಭಾವ ಹೊಂದಿದ, ಉದ್ಧಟ ವರ್ತನೆಯ ಕಲಹಗಾರನಾದ ವ್ಯಕ್ತಿಯನ್ನು ನಿಮ್ಮ ಮಧ್ಯದಿಂದ ಕೂಡಲೆ ಹೊರಗೆ ಹಾಕಬೇಕು. ಯಾರು ವಿನೀತರಾಗಿ, ಒಳ್ಳೆಯ ವರ್ತನೆ ಹೊಂದಿ, ಸಾತ್ವಿಕನಾಗಿ ತಾಳ್ಮೆ, ಮೃದು ಮಾತು, ಒಳ್ಳೆಯ ಸ್ವಭಾವ, ಒಳ್ಳೆಯ ಪ್ರಕೃತಿ ಹೊಂದಿ ಜೀವಿಸುವುದಿಲ್ಲವೋ ಅವನು ಬೇಗನೆ ನಮ್ಮಿಂದ ದೂರಸರಿದು ಹೋಗುವನು. ಏಕೆಂದರೆ, ಅಂತಹ ವ್ಯಕ್ತಿ ನಮ್ಮೊಂದಿಗಿರುವುದನ್ನು ಅಲ್ಲಾಹನು ಬಯಸುವುದಿಲ್ಲ. ಅವನು ನಿಶ್ಚಯವಾಗಿಯೂ ಅದೃಷ್ಟಹೀನನಾಗಿ ಸಾಯುವನು. ಏಕೆಂದರೆ ಅವನು ಒಳ್ಳೆಯ ಮಾರ್ಗವನ್ನು ಅವಲಂಬಿಸಿರಲಿಲ್ಲ. ಆದುದರಿಂದ ನೀವು ಜಾಗರೂಕರಾಗಿರಿ. ನೀವು ನಿಜವಾಗಿಯೂ ಒಳ್ಳೆಯ ಹೃದಯವಂತರೂ ವಿನೀತ ಸ್ವಭಾವದವರೂ ಸತ್ಯ ಸಂಧರೂ ಆಗಿರಿ. ನೀವು ಐದು ಹೊತ್ತಿನ ನಮಾಝ್ ಮತ್ತು ನಿಮ್ಮ ಸ್ವಭಾವ ಗುಣದ ಮೂಲಕ ಗುರುತಿಸಲ್ಪಡುವಿರಿ. ಯಾರಲ್ಲಿ ಕೆಡುಕಿನ ಬೀಜವಿದೆಯೋ ಅವನು ಈ ಉಪದೇಶವನ್ನು ಅನುಸರಿಸುವವನಾಗಲಾರನು.

**(ಇಶ್ತಿಹಾರ್ 29/5/1898, ತಬ್ಲೀಗ್ ರಿಸಾಲತ್ – ಸಂಪುಟ 7, ಪುಟ 42 – 43)**

ಅವರು ಪುನಃ ಹೇಳುತ್ತಾರೆ:

ಮನುಷ್ಯನು ಗರ್ವಿಷ್ಠನಾಗಬಾರದು. ನೀವು ನಾಚಿಕೆ ಇಲ್ಲದವರಾಗಬಾರದು. ಅಲ್ಲಾಹನ ಸೃಷ್ಟಿಗಳೊಂದಿಗೆ ಕೆಟ್ಟ ರೀತಿಯಲ್ಲಿ ವರ್ತಿಸಬಾರದು. ಪ್ರೀತಿ ಮತ್ತು ಒಳಿತಿನಿಂದ ವರ್ತಿಸಿರಿ. ನಿಮ್ಮ ಸ್ವಾರ್ಥದ ಕಾರಣದಿಂದ ಯಾರ ವಿರುದ್ಧವೂ ದ್ವೇಷವನ್ನು ಹೊಂದಬೇಡಿರಿ. ಸೌಮ್ಯತೆ ಮತ್ತು ಕಾಠಿಣ್ಯವನ್ನು ಸಂದರ್ಭೋಚಿತವಾಗಿ ತೋರ್ಪಡಿಸಿರಿ.

**(ಮಲ್‌ಫೂಝಾತ್; ಸಂಪುಟ 5, ಪುಟ 609 – ಹೊಸ ಮುದ್ರಣ)**

## ವಿನಯವನ್ನು ಅವಲಂಬಿಸಿರಿ

ವಿನಯಪೂರ್ಣವಾದ ವರ್ತನೆಯ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ಅಲ್ಲಾಹನ ಶಿಕ್ಷೆಯು ಬಂದೆರಗಿ ನೀವು ಪಶ್ಚಾತ್ತಾಪಗೊಂಡು ಅಲ್ಲಾಹನ ಕಡೆಗೆ ತಿರುಗುವ (ಎಂದರೆ ತೌಬ ಮಾಡುವ) ಬಾಗಿಲು ಮುಚ್ಚಲ್ಪಡುವ ಮೊದಲೇ ತೌಬ ಮಾಡಿರಿ. ನೀವು ಲೌಕಿಕ ಸರಕಾರಗಳ ನಿಯಮಗಳಿಗೆ ಹೆದರುತ್ತಾ ಇರುವಾಗ ಅಲ್ಲಾಹನ ನಿಯಮಗಳಿಗೆ ಹೆದರದೆ ಇರುವುದಾದರೂ ಹೇಗೆ? ವಿಪತ್ತು ತಲೆಯ ಮೇಲೆ ಬಂದು ಬೀಳುವಾಗ ಅದರ ರುಚಿಯನ್ನು ಸವಿಯಲೇ ಬೇಕಾಗುತ್ತದೆ. ಪ್ರತಿಯೊಬ್ಬನು ತಹಜ್ಜುದ್ ನಮಾಝ್‌ಗಾಗಿ ಎದ್ದೇಳಲು ಪ್ರಯತ್ನಿಸಬೇಕು. ಐದು ಹೊತ್ತಿನ ನಮಾಝ್‌ಗಳಲ್ಲಿಯೂ ಖುನೂತ್ ದುಆವನ್ನು ಸೇರಿಸಿರಿ. ಅಲ್ಲಾಹನ ಕೋಪಕ್ಕೆ ಕಾರಣವಾಗುವ ಕೃತ್ಯವನ್ನು ಬಿಟ್ಟುಬಿಡಿರಿ ಮತ್ತು ತೌಬ ಮಾಡಿರಿ. ತೌಬ ಎಂದರೆ ಎಲ್ಲ ಕೆಟ್ಟ ಕೆಲಸಗಳನ್ನೂ ಅಲ್ಲಾಹನ ಕೋಪಕ್ಕೆ ಕಾರಣವಾಗುವ ಕೆಲಸಗಳನ್ನೂ ಬಿಟ್ಟು ಒಂದು ಉತ್ತಮ ಬದಲಾವಣೆಯನ್ನು ನಿಮ್ಮಲ್ಲಿ ಉಂಟುಮಾಡಿ ಹೆಜ್ಜೆ ಮುಂದೆ ಹಾಕಿ ತಖ್ವಾವನ್ನು ಅವಲಂಬಿಸುವುದಾಗಿದೆ. ಇದರ ಕಾರಣದಿಂದ ಅಲ್ಲಾಹನು ದಯೆದೋರುತ್ತಾನೆ. ನಿಮ್ಮ ಸ್ವಭಾವಗಳನ್ನು ಅಂದಗೊಳಿಸಿರಿ. ಸಿಟ್ಟು ಇರಬಾರದು. ಅದರ ಸ್ಥಾನ ವಿನಯ ಮತ್ತು ದೈನ್ಯತೆ ಪಡೆದುಕೊಳ್ಳಲಿ. ನಿಮ್ಮ ಸ್ವಭಾವದ ಪರಿಷ್ಕರಣೆಯ ಜೊತೆಯಲ್ಲಿ ನಿಮ್ಮ ಶಕ್ತಿ ಸಾಮರ್ಥ್ಯಕ್ಕೆ ಅನುಸಾರವಾಗಿ ದಾನಧರ್ಮಗಳನ್ನೂ ಕೊಡಿರಿ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ:
>
> وَيُطْعِمُونَ الطَّعَامَ عَلَىٰ حُبِّهِ مِسْكِينًا وَيَتِيمًا وَأَسِيرًا
>
> ಅಲ್ಲಾಹನ ಸಂಪ್ರೀತಿಗೋಸ್ಕರ ಅವರು ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ. **(76:9)**
>
> ಸಂಕ್ಷಿಪ್ತವಾಗಿ ಹೇಳುವುದಾದರೆ, ದುಆ ಮತ್ತು ತೌಬ ಮಾಡುತ್ತಿರಿ. ದಾನಧರ್ಮ ಕೊಡುತ್ತಾ ಇರಿ. ಅಲ್ಲಾಹನು ತನ್ನ ಅನುಗ್ರಹ ಮತ್ತು ಕೃಪೆಯಿಂದ ನಿಮ್ಮೊಂದಿಗೆ ವರ್ತಿಸುವವನಾಗಲಿ.

**(ಮಲ್‌ಫೂಝಾತ್; ಸಂಪುಟ 1, ಪುಟ 134 – ಹೊಸಮುದ್ರಣ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

> ಸ್ನೇಹಿತರೇ, ನೀವು ಈ ಸಿದ್ಧಾಂತವನ್ನು ಬಲವಾಗಿ ಹಿಡಿದುಕೊಳ್ಳಿರಿ. ಪ್ರತಿಯೊಂದು ಸಮುದಾಯದೊಂದಿಗೆ ಮೃದುವಾಗಿ ವರ್ತಿಸಿರಿ. ಮೃದುತ್ವದಿಂದ ಬುದ್ಧಿಯೂ ಬೆಳವಣಿಗೆ ಪಡೆಯುತ್ತದೆ. ನೀವು ತಾಳ್ಮೆದೋರಿದರೆ ಆಳವಾದ ಯೋಚನೆಗಳು

ಉಂಟಾಗುತ್ತವೆ. ಯಾರು ಈ ರೀತಿಯನ್ನು ಅವಲಂಬಿಸುವುದಿಲ್ಲವೋ ಅವನು ನಮ್ಮೊಂದಿಗೆ ಸೇರಿದವನಲ್ಲ. ಶತ್ರುಗಳ ಬೈಗಳನ್ನೂ ಕಠಿಣ ಮಾತುಗಳನ್ನೂ ಕೇಳಿ ನಮ್ಮ ಜಮಾಅತಿಗೆ ಸೇರಿದ ಯಾರಿಗಾದರೂ ಸಹನೆದೋರಲು ಸಾಧ್ಯವಾಗದಿದ್ದರೆ ಅಂತಹ ವ್ಯಕ್ತಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಿ. ಆದರೆ ದೌರ್ಜನ್ಯವನ್ನು ದೌರ್ಜನ್ಯದಿಂದ ಎದುರಿಸಿ ಶಾಂತಿಭಂಗ ಮಾಡಬಾರದು. ಯಾರು ಈ ಉಪದೇಶಗಳ ಪ್ರಕಾರ ನಡೆಯುವುದಿಲ್ಲವೋ ಅವನನ್ನು ನಾವು ನಮ್ಮ ಜಮಾಅತಿನಿಂದ ಹೊರಗೆ ಹಾಕುತ್ತೇವೆ.

**(ತಬ್ಲೀಗ್ ರಿಸಾಲತ್; ಸಂಪುಟ 6, ಪುಟ 170)**

★★★

# ಬೈಅತಿನ ಐದನೆಯ ಶರತ್ತು

**ದುಃಖ ಮತ್ತು ಸುಖ, ಸಂಕಷ್ಟ ಮತ್ತು ಸೌಲಭ್ಯ, ಅನುಗ್ರಹ ಮತ್ತು ಆಪತ್ತು ಎಂಬೀ ಪರಿಸ್ಥಿತಿಗಳಲ್ಲಿ ಅಲ್ಲಾಹನಿಗೆ ನಿಷ್ಠನಾಗಿ ಅವನ ವಿಧಿ ನಿರ್ಣಯಗಳಿಗೆ ತೃಪ್ತನಾಗುವೆನು, ದೇವಮಾರ್ಗದಲ್ಲಿ ಎಲ್ಲ ವಿಧಗಳ ಅಪಮಾನ, ದುಃಖಗಳನ್ನು ಅನುಭವಿಸಲು ಸಿದ್ಧನಾಗುವೆನು ಮತ್ತು ಯಾವುದೇ ವಿಪತ್ತು ಬಂದೆರಗಿದಾಗ ಮುಖ ತಿರುಗಿಸದೆ ಮುಂದಕ್ಕೆ ಹೆಜ್ಜೆ ಇಡುವೆನು.**

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

وَمِنَ النَّاسِ مَنْ يَّشْرِىْ نَفْسَهُ ابْتِغَآءَ مَرْضَاةِ اللّٰهِ ؕ وَاللّٰهُ رَءُوْفٌۢ بِالْعِبَادِ

ಜನರ ಪೈಕಿ ಅಲ್ಲಾಹನ ಪ್ರೀತಿಯನ್ನು ಗಳಿಸುವ ಕಾಂಕ್ಷೆಯಿಂದ ತನ್ನನ್ನು ಮಾರಾಟ ಮಾಡುವಂತಹವನೂ ಇರುತ್ತಾನೆ. ಅಲ್ಲಾಹನು ತನ್ನ ಭಕ್ತ ದಾಸರೊಡನೆ ಹೆಚ್ಚು ಕರುಣೆಯುಳ್ಳವನಾಗಿದ್ದಾನೆ. **(2:208)**

ಈ ವಚನದ ವ್ಯಾಖ್ಯಾನವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಮನುಷ್ಯನಲ್ಲಿ ಅತ್ಯುತ್ತಮ ಪದವಿ ಪಡೆದ, ಅಲ್ಲಾಹನ ಸಂಪ್ರೀತಿಗಾಗಿ ಆತ್ಮ ಸಮರ್ಪಣೆ ಮಾಡಿರುವ ಮನುಷ್ಯನು ತನ್ನ ಜೀವವನ್ನು ಅಲ್ಲಾಹನಿಗೆ ಮಾರಾಟ ಮಾಡಿ ಅದಕ್ಕೆ ಪ್ರತಿಫಲವಾಗಿ ಅಲ್ಲಾಹನ ಪ್ರೀತಿಯನ್ನು ಪಡೆಯುತ್ತಾನೆ. ಇಂತಹ ಜನರ ಮೇಲೆಯೇ ಅಲ್ಲಾಹನ ಕಾರುಣ್ಯವಿರುವುದು..... ಅಲ್ಲಾಹನು ಈ ವಚನದಲ್ಲಿ ಹೀಗೆ ಹೇಳುತ್ತಾನೆ: ನನ್ನ ಪ್ರೀತಿಗಾಗಿ ತನ್ನ ಜೀವನವನ್ನು ಮಾರಾಟ ಮಾಡುವವನು ಎಲ್ಲ ದುಃಖಗಳಿಂದಲೂ ಮುಕ್ತಿ ಪಡೆಯುತ್ತಾನೆ. ಆತ್ಮಾರ್ಪಣೆಯೊಂದಿಗೆ ತಾನು ಅಲ್ಲಾಹನಿಗೆ ಸೇರಿದವನೆಂಬ ಸ್ಥಿತಿಗೆ ಸಾಕ್ಷ್ಯಾಧಾರವನ್ನು ನೀಡುತ್ತಾನೆ. ತನ್ನನ್ನು ಸೃಷ್ಟಿಕರ್ತನ ಅನುಸರಣೆಗೆ ಮತ್ತು ಸೃಷ್ಟಿಗಳ ಸೇವೆಗಾಗಿ ಸೃಷ್ಟಿಸಲಾಗಿದೆ ಎಂದು ಗಣಿಸುತ್ತಾನೆ.....

**(ರಿಪೋರ್ಟ್ ಜಲ್ಸ ಅಲ್‌ಝುಮ್ ಮಝ್ಹಿಬ್, ಪುಟ 131 – 132)**

ಅವರು ಪುನಃ ಹೇಳುತ್ತಾರೆ:

ಅಲ್ಲಾಹನಿಗೆ ಪ್ರಿಯನಾದ ದಾಸನು ತನ್ನ ಜೀವವನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಅವನು ಅಲ್ಲಾಹನ ಪ್ರೀತಿಯನ್ನು ಖರೀದಿಸುತ್ತಾನೆ. ಅಂತಹ ಜನರೇ ಅಲ್ಲಾಹನ ವಿಶಿಷ್ಟ ಕಾರುಣ್ಯಕ್ಕೆ ಪಾತ್ರರಾಗುತ್ತಾರೆ.

**(ರಿಪೋರ್ಟ್ ಜಲ್ಸ ಅಲ್‌ಝುಮ್ ಮಝ್ಹಿಬ್, ಪುಟ 188)**

ಅವರು ಪುನಃ ಹೇಳುತ್ತಾರೆ:

ಕೆಲವರು ತಮ್ಮ ಜೀವವನ್ನು ಅಲ್ಲಾಹನ ಮಾರ್ಗದಲ್ಲಿ ವಿಕ್ರಯಿಸುತ್ತಾರೆ. ಅದಕ್ಕೆ ಪ್ರತಿಯಾಗಿ ಅಲ್ಲಾಹನು ತನ್ನ ಬಗ್ಗೆ ಸಂಪ್ರೀತನಾಗಲಿ ಎಂದು ಬಯಸುತ್ತಾರೆ.

**(ಪೈಗಾಮೆ ಸುಲ್‌ಹ್; ರೂಹಾನೀ ಖಝಾಇನ್, ಸಂಪುಟ 23, ಪುಟ 473)**

ಇಂತಹ ಜನರ ಕುರಿತು ಅಲ್ಲಾಹನು ಶುಭವಾರ್ತೆ ನೀಡುತ್ತಾನೆ:

يَاَيَّتُهَا النَّفْسُ الْمُطْمَئِنَّةُ

ارْجِعِيْٓ اِلٰى رَبِّكِ رَاضِيَةً مَّرْضِيَّةً

فَادْخُلِيْ فِيْ عِبَادِيْ وَادْخُلِيْ جَنَّتِيْ

ಎಲೈ ಶಾಂತಿ ಪಡೆದ ಆತ್ಮವೇ, ನೀನು ಅಲ್ಲಾಹನ ಕಡೆಗೆ ಮರಳು – ನೀನು ಅವನಲ್ಲಿ ಸಂತೃಪ್ತನೂ ಅವನು ನಿನ್ನಲ್ಲಿ ಸಂತೃಪ್ತನೂ ಆದ ಸ್ಥಿತಿಯಲ್ಲಿ. ನನ್ನ ಭಕ್ತದಾಸನೊಂದಿಗೆ ಸೇರಿಕೊಳ್ಳು ಹಾಗೂ ನನ್ನ ಸ್ವರ್ಗದಲ್ಲಿ ಪ್ರವೇಶಿಸಿಕೊಳ್ಳು.

**(89: 28 – 31)**

ಅಲ್ಲಾಹನ ವಿಧಿ ನಿರ್ಣಯದಲ್ಲಿ ತೃಪ್ತರಾಗುವವರಿಗೆ ಮತ್ತು ಅಲ್ಲಾಹನಿಗಾಗಿ ಕಷ್ಟವನ್ನು ಅನುಭವಿಸುವವರಿಗೆ ಅಲ್ಲಾಹನು ಎಂದೂ ಪ್ರತಿಫಲ ನೀಡದೆ ಬಿಟ್ಟು ಬಿಡುವುದಿಲ್ಲ. ನಮ್ಮಲ್ಲಿ ಅನೇಕರು ತಪ್ಪುಗಳ ಮತ್ತು ಬಲಹೀನತೆಗಳ ಮೂರ್ತ ಸ್ವರೂಪವಾಗಿದ್ದಾರೆ. ನಮ್ಮಿಂದ ಅನೇಕ ತಪ್ಪುಗಳೂ ಪಾಪಗಳೂ ಘಟಿಸುತ್ತವೆ. ಆದರೆ ಅಲ್ಲಾಹನ ವಿಧಿ ನಿರ್ಣಯಗಳಲ್ಲಿ ತೃಪ್ತರಾಗುವ ಸ್ವಭಾವದವರಿಗೆ, ಅವನಿಗಾಗಿ ಎಲ್ಲ ಕಷ್ಟಗಳನ್ನೂ ಅನುಭವಿಸಲು ಸಿದ್ಧರಾಗುವವರಿಗೆ ಮತ್ತು ಕಷ್ಟಗಳನ್ನು ಅನುಭವಿಸುವವರಿಗೆ ಸ್ವಲ್ಪ ಹಾನಿ ಸಂಭವಿಸಿದರೂ ಆಕಾಶವನ್ನು ತಲೆಯಲ್ಲಿ ಎತ್ತಿಕೊಳ್ಳುವ ಹಾಗೆ, ಕೂಗಾಡುತ್ತಾ ಗೋಳಿಡುತ್ತಾ ಇರುವ ಸ್ತ್ರೀಯರ ಹಾಗೆ ವರ್ತಿಸದೆ ಸಹನೆದೋರುವವರಿಗೆ ಅಲ್ಲಾಹನ ರಸೂಲ್(ಸ) ಶುಭವಾರ್ತೆ ನೀಡುತ್ತಾರೆ.

## ಕಷ್ಟಗಳು ಪಾಪಗಳಿಗೆ ಪ್ರಾಯಶ್ಚಿತ್ತ

ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಮುಸ್ಲಿಮನಿಗೆ ಯಾವುದಾದರೂ ಕಷ್ಟ, ದುಃಖ, ಗಾಬರಿ ಮೊದಲಾದ ಸಂಕಷ್ಟಗಳು ಮಾತ್ರವಲ್ಲ ಒಂದು ಮುಳ್ಳು ಚುಚ್ಚಿದರೂ ಉಂಟಾಗುವ ನೋವನ್ನು ಕೂಡ ಅಲ್ಲಾಹನು ಅವನ ಪಾಪಗಳಿಗೆ ಪ್ರಾಯಶ್ಚಿತ್ತವನ್ನಾಗಿ ಮಾಡುತ್ತಾನೆ.

**(ಮುಸ್ಲಿಮ್)**

ಒಂದು ಹದೀಸಿನಲ್ಲಿ ಹಝ್ರತ್ ಸುಹೈಬ್ ಬಿನ್ ಸಿನಾನ್(ರ) ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಸತ್ಯವಿಶ್ವಾಸಿಯ ವಿಷಯ ಆಶ್ಚರ್ಯಕರವಾಗಿದೆ. ಅವನ ಎಲ್ಲ ಕೆಲಸಗಳು ಅನುಗ್ರಹಕ್ಕೆ ಪಾತ್ರವಾಗುತ್ತವೆ. ಈ ಅನುಗ್ರಹ ಸತ್ಯವಿಶ್ವಾಸಿಗೆ ಮಾತ್ರ ಮೀಸಲಾಗಿದೆ. ಅವನಿಗೆ ಯಾವುದಾದರೂ ಸಂತೋಷ ಮತ್ತು ಸಂಪನ್ನತೆ ಲಭಿಸಿದರೆ ಅವನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾನೆ. ಅವನ ಕೃತಜ್ಞತೆ ಅರ್ಪಣೆ ಅವನಿಗೆ ಇನ್ನಷ್ಟು ಅನುಗ್ರಹದಾಯಕವಾಗುತ್ತದೆ. ಸತ್ಯವಿಶ್ವಾಸಿಗೆ ಯಾವುದಾದರೂ ದುಃಖ, ಕಷ್ಟ ಅಥವಾ ಹಾನಿ ಸಂಭವಿಸಿದರೆ ಅವನು ಸಹನೆದೋರುತ್ತಾನೆ. ಅವನ ಈ ನಡೆವಳಿಕೆ ಅವನಿಗೆ ಅನುಗ್ರಹದಾಯಕ ವಾಗುತ್ತದೆ. ಏಕೆಂದರೆ ಸಹನೆದೋರಿ ಪುಣ್ಯ ಗಳಿಸುತ್ತಾನೆ.

**(ಮುಸ್ಲಿಮ್)**

ಕೆಲವು ಸಾರಿ ಮಕ್ಕಳ ಮೂಲಕ ಸಹ ಅಲ್ಲಾಹನು ತನ್ನ ದಾಸರನ್ನು ಪರೀಕ್ಷಿಸುತ್ತಾನೆ. ಮಕ್ಕಳು ಮೃತರಾದಾಗ ಬಹಳ ದುಃಖಾಚರಣೆ ಮಾಡಲಾಗುತ್ತದೆ. ವಿಶಿಷ್ಟವಾಗಿ ಸ್ತ್ರೀಯರು ದುಃಖಾಚರಣೆ ಮಾಡುತ್ತಾರೆ. ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಅಹ್ಮದಿಯಾ ಜಮಾಅತಿನಲ್ಲಿ ಬಹಳ ಸಹನೆದೋರುವವರೂ ಅಲ್ಲಾಹನ ಇಷ್ಟದ ಬಗ್ಗೆ ತೃಪ್ತರಾಗುವವರೂ ಆಗಿರುವ ಮಾತೆಯರನ್ನು ಅಲ್ಲಾಹನು ನಮಗೆ ನೀಡಿದ್ದಾನೆ. ಆದರೆ ಕೆಲವು ಸಾರಿ ಕೆಲವೆಡೆಗಳಿಂದ ದೂರುಗಳು ಸಹ ಬರುತ್ತಿವೆ. ವಿದ್ಯಾವಂತರಲ್ಲದ ಮಾತ್ರವಲ್ಲ, ವಿದ್ಯಾವಂತರಾದ ಜನರಲ್ಲೂ ದುಃಖದ ಕಾಲದಲ್ಲಿ ಅಲ್ಲಾಹನನ್ನು ದೂರುವ ಮತ್ತು ಕೃತಜ್ಞತೆ ಅರ್ಪಿಸದೆ ಇರುವ ಸಂಭವಗಳು ನಡೆಯುತ್ತಿವೆ.

ಹಝ್ರತ್ ರಸೂಲುಲ್ಲಾಹ್(ಸ) ಮಹಿಳೆಯರಿಂದ ಬೈಅತ್ ಪ್ರತಿಜ್ಞೆ ಪಡೆಯುವಾಗ ಈ ಕೆಳಗಿನ ವಿಷಯದ ಕುರಿತು ಸಹ ಪ್ರತಿಜ್ಞೆ ಮಾಡಿಸುತ್ತಿದ್ದರು ಎಂದು ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹದೀಸು ಈ ರೀತಿ ಇದೆ:

ಹಝ್ರತ್ ಉಸೈದ ಹಝ್ರತ್ ರಸೂಲುಲ್ಲಾಹ್‌ರಿಗೆ(ಸ) ನೇರವಾಗಿ ಬೈಅತ್ ಮಾಡಿದ "ಸಹಾಬಿಯ" (ಶಿಷ್ಯೆಯಾದ) ಮಹಿಳೆಯಿಂದ ತಿಳಿದು ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಬೈಅತ್ ಪ್ರತಿಜ್ಞೆಯನ್ನು ಈ ಕೆಳಗಿನಂತೆ ಮಾಡಿಸಿದರು: "ನಾವು ಹುಝೂರ್‌ರಿಗೆ ಅವಿಧೇಯರಾಗಲಾರೆವು. ನಾವು ದುಃಖಾಚರಣೆ ಮಾಡುವಾಗ ನಮ್ಮ ಮುಖಗಳನ್ನು ಚಿವುಟಲಾರೆವು, ನಾವು ಗೋಳಾಡುತ್ತಾ ಅಳಲಾರೆವು, ನಾವು ನಮ್ಮ ಮೇಲಂಗಿಯನ್ನು ಹರಿದು ಹಾಕಲಾರೆವು, ನಾವು ನಮ್ಮ ತಲೆಗೂದಲನ್ನು ಬಿಚ್ಚಿ ಬಿಡಲಾರೆವು. (ಅಂದರೆ, ಅತ್ಯಂತ ಗಾಬರಿ, ಅತ್ಯಂತ ಸಹನೆಗೇಡು ಮತ್ತು ನಿರಾಶೆಯನ್ನು ಸೂಚಿಸುವ ಕೃತ್ಯಗಳನ್ನು ಮಾಡಲಾರೆವು).

**(ಅಬೂ ದಾವೂದ್)**

## ನಿಜವಾದ ಸಹನೆ ದುಃಖದ ಆರಂಭದಲ್ಲಿಯೇ ಆಗಬೇಕು

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ)ಒಬ್ಬ ಮಹಿಳೆ ಒಂದು ಗೋರಿಯ ಸಮೀಪ ಕುಳಿತು ಅಳುತ್ತಿರುವುದನ್ನು ಕಂಡರು. ಆಗ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು – ಅಲ್ಲಾಹನಿಗೆ ಭಯಪಡು ಮತ್ತು ಸಹನೆದೋರು. ಆ ಹೆಂಗಸು ಹೇಳಿದಳು: ನೀನು ದೂರ ಹೋಗು, ನಿನ್ನ ದಾರಿಗೆ ಸಾಗು. ನನಗೆ ಸಂಭವಿಸಿದ ವಿಪತ್ತು ನಿನಗೆ ಸಂಭವಿಸಿಲ್ಲ. ಆ ಹೆಂಗಸು ಹಝ್ರತ್ ರಸೂಲುಲ್ಲಾಹ್‌ರನ್ನು(ಸ) ಗುರುತಿಸಿರಲಿಲ್ಲ. (ಈ ಕಾರಣದಿಂದಲೇ ಅವಳು ಧಿಕ್ಕಾರದಿಂದ ಮಾತನಾಡಿದಳು). ಆಕೆಯೊಂದಿಗೆ ಮಾತನಾಡಿದ್ದು ಹಝ್ರತ್ ರಸೂಲುಲ್ಲಾಹ್(ಸ) ಎಂದು ತಿಳಿದಾಗ ಆಕೆ ಗಾಬರಿಗೊಂಡಳು. ಅವಳು ಹಝ್ರತ್ ರಸೂಲುಲ್ಲಾಹ್‌ರ(ಸ) ಮನೆಯ ಬಾಗಿಲಿಗೆ ಬಂದಳು. ಅಲ್ಲಿ ಅವಳನ್ನು ತಡೆಯುವವರು ಯಾರೂ ಇಲ್ಲದ ಕಾರಣ ಅವಳು ಮನೆಯೊಳಗೆ ಹೋಗಿ ಹೇಳಿದಳು: ನಾನು ನಿಮ್ಮನ್ನು ಗುರುತಿಸಿರಲಿಲ್ಲ. ಆಗ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಸಹನೆದೋರಬೇಕಾದುದು ದುಃಖದ ಆರಂಭ ಘಟ್ಟದಲ್ಲಾಗಿದೆ. (ಅಂತಿಮ ಘಟ್ಟದಲ್ಲಿ ಎಲ್ಲರೂ ಅತ್ತು ಗೋಳಾಡಿ ನಂತರ ಸಹನೆದೋರುತ್ತಾರೆ).

**(ಬುಖಾರಿ)**

ಬೈಅತಿನ ಐದನೆಯ ಶರತ್ತಿನಲ್ಲಿ ಒಂದು ಮುಖ್ಯ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಬೈಅತ್ ಮಾಡಿದ ವ್ಯಕ್ತಿ ಯಾವ ಪರಿಸ್ಥಿತಿಯಲ್ಲಿದ್ದರೂ ಕಷ್ಟದಲ್ಲಿದ್ದು ಕೈಯಲ್ಲಿ ಹಣವಿಲ್ಲದಿರುವ ಸ್ಥಿತಿ ದೀರ್ಘವಾಗುತ್ತಾ ಹೋಗುತ್ತಿದ್ದರೂ ಲೌಕಿಕ ಲಾಲಸೆಗಳು ಕಣ್ಣಮುಂದೆ ಇದ್ದರೂ ತಾನು ಇಂತಹ ಕೆಲಸ ಮಾಡಿದರೆ, ಅದರ ಕಡೆಗೆ ಬಾಗಿದರೆ ಬಹಳ ಲಾಭವಾಗುವುದೆಂದು ತೋರುತ್ತಿದ್ದರೂ ಲೌಕಿಕ ಶಕ್ತಿಗಳು ಆಸೆ ಹುಟ್ಟುವಂತೆ ಮಾಡಿ ನೀನು ಹೀಗೆ ಮಾಡಿದರೆ ದೋಷವಿಲ್ಲ ಎಂದು ಸೂಚಿಸುತ್ತಿದೆಯಾದರೂ ಜಮಾಅತಿನೊಂದಿಗೆ ಸಂಬಂಧ ಹೊಂದಿ ಅಹ್ಮದಿ ಆಗಿದ್ದರೂ ಈ ಕೆಲಸ ಮಾಡು, ನೀನು ಹೀಗೆ ಮಾಡಿದರೆ ನಿನ್ನ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಪಡಿಸುವೆ. ಅನಂತರ ಜಮಾಅತಿಗೆ ಚಂದಾ ಕೊಟ್ಟು ಜಮಾಅತಿನ ಸೇವೆಯನ್ನೂ ಮಾಡಬಹುದು ಎಂದೆಲ್ಲ ತೋರಬಹುದು. ಇವೆಲ್ಲ ಜಮಾಅತಿನಿಂದಲೂ ಅಲ್ಲಾಹನಿಂದಲೂ ದೂರಸರಿಸಲು ದಜ್ಜಾಲನ ಪಿತೂರಿಗಳಾಗಿವೆ. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರು – ನೀವು ಬೈಅತ್ ಮಾಡಿದರೆ ಈ ಮೋಸ ಕೃತ್ಯಗಳಿಗೆ ಬಲಿಯಾಗಬೇಡಿರಿ. ಅವುಗಳಿಂದ ದೂರಸರಿಯಿರಿ. ನೀವು ಅಲ್ಲಾಹನೊಂದಿಗೆ ಹೊಂದಿರುವ ನಿಷ್ಠೆಯ ಮಾದರಿ ತೋರಿಸಿರಿ. ಅಲ್ಲಾಹನ ಕಡೆಗೆ ಬಾಗುವಿರಾದರೆ ನನ್ನವರಾಗುವಿರಿ. ಆಗ ನಿಮಗೆ ಎಲ್ಲವೂ ದೊರಕುವುವು.ಇದರ ಬಗ್ಗೆ ಹಝ್ರತ್ ರಸೂಲುಲ್ಲಾಹ್‌ರ(ಸ) ಬಹಳ ಪ್ರಿಯಕರವಾದ ಒಂದು ಉಪದೇಶ ಹೀಗಿದೆ:

ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ – ಒಮ್ಮೆ ನಾನು ಹಝ್ರತ್ ರಸೂಲುಲ್ಲಾಹ್‌ರ(ಸ) ಹಿಂದೆ ಒಂದು ಸವಾರಿ ಮೃಗದ ಮೇಲೆ ಕುಳಿತಿದ್ದಾಗ ಅವರು ಹೇಳಿದರು: ಪ್ರಿಯ ಮಗು, ನಾನು ನಿನಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ನೀನು ಯಾವಾಗಲೂ ಅಲ್ಲಾಹನನ್ನು ನೆನಪಿಸುವಿಯಾದರೆ ಅಲ್ಲಾಹನು ನಿನ್ನನ್ನು ನೆನಪಿಸುವನು. ನೀನು ಅಲ್ಲಾಹನನ್ನು ಗಮನಿಸುವಿಯಾದರೆ ಅವನನ್ನು ನಿನ್ನ ಸಮೀಪ ಕಾಣುವೆ. ನೀನು ಏನನ್ನಾದರೂ ಬೇಡಲಿಕ್ಕಿದ್ದರೆ ಅಲ್ಲಾಹನಲ್ಲಿ ಬೇಡಿಕೊಳ್ಳು. ನೀನು ಸಹಾಯವನ್ನು ಕೋರಲಿಕ್ಕಿದ್ದರೆ ಅಲ್ಲಾಹನಿಂದ ಸಹಾಯವನ್ನು ಕೋರು. ನೀನು ಹೀಗೆ ತಿಳಿದುಕೊಳ್ಳು – ಎಲ್ಲ ಜನರು ಸೇರಿಕೊಂಡು ನಿನಗೆ ಲಾಭವನ್ನು ಉಂಟುಮಾಡಲು ಇಚ್ಛಿಸುವರಾದರೆ ಅಲ್ಲಾಹನು ಹಾಗೆ ಇಚ್ಛಿಸಿ ನಿನ್ನ ಅದೃಷ್ಟದಲ್ಲಿ ಲಾಭವನ್ನು ಬರೆಯುವ ತನಕ ಅವರು ನಿನಗೆ ಯಾವ ಲಾಭವನ್ನೂ ತಲಪಿಸಲಾರರು. ಅವರೆಲ್ಲರೂ ಸೇರಿ ನಿನಗೆ ಹಾನಿಯನ್ನುಂಟುಮಾಡಲು ಇಚ್ಛಿಸುವರಾದರೆ ಅಲ್ಲಾಹನು ನಿನ್ನ ಅದೃಷ್ಟದಲ್ಲಿ ಹಾನಿಯನ್ನು ಬರೆಯುವ ತನಕ ನಿನಗೆ ಅವರು ಹಾನಿಯನ್ನುಂಟುಮಾಡಲು ಸಮರ್ಥರಾಗಲಾರರು. ವಿಧಿ ಬರೆದ ನಂತರ ಲೇಖನಿಗಳನ್ನು ಎತ್ತಿ ಇಡಲಾಗಿದೆ. ಆದ್ದರಿಂದ ಅದೃಷ್ಟದ ಹಾಳೆಗಳು ಶುಷ್ಕವಾದವು.

ಇನ್ನೊಂದು ಹದೀಸಿನಲ್ಲಿ ಹಝ್ರತ್ ರಸೂಲುಲ್ಲಾಹ್(ಸ)ಹೀಗೆ ಹೇಳಿದ್ದಾಗಿ ವರದಿಯಾಗಿದೆ: ನೀನು ಅಲ್ಲಾಹನನ್ನು ಗಮನಿಸುವಿಯಾದರೆ ಅವನನ್ನು ನಿನ್ನ ಸಮೀಪ ಕಾಣುವೆ. ನೀನು ಸುಖದ ಕಾಲದಲ್ಲಿ ಅಲ್ಲಾಹನನ್ನು ನೆನಪಿನಲ್ಲಿಟ್ಟುಕೊಂಡರೆ ಕಷ್ಟದ ಕಾಲದಲ್ಲಿ ಅಲ್ಲಾಹನು ನಿನ್ನ ಬಗ್ಗೆ ನಿಗಾವಹಿಸುವನು. ನಿನ್ನ ಕೈಯಿಂದ ತಪ್ಪಿಹೋದ ಮತ್ತು ನಿನಗೆ ತಲುಪದ ವಸ್ತು ನಿನ್ನ ಅದೃಷ್ಟದಲ್ಲಿ ಸೇರಿರಲಿಲ್ಲ ಎಂದು ತಿಳಿದುಕೊಳ್ಳು. ನಿನಗೆ ಲಭಿಸಿದ್ದು ನಿನಗೆ ಸಿಗದೆ ಇರಲು ಸಾಧ್ಯವಿರಲಿಲ್ಲ. ಏಕೆಂದರೆ ನಿನ್ನ ಅದೃಷ್ಟದಲ್ಲಿ ಹಾಗೆಯೇ ಬರೆಯಲಾಗಿತ್ತು. ನೀನು ತಿಳಿದುಕೊಳ್ಳು, ಅಲ್ಲಾಹನ ಸಹಾಯವು ಸಹನೆದೋರುವವರಿಗೆ ಲಭಿಸುವುದು. ಸಂತೋಷವು ವ್ಯಾಕುಲದೊಂದಿಗೆ ಸೇರಿಕೊಂಡಿದೆ. ಪ್ರತಿಯೊಂದು ಕಷ್ಟದ ನಂತರ ಸುಖವು ಇದೆ.

**(ಸುನನ್ ತಿರ್‌ಮಿಧೀ)**

ಹಝ್ರತ್ ರಸೂಲುಲ್ಲಾಹ್(ಸ) ಅಲ್ಲಾಹನ ಸಂತುಷ್ಟಿಯಿಲ್ಲದೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಆದರೂ ಅವರು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಎಷ್ಟು ನೋವಿನಿಂದ ಪ್ರಾರ್ಥಿಸುತ್ತಾ ಇದ್ದರು ಎಂಬುದನ್ನು ಈ ಕೆಳಗಿನ ಹದೀಸು ಸ್ಪಷ್ಟಪಡಿಸುತ್ತದೆ:

ಮುಹಮ್ಮದ್ ಬಿನ್ ಇಬ್ರಾಹೀಮ್ ವರದಿ ಮಾಡುತ್ತಾರೆ: ಹಝ್ರತ್ ಆಯಿಶಾ(ರ) ಹೇಳಿದರು: ನಾನು ಹಝ್ರತ್ ರಸೂಲುಲ್ಲಾಹ್‌ರ(ಸ) ಪಕ್ಕದಲ್ಲಿ

ಮಲಗಿದ್ದೆನು. ಹಾಸಿಗೆಯಲ್ಲಿ ಅವರು ಇಲ್ಲವೆಂಬುದನ್ನು ಮಧ್ಯ ರಾತ್ರಿಯಲ್ಲಿ ನನಗೆ ಅರಿವಾಯಿತು. ನಾನು ನನ್ನ ಕೈಯನ್ನು ಚಾಚಿ ಹುಡುಕಿದಾಗ ನನ್ನ ಕೈಗಳು ಹುಝೂರ್‌ರ ಪಾದವನ್ನು ಸ್ಪರ್ಶಿಸಿತು. ಅವರು ಸಾಷ್ಟಾಂಗ ಪ್ರಣಾಮ ಮಾಡುತ್ತಾ ಇದ್ದರು. ಅವರು ಹೀಗೆ ಪ್ರಾರ್ಥನೆ ಮಾಡುತ್ತಿದ್ದರು: ಹೇ ಅಲ್ಲಾಹ್, ನಿನ್ನ ಕೋಪದಿಂದ ನಿನ್ನ ಸಂಪ್ರೀತಿಯ ಅಭಯವನ್ನು ಕೋರುತ್ತೇನೆ. ನಿನ್ನ ಶಿಕ್ಷೆಯಿಂದ ನಿನ್ನ ಕ್ಷಮೆಯ ಆಶ್ರಯವನ್ನು ಯಾಚಿಸುತ್ತೇನೆ. ನಾನು ನಿನ್ನ ಸ್ತುತಿಯನ್ನು ಎಣಿಸಲಾರೆ. ನೀನು ನಿನ್ನ ಬಗ್ಗೆ ಹೇಳಿದ ಹಾಗೆಯೇ ನೀನು ಸ್ತುತಿಯನ್ನು ಹೊಂದಿರುವೆ.

(ಸುನನ್ ತಿರ್‌ಮಿಧೀ)

ಒಂದು ಹದೀಸಿನಲ್ಲಿ ಹೀಗೆ ಬರೆದಿದೆ:

ಮದೀನದ ಒಬ್ಬ ವ್ಯಕ್ತಿಗೆ ಹಝ್ರತ್ ಅಬ್ದುಲ್ ವಹ್ಹಾಬ್ ಬಿನ್ ವರೂದ್ ಹೀಗೆ ಹೇಳಿದರು: ಹಝ್ರತ್ ಮುಆವಿಯ(ರ) ಹಝ್ರತ್ ಆಯಿಶಾರಿಗೆ(ರ) ಹೀಗೆ ಬರೆದರು: ನನಗೆ ಏನಾದರೂ ಉಪದೇಶವನ್ನು ಬರೆದು ಕಳುಹಿಸಿರಿ. ಆಗ ಹಝ್ರತ್ ಆಯಿಶಾ(ರ) ಅವರಿಗೆ ಹೀಗೆ ಬರೆದು ಕಳುಹಿಸಿದರು: ಅಸ್ಸಲಾಮು ಅಲೈಕುಮ್. ಹಝ್ರತ್ ರಸೂಲುಲ್ಲಾಹ್(ಸ) ಹೀಗೆ ಹೇಳಿದ್ದನ್ನು ಕೇಳಿದ್ದೇನೆ: ಜನರು ಕೋಪಗೊಂಡರು ಕೂಡ ಯಾರು ಅಲ್ಲಾಹನ ಸಂಪ್ರೀತಿಯನ್ನು ಅಪೇಕ್ಷಿಸುತ್ತಾನೋ ಅಂತಹ ವ್ಯಕ್ತಿಗೆ ಜನರೆದುರಿಗೆ ಅಲ್ಲಾಹನು ಸಾಕು. ಆದರೆ ಯಾರು ಜನರನ್ನು ಸಂತುಷ್ಟಿಪಡಿಸಲು ಅಲ್ಲಾಹನು ಕೋಪಗೊಳ್ಳುವಂತೆ ಮಾಡುತ್ತಾನೋ ಅಂತಹ ವ್ಯಕ್ತಿಯನ್ನು ಅಲ್ಲಾಹನು ಜನರ ಸುಪರ್ದಿಗೆ ಕೊಡುತ್ತಾನೆ.

(ತಿರ್‌ಮಿಧೀ)

## ನೀವು ಅಲ್ಲಾಹನ ಅಂತಿಮ ಜಮಾಅತಾಗಿರುವಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನೊಂದಿಗೆ ನಿಷ್ಠೆಯ ಸಂಬಂಧವನ್ನು ಸ್ಥಾಪಿಸುವ ಕುರಿತು ತನ್ನ ಜಮಾಅತಿಗೆ ಹೀಗೆ ಉಪದೇಶಿಸುತ್ತಾರೆ:

ಹಿಂದಿನ ಕಾಲದಲ್ಲಿ ಸತ್ಯವಿಶ್ವಾಸಿಗಳನ್ನು ಪರೀಕ್ಷಿಸಿದ ಹಾಗೆಯೇ ವಿವಿಧ ರೀತಿಯ ದುಃಖ ಮತ್ತು ಕಷ್ಟಗಳಿಂದ ನಿಮ್ಮನ್ನು ಪರೀಕ್ಷಿಸುವುದು ಸಹ ಆವಶ್ಯಕವಾಗಿದೆ. ಆದುದರಿಂದ ನೀವು ಎಡವಿ ಬೀಳದೆ ಜಾಗರೂಕರಾಗಿರಿ. ನಿಮಗೆ ಆಕಾಶದೊಂದಿಗೆ ದೃಢವಾದ ಸಂಬಂಧವಿದ್ದರೆ ಭೂಮಿಯು ನಿಮಗೆ ಯಾವುದೇ ಹಾನಿ ಉಂಟುಮಾಡಲು ಸಮರ್ಥವಾಗಲಾರದು. ನೀವು ನಿಮಗೆ ನಿಮ್ಮ ಕೈಗಳಿಂದಲೇ ಹಾನಿಯನ್ನು ಉಂಟುಮಾಡುವಿರಿ ಹೊರತು ಶತ್ರುಗಳ

ಕೈಗಳಿಂದಲ್ಲ. ನಿಮ್ಮ ಲೌಕಿಕ ಗೌರವ ಪೂರ್ಣವಾಗಿ ಅಳಿದು ಹೋಗುತ್ತಿದ್ದರೆ ನಿಮಗೆ ಅಲ್ಲಾಹನು ಎಂದೂ ಅಳಿದು ಹೋಗದ ಗೌರವವನ್ನು ಆಕಾಶದಲ್ಲಿ ನೀಡುವನು. ಆದುದರಿಂದ ನೀವು ಅವನನ್ನು ಬಿಟ್ಟು ಬಿಡಬೇಡಿರಿ. ನೀವು ಕಷ್ಟಕ್ಕೊಳಪಡುವುದು ಮತ್ತು ನಿಮ್ಮ ಅನೇಕ ಆಶೆಗಳು ಈಡೇರದೆ ಹೋಗುವುದು ಆವಶ್ಯಕವಾಗಿದೆ. ಹೀಗೆ ಸಂಭವಿಸಿದರೆ ನೀವು ನಿರಾಶರಾಗಬೇಡಿರಿ. ನೀವು ಅಲ್ಲಾಹನ ಮಾರ್ಗದಲ್ಲಿ ಸ್ಥಿರವಾಗಿ ಹೆಜ್ಜೆ ಹಾಕುತ್ತಿರುವಿರೋ ಇಲ್ಲವೋ ಎಂಬುದನ್ನು ಅಲ್ಲಾಹನು ಪರೀಕ್ಷಿಸುತ್ತಾನೆ. ಆಕಾಶದಲ್ಲಿ ದೇವದೂತರು ಸಹ ನಿಮ್ಮನ್ನು ಪ್ರಶಂಸಿಸಬೇಕೆಂದು ನೀವು ಬಯಸುವಿರಾದರೆ ನೀವು ಪೆಟ್ಟುಗಳನ್ನು ತಿಂದು ಸಂತೋಷಪಡಿರಿ. ಬೈಗಳನ್ನು ಆಲಿಸಿ ಅಲ್ಲಾಹನಿಗೆ ಸ್ತುತಿಸಿರಿ. ನೀವು ಸೋಲನ್ನು ಅನುಭವಿಸಿದರೂ ಅಲ್ಲಾಹನೊಂದಿಗಿರುವ ಸಂಬಂಧವನ್ನು ಮುರಿಯಬೇಡಿರಿ. ನೀವು ಅಲ್ಲಾಹನ ಅಂತಿಮ ಜಮಾಅತಾಗಿರುವಿರಿ. ನೀವು ಪರಿಪೂರ್ಣತೆಯಲ್ಲಿ ಅತ್ಯಂತ ಉನ್ನತ ಮಟ್ಟವನ್ನು ತಲಪಿದ ಸತ್ಕಾರ್ಯಗಳನ್ನು ಮಾಡಿರಿ. ನಿಮ್ಮ ಪೈಕಿ ಯಾರು ಉದಾಸೀನ ಭಾವದಿಂದ ವರ್ತಿಸುವನೋ ಅವನು ಒಂದು ಕೊಳೆತ ವಸ್ತುವಿನ ಹಾಗೆ ಹೊರಗೆಸೆಯಲ್ಪಡುವನು. ಅವನು ಪರಿತಪಿಸುತ್ತಾ ಸಾಯುವನು; ಅಲ್ಲಾಹನಿಗೆ ಯಾವ ಹಾನಿಯನ್ನೂ ಉಂಟುಮಾಡಲಾರನು. ನಾನು ಬಹಳ ಸಂತೋಷದಿಂದ ನಿಮಗೆ ತಿಳಿಸುತ್ತೇನೆ. ನಿಮ್ಮ ದೇವನು ನಿಜವಾಗಿಯೂ ಅಸ್ತಿತ್ವದಲ್ಲಿ ಇದ್ದಾನೆ. ಎಲ್ಲರೂ ಅವನ ಸೃಷ್ಟಿಗಳೇ ಆದರೂ ಅವನನ್ನು ಆಯ್ಕೆ ಮಾಡುವವನನ್ನು ಅವನು ತಾನಾಗಿ ಆಯ್ಕೆ ಮಾಡುತ್ತಾನೆ. ಯಾರು ಅಲ್ಲಾಹನ ಬಳಿಗೆ ಹೋಗುತ್ತಾನೋ ಅವನ ಬಳಿಗೆ ಅಲ್ಲಾಹನು ಬರುತ್ತಾನೆ. ಯಾರು ಅವನನ್ನು ಗೌರವಿಸುತ್ತಾನೋ ಅವನಿಗೆ ಅಲ್ಲಾಹನು ಸಹ ಗೌರವ ನೀಡುತ್ತಾನೆ.

**(ಕಿಶ್ತೀ ನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 15)**

ಅವರು ಪುನಃ ಹೀಗೆ ಹೇಳುತ್ತಾರೆ:

ನಾವು ಅಲ್ಲಾಹನ ಸಂಪ್ರೀತಿಯನ್ನು ಗಳಿಸಬೇಕು. ಅದಕ್ಕಾಗಿ ಪ್ರಾಮಾಣಿಕತೆ, ಸತ್ಯ ಮತ್ತು ನಿಷ್ಠೆಯ ಆವಶ್ಯಕತೆ ಇದೆ. ನಮ್ಮ ಧೈರ್ಯ ಮತ್ತು ಪ್ರಯತ್ನ ಕೇವಲ ಮಾತಿಗೆ ಸೀಮಿತವಾಗಬಾರದು. ನಾವು ಅಲ್ಲಾಹನನ್ನು ಸಂಪ್ರೀತಗೊಳಿಸುವಾಗ ಅಲ್ಲಾಹನು ಅನುಗ್ರಹ ನೀಡುತ್ತಾನೆ. ಅವನು ತನ್ನ ಅನುಗ್ರಹಗಳ ಬಾಗಿಲನ್ನು ನಮಗಾಗಿ ತೆರೆಯುತ್ತಾನೆ...... ಸತ್ಯ ಮತ್ತು ನಿಷ್ಠೆಯ ಈ ಇಕ್ಕಟ್ಟಾದ ಬಾಗಿಲಿನಿಂದ ದಾಟಿಹೋಗುವುದು ಸುಲಭವಲ್ಲ. ನಮಗೆ ಸ್ವಪ್ನದರ್ಶನ ಅಥವಾ ದೇವಸಂದೇಶ ಲಭಿಸಿದ ಬಗ್ಗೆ ಹೆಮ್ಮೆಪಟ್ಟುಕೊಂಡು ಕೈಯ ಮೇಲೆ ಕೈ ಹಾಕಿ ಕುಳಿತು ಕೊಂಡಿರುವುದು ಮತ್ತು ಕಠಿಣ ಪರಿಶ್ರಮವನ್ನು ಕೈ ಬಿಡುವುದು ಅಲ್ಲಾಹನು ಇಷ್ಟಪಡುವುದಿಲ್ಲ.

**(ಅಲ್‌ಬದ್ರ್, 8 – 16 ಮೇ 1904)**

ಅವರು ಪುನಃ ಹೀಗೆ ಹೇಳಿದರು:

ಸತ್ಯವಿಶ್ವಾಸಿ ಪ್ರಾಮಾಣಿಕವಾಗಿ ನಿಷ್ಠೆಯಿಂದ ಅಲ್ಲಾಹನಿಗೆ ಸೇರಿದವನಾದರೆ ಅಲ್ಲಾಹನು ಅವನ ಸ್ನೇಹಿತನೂ ರಕ್ಷಕನೂ ಆಗುತ್ತಾನೆ. ಇದು ಪ್ರತಿಯೊಬ್ಬ ಸತ್ಯವಿಶ್ವಾಸಿಯ ಸ್ಥಿತಿಯಾಗಿದೆ. ಆದರೆ ವಿಶ್ವಾಸದ ಕಟ್ಟಡವು ದುರ್ಬಲವಾಗಿದ್ದರೆ ನಿಶ್ಚಯವಾಗಿಯೂ ಅಪಾಯ ಉಂಟಾಗಬಹುದು. ನಮಗೆ ಯಾರದೇ ಹೃದಯದ ಸ್ಥಿತಿಯ ಅರಿವಿಲ್ಲ..... ಆದರೆ ವಿಶಿಷ್ಟವಾಗಿ ಅಲ್ಲಾಹನಿಗೆ ಸೇರಿದವನಾದರೆ ಅಲ್ಲಾಹನು ಅವನನ್ನು ವಿಶಿಷ್ಟವಾಗಿ ಕಾಪಾಡುತ್ತಾನೆ. ಅಲ್ಲಾಹನು ಎಲ್ಲರ ಸೃಷ್ಟಿಕರ್ತನಾದರೂ ತಮ್ಮನ್ನು ಅಲ್ಲಾಹನಿಗೆ ವಿಶಿಷ್ಟವಾಗಿ ಅರ್ಪಿಸುವವನಿಗೆ ಅಲ್ಲಾಹನು ವಿಶಿಷ್ಟವಾಗಿ ಪ್ರಕಾಶ ಬೀರುತ್ತಾನೆ. ಅಲ್ಲಾಹನಿಗೆ ವಿಶಿಷ್ಟವಾಗಿ ಅರ್ಪಿಸುವುದು ಎಂದರೆ ಆತ್ಮವು ಪುಡಿ ಪುಡಿಯಾಗಿ ಅದರ ಯಾವುದೇ ಕಣವು ಬಾಕಿಯಾಗದಿರುವುದಾಗಿದೆ. ಆದುದರಿಂದ ನಾನು ನನ್ನ ಜಮಾಅತಿನವರೊಂದಿಗೆ ಪದೇ ಪದೇ ಹೇಳುತ್ತೇನೆ – ನೀವು ಬೈಅತ್ ಮಾಡಿದುದರ ಬಗ್ಗೆ ಹೆಮ್ಮೆಪಡಬೇಡಿರಿ. ನಿಮ್ಮ ಹೃದಯ ಪರಿಶುದ್ಧವಾಗಿಲ್ಲವಾದರೆ ಕೈಗಳ ಮೇಲೆ ಕೈ ಇರಿಸಿಕೊಳ್ಳುವುದರಿಂದ ದೊರಕುವ ಪ್ರಯೋಜನವೇನಾದರೂ ಏನು?..... ಆದರೆ ಯಾರು ಸತ್ಯಸಂಧವಾಗಿ ಪ್ರತಿಜ್ಞೆ ಮಾಡುತ್ತಾನೋ ಅವನ ದೊಡ್ಡ ದೊಡ್ಡ ಪಾಪದೋಷಗಳು ಕ್ಷಮಿಸಲ್ಪಡುವುವು ಮತ್ತು ಅವನಿಗೆ ನವಜೀವಿತವು ಲಭಿಸುವುದು.

**(ಮಲ್‌ಫೂಝಾತ್; ಸಂಪುಟ 3, ಪುಟ 65 – ಹೊಸಮುದ್ರಣ)**

## ಅವರು ನನ್ನವರು; ನನ್ನಿಂದ ಬೇರೆಯಾಗಲಾರರು

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಯಾರು ನನ್ನ ಹೆಜ್ಜೆ ಗುರುತಿನ ಮೇಲೆ ನಡೆಯಲು ಇಷ್ಟಪಡುವುದಿಲ್ಲವೋ ಅವರು ನನ್ನಿಂದ ಬೇರೆಯಾಗಿ ದೂರಸರಿದು ಹೋಗಲಿ. ಭಯಾನಕವೂ ಮುಳ್ಳುಗಂಟಿಗಳಿಂದ ಕೂಡಿದವೂ ಆಗಿರುವ ಯಾವೆಲ್ಲ ಕಾಡುಗುಡ್ಡಗಳನ್ನು ದಾಟಿಹೋಗಲಿಕ್ಕಿದೆ ಎಂದು ನನಗೇನು ಗೊತ್ತು? ಯಾರ ಪಾದಗಳು ಮೃದುವಾಗಿವೆಯೋ ಅವರು ನನ್ನ ಜೊತೆಗೆ ಏಕೆ ಕಷ್ಟಪಡಬೇಕು? ನನ್ನವರು ನನ್ನಿಂದ ಎಂದೂ ಬೇರೆಯಾಗಿ ಹೋಗಲಾರರು. ಕಷ್ಟದ ಕಾರಣದಿಂದಲೋ, ಜನರ ಅಪಹಾಸ್ಯ ನಿಂದೆಗಳಿಂದಲೋ ಆಕಾಶದಿಂದೆರಗುವ ಪರೀಕ್ಷೆಗಳಿಂದಲೋ ಅವರು ಬೇರೆಯಾಗಲಾರರು. ನನ್ನವರಲ್ಲದವರು ಕೇವಲ ಸ್ನೇಹದ ಸುಳ್ಳು ಪ್ರಕಟಣೆ ಮಾಡುತ್ತಾರೆ. ಅವರು ಬೇಗನೆ ಬೇರ್ಪಡಿಸಲ್ಪಡುವರು. ಅವರ ಮುಂದಿನ ಸ್ಥಿತಿ ಹಿಂದಿನ ಸ್ಥಿತಿಗಿಂತ ಕೆಟ್ಟದಾಗಿರುವುದು. ಏನು ನಾವು ಭೂಕಂಪಗಳಿಂದ ಹೆದರಿ ಹೋಗಲು ಸಾಧ್ಯವೇ? ಏನು ನಾವು ಅಲ್ಲಾಹನ ಮಾರ್ಗದಲ್ಲಿ ಪರೀಕ್ಷೆಗಳನ್ನು ಎದುರಿಸುವಾಗ ಭಯಭೀತರಾಗುವೆವೋ?

ನಾವು ನಮ್ಮ ಪ್ರಿಯ ದೇವನ ಪರೀಕ್ಷೆಗಳಿಂದ ದೇವನಿಂದ ಬೇರೆಯಾಗಲು ಸಾಧ್ಯವೇ? ಖಂಡಿತ ಇಲ್ಲ. ಆದರೆ ಅವನ ಅನುಗ್ರಹದಿಂದ ಮಾತ್ರ. ಆದುದರಿಂದ ಜಮಾಅತಿನಿಂದ ಹೊರಹೋಗುವವರು ಹೊರಹೋಗಲಿ. ಅವರಿಗೆ ವಿದಾಯದ ಸಲಾಮ್. ಆದರೆ ತಿಳಿದಿರಲಿ, ದುರ್ಭಾವನೆ ಮತ್ತು ಸಂಬಂಧ ವಿಚ್ಛೇದದ ನಂತರ ಯಾರಾದರೂ ಮರಳಿದರೆ, ಅವರು ಅಲ್ಲಾಹನ ಸನ್ನಿಧಿಯಲ್ಲಿ ನಿಷ್ಠಾವಂತರು ಪಡೆಯುವ ಗೌರವಕ್ಕೆ ಪಾತ್ರವಾಗಲಾರದು. ಏಕೆಂದರೆ ದುರ್ಭಾವನೆ ಮತ್ತು ವಿದ್ರೋಹದ ಕಳಂಕವು ಬಹಳ ದೊಡ್ಡ ಕಳಂಕವಾಗಿದೆ.

**(ಅನ್‌ವಾರುಲ್ ಇಸ್ಲಾಮ್; ರೂಹಾನೀ ಖಝಾಇನ್, ಸಂಪುಟ 9, ಪುಟ 23 – 24)**

## ಪರಿಪೂರ್ಣ ನಿಷ್ಠೆ ಮತ್ತು ಸ್ಥಿರತೆಯ ಮಾದರಿ ತೋರಿಸಿರಿ

ಇಂದಿಗೆ ನೂರು ವರ್ಷಗಳಷ್ಟು ಹಿಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತದ ಕಾಲದಲ್ಲಿ ಇಬ್ಬರು ಹಿರಿಯ ವ್ಯಕ್ತಿಗಳು ಪರಿಪೂರ್ಣ ನಿಷ್ಠೆ ಮತ್ತು ಸ್ಥಿರತೆಯ ಮಾದರಿಯನ್ನು ತೋರಿಸಿದರು. ಅವರು ತಮ್ಮ ಬೈಅತ್ ಪ್ರತಿಜ್ಞೆಯನ್ನು ಚೆನ್ನಾಗಿ ಈಡೇರಿಸಿದರು. ಬೈಅತ್ ಪ್ರತಿಜ್ಞೆಯನ್ನು ಮುರಿಯಲು ಅವರಿಗೆ ವಿವಿಧ ಪ್ರಲೋಭನೆಗಳನ್ನು ನೀಡಲಾಯಿತು. ಆದರೆ ಸ್ಥಿರಚಿತ್ತತೆಯ ಆ ರಾಜಕುಮಾರರು ಸ್ವಲ್ಪ ಮಾತ್ರವೂ ಶತ್ರುಗಳ ಪ್ರಲೋಭನೆಗಳನ್ನು ಗಮನಿಸಲಿಲ್ಲ ಮತ್ತು ಬೈಅತ್ ಪ್ರತಿಜ್ಞೆಯಲ್ಲಿ ಸ್ಥಿರವಾಗಿ ನಿಂತರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಅತ್ಯುತ್ತಮವಾಗಿ ಪ್ರಶಂಸಿದರು. ಆ ಇಬ್ಬರು ಮಹಾನುಭಾವರು ಹಝ್ರತ್ ಸಾಹಿಬ್‌ಝಾದ ಸಯ್ಯಿದ್ ಅಬ್ದುಲ್ಲತೀಫ್ ಶಹೀದ್(ರ) ಮತ್ತು ಅಬ್ದುರ್ರಹ್ಮಾನ್ ಖಾನ್(ರ) ಅವರಾಗಿರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಬ್ಬರ ಕುರಿತು ಹೀಗೆ ಬರೆದರು:

ವಿಶ್ವಾಸ ಮತ್ತು ನ್ಯಾಯಬದ್ಧವಾಗಿ ಹೀಗೆ ಯೋಚಿಸಬೇಕು – ಯಾವ ಜಮಾಅತಿನ ಅಡಿಪಾಯ ಮೋಸ, ಕುತಂತ್ರ ಮತ್ತು ಸುಳ್ಳು ಸೃಷ್ಟಿಸುವಿಕೆಯಾಗಿದೆಯೋ ಅಂತಹ ಜಮಾಅತಿಗೆ ಸೇರಿದವರು ಸ್ಥಿರತೆಯನ್ನೂ ಶೌರ್ಯವನ್ನೂ ತೋರಿಸಲು ಸಾಧ್ಯವೇ? ಅವರು ತಮ್ಮ ಮಕ್ಕಳ ಮತ್ತು ಪತ್ನಿಯ ಬಗ್ಗೆ ಯಾವುದೇ ಗಮನಹರಿಸದೆ ಕಲ್ಲಿನಿಂದ ಹೊಡೆಯಲ್ಪಡುವುದನ್ನು ತಮ್ಮ ವಿಶ್ವಾಸವನ್ನು ಕೈಬಿಡುವುದಕ್ಕಿಂತ ಉತ್ತಮವೆಂದು ಬಗೆದರು. ಬೈಅತನ್ನು ರದ್ದುಗೊಳಿಸಿದರೆ (ಅಹ್ಮದಿಯ್ಯತನ್ನು ತ್ಯಜಿಸಿದರೆ) ಬಿಡುಗಡೆಗೊಳಿಸಲಾಗುವುದೆಂದು ಪದೇ ಪದೇ ಅವರಿಗೆ ವಾಗ್ದಾನ ನೀಡಲಾದರೂ ಅವರು ತಾವು ಅಂಗೀಕರಿಸಿದ ದಾರಿಯನ್ನು ಬಿಡದೆ ಶೌರ್ಯದಿಂದ ಹುತಾತ್ಮರಾದರು. (ಅವರೇ ಹಝ್ರತ್ ಸಾಹಿಬ್ ಝಾದ ಅಬ್ದುಲ್ಲತೀಫ್ ಶಹೀದ್).

ಇದೇ ರೀತಿ ಶೇಖ್ ಅಬ್ದುರ್ರಹ್ಮಾನ್‌ರನ್ನು ಕಾಬೂಲ್‌ನಲ್ಲಿ ವಧಿಸಲಾಯಿತು.

ಅವರು ಉಸಿರೆತ್ತಲಿಲ್ಲ ಮತ್ತು  ಅಹ್ಮದಿಯ್ಯತನ್ನು ತ್ಯಜಿಸಿತ್ತೇನೆ ಎಂದು ಹೇಳಿ ತನ್ನನ್ನು ಬಿಡುಗಡೆಗೊಳಿಸಬೇಕೆಂದು ಬೇಡಲಿಲ್ಲ.

ಇದೇ ಸತ್ಯವಾದ ಧರ್ಮದ ಮತ್ತು ಸತ್ಯವಾದ ಇಮಾಮರ ಚಿಹ್ನೆಯಾಗಿದೆ. ಯಾರಿಗಾದರೂ ಅದರ ಪೂರ್ಣವಾದ ಜ್ಞಾನ ಲಭಿಸಿ, ಹೃದಯ ಮತ್ತು ದೇಹದಲ್ಲಿ ವಿಶ್ವಾಸದ ಸಿಹಿ ವ್ಯಾಪಿಸಿದರೆ, ಅಂತಹ ಜನರು ಆ ದಾರಿಯಲ್ಲಿ ಮೃತರಾಗಲು ಹೆದರುವುದಿಲ್ಲ. ಯಾರು ಕೇವಲ ಬಾಹ್ಯವಾದ ವಿಶ್ವಾಸ ಹೊಂದಿರುವರೋ ಅವರ ನರನಾಡಿಗಳಲ್ಲಿ ವಿಶ್ವಾಸವು ಪ್ರವೇಶಿಸಿರುವುದಿಲ್ಲ. ಅವರು ಇಸ್ಕರಿಯೋತ ಯೂದನ ಹಾಗೆ ಸ್ವಲ್ಪ ಮಾತ್ರ ಪ್ರಲೋಭನೆಯಿಂದ ಧರ್ಮತ್ಯಾಗ ಮಾಡುತ್ತಾರೆ. ಇಂತಹ ಕೊಳಕು ಧರ್ಮತ್ಯಾಗಿಗಳ ಅನೇಕ ಉದಾಹರಣೆ ಪ್ರತಿಯೊಬ್ಬ ಪ್ರವಾದಿಯ ಕಾಲದಲ್ಲಿ ಸಿಗುತ್ತದೆ. ಪ್ರಾಮಾಣಿಕರ ಒಂದು ದೊಡ್ಡ ಜಮಾಅತ್ ನನ್ನೊಂದಿಗೆ ಇದೆ ಎಂಬುದಕ್ಕೆ ನಾನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಅವರಲ್ಲಿ ಪ್ರತಿಯೊಬ್ಬ ನನಗೊಂದು ಚಿಹ್ನೆ ಆಗಿದ್ದಾನೆ. ಇದು ನನ್ನ ದೇವನ ಅನುಗ್ರಹವಾಗಿದೆ.

**ರಬ್ಬೀ ಇನ್ನಕ ಜನ್ನತೀ, ವ ರಹ್ಮತುಕ ಜುನ್ನತೀ**

**ವ ಆಯಾತುಕ ಗಿಧ಼ಾಯೀ, ವ ಫಝ್ಲುಕ ರಿದಾಯಿ.**

ಹೇ ಪ್ರಭು, ನೀನು ನನ್ನ ಸ್ವರ್ಗವಾಗಿರುವೆ. ನಿನ್ನ ಕರುಣೆ ನನ್ನ ಗುರಾಣಿ ಆಗಿದೆ. ನಿನ್ನ ದೃಷ್ಟಾಂತಗಳು ನನ್ನ ಆಹಾರವಾಗಿದೆ. ನಿನ್ನ ಅನುಗ್ರಹಗಳು ನನ್ನ ಚಾದರವಾಗಿದೆ.

**(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್, ಸಂಪುಟ 22, ಪುಟ 360 – 361)**

ಈ ನಿಷ್ಠೆ ಮತ್ತು ಸ್ಥಿರಚಿತ್ತತೆಯ ಉದಾಹರಣೆಗಳು ಪ್ರಕಟವಾಗುತ್ತಾ ಹೋಗುತ್ತಿವೆ ಎಂಬುದಕ್ಕೆ ಮೇಲಿನ ಸಂಭವಗಳ ನಂತರದ ನೂರು ವರ್ಷಗಳಿಗಿಂತ ಹೆಚ್ಚಿನ ಕಾಲಾವಧಿಯ ಜಮಾಅತಿನ ಚರಿತ್ರೆ ಸಾಕ್ಷ್ಯ ನೀಡುತ್ತದೆ. ಆರ್ಥಿಕ ನಷ್ಟವನ್ನುಂಟುಮಾಡಲಾಯಿತು. ಜೀವಹತ್ಯೆ ನಡೆಯಿತು. ಪುತ್ರನನ್ನು ಪಿತನ ಮುಂದೆ ಹತ್ಯೆ ಮಾಡಲಾಯಿತು. ಪಿತನನ್ನು ಪುತ್ರನ ಮುಂದೆ ಹತ್ಯೆ ಮಾಡಲಾಯಿತು. ನಿಷ್ಠೆಗೆ ಎಲ್ಲರಿಗಿಂತಲೂ ಹೆಚ್ಚು ಪ್ರತಿಫಲ ನೀಡುವ ಅಲ್ಲಾಹನು ಈ ಎಲ್ಲ ಹುತಾತ್ಮರ ರಕ್ತವನ್ನು ನಿರರ್ಥಕಗೊಳಿಸುವನೇ? ಇಲ್ಲ. ಅಲ್ಲಾಹನು ಆ ಹುತಾತ್ಮರ ಪೀಳಿಗೆಗೆ ಪೂರ್ವಾಧಿಕ ಅನುಗ್ರಹಗಳ ಮಳೆಯನ್ನು ಸುರಿಸಿದನು. ಇಲ್ಲಿರುವ ಕೆಲವರು ಮತ್ತು ಲೋಕದ ವಿವಿಧ ದೇಶಗಳಲ್ಲಿ ಹರಡಿರುವ ಹಲವರು ಇದಕ್ಕೆ ದೃಕ್ಸಾಕ್ಷಿಗಳಾಗಿದ್ದಾರೆ. ನಿಮ್ಮಲ್ಲಿ ಅನೇಕರು ಆ ಅನುಗ್ರಹಗಳಿಗೆ ಪಾತ್ರರಾಗಿದ್ದಾರೆ. ಇದು ನೀವು ಅಲ್ಲಾಹನೊಂದಿಗೆ ಇರಿಸಿದ ನಿಷ್ಠೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರೊಂದಿಗೆ ಮಾಡಿದ ಬೈಅತ್ ಪ್ರತಿಜ್ಞೆಯನ್ನು ಸತ್ಯಪಡಿಸಿದುದರ ಫಲವಾಗಿದೆ. ಸುಖ ಸೌಲಭ್ಯದ ಕಾರಣದಿಂದ

ನೀವು ಮತ್ತು ನಿಮ್ಮ ಸಂತಾನ ಈ ಬೈಅತ್ ಪ್ರತಿಜ್ಞೆಯನ್ನು ಮರೆತು ಬಿಡಬೇಡಿರಿ. ನೀವು ಪ್ರಿಯ ದೇವನೊಂದಿಗೆ ಯಾವಾಗಲೂ ನಿಷ್ಠೆಯ ಸಂಬಂಧವನ್ನು ಇರಿಸಿರಿ. ಅದರ ಫಲಸ್ವರೂಪವಾಗಿ ಅಲ್ಲಾಹನ ಅನುಗ್ರಹಗಳು ನಿಮ್ಮ ಪೀಳಿಗೆಗಳಲ್ಲಿ ಸಹ ಸ್ಥಿರವಾಗಿರಲಿ ಮತ್ತು ಈ ನಿಷ್ಠೆಯ ಸಂಬಂಧವನ್ನು ನಿಮ್ಮ ಮುಂದಿನ ಪೀಳಿಗೆಗೆ ಸಹ ವರ್ಗಾಯಿಸುತ್ತಾ ಹೋಗಿರಿ.

★★★

# ಬೈಅತಿನ ಆರನೆಯ ಶರತ್ತು

**ದುರಾಚಾರ ಮತ್ತು ಕೆಟ್ಟ ಅಭಿಲಾಷೆಗಳಿಂದ ದೂರವಿದ್ದು ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಶಿರಬಾಗಿ ಸ್ವೀಕರಿಸುವೆನು ಮತ್ತು ಅಲ್ಲಾಹನ ವಚನಗಳನ್ನೂ ಮುಹಮ್ಮದ್ ರಸೂಲ್‌ರ(ಸ) ನುಡಿಗಳನ್ನೂ ನಿತ್ಯ ಕೃತ್ಯಗಳಿಗೆ ಮಾರ್ಗಸೂಚಿಯನ್ನಾಗಿ ಮಾಡಿಕೊಳ್ಳುವೆನು.**

ದುರಾಚಾರಗಳನ್ನು ಹಿಂಬಾಲಿಸಲಾರೆವು ಎಂದು ನೀವು ಬೈಅತ್ ಪ್ರತಿಜ್ಞೆ ಮಾಡಿರಿ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಅಂತಹ ದುರಾಚಾರಗಳು ನೀವು ವಾಸಿಸುತ್ತಿರುವ ಸಮಾಜದ ಭಾಗವಾದ ಕಾರಣ ನೀವು ಅವುಗಳನ್ನು ಧರ್ಮದಲ್ಲಿ ಸೇರಿಸಿದ್ದೀರಿ. ಅನ್ಯ ಧರ್ಮಗಳಲ್ಲಿ ಆ ಆಚಾರಗಳು ಇದ್ದುದರಿಂದ ನೀವು ಸಹ ಅವುಗಳನ್ನು ಆಚರಣೆ ಮಾಡಲು ತೊಡಗಿದಿರಿ. ಉದಾಹರಣೆಗೆ, ವಿವಾಹದ ಸಂದರ್ಭಗಳಲ್ಲಿ ಕೆಲವು ಅನಾವಶ್ಯಕ ಆಚಾರಗಳಿವೆ. ವರನ ಕಡೆಯವರು ವಧುವಿಗೆ ಕಳುಹಿಸಿದ ಸಾಮಗ್ರಿಗಳನ್ನು ತೋರಿಸುವುದು. ಅನಂತರ ವಧುವಿನ ಕಡೆಯವರು ವಧುವಿಗೆ ಕೊಡುವ ಉಡುಗೊರೆಗಳ ಪ್ರದರ್ಶನ. ಕ್ರಮಬದ್ಧವಾಗಿ ಸಾಮಗ್ರಿಗಳನ್ನು ಪ್ರದರ್ಶನಕ್ಕೆ ಇಡಲಾಗುತ್ತದೆ. ಇಸ್ಲಾಮ್ ಧರ್ಮವು ಮಹರ್ ಬಗ್ಗೆ ಪ್ರಸ್ತಾಪಿಸಿ ನಿಕಾಹ್ ಮಾಡಲು ಹೇಳುತ್ತದೆ. ಉಳಿದವುಗಳೆಲ್ಲ ಅನಾವಶ್ಯಕ ಆಚಾರಗಳು. ಬರೀ (ವರನ ಕಡೆಯವರು ವಧುವಿಗೆ ಕಳುಹಿಸಿದ ವಸ್ತುಗಳು) ಮತ್ತು ಜಹೇಝ್ (ವಧುವಿನ ಕಡೆಯವರು ವಧುವಿಗೆ ಕೊಡುವ ಉಡುಗೊರೆಗಳು) ಇವುಗಳ ಪ್ರದರ್ಶನದಿಂದ ಶ್ರೀಮಂತರು ತಮ್ಮ ದೊಡ್ಡಸ್ಥಿಕೆಯನ್ನು ಪ್ರಕಟಿಸುತ್ತಾರೆ. ನಮ್ಮವರಲ್ಲಿ ಕೆಲವರು ಸಹೋದರ, ಸಹೋದರಿ, ಪುತ್ರ, ಪುತ್ರಿಯರಿಗೆ ವಿವಾಹದ ಸಂದರ್ಭದಲ್ಲಿ ನೀಡಿದುದಕ್ಕಿಂತ ನಾವು ಹೆಚ್ಚಿಗೆ ನೀಡಿದ್ದೇವೆ ಎಂದು ಸೂಚಿಸಲು ಹೀಗೆ ಪ್ರದರ್ಶನ ಮಾಡಲಾಗುತ್ತಿದೆ. ಇಲ್ಲಿ ಕೇವಲ ಸ್ಪರ್ಧೆ ಮತ್ತು ಪ್ರದರ್ಶನವನ್ನು ಉದ್ದೇಶಿಸಲಾಗುತ್ತಿದೆ. ನಿಮ್ಮಲ್ಲಿ ಅನೇಕರಿಗೆ ಅಲ್ಲಾಹನು ನೀವು ಇಲ್ಲಿಗೆ ಬಂದ ನಂತರ ಬಹಳ ಅನುಗ್ರಹ ನೀಡಿರುವನು. ಅಲ್ಲಾಹನು ನಿಮಗೆ ಬಹಳ ಸೌಲಭ್ಯಗಳನ್ನು ದಯಪಾಲಿಸಿರುವನು. ಇದು ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದುದರ ಅನುಗ್ರಹವಾಗಿದೆ ಮತ್ತು ನಿಮ್ಮ ಹಿರಿಯರು ಮಾಡಿದ ತ್ಯಾಗಗಳ ಹಾಗೂ ಪ್ರಾರ್ಥನೆಗಳ ಫಲಸ್ವರೂಪವಾಗಿದೆ. ಆದರೆ ಕೆಲವರು ಅಲ್ಲಾಹನು ನೀಡಿದ ಅನುಗ್ರಹಗಳಿಗೆ ಅವನ ಮುಂದೆ ಬಾಗುತ್ತಾ ಕೃತಜ್ಞತೆ ಅರ್ಪಿಸುತ್ತಾ ಅವನ ಮಾರ್ಗದಲ್ಲಿ ಖರ್ಚು ಮಾಡುವುದಕ್ಕೆ ಬದಲಾಗಿ, ವಿವಾಹಗಳ ಸಂದರ್ಭಗಳಲ್ಲಿ ಪ್ರಸಿದ್ಧಿ ಪಡೆಯಲು, ತಮ್ಮ ಐಶ್ವರ್ಯವನ್ನು ಪ್ರದರ್ಶಿಸಲು ಅಂತಹ ದುರಾಚಾರಗಳನ್ನು ಮಾಡುತ್ತಾರೆ. ಮದುವೆಗಳಲ್ಲಿ ಮತ್ತು

ವಲೀಮ ಸತ್ಕಾರಗಳಲ್ಲಿ ಬಹಳ ಆಹಾರವನ್ನು ಹಾಳುಮಾಡಲಾಗುತ್ತದೆ. ಕೇವಲ ತೋರಿಕೆಗಾಗಿ ಅನೇಕ ವಿಧಗಳ ಭಕ್ಷ್ಯ ಪದಾರ್ಥಗಳನ್ನು ತಯಾರಿಸಲಾಗುತ್ತಿದೆ. ಇದನ್ನೆಲ್ಲ ನೋಡಿ ಬಡವರು ಮತ್ತು ಕಡಿಮೆ ಸಾಂಪತ್ತಿಕ ಸ್ಥಿತಿಯುಳ್ಳವರು ಜಹೇಝ್ ಪ್ರದರ್ಶನಕ್ಕಾಗಿ ಸಾಲಗಾರರಾಗುತ್ತಾರೆ. ವರನ ಕಡೆಯವರು ಜಹೇಝನ್ನು ಆವಶ್ಯಪಡುವ ಕಾರಣದಿಂದಲೂ ಸೊಸೆ ಜಹೇಝನ್ನು ತಂದಿಲ್ಲ ಎಂದು ಜನರು ಹೇಳುವರು ಎಂಬ ಭಯದಿಂದಲೂ ವಧುವಿನ ಕಡೆಯವರು ಸಾಲಗಾರರಾಗುತ್ತಾರೆ. ವರನ ಕಡೆಯವರು ಅಲ್ಲಾಹನ ಕುರಿತು ಭಯಪಡಬೇಕು. ಕೇವಲ ಆಚಾರಗಳ ಪಾಲನೆಗಾಗಿ, ತಮ್ಮ ಅಭಿಮಾನಕ್ಕಾಗಿ ಬಡವರನ್ನು ಕಷ್ಟಗಳಲ್ಲಿ, ಸಾಲಗಳಲ್ಲಿ ಸೆರೆಹಿಡಿಯಬೇಡಿರಿ. ನಾವು ಅಹ್ಮದಿಯರು ಮತ್ತು ಬೈಅತಿನ ಹತ್ತು ಶರತ್ತುಗಳನ್ನು ಪಾಲಿಸುವವರು ಎಂದು ವಾದಿಸಿದ ನಂತರ ಹೀಗೆ ಮಾಡುವುದು ಸರಿಯಲ್ಲ.

ನಾನು ವಿವಾಹಕ್ಕೆ ಸಂಬಂಧಿಸಿ ಒಂದು ದುರಾಚಾರದ ಕುರಿತು ಸಂಕ್ಷಿಪ್ತವಾಗಿ ವಿವರಿಸಿದೆನು. ಈ ಬಗ್ಗೆ ಹೆಚ್ಚು ವಿವರ ನೀಡುವುದಾದರೆ ಮದುವೆಯ ಈ ದುರಾಚಾರಕ್ಕೆ ಸಂಬಂಧಿಸಿ ಅನೇಕ ಭಯಾನಕ ಪರಿಣಾಮಗಳನ್ನು ಉಂಟುಮಾಡಿದ ಉದಾಹರಣೆಗಳು ಸಿಗಬಹುದಾಗಿದೆ. ದುರಾಚಾರಗಳು ಹೆಚ್ಚಾಗುವಾಗ ಮನುಷ್ಯನು ಪೂರ್ಣವಾಗಿ ಅಂಧನಾಗುತ್ತಾನೆ. ಅವನು ಪೂರ್ಣವಾಗಿ ಕೆಟ್ಟ ಅಭಿಲಾಷೆಗಳ ಹಿಡಿತಕ್ಕೆ ಸಿಲುಕುತ್ತಾನೆ. ಆದರೆ ಬೈಅತ್ ಮಾಡುವವನು ಮಾಡುವ ಪ್ರತಿಜ್ಞೆ ಕೆಟ್ಟ ಅಭಿಲಾಷೆಗಳಿಂದ ತನ್ನನ್ನು ದೂರವಿರಿಸುವನೆಂದೂ ಅಲ್ಲಾಹನ ಮತ್ತು ಅವನ ರಸೂಲರ(ಸ) ಆಜ್ಞೆಗಳನ್ನು ಪರಿಪೂರ್ಣವಾಗಿ ಪಾಲಿಸುವನೆಂದಾಗಿದೆ. ಅಲ್ಲಾಹನು ಮತ್ತು ಅವನ ರಸೂಲ್(ಸ) ನಮ್ಮಿಂದ ಬಯಸುವುದು, ದುರಾಚಾರಗಳನ್ನು ಮತ್ತು ಕೆಟ್ಟ ಅಭಿಲಾಷೆಗಳನ್ನು ಬಿಟ್ಟು ಅಲ್ಲಾಹನ ಆಜ್ಞೆಗಳನ್ನು ಶಿರಬಾಗಿ ಸ್ವೀಕರಿಸಬೇಕೆಂದಾಗಿದೆ.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

فَإِن لَّمْ يَسْتَجِيبُوا لَكَ فَاعْلَمْ أَنَّمَا يَتَّبِعُونَ أَهْوَاءَهُمْ ۚ وَمَنْ أَضَلُّ مِمَّنِ اتَّبَعَ هَوَاهُ
بِغَيْرِ هُدًى مِّنَ اللَّهِ ۚ إِنَّ اللَّهَ لَا يَهْدِي الْقَوْمَ الظَّالِمِينَ

ಅವರು ನಿನಗೆ ಉತ್ತರ ಕೊಡದಿದ್ದರೆ, ಅವರು ತಮ್ಮ ಸ್ವೇಚ್ಛೆಗಳನ್ನು ಮಾತ್ರ ಅನುಸರಿಸುತ್ತಾರೆಂದು ತಿಳಿದುಕೋ. ಅಲ್ಲಾಹನ ಮಾರ್ಗದರ್ಶನವಿಲ್ಲದೆ ತನ್ನ ಸ್ವೇಚ್ಛೆಗಳನ್ನು ಮಾತ್ರ ಅನುಸರಿಸುವವನಿಗಿಂತ ಹಾದಿ ತಪ್ಪಿದವನು ಬೇರೆ ಯಾರಿದ್ದಾನೆ? ಖಂಡಿತವಾಗಿಯೂ ಅಲ್ಲಾಹು ಅನ್ಯಾಯಗಾರರಿಗೆ ಮಾರ್ಗದರ್ಶನ ನೀಡಲಾರನು **(28:51)**

ನೀವು ನೋಡಿರಿ, ಅಲ್ಲಾಹನು ಈ ವಚನದಲ್ಲಿ ತನ್ನ ತೀರ್ಪು ಹೇಳಿದ್ದಾನೆ. ಇದು ಬಹಳ ಭಯಪಡಬೇಕಾದ ಸಂಗತಿಯಾಗಿದೆ. ಯಾರು ತಮ್ಮ

ಆಶಾಭಿಲಾಷೆಗಳನ್ನು ಮಾತ್ರ ಅನುಸರಿಸುತ್ತಾರೋ ಅವರು ಮಾರ್ಗದರ್ಶನವನ್ನು ಪಡೆಯಲಾರರು.

ನಾವು ಒಂದು ಕಡೆ, ಈ ಕಾಲದ ಇಮಾಮರನ್ನು ನಂಬಿದ್ದೇವೆಂದು ವಾದಿಸುತ್ತೇವೆ. ಇನ್ನೊಂದು ಕಡೆ, ನಾವು ಇಮಾಮರೊಂದಿಗೆ, ದುರಾಚಾರಗಳನ್ನು ಬಿಡುವೆವು ಎಂದು ಬೈಅತ್ ಪ್ರತಿಜ್ಞೆ ಮಾಡಿದ್ದರೂ ನಾವು ಆ ದುರಾಚಾರಗಳನ್ನು ಬಿಡುವುದಿಲ್ಲ. ಹಾಗಾದರೆ ನಾವು ಹಿಂದೆಸರಿದು ಹೋಗುತ್ತಾ ಇಲ್ಲವೇ ಎಂಬುದನ್ನು ಪ್ರತಿಯೊಬ್ಬನು ಪರಿಶೀಲಿಸಬೇಕಾಗಿದೆ. ನಾವು ನಮ್ಮ ಬೈಅತ್ ಪ್ರತಿಜ್ಞೆಯನ್ನು ಪಾಲಿಸುತ್ತಾ ಇರುವುದಾದರೆ, ಅಲ್ಲಾಹನಿಗೆ ಭಯಪಟ್ಟು ನಮ್ಮ ಕೆಟ್ಟ ಅಭಿಲಾಷೆಗಳಿಂದ ದೂರಸರಿದು ನಾವು ನಮ್ಮ ಪ್ರಿಯ ಅಲ್ಲಾಹನನ್ನು ಸ್ತುತಿಸುತ್ತಾ ಅವನ ಕಡೆಗೆ ಬಾಗುವುದಾದರೆ ನಮಗೆ ಅದಕ್ಕೆ ಪ್ರತಿಫಲವಾಗಿ ಸ್ವರ್ಗದ ಶುಭವಾರ್ತೆಯನ್ನು ಅಲ್ಲಾಹನು ನೀಡುತ್ತಾನೆ:

وَاَمَّا مَنْ خَافَ مَقَامَ رَبِّهٖ وَنَهَى النَّفْسَ عَنِ الْهَوٰى ـ فَاِنَّ الْجَنَّةَ هِيَ الْمَاْوٰى

ಆದರೆ ಯಾರು ಅಲ್ಲಾಹನ ಮುಂದೆ ನಿಲ್ಲಲು ಭಯಪಡುತ್ತಾನೋ ಮತ್ತು ತನ್ನನ್ನು ಕೆಟ್ಟ ಆಶೆಗಳಿಂದ ತಡೆದುಕೊಳ್ಳುತ್ತಾನೋ, ಖಂಡಿತವಾಗಿಯೂ ಸ್ವರ್ಗ ಅವನ ವಾಸಸ್ಥಳವಾಗುವುದು. **(79:41 – 42)**

ದುರಾಚಾರಗಳ ಕುರಿತು ಕೆಲವು ಹದೀಸುಗಳು ಹೀಗಿವೆ:

ಹಝ್ರತ್ ಆಯಿಶಾ(ರ) ಹೇಳಿದರು: ಹಝ್ರತ್ ರಸೂಲುಲ್ಲಾಹ್(ಸ) ಹೀಗೆಂದರು: ಧರ್ಮದೊಂದಿಗೆ ಸಂಬಂಧ ಹೊಂದಿರದ ಯಾವುದಾದರೂ ಹೊಸ ಆಚಾರವನ್ನು ಆವಿಷ್ಕರಿಸುವುದಾದರೆ ಆ ಆಚಾರ ರದ್ದುಗೊಳಿಸಲ್ಪಡ ಬೇಕಾದುದೂ ಅಸ್ವೀಕಾರ್ಯವೂ ಆಗಿದೆ.

**(ಬುಖಾರಿ – ಕಿತಾಬುಸ್ಸುಲ್‌ಹ್)**

ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ನಮ್ಮನ್ನು ಸಂಬೋಧಿಸುತ್ತಿದ್ದರು. ಅವರ ಕಣ್ಣುಗಳು ಕೆಂಪಾಗಿದ್ದುವು. ಸ್ವರವು ಏರಿತು. ಆವೇಶ ಹೆಚ್ಚಾಯಿತು. ಅವರು ಯಾವುದೇ ಸೈನ್ಯವು ನಮ್ಮನ್ನು ಆಕ್ರಮಿಸುವ ಬಗ್ಗೆ ಹೆದರಿಸುವಂತೆ ಇತ್ತು. ಅವರು ಹೇಳಿದರು: ಆ ಸೈನ್ಯ ನಮ್ಮ ಮೇಲೆ ಬೆಳಿಗ್ಗೆ ಅಥವಾ ಸಂಜೆ ಆಕ್ರಮಣ ಮಾಡುವುದು. ನಾನು ಮತ್ತು ಆ ಘಳಿಗೆ ಹೀಗೆ ಒಟ್ಟಿಗೆ ಕಳುಹಿಸಲ್ಪಡಲಾಗಿದೆ. (ಹೀಗೆ ಹೇಳುವಾಗ ಅವರು ತನ್ನ ತೋರುಬೆರಳು ಮತ್ತು ಮಧ್ಯದ ಬೆರಳನ್ನು ಸೇರಿಸಿ ಹೇಳಿದರು:) ಈ ಎರಡು ಬೆರಳುಗಳು ಒಟ್ಟಿಗೆ ಇರುವಂತೆ. ಅವರು ಹೀಗೂ ಹೇಳಿದರು: ಅತ್ಯುತ್ತಮವಾದುದು ಅಲ್ಲಾಹನ ಗ್ರಂಥವಾಗಿದೆ. ಅತ್ಯುತ್ತಮ ರೀತಿ ಮುಹಮ್ಮದನ ರೀತಿಯಾಗಿದೆ. ಅತ್ಯಂತ ಕೆಟ್ಟ ಕೆಲಸ ಅಲ್ಲಾಹನ ಧರ್ಮದಲ್ಲಿ

ಹೊಸ ಹೊಸ ಆಚರಣೆಗಳನ್ನು ಜಾರಿಗೆ ತರುವುದಾಗಿದೆ. ಎಲ್ಲ ನವೀನ ಆಚರಣೆ ದುರ್ಮಾರ್ಗಕ್ಕೆ ಕೊಂಡೊಯ್ಯುತ್ತದೆ.

**(ಮುಸ್ಲಿಮ್ ಕಿತಾಬುಲ್ ಜುಮುಅ)**

ಹಝ್ರತ್ ಅಮರಿಬ್ನು ಔಫ್ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಯಾರಾದರೂ ನನ್ನ ನಡೆವಳಿಕೆಗಳಲ್ಲಿ ಯಾವುದನ್ನಾದರೂ ಪುನಶ್ಚೇತನಗೊಳಿಸಿ ಅದರ ಪ್ರಕಾರ ಜನರು ವರ್ತಿಸುವಂತೆ ಮಾಡಿದರೆ, ನನ್ನ ನಡೆವಳಿಕೆಯನ್ನು ಪುನಶ್ಚೇತನಗೊಳಿಸಿದವನಿಗೆ ಸಹ ಆ ನಡೆವಳಿಕೆ ಪ್ರಕಾರ ನಡೆಯುವವರಿಗೆ ದೊರಕುವ ಪ್ರತಿಫಲಕ್ಕೆ ಸಮವಾದ ಪ್ರತಿಫಲ ದೊರಕುವುದು. ಅವರ ಪ್ರತಿಫಲದಲ್ಲಿ ಯಾವುದೇ ಕೊರತೆ ಉಂಟಾಗದು. ಯಾರಾದರೂ ಒಂದು ಹೊಸ ಆಚಾರವನ್ನು ಪ್ರಾರಂಭಿಸಿದಾಗ ಜನರು ಆ ಆಚಾರ ಪ್ರಕಾರ ನಡೆಯಲು ತೊಡಗಿದರೆ ಆ ವ್ಯಕ್ತಿಗೆ ಆ ಆಚಾರ ಪ್ರಕಾರ ನಡೆಯುವವರ ಪಾಪದೋಷಗಳ ಪಾಲು ದೊರಕುವುದು. ಆ ಆಚಾರ ಪ್ರಕಾರ ನಡೆಯುವವರ ಪಾಪದೋಷವು ಕಡಿಮೆಯಾಗಲಾರದು.

**(ಇಬ್ನುಮಾಜ)**

## ನವೀನ ಆಚಾರಗಳು ರದ್ದುಗೊಳಿಸಲ್ಪಡಬೇಕು

ಹಝ್ರತ್ ರಸೂಲುಲ್ಲಾಹ್[ಸ] ಮೇಲಿನ ಹದೀಸುಗಳಲ್ಲಿ ಹೀಗೆ ಹೇಳಿರುವರು: ಯಾವ ಆಚಾರಗಳಿಗೆ ಧರ್ಮದೊಂದಿಗೆ ಸಂಬಂಧವಿಲ್ಲವೋ, ಯಾವ ಆಚಾರಗಳು ಧರ್ಮದಿಂದ ದೂರಕ್ಕೆ ಕೊಂಡೊಯ್ಯುತ್ತವೆಯೋ ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳನ್ನೂ ಉಪದೇಶಗಳನ್ನೂ ಹಗುರವಾಗಿ ಕಾಣುವಂತೆ ಮಾಡುತ್ತವೆಯೋ ಅಂತಹ ಆಚಾರಗಳು ತಿರಸ್ಕಾರ ಯೋಗ್ಯವಾಗಿವೆ. ಅವು ವ್ಯರ್ಥವಾಗಿವೆ; ರದ್ದುಗೊಳಿಸಲು ಯೋಗ್ಯವಾಗಿವೆ. ಅವುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಏಕೆಂದರೆ ಇವುಗಳಿಂದ ಧರ್ಮದಲ್ಲಿ ಹೊಸ ಹೊಸ ಆಚಾರಗಳು ಪ್ರಾರಂಭವಾಗಿ ಧರ್ಮವು ಬಿಗಡಾಯಿಸುವುದು. ಇತರ ಧರ್ಮಗಳಲ್ಲಿ ಆಚಾರಗಳು ಧರ್ಮವನ್ನು ಬದಲಾಯಿಸಿವೆ. ಹೀಗೆ ಸಂಭವಿಸಬೇಕಾಗಿತ್ತು. ಜೀವಂತ ಧರ್ಮವಾಗಿ ಇಸ್ಲಾಮ್ ಮಾತ್ರ ಬಾಕಿಯಾಗಬೇಕಿತ್ತು.

ಇತರ ಧರ್ಮಗಳಲ್ಲಿ, ಉದಾಹರಣೆಗೆ ಕ್ರೈಸ್ತ ಧರ್ಮವು ವಿವಿಧ ದೇಶಗಳಲ್ಲಿ ವಿವಿಧ ಪ್ರದೇಶಗಳಲ್ಲಿ ಆಯಾ ದೇಶಗಳ ಆಚಾರಗಳನ್ನು ತಮ್ಮ ಧರ್ಮದ ಭಾಗವನ್ನಾಗಿ ಮಾಡಿರುವುದನ್ನು ಕಾಣಬಹುದಾಗಿದೆ. ಆಫ್ರಿಕದಲ್ಲಿಯೂ ಇದನ್ನು ಕಾಣಬಹುದು. ಹೊಸ ಆಚರಣೆಗಳ ಮಾರ್ಗ ತೆರೆದರೆ ಹೊಸ ಹೊಸ ಆಚರಣೆಗಳು ಧರ್ಮದ ಭಾಗಗಳಾಗುತ್ತವೆ. ಹೊಸ ಆಚಾರಗಳನ್ನು ಹುಟ್ಟುಹಾಕುವವರಿಗೆ ಹಝ್ರತ್ ರಸೂಲುಲ್ಲಾಹ್[ಸ] ಕಠಿಣ ಮುನ್ನೆಚ್ಚರಿಕೆ ನೀಡಿದ್ದಾರೆ ಮತ್ತು ಕಳವಳ

ವ್ಯಕ್ತಪಡಿಸಿದ್ದಾರೆ. ಹದೀಸಿನಲ್ಲಿ ಈ ಬಗ್ಗೆ ಹೀಗೆ ಹೇಳಲಾಗಿದೆ – ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ನಿಮ್ಮ ಹೊಸ ಆಚರಣೆಗಳ ಕಾರಣದಿಂದ, ನೀವು ನಿಮ್ಮ ಆಶಾಭಿಲಾಷೆಗಳಿಗೆ ಬಲಿಯಾಗುವ ಕಾರಣದಿಂದ ನಾನು ಬಹಳ ಹೆಚ್ಚು ಭಯಭೀತನಾಗಿರುವೆನು. ಹೊಸ ಆಚಾರಗಳ ಕಾರಣದಿಂದ ಧರ್ಮ ವಿಕೃತಗೊಂಡು ನೀವು ದಾರಿ ತಪ್ಪಿ ಹೋಗುವ ಬಗ್ಗೆ ನಾನು ಭಯಪಡುತ್ತೇನೆ.

ಈಗ ನೀವು ಪಾಶ್ಚಿಮಾತ್ಯ ಸಮಾಜದಲ್ಲಿ ಜೀವಿಸುತ್ತಿರುವಿರಿ. ಇಲ್ಲಿ ಅಸಂಖ್ಯಾತ ಆಚಾರಗಳಿವೆ. ಅವು ನಿಮ್ಮನ್ನು ಧರ್ಮದಿಂದ ದೂರಕ್ಕೆ ಒಯ್ಯುತ್ತವೆ. ಇಸ್ಲಾಮಿನ ಸುಂದರ ಉಪದೇಶಗಳ ಮೇಲೆ ಪರದೆ ಹಾಕುವ ಆಚಾರಗಳೂ ನಡೆವಳಿಕೆಗಳೂ ಇಲ್ಲಿವೆ. ಲೌಕಿಕ ವಿಚಾರಗಳು ಹೆಚ್ಚು ಪ್ರಭಾವಶಾಲಿಯಾಗಿವೆ. ಆದುದರಿಂದ ಈ ಸಮಾಜದಲ್ಲಿ ಬಹಳ ಜಾಗರೂಕತೆಯಿಂದ ನಡೆಯುವ ಆವಶ್ಯಕತೆ ಇದೆ. ಅನ್ಯರ ತಪ್ಪು ಆಚಾರಗಳನ್ನು ಅನುಸರಿಸದೆ ಇಸ್ಲಾಮಿನ ಸುಂದರ ಉಪದೇಶಗಳನ್ನು ಅವರ ಮುಂದಿರಿಸಬೇಕಾಗಿದೆ. ಪಾಶ್ಚಿಮಾತ್ಯ ಸಮಾಜದ ಪ್ರಭಾವಕ್ಕೆ ಒಳಪಡದಂತಹ ಬಲಿಷ್ಠ ಸ್ವಭಾವಗುಣಗಳನ್ನು ಪ್ರತಿಯೊಬ್ಬ ಅಹ್ಮದಿಯೂ ಹೊಂದಿರಬೇಕು. ಉದಾಹರಣೆಗೆ, ಮಹಿಳೆಯರು ಪರ್ದಾ ಧರಿಸುವ ಕುರಿತು ಇಸ್ಲಾಮಿನ ಆಜ್ಞೆಯಿದೆ. ಮಹಿಳೆಯರಿಗೆ ಪರದೆಯಿಂದ ಗೌರವ ಲಭಿಸುತ್ತದೆ. ಪರದೆಯ ಕಾರಣ ಅವರು ಒಂದು ವಿಶಿಷ್ಟ ಸ್ಥಾನ ಗಳಿಸುತ್ತಾರೆ. ಮಹಿಳೆ ಸ್ವತಃ ಪರ್ದಾ ಧರಿಸಿ ಸಮಾಜದಲ್ಲಿ ಪರದೆಯ ಒಳಿತುಗಳನ್ನು ವಿವರಿಸುವಳಾದರೆ, ಅದು ಪುರುಷರು ಪರದೆಯ ಒಳಿತುಗಳನ್ನು ಸಮಾಜದಲ್ಲಿ ವಿವರಿಸುತ್ತಾ ತಿರುಗುವುದಕ್ಕಿಂತ ಹೆಚ್ಚು ಪ್ರಭಾವಶಾಲಿಯಾಗುವುದು. ಪರ್ದಾ ಧರಿಸುವ ಮಹಿಳೆಯರಿಗೆ ಅವರ ವಿಶಿಷ್ಟ ವ್ಯಕ್ತಿತ್ವದ ಕಾರಣದಿಂದ ಧರ್ಮಪ್ರಚಾರಕ್ಕೆ ಹೆಚ್ಚು ಸಂದರ್ಭಗಳು ಸಿಗುವುವು. ಇದರ ಬಗ್ಗೆ ಹೆಚ್ಚು ಗಮನಹರಿಸಬೇಕು. ಪಾಶ್ಚಿಮಾತ್ಯ ಸಮಾಜದ ಕೆಟ್ಟ ಆಚಾರಗಳನ್ನು ಆ ಸಮಾಜದಲ್ಲಿ ಜೀವಿಸುವುದರಿಂದ ಕೈಗೊಳ್ಳುವುದು ಮತ್ತು ಅದಕ್ಕೆ ನಿರ್ಬಂಧಿತರಾಗಿದ್ದೇವೆ ಎಂದು ಹೇಳುವುದು ಬಹಳ ಭಯಪಡಬೇಕಾದ ವಿಷಯವಾಗಿದೆ. ಉದಾಹರಣೆಗೆ, ನಿಮಗೆ ಮದ್ಯಪಾನ ಮಾಡುವ ಒಬ್ಬನೊಂದಿಗೆ ಗೆಳೆತನವಿದ್ದು ಅವನು ಮದ್ಯಶಾಲೆಗೆ ಅಥವಾ ಬಾರಿಗೆ ಹೋಗಿ ಮದ್ಯಪಾನ ಮಾಡುವಾಗ, ನೀವು ಕಾಫಿ ಅಥವಾ ಚಾ ಕುಡಿಯುತ್ತೇವೆ ಎಂದು ಹೇಳಿ ಅವನ ಜೊತೆಗೆ ಹೋಗುವುದಾದರೆ, ಅದು ಕೂಡ ತಪ್ಪಾಗಿದೆ. ನೀವು ಬಹಳ ಜಾಗರೂಕರಾಗಿರಬೇಕು. ಯಾವುದಾದರೂ ಒಂದು ದಿನ ನೀವು ಅವನಿಂದ ಪ್ರಭಾವಿತರಾಗಿ ಮೊದಲು ಒಂದು ಗುಟುಕು ಕುಡಿಯಲೂಬಹುದು. ಅನಂತರ ಅದರ ಅಭ್ಯಾಸ ಮಾಡಿಕೊಳ್ಳುವಿರಿ. ಅಲ್ಲಾಹನು ಹೀಗಾಗದಂತೆ ರಕ್ಷಿಸಲಿ.

ಹಝ್ರತ್ ರಸೂಲುಲ್ಲಾಹ್[ಸ] ಇದಕ್ಕೆ ಸಂಬಂಧಿಸಿ ಹೇಳಿದ ಒಂದು ಹದೀಸನ್ನು ನೆನಪಿಡಿರಿ:

ಹಝ್‌ರತ್ ಅಬೂ ಬರ್‌ಝ಼ು ವರದಿ ಮಾಡುತ್ತಾರೆ: ಹಝ್‌ರತ್ ರಸೂಲುಲ್ಲಾಹ್[ಸ] ಹೇಳಿದರು: ನಿಮ್ಮ ಹೃದಯಗಳಲ್ಲಿಯೂ ನಿಮ್ಮ ಸೂಕ್ಷ್ಮ ಭಾಗಗಳಲ್ಲಿಯೂ ಉಂಟಾಗಬಹುದಾದ ಆಶೆಗಳ ಬಗ್ಗೆ ನಾನು ಭಯಪಡುತ್ತೇನೆ, ನಿಮ್ಮ ಕೆಟ್ಟ ಆಶಾಭಿಲಾಷೆಗಳ ಕಾರಣದಿಂದ ಉಂಟಾಗುವ ಪಥಭ್ರಷ್ಟತೆ ಬಗ್ಗೆ ಸಹ ನಾನು ಭಯಪಡುತ್ತೇನೆ.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್)**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಮನುಷ್ಯನು ಸತ್ಯಸಂಧವಾಗಿ ಕಠಿಣ ಪರಿಶ್ರಮ ಮಾಡುವ ತನಕ ಇಸ್ಲಾಮಿನಲ್ಲಿರುವ ಜ್ಞಾನದ ಭಂಡಾರವನ್ನು ಗಳಿಸಲಾರ. ಆ ಜ್ಞಾನ ಭಂಡಾರ ದೊರೆತರೆ ಪಾಪಭರಿತವಾದ ಜೀವಿತಕ್ಕೆ ಮೃತ್ಯು ಬಂದೆರಗುತ್ತದೆ. ಮನುಷ್ಯನು ದೇವನನ್ನು ನೋಡುತ್ತಾನೆ ಮತ್ತು ಅವನ ಧ್ವನಿಯನ್ನು ಆಲಿಸುತ್ತಾನೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳಿದೆ:

وَاَمَّا مَنْ خَافَ مَقَامَ رَبِّهٖ وَنَهَى النَّفْسَ عَنِ الْهَوٰى ۔ فَاِنَّ الْجَنَّةَ هِيَ الْمَاْوٰى

ಯಾರು ಪ್ರಭುವಿನ ಮಹೋನ್ನತ ಸ್ಥಾನದ ಬಗ್ಗೆ ಭಯಪಡುತ್ತಾನೋ ಮತ್ತು ತನ್ನನ್ನು ಕೆಟ್ಟ ಆಶೆಗಳಿಂದ ತಡೆದುಕೊಳ್ಳುತ್ತಾನೋ ಖಂಡಿತವಾಗಿಯೂ ಸ್ವರ್ಗ ಅವನ ವಾಸಸ್ಥಳವಾಗುವುದು. **(79: 41, 42)**

ಒಬ್ಬನು ಅಹಂಕಾರದಿಂದ ತಾನು ಅಲ್ಲಾಹನನ್ನು ನಂಬುತ್ತೇನೆ ಎಂದು ಹೇಳುವುದು ಸುಲಭವಾಗಿದೆ. ಅವನು ಹೀಗೆ ಹೇಳಿದ ನಂತರ ಅವನ ವಿಶ್ವಾಸದ ಚಿಹ್ನೆಗಳು ಮತ್ತು ಅದರ ಫಲಗಳು ಕಂಡು ಬರದಿದ್ದರೆ ಕೇವಲ ಬಾಯಿಮಾತಿನ ವಿಶ್ವಾಸವು ಅವನದಾಗುವುದು. ಇಂತಹ ಜನರು ಅಲ್ಲಾಹನ ಕುರಿತು ಯಾವ ಕಾಳಜಿಯನ್ನೂ ಹೊಂದುವುದಿಲ್ಲ. ಅಲ್ಲಾಹನು ಸಹ ಅವರ ಬಗ್ಗೆ ಕಾಳಜಿ ವಹಿಸುವುದಿಲ್ಲ.

**(ಅಲ್‌ಹಕಮ್, 17/8/1905)**

ಅವರು ಪುನಃ ಹೇಳುತ್ತಾರೆ:

ಯಾರು ಅಲ್ಲಾಹನ ಮುಂದೆ ನಿಲ್ಲಲು ಹೆದರುತ್ತಾನೋ ಮತ್ತು ತನ್ನ ಆಶಾಭಿಲಾಷೆಗಳನ್ನು ತಡೆದಿಟ್ಟುಕೊಳ್ಳುತ್ತಾನೋ ಅವನ ವಾಸಸ್ಥಳ ಸ್ವರ್ಗವಾಗಿದೆ. ಮನಸ್ಸಿನ ಕೆಟ್ಟ ಆಶಾಭಿಲಾಷೆಗಳನ್ನು ತಡೆಗಟ್ಟುವುದರಿಂದ ಮನುಷ್ಯನು ಅಲ್ಲಾಹನಲ್ಲಿ ಲೀನನಾಗುತ್ತಾನೆ ಮತ್ತು ಆ ಮೂಲಕ ಮನುಷ್ಯನು ಅಲ್ಲಾಹನ ಸಂಪ್ರೀತಿಯನ್ನು ಗಳಿಸಿ ಇದೇ ಲೋಕದಲ್ಲಿ ಸ್ವರ್ಗದ ಸ್ಥಾನಕ್ಕೆ ತಲಪುತ್ತಾನೆ.

**(ಬದ್‌ರ್ 3/8/1905)**

## ಇಸ್ಲಾಮ್ ಧರ್ಮದ ಉಪದೇಶಗಳಿಗೆ ಪವಿತ್ರ ಖುರ್‌ಆನ್ ಮಾರ್ಗಸೂಚಿ

ದುರಾಚಾರಗಳನ್ನು ಕೈಬಿಡುವುದು ಮತ್ತು ಕೆಟ್ಟ ಆಶಾಭಿಲಾಷೆಗಳಿಂದ ದೂರಸರಿಯುವುದು ಇಸ್ಲಾಮ್ ಧರ್ಮದ ಉಪದೇಶಗಳ ಭಾಗವಾಗಿದೆ. ಈ ಉಪದೇಶಗಳನ್ನು ಮನವರಿಕೆ ಮಾಡಿಕೊಳ್ಳಲು ನಮಗೆ ಮಾರ್ಗದರ್ಶಕ ವಾಗಿರುವುದು ಪವಿತ್ರ ಖುರ್‌ಆನ್ ಆಗಿದೆ. ಒಬ್ಬ ಸತ್ಯವಿಶ್ವಾಸಿ ಪವಿತ್ರ ಖುರ್‌ಆನನ್ನು ಪೂರ್ಣವಾಗಿ ತನ್ನ ಜೀವಿತಕ್ಕೆ ಮಾರ್ಗಸೂಚಿಯನ್ನಾಗಿ ಮಾಡುವನಾದರೆ ಎಲ್ಲ ಕೆಡುಕುಗಳು ತಾನಾಗಿಯೇ ಕೊನೆಗೊಳ್ಳುವುವು. ಯಾವುದೇ ರೀತಿಯ ಕೆಟ್ಟ ಯೋಚನೆಗಳು ಹೃದಯದಲ್ಲಿ ಉಂಟಾಗಲಾರವು. ಏಕೆಂದರೆ ಪರಿಪೂರ್ಣ ಶರೀಅತ್ ಗ್ರಂಥವಾಗಿ ಮನುಷ್ಯನ ಜೀವಿತದ ಎಲ್ಲ ಭಾಗಗಳಿಗೆ ಅನ್ವಯಿಸುವಂತೆ ಮಾಡಿ ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ(ಸ) ಪರಿಶುದ್ಧ ಹೃದಯಕ್ಕೆ ಇಳಿಸಿದ ಪವಿತ್ರ ಗ್ರಂಥವಾಗಿದೆ ಖುರ್‌ಆನ್. ಹಝ್ರತ್ ರಸೂಲುಲ್ಲಾಹ್(ಸ) ತನ್ನ ಕೃತಿಯ ಮೂಲಕ, ತನ್ನ ಮಾತಿನ ಮೂಲಕ ಆವಶ್ಯವಿರುವಲ್ಲೆಲ್ಲ ಅದನ್ನು ವಿಶದೀಕರಿಸಿದರು. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಶಿರಬಾಗಿ ಸ್ವೀಕರಿಸಲು ಹೇಳಿದರು.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು:

وَلَقَدْ يَسَّرْنَا الْقُرْآنَ لِلذِّكْرِ فَهَلْ مِن مُّدَّكِرٍ

ನಿಶ್ಚಯವಾಗಿಯೂ ನಾವು ಖುರ್‌ಆನನ್ನು ಉಪದೇಶಕ್ಕಾಗಿ ಸುಲಭಗೊಳಿಸಿದ್ದೇವೆ. ಆದರೆ ಉಪದೇಶವನ್ನು ಸ್ವೀಕರಿಸಲು ಬಯಸುವವನು ಯಾರಾದರೂ ಇದ್ದಾನೆಯೇ?

**(54:18)**

ಒಂದು ಹದೀಸಿನಲ್ಲಿ ಹಝ್ರತ್ ಅಬೂ ಮೂಸಾ ಅಶ್‌ಅರೀ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಪವಿತ್ರ ಖುರ್‌ಆನ್ ಓದಿ ಅದರ ಉಪದೇಶಗಳನ್ನು ಅನುಸರಿಸಿ ವರ್ತಿಸುವವನು ಕಿತ್ತಳೆ ಹಣ್ಣಿನ ಹಾಗೆ. ಅದರ ರುಚಿಯೂ ಉತ್ತಮ, ಅದರ ಪರಿಮಳವೂ ಉತ್ತಮವಾಗಿರುತ್ತದೆ. ಪವಿತ್ರ ಖುರ್‌ಆನನ್ನು ಓದದೆ ಅದರ ಆಜ್ಞೆಗಳ ಪ್ರಕಾರ ವರ್ತಿಸುವವನು ಖರ್ಜೂರದ ಹಾಗೆ. ಅದರ ರುಚಿ ಮಧುರವಾಗಿದೆ. ಆದರೆ ಅದಕ್ಕೆ ಸುವಾಸನೆ ಇಲ್ಲ. ಪವಿತ್ರ ಖುರ್‌ಆನನ್ನು ಓದುವ ಕಪಟವಿಶ್ವಾಸಿ ರೈಹಾನ್ (ತುಳಸಿ) ಹಾಗೆ. ಅದರ ಪರಿಮಳ ಉತ್ತಮವಾಗಿರುತ್ತದೆ; ಆದರೆ ಕಹಿಯಾಗಿರುತ್ತದೆ. ಪವಿತ್ರ ಖುರ್‌ಆನನ್ನು ಓದದ ಕಪಟವಿಶ್ವಾಸಿಯು ಕಹಿಯಾದ ಮತ್ತು ಅಸಹ್ಯ ದುರ್ಗಂಧವಿರುವ ಹಾವುಮೆಕ್ಕೆ ಕಾಯಿಯ ಹಾಗೆ.

**(ಬುಖಾರಿ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನ್ ಆಳವಾದ ಸೂಕ್ಷ್ಮ ಜ್ಞಾನದಿಂದ ಭರಿತವಾಗಿದೆ. ಅದು ನೈಜ ಒಳಿತನ್ನು ಕಲಿಸುವುದರಲ್ಲಿ ಇಂಜೀಲಿಗಿಂತ ಮುಂದೆ ಹೆಜ್ಜೆ ಹಾಕುತ್ತದೆ. ನಿಜವಾದ ಮತ್ತು ಬದಲಾವಣೆಗೊಳ್ಳದ ದೇವನನ್ನು ತೋರಿಸಿ ಕೊಡುವ ದೀಪ ಪವಿತ್ರ ಖುರ್‌ಆನಿನ ಕೈಯಲ್ಲಿದೆ. ಅದು ಲೋಕಕ್ಕೆ ಬರದೆ ಇರುತ್ತಿದ್ದರೆ ಬಹುದೇವಾರಾಧಕರ ಸಂಖ್ಯೆ ಬಹಳ ಅಧಿಕವಾಗುತ್ತಿತ್ತು. ಭೂಮಿಯಿಂದ ಅದೃಶ್ಯವಾದ ಅಲ್ಲಾಹನ ಏಕತ್ವವು ಪವಿತ್ರ ಖುರ್‌ಆನ್ ಮೂಲಕ ಪುನಃ ಸ್ಥಾಪಿಸಲ್ಪಟ್ಟಿತು. ಆ ಬಗ್ಗೆ ಕೃತಜ್ಞತೆ ಅರ್ಪಿಸಬೇಕಾಗಿದೆ.

**(ತುಹ್‌ಫ ಖೈಸರಿಯ್ಯ; ರೂಹಾನೀ ಖಝಾಇನ್, ಭಾಗ 12, ಪುಟ 282)**

## ಪವಿತ್ರ ಖುರ್‌ಆನಿನಲ್ಲಿ ನಿಮ್ಮ ಜೀವಿತವಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನನ್ನು ವರ್ಜಿಸಲ್ಪಟ್ಟ ಗ್ರಂಥದ ಹಾಗೆ ಬಿಟ್ಟು ಬಿಡಬೇಡಿರಿ. ನಿಮ್ಮ ಜೀವಿತ ಅದರಲ್ಲಿಯೇ ಇದೆ. ಯಾರು ಪವಿತ್ರ ಖುರ್‌ಆನಿಗೆ ಗೌರವ ಕೊಡುತ್ತಾರೋ ಅವರು ಆಕಾಶದಲ್ಲಿಯೂ ಗೌರವ ಗಳಿಸುವರು. ಯಾರು ಪ್ರತಿಯೊಂದು ಹದೀಸು ಮತ್ತು ಪ್ರತಿಯೊಂದು ಮಾತಿಗಿಂತ ಪವಿತ್ರ ಖುರ್‌ಆನಿಗೆ ಆದ್ಯತೆ ನೀಡುತ್ತಾರೋ ಅವರಿಗೆ ಆಕಾಶದಲ್ಲಿ ಆದ್ಯತೆ ನೀಡಲಾಗುವುದು. ಈಗ ಮಾನವರಿಗೆ ಭೂಮಿಯಲ್ಲಿ ಪವಿತ್ರ ಖುರ್‌ಆನಿನ ಹೊರತು ಅನ್ಯ ಗ್ರಂಥವಿಲ್ಲ. ಎಲ್ಲ ಆದಮ್ ಸಂತತಿಗಳಿಗೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೊರತು ಬೇರೆ ಸಂದೇಶವಾಹಕನಾಗಲಿ ದೇವ ಸನ್ನಿಧಿಯಲ್ಲಿ ಶಿಫಾರಸು ಮಾಡುವವನಾಗಲಿ ಇಲ್ಲ.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 13)**

ಪವಿತ್ರ ಖುರ್‌ಆನ್ ತನ್ನ ಆಧ್ಯಾತ್ಮಿಕ ವೈಶಿಷ್ಟ್ಯಗಳ ಮೂಲಕ ಮತ್ತು ತನ್ನ ಪ್ರಕಾಶದ ಮೂಲಕ ತನ್ನ ಸತ್ಯವಂತರಾದ ಅನುಯಾಯಿಗಳನ್ನು ತನ್ನ ಕಡೆಗೆ ಎಳೆಯುತ್ತದೆ ಮತ್ತು ಸತ್ಯವಿಶ್ವಾಸಿಯ ಹೃದಯವನ್ನು ಪ್ರಕಾಶಗೊಳಿಸುತ್ತದೆ. ದೊಡ್ಡ ದೊಡ್ಡ ದೃಷ್ಟಾಂತಗಳನ್ನು ತೋರಿಸಿ ಅಲ್ಲಾಹನೊಂದಿಗೆ ಸಂಬಂಧವನ್ನು ದೃಢಪಡಿಸುತ್ತದೆ. ಆ ಸಂಬಂಧವನ್ನು ತುಂಡರಿಸಲು ಉದ್ದೇಶಿಸುವ ಖಡ್ಗಕ್ಕೂ ತುಂಡರಿಸಲು ಸಾಧ್ಯವಾಗದು. ಅದು ಹೃದಯದ ಕಣ್ಣನ್ನು ತೆರೆಯುತ್ತದೆ. ಅದು ಪಾಪದ ಕೊಳಕು ಝರಿಯನ್ನು ತಡೆಗಟ್ಟುತ್ತದೆ. ಅಲ್ಲಾಹನ ಸಿಹಿಯಾದ ಸಂದೇಶವಾಣಿಗಳ ಅನುಗ್ರಹವನ್ನು ದಯಪಾಲಿಸುತ್ತದೆ. ಅದೃಶ್ಯದ ಬಗ್ಗೆ ಜ್ಞಾನವನ್ನು ನೀಡುತ್ತದೆ ಮತ್ತು ದುಆ ಸ್ವೀಕಾರದ ಕುರಿತು ಅಲ್ಲಾಹನು ತಿಳಿಸಿಕೊಡುತ್ತಾನೆ. ಪವಿತ್ರ ಖುರ್‌ಆನಿನ ನಿಜವಾದ ಅನುಯಾಯಿಯನ್ನು ವಿರೋಧಿಸುವವನಿಗೆ ಅಲ್ಲಾಹನು ಭೀಕರ ದೃಷ್ಟಾಂತಗಳ ಮೂಲಕ, ಅವನು

ತನ್ನ ವಚನಗಳನ್ನು ಅನುಸರಣೆ ಮಾಡುವವನ ಜೊತೆಗಿದ್ದಾನೆ ಎಂದು ತಿಳಿಸಿಕೊಡುತ್ತಾನೆ.

**(ಚಶ್ಮಯೆ ಮಅರಿಫತ್; ರೂಹಾನೀ ಖಝಾಇನ್, ಸಂಪುಟ 23, ಪುಟ 308 – 309)**

ನೀವು ಜಾಗರೂಕರಾಗಿರಿ. ಅಲ್ಲಾಹನ ಉಪದೇಶ ಮತ್ತು ಪವಿತ್ರ ಖುರ್‌ಆನಿನ ಮಾರ್ಗದರ್ಶನಕ್ಕೆ ವಿರುದ್ಧವಾಗಿ ಒಂದು ಹೆಜ್ಜೆಯನ್ನೂ ಹಾಕಬೇಡಿರಿ. ನಾನು ಸತ್ಯವಾಗಿ ಹೇಳುತ್ತೇನೆ – ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳಲ್ಲಿ ಒಂದು ಚಿಕ್ಕ ಆಜ್ಞೆಯನ್ನಾದರೂ ಕೈಬಿಡುವವನು ತನ್ನ ಮೋಕ್ಷದ ಬಾಗಿಲನ್ನು ತನ್ನ ಕೈಗಳಿಂದ ಮುಚ್ಚುತ್ತಾನೆ. ನಿಜವಾದ ಮೋಕ್ಷದ ದಾರಿಗಳನ್ನು ಪವಿತ್ರ ಖುರ್‌ಆನ್ ತೆರೆದಿದೆ. ಉಳಿದವು ಎಲ್ಲವೂ ಅದರ ನೆರಳು ಆಗಿವೆ. ನೀವು ಪವಿತ್ರ ಖುರ್‌ಆನನ್ನು ಗಾಢವಾಗಿ ಚಿಂತಿಸುತ್ತಾ ಓದಿರಿ. ಅದನ್ನು ಬಹಳ ಪ್ರೀತಿಸಿರಿ. ಬೇರೆ ಯಾವುದನ್ನೂ ಪ್ರೀತಿಸಿರದ ರೀತಿಯಲ್ಲಿ ಪ್ರೀತಿಸಿರಿ. ಏಕೆಂದರೆ ಅಲ್ಲಾಹನು ನನ್ನೊಂದಿಗೆ ಹೀಗೆ ಹೇಳಿರುವನು: ಅಲ್ ಖೈರು ಕುಲ್ಲುಹೂ ಫಿಲ್‌ಖುರ್‌ಆನ್. ಎಲ್ಲ ವಿಧಗಳ ಒಳಿತುಗಳು ಪವಿತ್ರ ಖುರ್‌ಆನಿನಲ್ಲಿವೆ. ಇದೇ ಸತ್ಯವಾಗಿದೆ. ಬೇರೆ ವಸ್ತುಗಳಿಗೆ ಅದರ ಮೇಲೆ ಆದ್ಯತೆ ನೀಡುವವರ ಕುರಿತು ಖೇದವಾಗುತ್ತದೆ. ನಿಮ್ಮ ಎಲ್ಲ ಜಯಗಳ ಮತ್ತು ಮೋಕ್ಷದ ಮೂಲಸ್ಥಾನವು ಪವಿತ್ರ ಖುರ್‌ಆನ್ ಆಗಿದೆ. ಪವಿತ್ರ ಖುರ್‌ಆನ್ ಪ್ರಸ್ತಾಪಿಸಿರದಂತಹ ಯಾವುದೇ ಧಾರ್ಮಿಕ ಆವಶ್ಯಕತೆಗಳಿಲ್ಲ. ನಿಮ್ಮ ವಿಶ್ವಾಸವನ್ನು ಸತ್ಯಪಡಿಸುವುದರ ಅಥವಾ ಸುಳ್ಳೆಂದು ಸಾಬೀತುಪಡಿಸುವುದು ಪುನರುತ್ಥಾನದ ದಿನದಲ್ಲಿ ಖುರ್‌ಆನ್ ಆಗಿರುವುದು. ನೇರವಾಗಿ ನಿಮಗೆ ಮಾರ್ಗದರ್ಶನ ನೀಡಬಲ್ಲ ಗ್ರಂಥ ಪವಿತ್ರ ಖುರ್‌ಆನ್ ಹೊರತು ಬೇರೊಂದು ಆಕಾಶದ ಕೆಳಗೆ ಇಲ್ಲ. ನಿಮಗೆ ಖುರ್‌ಆನ್ ನೀಡಿ ಅಲ್ಲಾಹನು ಬಹಳ ಉಪಕಾರ ಮಾಡಿದ್ದಾನೆ. ನಾನು ಸತ್ಯವಾಗಿ ಹೇಳುತ್ತೇನೆ – ನಿಮಗೆ ಅವತೀರ್ಣಗೊಳಿಸಲ್ಪಟ್ಟ ಪವಿತ್ರ ಖುರ್‌ಆನ್ ಕ್ರೈಸ್ತರಿಗೆ ನೀಡಲ್ಪಡುತ್ತಿದ್ದರೆ ಅವರು ನಾಶವಾಗುತ್ತಿರಲಿಲ್ಲ. ನಿಮಗೆ ನೀಡಲ್ಪಟ್ಟ ಪವಿತ್ರ ಖುರ್‌ಆನ್ ಯಹೂದಿಯರಿಗೆ ನೀಡಲ್ಪಡುತ್ತಿದ್ದರೆ ಅವರ ಕೆಲವು ಪಂಗಡಗಳು ಪುನರುತ್ಥಾನ ದಿನವನ್ನು ನಿರಾಕರಿಸುತ್ತಿರಲಿಲ್ಲ. ಆದುದರಿಂದ ನೀವು ಈ ಅನುಗ್ರಹದ ಬಗ್ಗೆ ಲಕ್ಷ್ಯ ಕೊಡಿರಿ. ಇದು ನಿಮಗೆ ನೀಡಲ್ಪಟ್ಟ ಅತ್ಯಂತ ಪ್ರಿಯಕರವಾದ ಅನುಗ್ರಹವಾಗಿದೆ. ಇದು ಬಹಳ ದೊಡ್ಡ ಸಂಪತ್ತಾಗಿದೆ. ಪವಿತ್ರ ಖುರ್‌ಆನ್ ಬರದೆ ಇರುತ್ತಿದ್ದರೆ ಲೋಕವು ಒಂದು ಕೊಳಕು ವಸ್ತುವಿನ ಹಾಗೆ ಆಗುತ್ತಿತ್ತು. ಪವಿತ್ರ ಖುರ್‌ಆನ್ ಎದುರಿಗೆ ಉಳಿದ ಎಲ್ಲ ಮಾರ್ಗದರ್ಶನಗಳು ನಿರರ್ಥಕವಾಗಿವೆ.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 26 – 27)**

ಪವಿತ್ರ ಖುರ್‌ಆನನ್ನು ಎಷ್ಟರ ಮಟ್ಟಿಗೆ ತಾನು ಪ್ರೀತಿಸುತ್ತಿರುವೆನು ಎಂದೂ ಅದರ ಆಜ್ಞೆಗಳನ್ನು ಅನುಸರಿಸುತ್ತಾ ಅದರ ಪ್ರಕಾರ ತಾನು ವರ್ತಿಸುತ್ತಿರುವೆನು ಎಂದೂ ನಮ್ಮವರಲ್ಲಿ ಪ್ರತಿಯೊಬ್ಬನು ತನ್ನನ್ನು ಪರಿಶೀಲಿಸಬೇಕು.

ಪ್ರೀತಿಯನ್ನು ಪ್ರಕಟಿಸಲು ಅನೇಕ ರೀತಿಗಳಿವೆ. ಅತ್ಯಂತ ಆವಶ್ಯಕವಾದುದು ಮತ್ತು ಪ್ರತಿಯೊಬ್ಬ ಅಹ್ಮದೀ ತನಗೆ ಕಡ್ಡಾಯಗೊಳಿಸಬೇಕಾದುದು ಏನೆಂದರೆ, ತಪ್ಪದೆ ಪ್ರತಿದಿನ ಎರಡು ಮೂರು ರುಕೂಅ್ ಆವಶ್ಯಕವಾಗಿ ಪವಿತ್ರ ಖುರ್‌ಆನಿನಿಂದ ಓದಬೇಕು. ಮುಂದಿನ ಹೆಜ್ಜೆ ಭಾಷಾಂತರವನ್ನು ಓದುವುದಾಗಿದೆ. ಪ್ರತಿದಿನ ಪವಿತ್ರ ಖುರ್‌ಆನ್ ಓದಿ ಅದರ ಭಾಷಾಂತರ ಸಹ ಓದಿದರೆ ಪವಿತ್ರ ಖುರ್‌ಆನಿನ ಸುಂದರ ಉಪದೇಶಗಳು ತಾನಾಗಿಯೇ ಮಸ್ತಿಷ್ಕದಲ್ಲಿ ತಳವೂರಲು ತೊಡಗುವುವು.

ಬೈಅತಿನ ಈ ಶರತ್ತಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ ಒಂದು ಕಾರ್ಯ, ಅಲ್ಲಾಹನು ಹೇಳಿದುದನ್ನೂ ಹಝ್ರತ್ ಮುಹಮ್ಮದ್ ರಸೂಲ್(ಸ) ಹೇಳಿದುದನ್ನೂ ತನ್ನ ನಿತ್ಯ ಕೃತ್ಯಗಳಿಗೆ ಮಾರ್ಗಸೂಚಿಯನ್ನಾಗಿ ಮಾಡಿಕೊಳ್ಳಬೇಕೆಂಬುದಾಗಿದೆ.

ಆವಶ್ಯಕವಾದಾಗಲೆಲ್ಲ ಅವುಗಳಿಂದ ಸಲಹೆ ಪಡೆಯುವುದನ್ನು ಇಲ್ಲಿ ಸೂಚಿಸಲಾಗಿದೆ. ಇದು ಕೇವಲ ಬಾಯಿಯಲ್ಲಿ ಹೇಳುವ ಮಾತಲ್ಲವಷ್ಟೆ. ಈ ಪ್ರತಿಜ್ಞೆಯನ್ನು ಈಡೇರಿಸಲು ಯೋಚಿಸುವುದಾದರೆ ಬಹಳ ಚಿಂತೆ ಉಂಟಾಗುತ್ತದೆ. ಈ ಬಗ್ಗೆ ಅಲ್ಲಾಹನು ಹೀಗೆ ಹೇಳಿದ್ದಾನೆ:

يَا أَيُّهَا الَّذِينَ آمَنُوا أَطِيعُوا اللَّهَ وَأَطِيعُوا الرَّسُولَ وَأُولِي الْأَمْرِ مِنْكُمْ فَإِنْ تَنَازَعْتُمْ فِي
شَيْءٍ فَرُدُّوهُ إِلَى اللَّهِ وَالرَّسُولِ إِنْ كُنْتُمْ تُؤْمِنُونَ بِاللَّهِ وَالْيَوْمِ الْآخِرِ ذَٰلِكَ خَيْرٌ وَأَحْسَنُ تَأْوِيلًا

ಎಲೈ ವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ವಿಧೇಯರಾಗಿರಿ. ಅವನ ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ. ಯಾವುದಾದರೂ ವಿಚಾರದಲ್ಲಿ ನಿಮ್ಮೊಳಗೆ ಭಿನ್ನಾಭಿಪ್ರಾಯವಿದ್ದರೆ, ನೀವು ಅಲ್ಲಾಹನಲ್ಲಿ ಮತ್ತು ಅಂತ್ಯ ದಿನದಲ್ಲಿ ವಿಶ್ವಾಸವುಳ್ಳವರಾದರೆ (ಇತ್ಯರ್ಥಕ್ಕಾಗಿ) ಅದನ್ನು ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಒಪ್ಪಿಸಿರಿ. ಅದು ಅತ್ಯುತ್ತಮ ಮಾರ್ಗವಾಗಿದೆ. ಅದರ ಅಂತ್ಯ ಫಲ ಅತಿ ಹೆಚ್ಚು ಗುಣಕರವಾದುದು. **(4:60)**

وَأَطِيعُوا اللَّهَ وَالرَّسُولَ لَعَلَّكُمْ تُرْحَمُونَ

ನಿಮ್ಮ ಮೇಲೆ ಕರುಣೆ ತೋರಿಸಲ್ಪಡಲಿಕ್ಕಾಗಿ ಅಲ್ಲಾಹನನ್ನೂ ಅವನ ಪ್ರವಾದಿಯನ್ನೂ ಅನುಸರಿಸಿರಿ. **(3:133)**

يَسْأَلُونَكَ عَنِ الْأَنْفَالِ ۖ قُلِ الْأَنْفَالُ لِلَّهِ وَالرَّسُولِ فَاتَّقُوا اللَّهَ وَأَصْلِحُوا ذَاتَ بَيْنِكُمْ
وَأَطِيعُوا اللَّهَ وَرَسُولَهُ إِنْ كُنْتُمْ مُؤْمِنِينَ

ಯುದ್ಧದಲ್ಲಿ ಸ್ವಾಧೀನಪಡಿಸಿದ ಸಂಪತ್ತಿನ ಬಗ್ಗೆ ಅವರು ನಿನ್ನೊಡನೆ ಕೇಳುತ್ತಾರೆ. ಹೇಳು: ಯುದ್ಧದಲ್ಲಿ ಸ್ವಾಧೀನಪಡಿಸಿದ ಸಂಪತ್ತು ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕನಿಗೆ ಸೇರಿದ್ದು. ಆದುದರಿಂದ ನೀವು ಅಲ್ಲಾಹನ ಭಯಭಕ್ತಿಯುಳ್ಳವರಾಗಿರಿ. ಹಾಗೂ ನಿಮ್ಮ ಮಧ್ಯೆ ಪರಸ್ಪರ ಸಂಬಂಧವನ್ನು ಉತ್ತಮಗೊಳಿಸಿರಿ. ನೀವು ಸತ್ಯವಿಶ್ವಾಸಿಗಳೆಂದಾದರೆ ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕನನ್ನು ಅನುಸರಿಸಿರಿ. **(8:2)**

ಮೇಲಿನ ವಚನಗಳಲ್ಲಿ ಅಲ್ಲಾಹನು ಅವನ ಆಜ್ಞೆಗಳನ್ನು ಸರಿಯಾಗಿ ಅನುಸರಿಸಲು ಹೇಳಿರುವನು. ಅವುಗಳ ಪ್ರಕಾರ ವರ್ತಿಸಿರಿ. ರಸೂಲುಲ್ಲಾಹ್(ಸ) ಈ ಆಜ್ಞೆಗಳಿಗೆ ನೀಡಿದ ವ್ಯಾಖ್ಯಾನದ ಪ್ರಕಾರ ವರ್ತಿಸಿರಿ. ನಿಮಗೆ ನೇಮಿಸಲಾದ ಅಮೀರರನ್ನೂ ನಿಮಗೆ ಏರ್ಪಡಿಸಲಾದ ವ್ಯವಸ್ಥೆಯನ್ನೂ ಪೂರ್ಣವಾಗಿ ಅನುಸರಿಸಿರಿ. ಹೀಗೆ ಮಾಡಿದರೆ ನೀವು ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸಿದಂತಾಗುವುದು.

ಇದರ ಬಗ್ಗೆ ಕೆಲವು ಹದೀಸುಗಳು ಹೀಗಿವೆ:

ಹಝ್ರತ್ ಉಬಾದ ಬಿನ್ ಸಾಮಿತ್(ರ) ವರದಿ ಮಾಡುತ್ತಾರೆ: ನಾವು ಹಝ್ರತ್ ರಸೂಲುಲ್ಲಾಹ್‌ರ(ಸ) ಬೈಅತ್ ಮಾಡುವಾಗ ಹೀಗೆ ಪ್ರತಿಜ್ಞೆ ಮಾಡಿದೆವು – ನಾವು ನಮಗೆ ಇಷ್ಟವಿದ್ದರೂ ಇಷ್ಟವಿಲ್ಲದಿದ್ದರೂ ರಸೂಲುಲ್ಲಾಹ್‌ರ(ಸ) ಆಜ್ಞೆಗಳನ್ನು ಆಲಿಸಿ ಅನುಸರಿಸುವೆವು.

**(ಬುಖಾರಿ ಕಿತಾಬುಲ್ ಅಹ್‌ಕಾಮ್)**

ಅಬ್ದುರ್ರಹ್ಮಾನ್ ಬಿನ್ ಅಮ್ರ್ ಸಲ್ಮೀ ಮತ್ತು ಹಜರ್ ಬಿನ್ ಹಜರ್ ಹೀಗೆ ಹೇಳುತ್ತಾರೆ: ಅವರು ಇರ್‌ಬಾಝ್ ಬಿನ್ ಸಾರಿಯ್ಯರ ಹತ್ತಿರ ಬಂದಾಗ, ಇರ್‌ಬಾಝ್ ಹೇಳಿದರು: ಒಂದು ದಿನ ಹಝ್ರತ್ ರಸೂಲುಲ್ಲಾಹ್‌ರು(ಸ) ಸುಬ್‌ಹ್ ನಮಾಝಿಗೆ ನೇತೃತ್ವ ವಹಿಸಿದರು. ಅನಂತರ ಅವರು ಬಹಳ ಪ್ರಭಾವಶಾಲಿ ರೀತಿಯಲ್ಲಿ ನಮಗೆ ಉಪದೇಶ ನೀಡಿದರು. ಆಗ ಜನರು ಅತ್ತರು ಮತ್ತು ಅವರ ಹೃದಯಗಳು ಕಂಪಿಸಿದುವು. ಒಬ್ಬರು ಹೀಗೆ ಕೇಳಿದರು: ಇದು ನಿಮ್ಮ ವಿದಾಯ ಭಾಷಣದಂತಿದೆ. ನಿಮ್ಮ ಉಪದೇಶವೇನು? ಆಗ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು – ನನ್ನ ಉಪದೇಶ ಇದಾಗಿದೆ: ನೀವು ಅಲ್ಲಾಹನಿಗೆ ಭಯಭಕ್ತಿಯುಳ್ಳವರಾಗಿರಿ. ನಿಮ್ಮ ಅಮೀರ್ ಒಬ್ಬ ನೀಗ್ರೋ ಗುಲಾಮನಾಗಿದ್ದರೂ ಆಜ್ಞೆಯನ್ನು ಆಲಿಸಿ ಅನುಸರಿಸಿರಿ. ನನ್ನ ಅನಂತರ ಜೀವಂತವಾಗಿರುವವರು ಬಹಳ ದೊಡ್ಡ ಭಿನ್ನಾಭಿಪ್ರಾಯಗಳ ಕಾಲವನ್ನು ನೋಡುವರು. ನೀವು ನನ್ನ ಮತ್ತು ನನ್ನಿಂದ ಮಾರ್ಗದರ್ಶನ ಪಡೆದ ನೇರಮಾರ್ಗದಲ್ಲಿ ನಡೆಯುವ ಖಲೀಫರ ನಡೆವಳಿಕೆಗಳನ್ನು ಅನುಸರಿಸಬೇಕು. ಅದನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು. ಹಲ್ಲುಗಳಿಂದ ಬಲವಾಗಿ ಕಚ್ಚಿ ಹಿಡಿಯಬೇಕು. ನೀವು ಧಾರ್ಮಿಕ ಕಾರ್ಯಗಳಲ್ಲಿ ಹೊಸ

ಆಚಾರಗಳನ್ನು ಕೈಬಿಡಬೇಕು. ಧರ್ಮದ ಹೆಸರಿನಲ್ಲಿ ಜಾರಿಗೊಳ್ಳುವ ಹೊಸ ಆಚಾರಗಳು ಬಿದ್‌ಅತ್‌ಗಳಾಗಿವೆ (ನವೀನ ಆಚಾರಗಳು). ಬಿದ್‌ಅತ್ ಮಾರ್ಗ ಭ್ರಷ್ಟತೆಯಾಗಿದೆ.

**(ತಿರ್‌ಮಿಧೀ – ಕಿತಾಬುಲ್ ಇಲ್ಮ್)**

ಹಝ್ರತ್ ರಸೂಲುಲ್ಲಾಹ್‌ರನ್ನು(ಸ) ಪೂರ್ಣವಾಗಿ ಅನುಸರಿಸುವ ಸತ್ಯವಿಶ್ವಾಸಿಗಳೆಂದು ವಾದಿಸುವ ಅಹ್ಮದಿಯರು ಯಾವಾಗಲೂ ಮೇಲಿನ ಹದೀಸನ್ನೂ ಅದರ ಉಪದೇಶವನ್ನೂ ಗಮನದಲ್ಲಿರಿಸಬೇಕು. ಅದೇ ರೀತಿಯ ಇನ್ನೊಂದು ಹದೀಸು ಹೀಗಿದೆ: ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು – ಯಾರಲ್ಲಿ ಮೂರು ಸಂಗತಿಗಳು ಇವೆಯೋ ಅವನು ಸತ್ಯವಿಶ್ವಾಸದ ಸಿಹಿಯನ್ನು ಗಳಿಸಿರುವನು. ಒಂದು – ಅಲ್ಲಾಹನು ಮತ್ತು ಅವನ ರಸೂಲ್ ಉಳಿದ ಎಲ್ಲರಿಗಿಂತಲೂ ಅವನಿಗೆ ಪ್ರಿಯರಾಗಿರುವುದು. ಎರಡು – ಯಾರನ್ನಾದರೂ ಅವನು ಪ್ರೀತಿಸುವನಾದರೆ ಅದು ಅಲ್ಲಾಹನ ಪ್ರೀತಿ ಗಳಿಸಲಿಕ್ಕಾಗಿರುವುದು. ಮೂರು – ಅವನು ಅವಿಶ್ವಾಸಕ್ಕೆ ಮರಳಿ ಹೋಗುವುದನ್ನು, ಬೆಂಕಿಗೆ ಹಾಕುವುದನ್ನು ಇಷ್ಟಪಡದ ಹಾಗೆ ಇಷ್ಟಪಡದಿರುವುದು.

**(ಬುಖಾರಿ – ಕಿತಾಬುಲ್ ಈಮಾನ್)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ –

قُلْ اِنْ كُنْتُمْ تُحِبُّوْنَ اللّٰهَ فَاتَّبِعُوْنِيْ يُحْبِبْكُمُ اللّٰهُ

**ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ್**. ಅಲ್ಲಾಹನ ಪ್ರೀತಿಯನ್ನು ಗಳಿಸಲು ಇರುವುದು ಒಂದೇ ಮಾರ್ಗವಾಗಿದೆ. ಅದು ಹಝ್ರತ್ ರಸೂಲುಲ್ಲಾಹ್‌ರನ್ನು(ಸ) ಅನುಸರಿಸುವ ಮಾರ್ಗವಾಗಿದೆ. ನಿಮ್ಮನ್ನು ಅಲ್ಲಾಹನೊಂದಿಗೆ ಭೇಟಿ ಮಾಡಿಸುವ ಬೇರೆ ಮಾರ್ಗವಿಲ್ಲ. ಮನುಷ್ಯನ ಉದ್ದೇಶಲಕ್ಷ್ಯ ಏಕನಾದ, ಭಾಗಿದಾರನಿಲ್ಲದ ದೇವನನ್ನು ಅರಸುವುದಾಗಿದೆ. ಬಹುದೇವಾರಾಧನೆ ಮತ್ತು ನವೀನ ಆಚಾರಗಳಿಂದ ದೂರಸರಿಯಬೇಕು. ದುರಾಚಾರಗಳನ್ನು ಮತ್ತು ಕೆಟ್ಟ ಅಭಿಲಾಷೆಗಳನ್ನು ಅನುಸರಿಸಬಾರದು. ನಾನು ಪುನರಾವರ್ತಿಸಿ ಹೇಳುತ್ತೇನೆ: ಹಝ್ರತ್ ರಸೂಲುಲ್ಲಾಹ್‌ರ(ಸ) ಸತ್ಯವಾದ ಮಾರ್ಗವನ್ನು ಅವಲಂಬಿಸದೆ ಬೇರೆ ಯಾವ ರೀತಿಯಲ್ಲಿಯೂ ಮನುಷ್ಯನು ಜಯಶಾಲಿಯಾಗಲಾರನು.

ನಮಗಿರುವುದು ಒಬ್ಬ ರಸೂಲ್. ಒಂದೇ ಪವಿತ್ರ ಖುರ್‌ಆನ್ ಆ ರಸೂಲರಿಗೆ(ಸ) ಅವತೀರ್ಣವಾಯಿತು. ಅದನ್ನು ಅನುಸರಿಸುವ ಮೂಲಕ

ನಾವು ಅಲ್ಲಾಹನ ಸಾಮೀಪ್ಯ ಗಳಿಸುವೆವು. ಇಂದಿನ ಕಾಲದಲ್ಲಿ ಫಕೀರರು ಆವಿಷ್ಕರಿಸಿದ ರೀತಿ ನೀತಿಗಳು, ಗೋರಿಗಳ ಮೇಲ್ವಿಚಾರಕರು ಸೃಷ್ಟಿಸಿದ ಪ್ರಾರ್ಥನೆಗಳು, ದುರೂದ್ ಮತ್ತು ಮಂತ್ರಗಳು ಇವೆಲ್ಲ ಮನುಷ್ಯರನ್ನು ನೇರವಾದ ಮಾರ್ಗದಿಂದ ದಾರಿ ತಪ್ಪಿಸುವ ಸಾಧನಗಳಾಗಿವೆ. ಆದುದರಿಂದ ನೀವು ಅವುಗಳಿಂದ ದೂರಸರಿಯಿರಿ. ಆ ಜನರು ಹಝ್ರತ್ ರಸೂಲುಲ್ಲಾಹ್[ಸ] ಖಾತಮುಲ್ ಅಂಬಿಯಾ (ಪ್ರವಾದಿಗಳ ಮುದ್ರೆ) ಆಗಿರುವ ಮುದ್ರೆಯನ್ನು ಮುರಿಯಲು ಇಚ್ಛಿಸಿ ಅವರು ತಮ್ಮದೇ ಆದ ಹೊಸ ಶರೀಅತನ್ನು ಸೃಷ್ಟಿಸಿರುವರು. ನೀವು ನೆನಪಿಡಿರಿ, ಪವಿತ್ರ ಖುರ್‌ಆನ್ ಮತ್ತು ಹಝ್ರತ್ ರಸೂಲುಲ್ಲಾಹ್‌ರ[ಸ]ಆಜ್ಞೆಗಳ ಅನುಸರಣೆ ಮತ್ತು ನಮಾಝ್, ಉಪವಾಸ ಮೊದಲಾದ ನಿಗದಿತ ಅನುಷ್ಠಾನ ಕ್ರಮಗಳ ಪಾಲನೆ – ಇವುಗಳ ಹೊರತು ಅಲ್ಲಾಹನ ಅನುಗ್ರಹಗಳ ಬಾಗಿಲನ್ನು ತೆರೆಯಲು ಬೇರೆ ಕೀಲಿಗೈ ಇಲ್ಲವೇ ಇಲ್ಲ. ಈ ಮಾರ್ಗಗಳನ್ನು ಬಿಟ್ಟು ಹೊಸ ಮಾರ್ಗಗಳನ್ನು ತೆರೆಯುವವರು ಮೇಲಿನ ಆಜ್ಞೆಗಳನ್ನು ಮರೆತವರಾಗಿದ್ದಾರೆ. ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳನ್ನು ಅನುಸರಿಸದೆ ಬೇರೆ ಬೇರೆ ಮಾರ್ಗಗಳಿಂದ ಅಲ್ಲಾಹನನ್ನು ಹುಡುಕುವವನು ನಿರಾಶೆ ಹೊಂದಿ ಮೃತನಾಗುವನು.

**(ಮಲ್‌ಫೂಝಾತ್; ಸಂಪುಟ 3, ಪುಟ 102 – 103, ಹೊಸ ಮುದ್ರಣ)**

ಅಲ್ಲಾಹನು ಹೇಳುತ್ತಾನೆ:

قُلْ اِنْ كُنْتُمْ تُحِبُّوْنَ اللّٰهَ فَاتَّبِعُوْنِيْ يُحْبِبْكُمُ اللّٰهُ

**ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ್**. ನೀನು ಹೇಳು – ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು. **(3:32).** ಅಲ್ಲಾಹನ ಪ್ರೀತಿ ಗಳಿಸಲು ಹಝ್ರತ್ ರಸೂಲುಲ್ಲಾಹ್‌ರನ್ನು[ಸ] ಸತ್ಯಸಂಧವಾಗಿ ಅನುಸರಿಸಬೇಕು. ಜನರು ವಿವಿಧ ದುರಾಚಾರಗಳಲ್ಲಿ ಬಂಧಿತರಾಗಿದ್ದಾರೆ. ಒಬ್ಬನು ಮೃತನಾದರೆ ಅವನಿಗೋಸ್ಕರ ಪ್ರಾರ್ಥನೆ ಮಾಡುವುದರ ಬದಲು ನವ ನವೀನ ಆಚಾರಾನುಷ್ಠಾನಗಳು ನಡೆಯುತ್ತವೆ. ನವೀನ ಆಚಾರಗಳನ್ನು ಹಝ್ರತ್ ರಸೂಲುಲ್ಲಾಹ್‌ರ[ಸ] ಉಪದೇಶಗಳಿಗೆ ವಿರುದ್ಧವಾಗಿವೆ. ಹಝ್ರತ್ ರಸೂಲುಲ್ಲಾಹ್‌ರ[ಸ] ಅಧ್ಯಾಪನೆಗಳು ಸಾಕಾಗಲಾರದು ಎಂದು ಭಾವಿಸಿ ಅವರಿಗೆ ಅಪಮಾನ ಸಹ ಉಂಟುಮಾಡಲಾಗುತ್ತಿದೆ. ಹಝ್ರತ್ ರಸೂಲುಲ್ಲಾಹ್[ಸ] ಹೇಳಿದುದು ಮಾತ್ರ ಸಾಕು ಎಂದು ಅವರು ಯೋಚಿಸುತ್ತಿದ್ದರೆ ಹೊಸ ಆಚಾರಗಳನ್ನು ಸೃಷ್ಠಿಸುವ ಆವಶ್ಯಕತೆ ಉಂಟಾಗುತ್ತಿರಲಿಲ್ಲ.

**(ಮಲ್‌ಫೂಝಾತ್; ಸಂಪುಟ 3, ಪುಟ 316 – ಹೊಸಮುದ್ರಣ)**

ಕೆಲವು ದಿನಗಳ ಇಹಲೋಕದ ಜೀವಿತ ಕಷ್ಟದಲ್ಲಾಗಲಿ, ಸುಖದಲ್ಲಾಗಲಿ ಹೇಗಾದರೂ ದಾಟಿಹೋಗುವುದು. ಆದರೆ ಪರಲೋಕದ ಸಂಗತಿ ಬಹಳ ಕಠಿಣ ಮತ್ತು ಶಾಶ್ವತವಾದುದಾಗಿದೆ. ಅದು ಕೊನೆಗೊಳ್ಳಲಾರದು. ಇಹಲೋಕ ಜೀವಿತದಲ್ಲಿ ಒಬ್ಬನು ಅಲ್ಲಾಹನೊಂದಿಗೆ ಸ್ವಚ್ಛವಾದ ಸಂಬಂಧವಿರಿಸಿದ್ದರೆ, ಅಲ್ಲಾಹನ ಭಯವು ಅವನ ಹೃದಯವನ್ನು ಆವರಿಸಿದ್ದರೆ, ಅವನು ಪಾಪ ಕೃತ್ಯಗಳಿಂದ ಮುಖ ತಿರುಗಿಸಿ ಅಲ್ಲಾಹನು ಪಾಪವೆಂದು ಹೆಸರಿಸಿದ ಪಾಪ ಕೃತ್ಯಗಳನ್ನು ಮಾಡಿರದಿದ್ದರೆ ಅಲ್ಲಾಹನ ಅನುಗ್ರಹ ಅವನ ಕೈ ಹಿಡಿಯುವುದು. ಅಲ್ಲಾಹನು ಅವನಿಂದ ಸಂಪ್ರೀತನಾಗುವ ಮತ್ತು ಅವನು ಅಲ್ಲಾಹನಿಂದ ಸಂತುಷ್ಟನಾಗುವ ಸ್ಥಾನವನ್ನು ಅವನು ಗಳಿಸುವನು. ಹೀಗೆ ಮಾಡದೆ ನಿರ್ಲಕ್ಷ್ಯದಿಂದ ಇಹಲೋಕ ಜೀವಿತವನ್ನು ಕಳೆದರೆ ಅವನ ಅಂತಿಮ ಸ್ಥಿತಿ ಅಪಾಯಕರವಾಗುವುದು. ಆದುದರಿಂದ ಬೈಅತ್ ಮಾಡುವಾಗ ಬೈಅತಿನ ಉದ್ದೇಶವೇನು, ಅದರಿಂದ ಸಿಗುವ ಲಾಭವೇನು ಎಂದು ತೀರ್ಮಾನಿಸಬೇಕು. ಲೌಕಿಕ ಉದ್ದೇಶಕ್ಕಾಗಿ ಬೈಅತ್ ಮಾಡುವುದಾದರೆ ಅದು ನಿಷ್ಫಲ. ಆದರೆ ಧರ್ಮ ಕಾರ್ಯಕ್ಕಾಗಿ ಮತ್ತು ಅಲ್ಲಾಹನ ಸಂಪ್ರೀತಿ ಗಳಿಸಲು ಬೈಅತ್ ಮಾಡುವುದಾದರೆ ಅಂತಹ ಬೈಅತ್ ಅನುಗ್ರಹೀತವೂ ತನ್ನ ನೈಜ ಉದ್ದೇಶಕ್ಕಾಗಿ ಮಾಡಿದುದೂ ಆಗಿರುತ್ತದೆ. ಸತ್ಯವಾದ ಬೈಅತ್‌ನಿಂದ ಸಿಗಬಹುದಾದ ಲಾಭಗಳು ಅಂತಹ ಬೈಅತ್‌ನಿಂದ ಪೂರ್ಣವಾಗಿ ದೊರಕುವುದೆಂದು ನಿರೀಕ್ಷಿಸಬಹುದಾಗಿದೆ.

**(ಮಲ್‌ಫೂಝಾತ್ ಭಾಗ 6, ಪುಟ 142)**

ಹಝ್ರತ್ ಮಸೀಹ್ ಮೌಊದ್[ಅ] ಈ ಕಾಲದ ಇಮಾಮರೆಂದು ಹೃದಯದ ಅಂತರಾಳದಿಂದ ಅಂಗೀಕರಿಸಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ಅಲ್ಲಾಹನ ಮತ್ತು ಅವನ ರಸೂಲರ[ಸ] ಆಡಳಿತೆಯನ್ನು ಲೋಕದಲ್ಲಿ ಸ್ಥಾಪಿಸಲು ಅವರು ಯಾವ ನೋವಿನಿಂದ ಮತ್ತು ಶ್ರದ್ಧೆಯಿಂದ ತಮ್ಮ ಜಮಾಅತನ್ನು ಸಿದ್ಧಪಡಿಸಲು ಇಚ್ಛಿಸಿ ಉಪದೇಶಿಸಿರುವರೋ ಅಲ್ಲಾಹನು ನಮ್ಮನ್ನು ಹಾಗೆಯೇ ಮಾಡಲಿ. ಅವರು ಯಾವ ಶರತ್ತುಗಳನ್ನು ವಿಧಿಸಿ ನಮ್ಮಿಂದ ಬೈಅತ್ ಪ್ರತಿಜ್ಞೆ ಮಾಡಿಸಿರುವರೋ ಅವುಗಳನ್ನು ಪರಿಪೂರ್ಣವಾಗಿ ಪಾಲಿಸಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ಅವುಗಳನ್ನು ಯಾವಾಗಲೂ ನಮ್ಮ ಮುಂದಿರಿಸಿ ಕಾರ್ಯರೂಪಕ್ಕೆ ತರುವವರಾಗುವ. ನಮ್ಮ ಯಾವುದೇ ಕೆಲಸ ಅವರ ಉಪದೇಶಗಳಿಗೆ ವಿರುದ್ಧವಾಗದಿರಲಿ. ನಾವು ಯಾವಾಗಲೂ ನಮ್ಮ ನಡೆವಳಿಕೆಗಳ ಲೆಕ್ಕಾಚಾರ ಮಾಡುವವರಾಗುವ. ಅಲ್ಲಾಹನು ನಮಗೆ ಸಹಾಯ ಮಾಡಲಿ.

ಇಂದು ದುಆ ಮಾಡಿದ ನಂತರ ಈ ಸಮ್ಮೇಳನ ಮುಕ್ತಾಯವಾಗುವುದು. ನೀವು ಈ ಜಲ್ಸದಿಂದ ಗಳಿಸಿದ ಅನುಗ್ರಹಗಳಿಂದ ವರ್ಷವಿಡೀ ನಿಮ್ಮ ಜೀವಿತದಲ್ಲಿ ಲಾಭ ಪಡೆಯುವವರಾಗಿರಿ. ನಮ್ಮ ಸಂತಾನ ಸಹ ಅಲ್ಲಾಹನೊಂದಿಗೂ ಹಝ್ರತ್ ರಸೂಲುಲ್ಲಾಹ್‌ರೊಂದಿಗೂ[ಸ], ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮ್‌ರೊಂದಿಗೂ ಖಿಲಾಫತ್‌ನೊಂದಿಗೂ ಪ್ರೀತಿಯ ಸಂಬಂಧವನ್ನು ಸ್ಥಿರವಾಗಿ ಇಟ್ಟುಕೊಳ್ಳುವವರಾಗಲಿ. ಅಲ್ಲಾಹನು ಕುಂದುಕೊರತೆಗಳನ್ನೂ ಪಾಪಗಳನ್ನೂ ಅವಗಣಿಸಿ ಕ್ಷಮಿಸಲಿ ಮತ್ತು ಅವನು ತನ್ನ ಅನುಗ್ರಹದಿಂದ, ಕೇವಲ ಅನುಗ್ರಹದಿಂದ ತನಗೆ ಪ್ರಿಯರಾದವರ ಜಮಾಅತ್‌ನಲ್ಲಿ ನಮ್ಮನ್ನು ಸೇರಿಸಲಿ.

ಹೇ ಅಲ್ಲಾಹ್, ನೀನು ಕ್ಷಮಿಸುವವನೂ (ಗ಼ಫೂರ್) ಪದೇ ಪದೇ ದಯೆದೋರುವವನೂ (ರಹೀಮ್) ಆಗಿರುವೆ. ನಮ್ಮ ಪಾಪಗಳನ್ನು ಕ್ಷಮಿಸು. ನಮ್ಮ ಮೇಲೆ ದಯೆದೋರು. ನಿನ್ನ ಕ್ಷಮೆ ಮತ್ತು ಅನುಗ್ರಹದ ಚಾದರದಿಂದ ನಮ್ಮನ್ನು ಮುಚ್ಚು. ನಮ್ಮನ್ನು ಎಂದೂ ನಿನ್ನಿಂದ ಬೇರ್ಪಡಿಸಬೇಡ. ಆಮೀನ್ ಯಾ ರಬ್ಬಲ್ ಆಲಮೀನ್. (ಸಕಲ ಲೋಕಗಳ ಪ್ರಭುವೇ, ನಮ್ಮ ದುಆವನ್ನು ಸ್ವೀಕರಿಸು)

**(ಜಲ್ಸಾ ಸಾಲಾನ ಜರ್ಮನಿಯ ಸಮಾರೋಪ ಭಾಷಣದಿಂದ; 24/8/2003)**

★★★

## ಬೈಅತಿನ ಏಳನೆಯ ಶರತ್ತು

### ಅಹಂಕಾರ, ತಾತ್ಸಾರ ಭಾವನೆಗಳನ್ನು ಸಂಪೂರ್ಣ ತ್ಯಜಿಸಿ ವಿನಯಭಾವ, ಸುಸ್ವಭಾವ, ಸೌಜನ್ಯ ಮತ್ತು ನಿರಾಡಂಬರತೆಯಿಂದ ಜೀವಿಸುವೆನು.

### ಶಿರ್ಕ್ ನಂತರ ಅಹಂಕಾರದ ಹಾಗಿರುವ ಕೆಡುಕು ಬೇರೆ ಇಲ್ಲ

ಶೈತಾನನು ಅಹಂಕಾರದಿಂದ ವರ್ತಿಸಿದ ನಂತರ ಆರಂಭ ಕಾಲದಿಂದಲೇ ಹೀಗೆ ನಿರ್ಧರಿಸಿದ್ದನು: ನಾನು ನನಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿ ಜನರನ್ನು ಅರ್ರಹ್ಮಾನ್ ಆಗಿರುವ (ಅಪರಿಮಿತ ದಯೆದೋರುವವನಾದ) ಅಲ್ಲಾಹನ ದಾಸರನ್ನಾಗಲು ಜನರನ್ನು ಬಿಟ್ಟುಬಿಡಲಾರೆನು. ವಿವಿಧ ರೀತಿಗಳಿಂದ ಮನುಷ್ಯರನ್ನು ನನ್ನ ಬಲೆಯಲ್ಲಿ ಸಿಲುಕಿಸುವೆನು. ಮನುಷ್ಯನು ಯಾವುದಾದರೂ ಸತ್ಕಾರ್ಯ ಮಾಡಿದರೂ ಅವನ ಪ್ರಕೃತಿದತ್ತ ಗುಣದ ಪ್ರಕಾರ ಹೆಮ್ಮೆಪಡಲು ತೊಡಗುವನು. ಮನುಷ್ಯನ ಹೆಮ್ಮೆ ಕ್ರಮೇಣ ಅವನನ್ನು ಅಹಂಕಾರದ ಕಡೆಗೆ ಕೊಂಡೊಯ್ಯುವುದು. ಅಹಂಕಾರವು ಅವನು ಮಾಡಿದ ಸತ್ಕಾರ್ಯಗಳ ಪ್ರತಿಫಲದಿಂದ ವಂಚಿತನನ್ನಾಗಿ ಮಾಡುವುದು.

ಮನುಷ್ಯನನ್ನು ನೇರಮಾರ್ಗದಿಂದ ದಾರಿತಪ್ಪಿಸುವೆನು ಎಂದು ಶೈತಾನನು ಪ್ರಥಮ ದಿನದಿಂದಲೇ ನಿರ್ಧರಿಸಿದ್ದನು.

ಶೈತಾನನು ತನ್ನ ಅಹಂಭಾವದ ಕಾರಣದಿಂದಲೇ ಅಲ್ಲಾಹನ ಆಜ್ಞೆಯನ್ನು ಧಿಕ್ಕರಿಸಿದ್ದನು. ಆದ್ದರಿಂದ ಇದೇ ಆಯುಧವನ್ನು ಶೈತಾನನು ವಿವಿಧ ಉಪಾಯಗಳಿಂದ ಮನುಷ್ಯರ ಮೇಲೆ ಪರೀಕ್ಷಿಸುತ್ತಾನೆ. ಅಲ್ಲಾಹನ ವಿಶಿಷ್ಟ ದಾಸರು ಯಾವಾಗಲೂ ಅಲ್ಲಾಹನನ್ನು ಆರಾಧಿಸುತ್ತಾ ಇರುತ್ತಾರೆ. ಅವರು ಶೈತಾನನ ಆಕ್ರಮಣಗಳಿಂದ ಸುರಕ್ಷಿತರಾಗುತ್ತಾರೆ. ಇವರನ್ನು ಹೊರತು ಪಡಿಸಿದರೆ, ಸಾಮಾನ್ಯವಾಗಿ ಅಹಂಕಾರದ ಮೂಲಕವೇ ಶೈತಾನನು ಮನುಷ್ಯನನ್ನು ತನ್ನ ಹಿಡಿತಕ್ಕೊಳಪಡಿಸಲು ಸಫಲನಾಗುತ್ತಾನೆ. ಇದನ್ನು ಸಾಮಾನ್ಯ ವಿಷಯವೆಂದು ತಿಳಿದುಕೊಳ್ಳಬಾರದು. ನಾವು ಬೈಅತ್ ಮಾಡುವಾಗ ನಾವು ಅಹಂಭಾವವನ್ನೂ ತಾತ್ಸಾರ ಭಾವವನ್ನೂ ತ್ಯಜಿಸುವುದಾಗಿ ಪ್ರತಿಜ್ಞೆ ಮಾಡುತ್ತೇವೆ. ಇದು ಸುಲಭದ ಕೆಲಸವೇನೂ ಅಲ್ಲ. ಅಹಂಕಾರವು ಅನೇಕ ವಿಧಗಳಲ್ಲಿ ಇವೆ. ವಿವಿಧ ಮಾರ್ಗಗಳಲ್ಲಿ ಶೈತಾನನು ಮನುಷ್ಯನ ಜೀವಿತವನ್ನು ಆಕ್ರಮಿಸುತ್ತಾನೆ. ಇದು ಬಹಳ ಹೆದರಬೇಕಾದ ವಿಷಯವಾಗಿದೆ. ಅಲ್ಲಾಹನ ಅನುಗ್ರಹವೇ ನಮ್ಮನ್ನು ಇದರಿಂದ ರಕ್ಷಿಸುವುದು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಅನುಗ್ರಹಗಳನ್ನು ಗಳಿಸಲು ಈ ಏಳನೆಯ ಶರತ್ತಿನಲ್ಲಿ ಒಂದು ಮಾರ್ಗವನ್ನು ಇರಿಸಿದರು. ಅವರು ಹೇಳಿದರು: ನೀವು ಅಹಂಕಾರವನ್ನು

ತ್ಯಜಿಸಿದಾಗ ಉಂಟಾಗುವ ಖಾಲಿಯಾದ ಸ್ಥಳದಲ್ಲಿ ವಿನಯ ಭಾವನೆಯನ್ನು ತುಂಬಿಸದಿದ್ದರೆ, ಅಹಂಕಾರ ನಿಮ್ಮ ಮೇಲೆ ಪುನಃ ಆಕ್ರಮಣ ಮಾಡಬಹುದು. ಆದುದರಿಂದ ನೀವು ವಿನಯಭಾವವನ್ನು ಹೊಂದಿರಿ. ಏಕೆಂದರೆ ಅದು ಅಲ್ಲಾಹನಿಗೆ ಇಷ್ಟಕರವಾದ ಮಾರ್ಗವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ತನ್ನ ವಿನಯಭಾವವನ್ನು ಅತುಲ್ಯವಾದ ನೆಲೆಯಲ್ಲಿ ಔನ್ನತ್ಯಕ್ಕೆ ತಲಪಿಸಿದರು. ಇದೇ ಕಾರಣದಿಂದ ಅಲ್ಲಾಹನು ಸಂತೋಷಗೊಂಡು ಅವರಿಗೆ ಹೀಗೆ ಸಂದೇಶವಾಣಿ ಅವತೀರ್ಣಗೊಳಿಸಿದನು: **"ನಿನ್ನ ವಿನಯಾನ್ವಿತ ನಡೆವಳಿಕೆಗಳು ಅಲ್ಲಾಹನಿಗೆ ಇಷ್ಟವಾದುವು."**

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರಿಗೆ ಬೈಅತ್ ಮಾಡಿದವರೆಂದು ವಾದಿಸುವವರಾಗಿದ್ದೇವೆ. ನಾವು ಅವರನ್ನು ಈ ಕಾಲಘಟ್ಟದ ಇಮಾಮರೆಂದು ಅಂಗೀಕರಿಸುತ್ತೇವೆ. ಹೀಗಿರುವಾಗ ನಾವು ಸುಸ್ವಭಾವವನ್ನು ಎಷ್ಟರ ಮಟ್ಟಿಗೆ ಅನುಕರಿಸಬೇಕೆಂದು ಲಕ್ಷಿಸಬೇಕು. ಮನುಷ್ಯನು ಅಹಂಭಾವದಿಂದ, ಹೆಮ್ಮೆಯಿಂದ ನಡೆದಾಡಲು ಯಾವ ಯೋಗ್ಯತೆಯನ್ನೂ ಹೊಂದಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

وَلَا تَمۡشِ فِي الۡاَرۡضِ مَرَحًا اِنَّكَ لَنۡ تَخۡرِقَ الۡاَرۡضَ وَلَنۡ تَبۡلُغَ الۡجِبَالَ طُوۡلًا

ನೀನು ಭೂಮಿಯಲ್ಲಿ ಅಹಂಭಾವದಿಂದ ನಡೆಯಬೇಡ. ಏಕೆಂದರೆ ನೀನು ಭೂಮಿಯನ್ನು ಸೀಳಲಾರೆ. ಎತ್ತರದಲ್ಲಿ ನೀನು ಪರ್ವತಗಳನ್ನು ತಲಪಲಾರೆ.

**(17:38)**

ಮನುಷ್ಯನಿಗೆ ಅಹಂಕಾರಪಡುವ ಯಾವ ಅರ್ಹತೆಯೂ ಇಲ್ಲ. ಕೆಲವು ಜನರು ತಮ್ಮನ್ನು ಅರಸರೆಂದು ಭಾವಿಸಿಕೊಳ್ಳುತ್ತಾರೆ. ಅವರು ತಮ್ಮ ವಲಯದಿಂದ ಹೊರ ಹೋಗಲು ಬಯಸುವುದಿಲ್ಲ. ಅವರು ತಮ್ಮ ಕ್ಷೇತ್ರದಲ್ಲಿ ಕುಳಿತುಕೊಂಡು ನಾವು ಬಹಳ ದೊಡ್ಡವರು ಎಂದು ಭಾವಿಸುತ್ತಾರೆ. ನಾನು ಅತ್ಯಂತ ಚಿಕ್ಕ ವಲಯದ ಉದಾಹರಣೆ ಕೊಡುತ್ತೇನೆ. ಒಂದು ಮನೆಯನ್ನು ತೆಗೆದುಕೊಳ್ಳಿರಿ, ಕೆಲವು ಪುರುಷರು ತಮ್ಮ ಪತ್ನಿ ಮತ್ತು ಮಕ್ಕಳೊಂದಿಗೆ ದಿಗಿಲೆಬ್ಬಿಸುವ ರೀತಿಯಲ್ಲಿ ದೌರ್ಜನ್ಯದಿಂದ ವರ್ತಿಸುತ್ತಾರೆ. ಕೆಲವು ಹುಡುಗಿಯರು ಹೀಗೆ ಬರೆಯುತ್ತಾರೆ – "ನಾವು ಈಗ ದೊಡ್ಡವರಾಗಿದ್ದೇವೆ. ನಮಗೆ ನಮ್ಮ ತಂದೆಯ ವರ್ತನೆ ಸಹಿಸಲು ಆಗುವುದಿಲ್ಲ. ನಮ್ಮ ತಂದೆ ನಮ್ಮ ತಾಯಿಯೊಂದಿಗೂ ನಮ್ಮೊಂದಿಗೂ ಯಾವಾಗಲೂ ದೌರ್ಜನ್ಯದಿಂದ ವರ್ತಿಸುತ್ತಾರೆ. ತಂದೆಯವರು ಮನೆಯೊಳಗೆ ಪ್ರವೇಶಿಸಿದ ಕೂಡಲೆ ನಾವು ನಮ್ಮ ಕೋಣೆಗಳಿಗೆ ಹೋಗಿ ತೆಪ್ಪಗೆ ಕುಳಿತುಕೊಳ್ಳುತ್ತೇವೆ. ನಮ್ಮ ತಾಯಿ ಅಥವಾ ನಾವು ನಮ್ಮ ತಂದೆಗೆ ಇಷ್ಟವಾಗದ ಮಾತನ್ನಾಡಿದರೆ ನಮ್ಮ ತಂದೆ ದೌರ್ಜನ್ಯದಿಂದ ವರ್ತಿಸುತ್ತಾ ಎಲ್ಲರನ್ನೂ ಸಂಕಷ್ಟಕ್ಕೀಡು ಮಾಡುತ್ತಾರೆ." ಇಂತಹ ವರ್ತನೆಗೆ ಅಹಂಕಾರವೇ ಕಾರಣ. ಇಂತಹವರಲ್ಲಿ ಹಲವರು ಹೊರಗೆ

ಬಹಳ ಸೌಜನ್ಯದಿಂದ ವರ್ತಿಸುತ್ತಾರೆ. ಇಂತಹ ಉದಾತ್ತ ವ್ಯಕ್ತಿ ಬೇರೆ ಇಲ್ಲವೆಂದು ಹೊರಗಿನವರು ಭಾವಿಸುತ್ತಾರೆ. ಹೊರಗಿನವರ ಸಾಕ್ಷ್ಯ ಅವರ ಪರವಾಗಿರುತ್ತದೆ. ಕೆಲವರು ಮನೆಯ ಒಳಗೆ ಮತ್ತು ಹೊರಗೆ ಒಂದೇ ರೀತಿ ವರ್ತಿಸುತ್ತಾರೆ. ಅವರ ವರ್ತನೆ ಬಹಿರಂಗವಾಗಿರುತ್ತದೆ. ಇಂತಹ ಕೆಟ್ಟ ಸ್ವಭಾವದ ಅಹಂಕಾರಿಗಳಾದ ಪುರುಷರ ಮಕ್ಕಳು ಮುಖ್ಯವಾಗಿ ಗಂಡು ಮಕ್ಕಳು ತರುಣರಾದಾಗ, ತಮ್ಮ ತಾಯಿ, ಸಹೋದರಿ ಅಥವಾ ತಮ್ಮೊಂದಿಗೆ ತಂದೆ ಮಾಡಿದ ದೌರ್ಜನ್ಯಕ್ಕೆ ಪ್ರತಿಕಾರವಾಗಿ ತಂದೆಯ ವಿರುದ್ಧವಾಗಿ ನಿಲ್ಲುತ್ತಾರೆ. ತಂದೆ ವೃದ್ಧನಾಗಿ ಬಲಹೀನನಾದಾಗ ತಂದೆಯ ಮೇಲೆ ಸೇಡು ತೀರಿಸುತ್ತಾರೆ. ಅಹಂಕಾರಿಗಳಾದ ಜನರ ಉದಾಹರಣೆಯನ್ನು ವಿವಿಧ ವಲಯಗಳಲ್ಲಿ ಕಾಣಬಹುದು. ಒಂದು ಮನೆಯ ವಲಯ, ಇನ್ನೊಂದು ಬಾಹ್ಯ ವಲಯ. ಬೇರೆ ಬೇರೆ ವಲಯಗಳಲ್ಲಿ ಅಹಂಕಾರದ ಬೇರೆ ಬೇರೆ ಉದಾಹರಣೆಗಳು ಕಂಡುಬರುತ್ತವೆ.

ಅಹಂಕಾರದ ಪರಾಕಾಷ್ಠೆ ಸ್ಥಿತಿಯನ್ನು ಕೆಲವು ಜನಾಂಗಗಳು, ದೇಶಗಳು ಮತ್ತು ಸರಕಾರಗಳಲ್ಲಿ ಕಾಣಬಹುದು. ಅವರು ತಮ್ಮ ಅಹಂಕಾರದ ಕಾರಣದಿಂದ ಪ್ರತಿಯೊಬ್ಬರನ್ನು ನೀಚ ವರ್ಗದವರೆಂದು ಭಾವಿಸುತ್ತಾರೆ. ಅವರು ಬಡ ಜನಾಂಗಗಳನ್ನೂ ಬಡ ದೇಶಗಳನ್ನೂ ತಮ್ಮ ಪಾದರಕ್ಷೆಯ ತುದಿಯಲ್ಲಿರಿಸುತ್ತಾರೆ. ಇಂದು ಲೋಕದಲ್ಲಿರುವ ಅಶಾಂತಿಗೆ ಇದೇ ದೊಡ್ಡ ಕಾರಣವಾಗಿದೆ. ಈ ಅಹಂಕಾರವು ಕೊನೆಗೊಂಡರೆ ಲೋಕದಿಂದ ಅಶಾಂತಿಯೂ ಕೊನೆಗೊಳ್ಳುವುದು. ಆದರೆ ಅಲ್ಲಾಹನು ಅಹಂಕಾರಿಗಳ ದುರಹಂಕಾರವನ್ನು ಧ್ವಂಸಗೊಳಿಸುವಾಗ ಅವರ ಅವಶೇಷ ಕೂಡ ಬಾಕಿಯಾಗಿ ಉಳಿಯಲಿಕ್ಕಿಲ್ಲವೆಂದು ಈ ಅಹಂಕಾರಿಗಳಾದ ಜನಾಂಗಗಳಿಗೆ ಮತ್ತು ಸರಕಾರಗಳಿಗೆ ತಿಳಿದಿಲ್ಲ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

وَلَا تُصَعِّرْ خَدَّكَ لِلنَّاسِ وَلَا تَمْشِ فِي الْأَرْضِ مَرَحًا ۖ إِنَّ اللَّهَ لَا يُحِبُّ كُلَّ مُخْتَالٍ فَخُورٍ

ನೀನು ಅಹಂಭಾವದಿಂದ ಜನರ ಮುಂದೆ ಕೆನ್ನೆಗಳನ್ನು ಉಬ್ಬಿಸಬೇಡ. ಬಿಗುಮಾನದಲ್ಲಿ ನೀನು ಭೂಮಿಯ ಮೇಲೆ ನಡೆಯಬೇಡ. ಖಂಡಿತವಾಗಿಯೂ ಅಲ್ಲಾಹನು ದುರಹಂಕಾರಿಯನ್ನೂ ಡಂಭಾಚಾರಿಯನ್ನೂ ಪ್ರೀತಿಸುವುದಿಲ್ಲ.

**(31:19)**

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಕೆನ್ನೆ ಉಬ್ಬಿಸಿ ಅಹಂಕಾರದಿಂದ ನಡೆದಾಡಬಾರದೆಂದು ಅಲ್ಲಾಹನು ಹೇಳಿರುವನು. ಅಹಂಕಾರಿಗಳು ಒಂದು ವಿಶಿಷ್ಟ ರೀತಿಯಲ್ಲಿ ಕತ್ತನ್ನು ಎತ್ತಿ ಹಿಡಿದು ನಡೆದಾಡುತ್ತಾರೆ. ಇದು ಅಲ್ಲಾಹನಿಗೆ ತೀರಾ ಇಷ್ಟವಾಗದ ನಡೆವಳಿಕೆಯಾಗಿದೆ. ಕೆಲವು ಜನರು ತಮಗಿಂತ ಕಡಿಮೆ ಅಂತಸ್ತಿನ ಜನರೊಂದಿಗೆ ಅಹಂಕಾರದಿಂದ ವರ್ತಿಸುತ್ತಾರೆ, ಆದರೆ ತಮಗಿಂತ ಮೇಲಿನ ಅಂತಸ್ತಿನ ಜನರೆದುರು ತಗ್ಗಿ ನಡೆಯುತ್ತಾರೆ. ಇಂತಹ ಜನರ ಕಾಪಟ್ಯವೂ

ಸ್ಪಷ್ಟವಾಗುತ್ತದೆ. ಅಹಂಕಾರ ಅನೇಕ ಕೆಟ್ಟ ಸ್ವಭಾವಗಳಿಗೆ ಕಾರಣವಾಗುತ್ತದೆ. ಒಳಿತಿನ ಕಡೆಗೆ ಸಾಗುವ ಮಾರ್ಗವು ಮೆಲ್ಲ ಮೆಲ್ಲಗೆ ಮುಚ್ಚಿ ಹೋಗುತ್ತದೆ. ಅನಂತರ ಧರ್ಮದಿಂದ ಅವರು ದೂರಸರಿಯುತ್ತಾರೆ. ಅವರು ಜಮಾಅತ್ ವ್ಯವಸ್ಥೆಯಿಂದಲೂ ದೂರಸರಿಯುತ್ತಾರೆ. ಅವರ ದುರಹಂಕಾರ ಹೆಚ್ಚಾದ ಹಾಗೆ ಅವರು ಅಲ್ಲಾಹನ ಮತ್ತು ಅಲ್ಲಾಹನ ಪ್ರವಾದಿಯ ಸಾಮೀಪ್ಯದಿಂದ, ಅವರ ಅನುಗ್ರಹಗಳಿಂದ ದೂರ ಹೋಗುತ್ತಾರೆ.

ಒಂದು ಹದೀಸಿನಲ್ಲಿ ಹಝ್ರತ್ ಜಾಬಿರ್(ರ) ಹೀಗೆ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಒಳ್ಳೆಯ ಸ್ವಭಾವ ಗುಣಗಳನ್ನು ಹೊಂದಿದವರು ಪುನರುತ್ಥಾನದ ದಿನ ನನಗೆ ಹೆಚ್ಚು ಪ್ರಿಯರೂ ನನಗೆ ಹೆಚ್ಚು ಸಮೀಪವಾಗಿರುವವರೂ ಆಗುವರು. ಸರ್‌ಸಾರ್ ಎಂದರೆ ಬಾಯಿಗೆ ಬಂದಂತೆ ಮಾತನಾಡುವವರು, ಮುತಶದ್ದಿಖ್ ಎಂದರೆ ಕೆನ್ನೆ ಉಬ್ಬಿಸಿ ಮಾತನಾಡುವವರು ಮತ್ತು ಮುತಫೈಹಿಖ್ ನನಗೆ ದೂರವಾಗಿ ಇರುವವರೂ ಕೋಪಕ್ಕೆ ತುತ್ತಾದವರೂ ಆಗುವರು. ಶಿಷ್ಯರು ಹೇಳಿದರು: ಸರ್‌ಸಾರ್ ಮತ್ತು ಮುತಶದ್ದಿಖ್ ಪದಗಳ ಅರ್ಥ ತಿಳಿದಿದ್ದೇವೆ. ಮುತ್‌ಫೈಹಿಖ್ ಎಂದರೇನು? ಆಗ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಮುತಫೈಹಿಖ್ ಎಂದರೆ ಅಹಂಕಾರದಿಂದ ಬಡಾಯಿ ಕೊಚ್ಚುವವರು.

**(ತಿರ್‌ಮಿಧೀ)**

ಒಂದು ಹದೀಸಿನಲ್ಲಿ ಹಝ್ರತ್ ಇಬ್ನು ಮಸ್‌ಊದ್(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಮೂರು ವಿಷಯಗಳು ಪ್ರತಿಯೊಂದು ಪಾಪದ ಬೇರುಗಳಾಗಿವೆ. ಅವುಗಳಿಂದ ದೂರಸರಿಯಿರಿ. ಮೊದಲನೆಯದು ಅಹಂಕಾರ. ಅಹಂಕಾರವೇ ಶೈತಾನನ್ನು ಆದಮರಿಗೆ ಸಾಷ್ಟಾಂಗ ಪ್ರಣಾಮ ಮಾಡದಿರಲು ಪ್ರೇರೇಪಿಸಿತು. ಎರಡನೆಯದು ದುರಾಶೆ. ದುರಾಶೆಯೇ ಆದಮ್(ಅ) ನಿಷಿದ್ಧ ವೃಕ್ಷದ ಹಣ್ಣನ್ನು ತಿನ್ನಲು ಪ್ರೇರೇಪಿಸಿತು. ಮೂರನೆಯದು ಅಸೂಯೆ. ಅಸೂಯೆಯ ಕಾರಣದಿಂದಲೇ ಆದಮರ ಇಬ್ಬರು ಪುತ್ರರು ಜಗಳ ಮಾಡಿ ಒಬ್ಬನು ತನ್ನ ಸಹೋದರನನ್ನು ಕೊಂದನು.

**(ಖಶೀರಿಯ್ಯ ಬಾಬುಲ್ ಹಸದ್)**

ಇನ್ನೊಂದು ಹದೀಸಿನಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ – ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಯಾರ ಹೃದಯದಲ್ಲಿ ಸ್ವಲ್ಪ ಮಾತ್ರ ಅಹಂಕಾರವಿದ್ದರೂ ಅಲ್ಲಾಹನು ಅವನನ್ನು ಸ್ವರ್ಗವನ್ನು ಪ್ರವೇಶಿಸಲು ಬಿಡಲಾರನು. ಒಬ್ಬರು ಹೀಗೆ ಹೇಳಿದರು: ತನ್ನ ಬಟ್ಟೆ ಉತ್ತಮವಾಗಬೇಕು, ತನ್ನ ಪಾದರಕ್ಷೆ ಉತ್ತಮವಾಗಬೇಕು, ಸುಂದರವಾಗಿ ಕಾಣಿಸಬೇಕೆಂದು ಒಬ್ಬನು ಬಯಸುವನಾದರೆ ಅದು ಅಹಂಕಾರವಾಗುವುದೆ?

ಹಝ್‌ರತ್ ರಸೂಲುಲ್ಲಾಹ್[ಸ] ಹೇಳಿದರು: ಇದು ಅಹಂಕಾರವಲ್ಲ. ಅಲ್ಲಾಹನು ಸುಂದರನು. ಅವನು ಸೌಂದರ್ಯವನ್ನು ಇಷ್ಟಪಡುತ್ತಾನೆ. ಅಹಂಕಾರ ಎಂದರೆ ಜನರ ಹಕ್ಕುಗಳನ್ನು ನಿರಾಕರಿಸುವುದು, ಅವರನ್ನು ಕೀಳಾಗಿ ಕಾಣುವುದು, ಅವರನ್ನು ತಾತ್ಸಾರ ಭಾವದಿಂದ ನೋಡುವುದು ಮತ್ತು ಅವರೊಂದಿಗೆ ಕೆಟ್ಟ ರೀತಿಯಲ್ಲಿ ವರ್ತಿಸುವುದು.

**(ಸಹೀಹ್ ಮುಸ್ಲಿಮ್ – ಕಿತಾಬುಲ್ ಈಮಾನ್)**

ಒಂದು ಹದೀಸಿನಲ್ಲಿ ಹಝ್‌ರತ್ ಅಬೂ ಹುರೈರ[ರ] ಹೇಳುತ್ತಾರೆ: ಹಝ್‌ರತ್ ರಸೂಲುಲ್ಲಾಹ್[ಸ] ಹೇಳಿದರು – ಸ್ವರ್ಗ ನರಕಗಳು ಪರಸ್ಪರ ವಾದ ವಿವಾದ ಮಾಡಲು ತೊಡಗಿದುವು. ನರಕ ಹೇಳಿತು: ಬಹಳ ದೌರ್ಜನ್ಯಗಾರರೂ ದುರಹಂಕಾರಿಗಳೂ ನನ್ನಲ್ಲಿ ಪ್ರವೇಶಿಸುತ್ತಾರೆ. ಸ್ವರ್ಗ ಹೇಳಿತು: ನನ್ನಲ್ಲಿ ಬಲಹೀನರೂ ನಿರ್ಗತಿಕರೂ ಪ್ರವೇಶಿಸುತ್ತಾರೆ. ಆಗ ಅಲ್ಲಾಹನು ನರಕದೊಂದಿಗೆ ಹೇಳಿದನು: ನೀನು ನನ್ನ ಶಿಕ್ಷೆಯನ್ನು ಪ್ರಕಟಿಸುತ್ತಿರುವೆ. ನಾನು ಬಯಸುವವರಿಗೆ ನಿನ್ನ ಮೂಲಕ ಶಿಕ್ಷೆ ನೀಡುತ್ತೇನೆ. ಅಲ್ಲಾಹನು ಸ್ವರ್ಗದೊಂದಿಗೆ ಹೇಳಿದನು: ನೀನು ನನ್ನ ಅನುಗ್ರಹವನ್ನು ಪ್ರಕಟಿಸುತ್ತಿರುವೆ. ನಾನು ಇಚ್ಛಿಸುವವರಿಗೆ ನಿನ್ನ ಮೂಲಕ ದಯೆದೋರುತ್ತೇನೆ. ನಿಮ್ಮಿಬ್ಬರಿಗೂ ಅದರ ಧಾರಾಳ ಭಾಗ ಸಿಗುವುದು.

**(ಸಹೀಹ್ ಮುಸ್ಲಿಮ್)**

ಪ್ರತಿಯೊಬ್ಬ ಅಹ್ಮದೀ ವಿನಯ, ನಮ್ರತೆ ಮತ್ತು ಒಳ್ಳೆಯ ಸ್ವಭಾವದ ಮಾರ್ಗಗಳಲ್ಲಿ ಚಲಿಸುತ್ತಾ ಅಲ್ಲಾಹನ ದಯೆಯ ದೃಷ್ಟಿಯನ್ನು ಗಳಿಸುವವರಾಗುವಂತೆ ಅಲ್ಲಾಹನು ಮಾಡಲಿ. ಪ್ರತಿಯೊಬ್ಬ ಅಹ್ಮದೀ ಅಲ್ಲಾಹನ ಸ್ವರ್ಗಕ್ಕೆ ಹೋಗುವವನಾಗಲಿ. ಪ್ರತಿಯೊಂದು ಮನೆ ಅಹಂಕಾರವೆಂಬ ಪಾಪದಿಂದ ಮುಕ್ತವಾಗಲಿ.

ಇನ್ನೊಂದು ಹದೀಸ್ ಹೀಗಿದೆ – ಅಬೂ ಸಈದ್ ಖುದ್ರಿ[ರ] ಮತ್ತು ಹಝ್‌ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ: ಗೌರವ ಅಲ್ಲಾಹನ ಉಡುಗೆ ಮತ್ತು ಘನತೆ ಅಲ್ಲಾಹನ ಚಾದರವಾಗಿದೆ. ಅಲ್ಲಾಹನು ಹೇಳುತ್ತಾನೆ: ಯಾರು ಅವುಗಳನ್ನು ನನ್ನಿಂದ ಕಿತ್ತುಕೊಳ್ಳಲು ಬಯಸುತ್ತಾರೋ ಅವರಿಗೆ ನಾನು ಶಿಕ್ಷೆ ನೀಡುವೆನು.

**(ಸಹೀಹ್ ಮುಸ್ಲಿಮ್)**

## ಅಹಂಕಾರಿ ಎಂದೂ ಸ್ವರ್ಗವನ್ನು ಪ್ರವೇಶಿಸಲಾರನು

ಅಹಂಕಾರವು ಮನುಷ್ಯನನ್ನು ಅಲ್ಲಾಹನ ಎದುರಿಗೆ ನಿಲ್ಲಿಸುತ್ತದೆ. ಅಲ್ಲಾಹನು ಬಹುದೇವಾರಾಧನೆ ಮಾಡುವವನನ್ನು ಕ್ಷಮಿಸಲಾರನೆಂದು ಹೇಳಿರುವಾಗ ಸ್ವತಃ

ದೇವತ್ವವನ್ನು ವಾದಿಸುವವನನ್ನು ಹೇಗೆ ತಾನೆ ಕ್ಷಮಿಸುವನು? ಈ ಅಹಂಕಾರವೇ ವಿವಿಧ ಕಾಲಗಳಲ್ಲಿ ಫಿರ್‌ಔನನ ಗುಣಗಳನ್ನು ಹೊಂದಿದವರನ್ನು ಹುಟ್ಟಿಸಿತು. ಅಂತಹ ಫಿರ್‌ಔನರ ಅಂತಿಮ ಗತಿ ಏನಾಯಿತೆಂದು ನೀವು ಓದಿರುವಿರಿ ಮತ್ತು ಇಂದಿನ ಕಾಲದಲ್ಲಿ ನೋಡಿರುವಿರಿ. ಇದು ಬಹಳ ಹೆದರಬೇಕಾದ ವಿಷಯವಾಗಿದೆ. ಪ್ರತಿಯೊಬ್ಬ ಅಹ್ಮದೀ ಅತ್ಯಂತ ನಿಸ್ಸಾರವಾದ ಅಹಂಕಾರದಿಂದಲೂ ದೂರಸರಿಯಬೇಕು. ಏಕೆಂದರೆ ಅದು ಹೆಚ್ಚಾಗುತ್ತಾ ಮನುಷ್ಯನನ್ನು ಪೂರ್ಣವಾಗಿ ಆವರಿಸುವುದು. ಅಲ್ಲಾಹನು ನಮಗೆ ಎಚ್ಚರಿಕೆ ನೀಡಿರುವನು. ಇದು ತನ್ನ ಚಾದರವೆಂದು ಸ್ಪಷ್ಟಪಡಿಸಿರುವನು. ತಾನು ಸಕಲ ಲೋಕಗಳ ಪ್ರಭು. ಎಲ್ಲ ದೊಡ್ಡಸ್ಥಿಕೆ ತನಗೆ ಸೇರಿದೆ. ಅದನ್ನು ಮನುಷ್ಯರು ಅಂಗೀಕರಿಸಬೇಕು. ವಿಧೇಯತೆ, ವಿನಯ ತೋರಿಸಬೇಕು. ನೀವು ನಿಗದಿತ ಮಿತಿಯನ್ನು ಮೀರಿ ವರ್ತಿಸಿದರೆ ಶಿಕ್ಷೆಗೆ ಗುರಿಯಾಗುವಿರಿ. ಸಾಸಿವೆ ಕಾಳಷ್ಟು ಅಹಂಕಾರವಿದ್ದರೂ ಶಿಕ್ಷೆ ನಿಮಗೆ ಸಿಗುವುದು. ಅದರೊಂದಿಗೆ ಹೀಗೆ ಶುಭವಾರ್ತೆ ಸಹ ನೀಡಿದ್ದಾನೆ – ನಿಮ್ಮೊಳಗೆ ಸತ್ಯವಿಶ್ವಾಸವು ಸ್ವಲ್ಪ ಮಾತ್ರ ಇದ್ದರೂ ನಾನು ನಿಮ್ಮನ್ನು ನರಕಾಗ್ನಿಯಿಂದ ರಕ್ಷಿಸುವೆನು.

> ಒಂದು ಹದೀಸಿನಲ್ಲಿ ಹಝ್ರತ್ ಅಬ್ದುಲ್ಲಾಹ್(ರ) ವರದಿ ಮಾಡುತ್ತಾರೆ: ಯಾರ ಹೃದಯದಲ್ಲಿ ಸಾಸಿವೆ ಕಾಳಿನಷ್ಟು ಕೂಡ ಅಹಂಕಾರ ಇದ್ದರೆ ಆತನು ಸ್ವರ್ಗವನ್ನು ಪ್ರವೇಶಿಸಲಾರ. ಯಾರ ಹೃದಯದಲ್ಲಿ ಸಾಸಿವೆ ಕಾಳಿನಷ್ಟು ಸತ್ಯವಿಶ್ವಾಸ ಇದೆಯೋ ಅವನು ನರಕಾಗ್ನಿಯನ್ನು ಪ್ರವೇಶಿಸಲಾರ.
>
> **(ಸುನನ್ ಇಬ್ನು ಮಾಜ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ಪುನರುತ್ಥಾನದ ದಿನ ಶಿರ್ಕ್‌ನ (ಬಹುದೇವಾರಾಧನೆ) ನಂತರ ಅಹಂಕಾರಕ್ಕೆ ಸಮವಾದ ಪಾಪದೋಷ ಬೇರೆ ಇಲ್ಲವೆಂದು ನಾನು ಸತ್ಯವಾಗಿ ಹೇಳುತ್ತೇನೆ. ಅಹಂಕಾರವು ಇಹಪರ ಲೋಕಗಳಲ್ಲೂ ಮನುಷ್ಯನನ್ನು ಹೀನಾಯಗೊಳಿಸುತ್ತದೆ. ಅಲ್ಲಾಹನ ದಯೆಯು ಏಕದೇವ ವಿಶ್ವಾಸಿಯನ್ನು ರಕ್ಷಿಸುತ್ತದೆ. ಆದರೆ ಅಹಂಕಾರಿಯನ್ನು ರಕ್ಷಿಸಲಾರದು. ಶೈತಾನನು ತಾನು ಏಕದೇವವಿಶ್ವಾಸಿ ಎಂದು ವಾದಿಸುತ್ತಿದ್ದರೂ ಅವನ ತಲೆಯಲ್ಲಿ ಅಹಂಕಾರವು ಇದ್ದ ಕಾರಣ ಅಲ್ಲಾಹನಿಗೆ ಪ್ರಿಯನಾಗಿದ್ದ ಆದಮ್‌ರನ್ನು ಅವನು ತಾತ್ಸಾರ ಭಾವದಿಂದ ನೋಡಿದನು ಮತ್ತು ಆಕ್ಷೇಪಿಸಿದನು. ಆದುದರಿಂದ ಶೈತಾನನು ಶಿಕ್ಷಿಸಲ್ಪಟ್ಟನು. ಅವನ ಕೊರಳ ಮೇಲೆ ಶಾಪದ ನೊಗವನ್ನು ಹಾಕಲಾಯಿತು. ಒಬ್ಬ ವ್ಯಕ್ತಿ ಶಾಶ್ವತವಾದ ಶಿಕ್ಷೆಗೆ ಗುರಿಯಾದ ಪ್ರಥಮ ಅಪರಾಧ ಅಹಂಕಾರವೇ ಆಗಿದೆ.
>
> **(ಆಯಿನಯೆ ಕಮಾಲಾತೆ ಇಸ್ಲಾಮ್; ರೂಹಾನೀ ಖಝಾಇನ್, ಸಂಪುಟ 5)**

ಅವರು ಪುನಃ ಹೇಳುತ್ತಾರೆ:

> ನಿಮ್ಮ ಯಾವುದೇ ವರ್ತನೆಯಲ್ಲಿ ಅಹಂಕಾರ, ತೋರಿಕೆ, ದುರಭಿಮಾನ ಅಥವಾ ಉದಾಸೀನತೆ ಇದ್ದರೆ ಅದು ಅಂಗೀಕಾರಾರ್ಹವಲ್ಲ. ನೀವು ಕೇವಲ ಕೆಲವು ಆಜ್ಞೆಗಳನ್ನು ಪಾಲಿಸಿ ನಾವು ಮಾಡಬೇಕಾದುದನ್ನು ಮಾಡಿರುವೆವು ಎಂದು ಹೇಳಿ ನಿಮ್ಮನ್ನೇ ನೀವು ವಂಚಿಸಬೇಡಿರಿ. ನಿಮ್ಮಲ್ಲಿ ಪೂರ್ಣ ಕ್ರಾಂತಿ ಉಂಟಾಗಬೇಕೆಂದು ಅಲ್ಲಾಹನು ಬಯಸುತ್ತಾನೆ. ಅವನು ನಿಮ್ಮಿಂದ ಒಂದು ಮೃತ್ಯುವನ್ನು ಬಯಸುತ್ತಾನೆ. ಅನಂತರ ಅವನು ನಿಮ್ಮನ್ನು ಜೀವಂತಗೊಳಿಸುವನು.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 12 – 13)**

## ಅಹಂಕಾರಕ್ಕೆ ಶೈತಾನನೊಂದಿಗೆ ಗಾಢವಾದ ಸಂಬಂಧ ಇದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ಕೆಲವು ಜನರು ಪ್ರವಾದಿಗಳಿಗಿಂತ ಕೋಟಿಗಟ್ಟಲೆ ಅಂಶ ಕೆಳಗಿನ ಮಟ್ಟವನ್ನು ಹೊಂದಿರುತ್ತಾರೆ. ಆದರೆ ಅವರು ಎರಡು ದಿನ ನಮಾಝ್ ಮಾಡಿ ಅಹಂಕಾರ ಪ್ರಕಟಿಸುತ್ತಾರೆ. ಹಾಗೆಯೇ ಉಪವಾಸ ಮತ್ತು ಹಜ್ಜ್‌ನಿಂದ ಆತ್ಮ ಪರಿಶುದ್ಧಿಯನ್ನು ಪಡೆಯುವುದಕ್ಕೆ ಪ್ರತಿಯಾಗಿ ಅವರು ಅಹಂಭಾವ ತೋರಿಸುತ್ತಾರೆ. ನೀವು ನೆನಪಿಡಿರಿ, ಅಹಂಕಾರ ಶೈತಾನನಿಂದ ಬಂದದ್ದಾಗಿದೆ. ಮತ್ತೆ ಅದು ಶೈತಾನನನ್ನಾಗಿ ಮಾಡುತ್ತದೆ. ಅದರಿಂದ ದೂರವಾಗದೆ ಇರುವ ತನಕ ಸತ್ಯ ಸ್ವೀಕಾರ ಮತ್ತು ದೇವಾನುಗ್ರಹಗಳಿಗೆ ಅದು ತಡೆಯಾಗುತ್ತದೆ. ಯಾವುದರ ಬಗ್ಗೆಯೂ ಅಹಂಭಾವ ಹೊಂದಬಾರದು. ವಿದ್ಯೆ, ಐಶ್ವರ್ಯ, ಸ್ಥಾನಮಾನ, ವಂಶ, ಕುಟುಂಬ ಮೊದಲಾದುವುಗಳ ಬಗ್ಗೆ ಅಹಂಕಾರಪಡಬಾರದು. ಹೆಚ್ಚಾಗಿ ಮೇಲಿನವುಗಳಿಗೆ ಸಂಬಂಧಿಸಿ ಅಹಂಕಾರ ಹುಟ್ಟುತ್ತದೆ. ಎಲ್ಲಿಯವರೆಗೆ ಮನುಷ್ಯನು ಈ ಎಲ್ಲ ವಿಧ ಅಹಂಕಾರಗಳಿಂದ ಮುಕ್ತನಾಗಿ ಶುದ್ಧನಾಗುವುದಿಲ್ಲವೋ ಅಲ್ಲಿಯ ವರೆಗೆ ಅಲ್ಲಾಹನ ಸಮ್ಮುಖದಲ್ಲಿ ಮಾನ್ಯತೆ ಪಡೆಯಲಾರ. ಭಾವೋದ್ರೇಕಗಳ ತಿರಸ್ಕಾರ ಯೋಗ್ಯವಾದ ಅಂಶಗಳನ್ನು ಸುಟ್ಟು ಹಾಕುವ ಜ್ಞಾನವು ಅಂತಹ ವ್ಯಕ್ತಿಗೆ ಲಭಿಸಲಾರದು. ಏಕೆಂದರೆ ಅಹಂಕಾರವು ಶೈತಾನನ ಅಂಶವಾಗಿದೆ. ಅದನ್ನು ಅಲ್ಲಾಹನು ಇಷ್ಟಪಡಲಾರನು.....

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಿರುವುದೇನೆಂದರೆ, ಕೆಲವು ಮೂಲಭೂತ ವಿಷಯಗಳಿವೆ. ಅವುಗಳ ಕಡೆಗೆ ಗಮನಹರಿಸಬೇಕು. ಅವುಗಳಿಂದ ದೂರಸರಿಯಬೇಕು. ಕೆಲವು ಜನರು ಮೂರು ನಾಲ್ಕು ದಿನ ನಮಾಝ್ ಮಾಡಿ ತಾವು ಬಹಳ ಉತ್ತಮರಾದೆವು ಎಂದು ಭಾವಿಸುತ್ತಾರೆ. ವಿಸ್ಮಯಕರವಾದ ಗಂಭೀರ ಮುಖಭಾವದೊಂದಿಗೆ ಅಹಂಕಾರವೂ ಪ್ರಕಟವಾಗುತ್ತದೆ. ನೀವು

ಕೆಲವು ಸಾರಿ ಕೆಲವರು ನೀಳವಾದ ನಿಲುವಂಗಿ ಧರಿಸಿ ಕೈಗಳಲ್ಲಿ ತಸ್‌ಬೀಹ್ ಮಾಲೆ ಹಿಡಿದು ಮಸೀದಿಗಳಿಂದ ಹೊರಬರುವುದನ್ನು ಕಂಡಿರಬಹುದು. ಅವರ ಕೊರಳಲ್ಲೇ ಅಹಂಕಾರ ಕಂಡುಬರುತ್ತದೆ. ಅಹ್ಮದಿಯಾ ಜಮಾಅತಿನಲ್ಲಿ ಇಂತಹ ಜುಬ್ಬಾದಾರಿಗಳು ಇಲ್ಲ. ಅದಕ್ಕಾಗಿ ಅಲ್ಲಾಹನಿಗೆ ಬಹಳ ಕೃತಜ್ಞತೆ ಅರ್ಪಿಸುತ್ತೇವೆ. ಹಜ್ಜ್ ಮಾಡಿ ಬಂದವರ ಪ್ರಚಾರಕ್ಕೆ ಯಾವುದೇ ಮಿತಿಯಿಲ್ಲ. ಇಂತಹ ಜನರ ಉಪವಾಸ ಮತ್ತು ಹಜ್ಜ್ ತೋರಿಕೆಗಾಗಿರುತ್ತವೆ. ಅವರು ತಮ್ಮ ದೊಡ್ಡಸ್ಥಿಕೆಯನ್ನು ತೋರಿಸಲು ಹೀಗೆ ಮಾಡುತ್ತಾರೆ. "ಇವರು ಬಹಳ ಒಳ್ಳೆಯವರು, ಉಪವಾಸ ಮಾಡುತ್ತಾರೆ, ಹಾಜಿ ಆಗಿದ್ದಾರೆ ಮತ್ತು ಬಹಳ ಒಳ್ಳೆಯವರು" ಎಂದು ಇತರರು ಹೇಳಬೇಕೆಂದು ಹೀಗೆಲ್ಲ ಮಾಡುತ್ತಾರೆ. ಈ ತೋರಿಕೆಗಳು ಅಹಂಕಾರದ ಕಾರಣದಿಂದ ಉಂಟಾಗುತ್ತವೆ ಅಥವಾ ತೋರಿಕೆಯ ಕಾರಣದಿಂದ ಅಹಂಕಾರ ಉಂಟಾಗುತ್ತದೆ. ಕೆಲವರು ತಮ್ಮದು ಉಚ್ಚ ಜಾತಿ ಎಂದು ಅಹಂಕಾರಪಡುತ್ತಾರೆ. ಇನ್ನೊಬ್ಬ ಕೀಳು ಜಾತಿಯವ ನಮ್ಮನ್ನು ಹೇಗೆ ಎದುರಿಸಬಲ್ಲ ಎಂದೆಲ್ಲ ಅಹಂಕಾರಪಡುತ್ತಾರೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಹಂಕಾರ ಅನೇಕ ವಿಧಗಳಲ್ಲಿವೆ. ಅವು ಅಲ್ಲಾಹನನ್ನು ಗುರುತಿಸುವುದರಿಂದ ನಿಮ್ಮನ್ನು ದೂರಕ್ಕೆ ಕೊಂಡೊಯ್ಯುತ್ತವೆ. ಅಲ್ಲಾಹನ ಸಾಮೀಪ್ಯದಿಂದ ದೂರ ಒಯ್ಯುತ್ತದೆ. ಅನಂತರ ಮನುಷ್ಯನು ಮೆಲ್ಲ ಮೆಲ್ಲನೆ ಶೈತಾನನ ಜೋಳಿಗೆಯಲ್ಲಿ ಬೀಳುತ್ತಾನೆ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

> ನನ್ನ ದೃಷ್ಟಿಯಲ್ಲಿ ಪರಿಶುದ್ಧನಾಗಲು ಇರುವ ಉತ್ತಮ ವಿಧಾನ ಮನುಷ್ಯನು ಯಾವುದೇ ರೀತಿಯ ಅಹಂಕಾರ ತೋರಿಸಬಾರದು ಎಂದಾಗಿದೆ. ಇದಕ್ಕಿಂತ ಉತ್ತಮ ವಿಧಾನ ಬೇರೆ ಇಲ್ಲ. ವಿದ್ಯೆ, ವಂಶ, ಸಂಪತ್ತು ಇವುಗಳ ಬಗ್ಗೆ ಅಹಂಕಾರಪಡಬಾರದು. ಅಲ್ಲಾಹನು ಯಾರಿಗಾದರೂ ಕಣ್ಣನ್ನು ದಯಪಾಲಿಸಿದಾಗ ಅವನು ನೋಡುತ್ತಾನೆ. ಪ್ರತಿಯೊಂದು ಅಂಧಕಾರದಿಂದ ಮುಕ್ತಿಯನ್ನು ನೀಡುವ ಪ್ರಕಾಶ ಆಕಾಶದಿಂದಲೇ ಬರುತ್ತದೆ ಎಂದು ಕಾಣುತ್ತಾನೆ. ಮನುಷ್ಯನು ಯಾವಾಗಲೂ ಆಕಾಶದ ಪ್ರಕಾಶದ ಆವಶ್ಯಕತೆಯುಳ್ಳವನಾಗಿದ್ದಾನೆ. ಸೂರ್ಯನ ಪ್ರಕಾಶ ಆಕಾಶದಿಂದ ಬರದಿದ್ದರೆ ಕಣ್ಣು ಸಹ ನೋಡಲಾರದು. ಇದೇ ರೀತಿ ಎಲ್ಲ ವಿಧದ ಅಂಧಕಾರಗಳನ್ನು ದೂರೀಕರಿಸಿ ಅದಕ್ಕೆ ಪ್ರತಿಯಾಗಿ ದೇವಭಕ್ತಿ (ತಖ್ವಾ) ಮತ್ತು ಪರಿಶುದ್ಧಿಯ ತೇಜಸ್ಸು ಉಂಟುಮಾಡುವ ಆಂತರಿಕ ಪ್ರಕಾಶವೂ ಆಕಾಶದಿಂದಲೇ ಬರುತ್ತದೆ. ಮನುಷ್ಯನ ಭಯಭಕ್ತಿ, ವಿಶ್ವಾಸ, ಆರಾಧನೆ, ಪರಿಶುದ್ಧಿ ಎಲ್ಲವೂ ಆಕಾಶದಿಂದಲೇ ಬರುತ್ತವೆ. ಇದು ಅಲ್ಲಾಹನ ಅನುಗ್ರಹವನ್ನು ಹೊಂದಿಕೊಂಡಿದೆ. ಅವನು ಬಯಸಿದರೆ ಅದನ್ನು ನೆಲೆನಿಲ್ಲಿಸುವನು. ಇಲ್ಲದಿದ್ದರೆ ಅದನ್ನು ದೂರಸರಿಸುವನು.
>
> ಸತ್ಯವಾದ ಜ್ಞಾನವೆಂದರೆ ಮನುಷ್ಯನು ತನ್ನನ್ನು ತುಚ್ಛ ಎಂದು ಗಣಿಸಿ ಅಲ್ಲಾಹನ ಆಸ್ಥಾನದಲ್ಲಿ ಬಿದ್ದು ವಿನಯದಿಂದಲೂ ದೈನ್ಯತೆಯಿಂದಲೂ

ಅಲ್ಲಾಹನ ಅನುಗ್ರಹವನ್ನು ಯಾಚಿಸಬೇಕು. ಮನುಷ್ಯನು ಅಲ್ಲಾಹನಿಂದ, ಶಾರೀರಿಕ ಆಶಾಭಿಲಾಷೆಗಳನ್ನು ಸುಟ್ಟು ಹಾಕುವ, ಒಳಗೆ ಒಂದು ಪ್ರಕಾಶ ಉಂಟುಮಾಡುವ ಮತ್ತು ಒಳಿತನ್ನು ಮಾಡಲು ಶಕ್ತಿ ಹಾಗೂ ಉತ್ಸಾಹ ಉಂಟುಮಾಡುವ ಜ್ಞಾನದ ಪ್ರಕಾಶವನ್ನು ಬೇಡಿಕೊಳ್ಳಬೇಕು. ಹೀಗೆ ಮನುಷ್ಯನಿಗೆ ಅಲ್ಲಾಹನ ಅನುಗ್ರಹದ ಪಾಲು ದೊರೆತರೆ ಮತ್ತು ಅವನಿಗೆ ಹೃದಯ ವೈಶಾಲ್ಯವು ಉಂಟಾದರೆ ಅವನು ಆ ಬಗ್ಗೆ ಅಹಂಕಾರ ಹೊಂದದೆ ವಿನಯದಲ್ಲಿಯೂ ದೈನ್ಯತೆಯಲ್ಲಿಯೂ ಅಭಿವೃದ್ಧಿ ಹೊಂದಬೇಕು. ಏಕೆಂದರೆ ಅವನು ತನ್ನನ್ನು ನಿಸ್ಸಾರವೆಂದು ಬಗೆಯುತ್ತಾ ಹೋದ ಹಾಗೆ ಅವನ ಮೇಲೆ ಶಕ್ತಿ ಸಾಮರ್ಥ್ಯ ಮತ್ತು ಪ್ರಕಾಶವು ಅಲ್ಲಾಹನಿಂದ ಇಳಿಸಲ್ಪಡುವುದು. ಅವನಿಗೆ ಅದು ತೇಜಸ್ಸನ್ನೂ ಶಕ್ತಿಯನ್ನೂ ನೀಡುವುದು. ಮನುಷ್ಯನು ಮೇಲಿನಂತೆ ನಂಬುಗೆಯನ್ನು ಹೊಂದಿದರೆ ಅಲ್ಲಾಹನ ಅನುಗ್ರಹದಿಂದ ಅವನ ಸ್ವಭಾವ ಗುಣಗಳು ಉತ್ತಮಗೊಳ್ಳುವುವು. ಲೋಕದಲ್ಲಿ ತನ್ನನ್ನು ದೊಡ್ಡವನೆಂದು ಭಾವಿಸುವುದು ಅಹಂಕಾರವಾಗಿದೆ. ಅದರ ಫಲವಾಗಿ ಅವನು ಅನ್ಯರನ್ನು ಶಪಿಸುತ್ತಾನೆ ಮತ್ತು ತನಗಿಂತ ಕೀಳು ಎಂದು ಭಾವಿಸಲು ತೊಡಗುತ್ತಾನೆ.

**(ಮಲ್‌ಫೂಝಾತ್; ಸಂಪುಟ 4, ಪುಟ 212 – 213, ಹೊಸ ಮುದ್ರಣ)**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

ಅಹಂಕಾರ ಬಹಳ ಅಪಾಯಕರ ರೋಗವಾಗಿದೆ. ಯಾರಲ್ಲಿ ಈ ರೋಗ ತಲೆದೋರುತ್ತದೆಯೋ ಅವನಿಗೆ ಆಧ್ಯಾತ್ಮಿಕ ಸಾವು ಉಂಟಾಗುವುದು. ಈ ರೋಗವು ಹತ್ಯೆಗಿಂತಲೂ ಗುರುತರವಾಗಿದೆ ಎಂದು ನಾನು ದೃಢವಾಗಿ ತಿಳಿದಿದ್ದೇನೆ. ಅಹಂಕಾರಿ ಶೈತಾನನ ಸಹೋದರನಾಗುತ್ತಾನೆ. ಅಹಂಕಾರವೇ ಶೈತಾನನನ್ನು ಹೀನಾಯಗೊಳಿಸಿತು. ಆದುದರಿಂದ ಸತ್ಯವಿಶ್ವಾಸಿಯಲ್ಲಿ ಅಹಂಕಾರ ಇರಬಾರದೆಂಬುದು ಶರತ್ತಾಗಿದೆ. ಅದಕ್ಕೆ ಪ್ರತಿಯಾಗಿ ಅವನಲ್ಲಿ ವಿನಯ, ನಮ್ರತೆ, ಇರಬೇಕು. ಅಲ್ಲಾಹನು ನೇಮಿಸಿದ ಮಹಾನುಭಾವರ ವೈಶಿಷ್ಟ್ಯವೇನೆಂದರೆ, ಅವರು ಅತ್ಯಂತ ಹೆಚ್ಚು ವಿನಯಶೀಲರಾಗಿರುತ್ತಾರೆ. ಹಝ್‌ರತ್ ರಸೂಲುಲ್ಲಾಹ್‌ರಲ್ಲಿ(ಸ) ಈ ಗುಣ ಅತ್ಯಧಿಕವಿತ್ತು. ಅವರ ಒಬ್ಬ ಸೇವಕನೊಡನೆ, ನಿನ್ನೊಂದಿಗೆ ಅವರು ಹೇಗೆ ವರ್ತಿಸುತ್ತಿದ್ದರು? ಎಂದು ಕೇಳಲಾದಾಗ ಆ ಸೇವಕ ಹೇಳಿದನು: ಸತ್ಯದಲ್ಲಿ ನನಗಿಂತ ಹೆಚ್ಚಿಗೆ ಅವರು ನನ್ನ ಸೇವೆ ಮಾಡುತ್ತಿದ್ದರು. **'ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್'."**

**(ಮಲ್‌ಫೂಝಾತ್; ಸಂಪುಟ 4, ಪುಟ 437 – 438, ಹೊಸ ಮುದ್ರಣ)**

## ಅಹಂಕಾರವು ಅಲ್ಲಾಹನ ದೃಷ್ಟಿಯಲ್ಲಿ ಅನಿಷ್ಟಕರವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಾನು ನನ್ನ ಜಮಾಅತಿನವರಿಗೆ ಉಪದೇಶಿಸುತ್ತೇನೆ – ನೀವು ಅಹಂಕಾರದಿಂದ ದೂರಸರಿಯಿರಿ. ಏಕೆಂದರೆ ಅಹಂಕಾರ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಅನಿಷ್ಟಕರವಾಗಿದೆ. ಆದರೆ ಅಹಂಕಾರ ಏನೆಂದು ನಿಮಗೆ ಪ್ರಾಯಶಃ ತಿಳಿದಿಲ್ಲ. ನೀವು ನನ್ನಿಂದ ತಿಳಿದುಕೊಳ್ಳಿರಿ. ನಾನು ಅಲ್ಲಾಹನ ಆತ್ಮ ಶಕ್ತಿ ಮೂಲಕ ಮಾತನಾಡುತ್ತಿದ್ದೇನೆ.

ಒಬ್ಬ ವ್ಯಕ್ತಿ ತಾನು ತನ್ನ ಸಹೋದರನಿಗಿಂತ ವಿದ್ಯೆ, ಬುದ್ಧಿ ಮತ್ತು ಪ್ರವೀಣತೆಯಲ್ಲಿ ಮೇಲಿನ ಪದವಿಯಲ್ಲಿ ಇದ್ದೇನೆಂದು ಭಾವಿಸಿ ಅವನನ್ನು ತಾತ್ಸಾರ ದೃಷ್ಟಿಯಿಂದ ನೋಡುವನಾದರೆ ಅವನು ಅಹಂಕಾರಿಯಾಗಿದ್ದಾನೆ. ಬುದ್ಧಿ ಮತ್ತು ವಿದ್ಯೆಯ ಉಗಮಸ್ಥಾನ ಅಲ್ಲಾಹನೆಂದು ಅವನು ತಿಳಿದುಕೊಂಡಿಲ್ಲ ಮತ್ತು ಅವನು ತನ್ನನ್ನು ದೊಡ್ಡವನೆಂದು ಭಾವಿಸುತ್ತಾನೆ. ಏನು ಅವನನ್ನು ಹುಚ್ಚನನ್ನಾಗಿ ಮಾಡಲು ಅಲ್ಲಾಹನಿಗೆ ಶಕ್ತಿ ಇಲ್ಲವೇ? ಅವನು ಯಾರನ್ನು ತನಗಿಂತ ಕೀಳೆಂದು ಭಾವಿಸುತ್ತಿದ್ದನೋ ಅವನಿಗೆ ಈ ಅಹಂಕಾರಿಗಿಂತ ಉತ್ತಮ ಬುದ್ಧಿ, ವಿದ್ಯೆ ಮತ್ತು ಪ್ರವೀಣತೆಯನ್ನು ಅಲ್ಲಾಹನು ನೀಡಬಲ್ಲವನಾಗಿದ್ದಾನೆ. ಯಾರಾದರೂ ತನ್ನ ಸಂಪತ್ತು ಮತ್ತು ಸ್ಥಾನಮಾನವನ್ನು ಲಕ್ಷಿಸಿ ತನ್ನ ಸಹೋದರನನ್ನು ಕೀಳೆಂದು ಭಾವಿಸುತ್ತಾನೋ ಅವನು ಸಹ ಅಹಂಕಾರಿಯಾಗಿದ್ದಾನೆ. ಅವನಿಗೆ ಈ ಸ್ಥಾನಮಾನಗಳನ್ನು ನೀಡಿದ್ದು ಅಲ್ಲಾಹನೆಂದು ಅವನು ಮರೆತು ಬಿಟ್ಟಿದ್ದಾನೆ. ಅವನು ಅಂಧನಾಗಿದ್ದಾನೆ. ಅಲ್ಲಾಹನು ಕ್ಷಣಮಾತ್ರದಲ್ಲಿ ಅವನನ್ನು ಅತ್ಯಂತ ಕೀಳು ಜನರಲ್ಲಿ ಸೇರಿ ಹೋಗುವಂತಹ ಪರಿವರ್ತನೆ ಮಾಡಬಲ್ಲನೆಂದೂ ಅವನು ಕೀಳೆಂದು ಭಾವಿಸುತ್ತಿದ್ದ ಅವನ ಸಹೋದರನಿಗೆ ಸಂಪತ್ತು ಮತ್ತು ಸ್ಥಾನಮಾನ ನೀಡಬಲ್ಲವನೆಂದೂ ಅವನಿಗೆ ತಿಳಿದಿಲ್ಲ. ಇದೇ ರೀತಿ ಯಾರು ತನ್ನ ಉತ್ತಮ ಶಾರೀರಿಕ ಆರೋಗ್ಯದ ಬಗ್ಗೆ ಅಹಂಭಾವ ಹೊಂದಿರುವನೋ ಅಥವಾ ತನ್ನ ಸೌಂದರ್ಯ, ಶಕ್ತಿ ಮೊದಲಾದುವುಗಳ ಬಗ್ಗೆ ಹೆಮ್ಮೆಯಿಂದ ಬೀಗುತ್ತಾ ತನ್ನ ಸಹೋದರನನ್ನು ಅಪಹಾಸ್ಯ ಮಾಡುತ್ತಾ ತಾತ್ಸಾರದಿಂದ ಅವನಿಗೆ ಅಡ್ಡ ಹೆಸರಿಡುತ್ತಾನೋ ಮತ್ತು ಅವನ ಶಾರೀರಿಕ ವಿಕಲತೆಯನ್ನು ಅನ್ಯರೆದುರಿಗೆ ಪ್ರಸ್ತಾಪಿಸುತ್ತಾನೋ ಅವನು ಸಹ ಅಹಂಕಾರಿಯಾಗಿದ್ದಾನೆ. ಅವನಿಗೆ ಹಠಾತ್ತಾಗಿ ಅಂಗವೈಕಲ್ಯವನ್ನು ಉಂಟುಮಾಡಲು ಮತ್ತು ಅವನು ಪರಿಹಾಸ ಮಾಡಿದವನಿಗಿಂತ ಹೆಚ್ಚು ಅಂಗವಿಕಲತೆಯುಳ್ಳವನನ್ನಾಗಿ ಮಾಡಲು ಅಲ್ಲಾಹನು ಶಕ್ತನು ಎಂಬುದನ್ನು ಅವನು ಮರೆತಿರುವನು. ಯಾರನ್ನು ಪರಿಹಾಸ ಮಾಡಲಾಯಿತೋ ಅವನಿಗೆ ಅಲ್ಲಾಹನು ಶಕ್ತಿಯನ್ನು ಹೆಚ್ಚಿಗೆ ನೀಡಿ ಅದರಲ್ಲಿ ಕುಂದುಂಟಾಗದಂತೆಯೂ ಅದು ನಿಶ್ಶೇಷವಾಗದಂತೆಯೂ

ಅಲ್ಲಾಹನು ಮಾಡಬಲ್ಲನು. ಏಕೆಂದರೆ ಅಲ್ಲಾಹನು ತಾನಿಚ್ಛಿಸಿದಂತೆ ಮಾಡುತ್ತಾನೆ. ಇದೇ ರೀತಿ ಯಾರು ತನ್ನ ಶಕ್ತಿಯ ಕುರಿತು ಭರವಸೆ ಹೊಂದಿ ಪ್ರಾರ್ಥನೆ ಮಾಡುವುದರಲ್ಲಿ ಉದಾಸೀನನಾಗುತ್ತಾನೋ ಅವನು ಸಹ ಅಹಂಕಾರಿ ಆಗಿದ್ದಾನೆ. ಅಲ್ಲಾಹನು ಎಲ್ಲ ಶಕ್ತಿಗಳ ಉದ್ಭವ ಸ್ಥಾನವೆಂದು ಅವನು ಗುರುತಿಸುವುದಿಲ್ಲ ಮತ್ತು ತನ್ನ ಶಕ್ತಿಯಲ್ಲಿಯೇ ನಂಬಿಕೆ ಇರಿಸಿದನು.

ಎಲೈ ನನ್ನ ಪ್ರಿಯ ಬಂಧುಗಳೇ, ನೀವು ಈ ಎಲ್ಲ ವಿಷಯಗಳನ್ನು ನೆನಪಿಡಿರಿ. ನೀವು ಯಾವ ರೀತಿಯಲ್ಲಿಯೂ ಅಲ್ಲಾಹನ ದೃಷ್ಟಿಯಲ್ಲಿ ಅಹಂಕಾರಿ ಎಂದು ಗಣಿಸಲ್ಪಟ್ಟು ಅದು ನಿಮಗೆ ತಿಳಿಯದೆ ಇರುವ ಸ್ಥಿತಿ ಉಂಟಾಗಬಾರದು. ಯಾರು ಇನ್ನೊಬ್ಬನ ಶಬ್ದದ ತಪ್ಪು ಪ್ರಯೋಗವನ್ನು ಅಹಂಕಾರದಿಂದ ಸರಿಪಡಿಸುತ್ತಾನೋ ಅವನು ಸಹ ಅಹಂಕಾರದ ಅಂಶವನ್ನು ಪಡೆದವನಾಗಿದ್ದಾನೆ. ಒಬ್ಬನು ಇನ್ನೊಬ್ಬನ ಮಾತನ್ನು ಸಾವಧಾನವಾಗಿ ಆಲಿಸಲು ಇಚ್ಛಿಸುವುದಿಲ್ಲವಾದರೆ ಮತ್ತು ಮುಖ ತಿರುಗಿಸುವನಾದರೆ ಅವನು ಸಹ ಅಹಂಕಾರದ ಅಂಶವನ್ನು ಪಡೆದವನಾಗಿದ್ದಾನೆ. ಒಬ್ಬ ಬಡವನು ತನ್ನ ಸಮೀಪ ಕುಳಿತರೆ ಅದನ್ನು ಇಷ್ಟಪಡದವನು ಸಹ ಅಹಂಕಾರದ ಒಂದು ಅಂಶವನ್ನು ಪಡೆದವನಾಗಿದ್ದಾನೆ. ಒಬ್ಬನು ಪ್ರಾರ್ಥನೆ ಮಾಡುವವನನ್ನು ಗೇಲಿ ಮಾಡುತ್ತಾ ಪರಿಹಾಸದಿಂದ ನೋಡುತ್ತಾ ಇದ್ದರೆ ಅವನು ಸಹ ಅಹಂಕಾರದ ಅಂಶ ಪಡೆದವನಾಗಿದ್ದಾನೆ. ಯಾರು ಅಲ್ಲಾಹನು ನೇಮಿಸಿದ ಸಂದೇಶವಾಹಕನನ್ನು ಪೂರ್ಣವಾಗಿ ಅನುಸರಿಸುವುದಿಲ್ಲವೋ ಅವನು ಸಹ ಅಹಂಕಾರದ ಅಂಶವನ್ನು ಪಡೆದವನಾಗಿದ್ದಾನೆ. ಯಾರು ಅಲ್ಲಾಹನು ನೇಮಿಸಿದ ಸಂದೇಶವಾಹಕನ ಮಾತುಗಳನ್ನು ಶ್ರದ್ಧೆಯಿಂದ ಆಲಿಸುವುದಿಲ್ಲವೋ ಮತ್ತು ಅವರ ಲಿಖಿತಗಳನ್ನು ಶ್ರದ್ಧೆಯಿಂದ ಓದುವುದಿಲ್ಲವೋ ಅವನು ಸಹ ಅಹಂಕಾರದ ಒಂದು ಅಂಶ ಪಡೆದವನಾಗಿದ್ದಾನೆ. ಆದುದರಿಂದ ಅಹಂಕಾರದ ಯಾವುದೇ ಅಂಶ ನಿಮ್ಮಲ್ಲಿರದಂತೆ ನೋಡಿಕೊಳ್ಳಿರಿ. ನೀವು ನಾಶವಾಗದಂತೆ ನೋಡಿಕೊಳ್ಳಿರಿ. ನೀವು ನಿಮ್ಮ ಕುಟುಂಬ ಸಮೇತ ಮೋಕ್ಷವನ್ನು ಗಳಿಸುವವರಾಗಿರಿ. ನೀವು ಅಲ್ಲಾಹನ ಕಡೆಗೆ ಬಾಗಿರಿ. ನೀವು ಲೋಕದಲ್ಲಿ ಯಾರನ್ನಾದರೂ ಎಷ್ಟು ಪ್ರೀತಿಸಬಲ್ಲಿರೋ ಅಷ್ಟು ಪ್ರೀತಿಯನ್ನು ಅಲ್ಲಾಹನೊಂದಿಗೆ ಮಾಡಿರಿ. ನೀವು ಲೋಕದಲ್ಲಿ ಯಾರನ್ನಾದರೂ ಎಷ್ಟು ಭಯಪಡಬಹುದೋ ಅಷ್ಟು ಭಯವನ್ನು ಅಲ್ಲಾಹನ ಬಗ್ಗೆ ಹೊಂದಿರಿ. ನೀವು ಪರಿಶುದ್ಧ ಹೃದಯಿಗಳಾಗಿರಿ. ಪರಿಶುದ್ಧ ನಿರ್ಧಾರ ಮಾಡುವವರಾಗಿರಿ. ನೀವು ವಿನೀತರೂ ನಮ್ರರೂ ಇತರರಿಗೆ ಹಾನಿ ಉಂಟುಮಾಡದವರೂ ಆಗಿರಿ. ಅದರ ಪ್ರತಿಫಲವಾಗಿ ನೀವು ದಯೆದೋರಿಸಲ್ಪಟ್ಟವರಾಗಿರಿ.

**(ನುರ್ಖೂಲುಲ್ ಮಸೀಹ್; ರೂಹಾನೀ ಖಝೂಇನ್, ಸಂಪುಟ 18 ಪುಟ 402 – 403)**

ಬೈಅತಿನ ಏಳನೆಯ ಶರತ್ತಿನಲ್ಲಿ ವಿನಯಭಾವ, ಸುಸ್ವಭಾವ, ತಾಳ್ಮೆ ಮತ್ತು ನಿರಾಡಂಬರತೆಯಿಂದ ಜೀವಿಸುವ ಬಗ್ಗೆ ಹೇಳಲಾಗಿದೆ.

ನಾನು ಈ ಮೊದಲು ಹೇಳಿದ ಹಾಗೆ ನೀವು ನಿಮ್ಮ ಹೃದಯವನ್ನೂ ಮನಸ್ಸನ್ನೂ ಅಹಂಕಾರದಿಂದ ಮುಕ್ತವನ್ನಾಗಿ ಮಾಡಲು ಪ್ರಯತ್ನಿಸುತ್ತಾ ಇದ್ದರೆ, ಅದನ್ನು ದೂರಸರಿಸಿದರೆ, ಒಂದು ಶ್ರೇಷ್ಠ ಗುಣವನ್ನು ನಿಮ್ಮೊಳಗೆ ಉಂಟುಮಾಡಲೇಬೇಕು. ಇಲ್ಲದಿದ್ದರೆ ಪುನಃ ಶೈತಾನನು ಆಕ್ರಮಣ ಮಾಡುವನು. ಅವನು ಅದೇ ಕೆಲಸ ಮಾಡಲು ಸಂದರ್ಭ ನೋಡುತ್ತಾ ಕುಳಿತಿದ್ದಾನೆ. ಅವನು ನಿಮ್ಮ ಬೆನ್ನು ಬಿಡಲಾರನು. ನೀವು ನಿಮ್ಮಲ್ಲಿ ಉಂಟುಮಾಡಬೇಕಾದ ಸದ್ಗುಣ ವಿನಯ ಮತ್ತು ನಿರಾಡಂಬರತೆಯಾಗಿದೆ. ಅಹಂಕಾರಿ ಮತ್ತು ವಿನಯಶೀಲನು ಒಟ್ಟಿಗೆ ಇರಲಾರನು. ಅಹಂಕಾರಿಗಳು ಅಲ್ಲಾಹನ ಭಕ್ತರಾದ ವಿನಯಶೀಲರನ್ನು ಆಕ್ಷೇಪಿಸುತ್ತಾ ಇರುತ್ತಾರೆ. ಆದರೆ ಅವರನ್ನು ಎದುರಿಸಲು ಅವರ ಹಾಗೆಯೇ ವರ್ತಿಸಬಾರದು. ಅದಕ್ಕೆ ಪ್ರತಿಯಾಗಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ ಈ ಆಜ್ಞೆಯನ್ನು ಪಾಲಿಸಬೇಕು.

وَعِبَادُ الرَّحْمٰنِ الَّذِيْنَ يَمْشُوْنَ عَلَى الْاَرْضِ هَوْنًا وَّاِذَا خَاطَبَهُمُ الْجٰهِلُوْنَ قَالُوْا سَلٰمًا

ಪರಮ ದಯಾವಂತನ ಭಕ್ತದಾಸರು ಭೂಮಿಯಲ್ಲಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. ಅಜ್ಞಾನಿಗಳಾದ ಜನರು ಅವರನ್ನು ಮಾತಿಗೆಳೆದರೆ ಅವರು ಸಲಾಮ್ (ಶಾಂತಿ) ಎಂದು ಹೇಳುತ್ತಾರೆ. **(25:64)**

ಹಝ್ರತ್ ರಸೂಲುಲ್ಲಾಹ್[ಸ] ಹೇಳಿದ್ದಾಗಿ ಹಝ್ರತ್ ಅಬೂ ಸಈದ್ ಖುದ್ರೀ[ರ] ಒಂದು ಹದೀಸಿನಲ್ಲಿ ವರದಿ ಮಾಡುತ್ತಾರೆ: ಅಲ್ಲಾಹನಿಗಾಗಿ ಒಬ್ಬನು ಒಂದು ಹಂತ ವಿನಯ ತೋರಿಸಿದರೆ ಅಲ್ಲಾಹನು ಅವನನ್ನು ಉನ್ನತಿಗೇರಿಸುವನು. ಅವನಿಗೆ ಕೊನೆಗೆ ಇಲ್ಲಿಯ್ಯೀನ್ ಎಂಬ ಉನ್ನತ ಸ್ಥಾನದಲ್ಲಿ ಸ್ಥಳ ನೀಡುವನು. ಯಾರಾದರೂ ಅಲ್ಲಾಹನ ಎದುರಿಗೆ ಒಂದು ಹಂತದ ಅಹಂಕಾರ ತೋರಿಸಿದರೆ ಅಲ್ಲಾಹನು ಅವನನ್ನು ಒಂದು ಹಂತ ಕೆಳಗೆ ಹಾಕುವನು. ಕೊನೆಗೆ ಅವನು ನರಕದ ಅತ್ಯಂತ ತಳಮಟ್ಟವನ್ನು ತಲುಪಿದವರನ್ನು ಸೇರುವನು.

**(ಮುಸ್‌ನದ್ ಅಹ್ಮದ್ ಬಿನ್ ಹಂಬಲ್)**

ಅಂತಹ ಜನರ ಕೂಟಗಳಿಂದ ಸಲಾಮ್ ಹೇಳಿ ಎದ್ದು ಹೋಗುವುದರಲ್ಲಿ ನಿಮ್ಮ ಉಳಿಯುವಿಕೆ ಮತ್ತು ನಿಮಗೆ ಒಳಿತಿದೆ. ಅದರಿಂದಲೇ ನಿಮ್ಮ ಆಧ್ಯಾತ್ಮಿಕ ಸ್ಥಾನ ಉನ್ನತವಾಗುವುದು. ಶತ್ರುಗಳು ತಮ್ಮ ವರ್ತನೆಯ ಕಾರಣಗಳಿಂದ ಅತ್ಯಂತ ಕೆಳಮಟ್ಟದವರ ಜೊತೆ ಸೇರಲು ಬಿಸಾಡಲ್ಪಡುವರು.

ಇನ್ನೊಂದು ಹದೀಸು ಹೀಗಿದೆ: ಹಝ್ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು – ದಾನಧರ್ಮ

ಮಾಡುವುದರಿಂದ ಸಂಪತ್ತಿನಲ್ಲಿ ಕೊರತೆ ಉಂಟಾಗಲಾರದು. ಅಲ್ಲಾಹನ ದಾಸನು ಯಾರಿಗಾದರೂ ಎಷ್ಟು ಕ್ಷಮಿಸುತ್ತಾನೋ ಅಲ್ಲಾಹನು ಅಷ್ಟು ಪ್ರಮಾಣದಲ್ಲಿ ಅವನಿಗೆ ಹೆಚ್ಚು ಗೌರವ ನೀಡುತ್ತಾನೆ. ಯಾರು ಎಷ್ಟು ತಗ್ಗಿ ನಡೆಯುತ್ತಾನೋ ಮತ್ತು ವಿನಯಾನ್ವಿತನಾಗುತ್ತಾನೋ ಅಲ್ಲಾಹನು ಅಷ್ಟು ಪ್ರಮಾಣದಲ್ಲಿ ಅವನಿಗೆ ಉನ್ನತ ಪದವಿ ನೀಡುತ್ತಾನೆ.

(ಮುಸ್ಲಿಮ್)

ಒಂದು ಹದೀಸಿನಲ್ಲಿ ಅಯಾಝ್ ಬಿನ್ ಹಮಾರ್ ಬಿನ್ ಮುಜಾಶಿಅ್‌ರ ಸಹೋದರ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ನಮ್ಮ ಮಧ್ಯೆ ನಿಂತು ಹೇಳಿದರು – ಅಲ್ಲಾಹನು ನನಗೆ ಸಂದೇಶವಾಣಿ ನೀಡಿದ್ದಾನೆ. ಒಬ್ಬನು ಇನ್ನೊಬ್ಬನ ಮೇಲೆ ಹೆಮ್ಮೆಪಡಲಾಗದಷ್ಟು ಮತ್ತು ಒಬ್ಬನು ಇನ್ನೊಬ್ಬನ ಮೇಲೆ ದೌರ್ಜನ್ಯ ಮಾಡಲಾಗದಷ್ಟು ವಿನಯವನ್ನು ತೋರಿಸಿರಿ.

ಇನ್ನೊಂದು ಹದೀಸು ಹೀಗಿದೆ: ಹಝ್ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ – ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದರಿಂದ ಸಂಪತ್ತಿನಲ್ಲಿ ಕೊರತೆ ಉಂಟಾಗಲಾರದು. ಅಲ್ಲಾಹನ ದಾಸನು ಯಾರನ್ನಾದರೂ ಎಷ್ಟು ಕ್ಷಮಿಸುತ್ತಾನೋ ಅಷ್ಟು ಪ್ರಮಾಣದಲ್ಲಿ ಹೆಚ್ಚಿಗೆ ಗೌರವವನ್ನು ಅಲ್ಲಾಹನು ನೀಡುತ್ತಾನೆ. ಅವನು ಎಷ್ಟು ವಿನಯಾನ್ವಿತನಾಗುತ್ತಾನೋ ಅಷ್ಟು ಪ್ರಮಾಣದಲ್ಲಿ ಅವನಿಗೆ ಉನ್ನತ ಪದವಿಯನ್ನು ನೀಡುತ್ತಾನೆ.

(ಮುಸ್ಲಿಮ್)

ಈ ಹದೀಸನ್ನು ನಮ್ಮ ಪರಸ್ಪರ ವ್ಯವಹಾರದಲ್ಲಿ ಮುಂದಿರಿಸಬೇಕಾಗಿದೆ. ಅಹ್ಮದಿಯರು ಪರಸ್ಪರ ಕ್ಷಮಿಸುವ ಸ್ವಭಾವ ಹೊಂದಬೇಕು. ಅದರ ಫಲವಾಗಿ ಪರಲೋಕದಲ್ಲಿ ಸಹ ನಿಮ್ಮ ಪದವಿಯನ್ನು ಅಲ್ಲಾಹನು ಉನ್ನತಗೊಳಿಸುವನು ಮತ್ತು ಇಹಲೋಕದಲ್ಲಿಯೂ ನಿಮ್ಮ ಗೌರವವನ್ನು ಅಲ್ಲಾಹನು ಹೆಚ್ಚು ಮಾಡುತ್ತಾ ಹೋಗುವನು. ಅಲ್ಲಾಹನು ತನಗಾಗಿ ಮಾಡಿದ ಯಾವ ಕೆಲಸಕ್ಕೂ ಪ್ರತಿಫಲ ನೀಡದೆ ಬಿಟ್ಟುಬಿಡಲಾರನು.

## ಹಝ್ರತ್ ರಸೂಲುಲ್ಲಾಹ್‌ರ[ಸ] ದೃಷ್ಟಿಯಲ್ಲಿ ನಿರಾಡಂಬರತೆಯಿಂದ ವರ್ತಿಸುವವರ ಸ್ಥಾನ

ಹಝ್ರತ್ ರಸೂಲುಲ್ಲಾಹ್[ಸ] ನಿರಾಡಂಬರತೆಯಿಂದ ವರ್ತಿಸುವವರ ಕುರಿತು ಯಾವ ದೃಷ್ಟಿಕೋನವನ್ನು ಹೊಂದಿದ್ದರು ಎಂಬುದರ ಕುರಿತು ಒಂದು ಹದೀಸು ಹೀಗಿದೆ:

ಹಝ್‌ರತ್ ಅಬೂ ಸಈದ್ ಖುದ್‌ರೀ(ರ) ಹೀಗೆ ವರದಿ ಮಾಡುತ್ತಾರೆ – ಹಝ್‌ರತ್ ರಸೂಲುಲ್ಲಾಹ್(ಸ) ಹೀಗೆ ಪ್ರಾರ್ಥಿಸುವುದನ್ನು ನಾನು ಆಲಿಸಿದೆ: **'ಅಲ್ಲಾಹುಮ್ಮ ಅಹ್‌ಯಿನೀ ಮಿಸ್‌ಕೀನನ್ ವ ಅಮಿತ್‌ನೀ ಮಿಸ್‌ಕೀನನ್ ವಹ್‌ಶುರ್‌ನೀ ಫೀ ಝುಮ್‌ರತಿಲ್ ಮಸಾಕೀನ್.'** – ಹೇ ನನ್ನ ಅಲ್ಲಾಹ್, ನನ್ನನ್ನು ನಿರಾಡಂಬರವಾಗಿ ಜೀವಿಸುವಂತೆ ಮಾಡು. ನಿರಾಡಂಬರನಾಗಿ ಮೃತಪಡಿಸು. ನನ್ನನ್ನು ನಿರಾಡಂಬರರಾದ ಜನರೊಂದಿಗೆ ಪುನರುತ್ಥಾನ ದಿನದಲ್ಲಿ ಎದ್ದೇಳಿಸು. **(ಇಬ್ನು ಮಾಜ)**

ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ಯಾವ ಮಾರ್ಗದಲ್ಲಿ ಹೆಜ್ಜೆ ಹಾಕಿದರೋ ಅದೇ ಮಾರ್ಗದಲ್ಲಿ ಪ್ರತಿಯೊಬ್ಬ ಅಹ್ಮದಿಯೂ ಹೆಜ್ಜೆ ಹಾಕಬೇಕು. ಪ್ರತಿಯೊಬ್ಬ ಅಹ್ಮದೀ ತನ್ನನ್ನು ಸರಳ ಜೀವಿತ ನಡೆಸುವವರ ಗುಂಪಿನಲ್ಲಿ ಸೇರಿರಲು ಪ್ರಯತ್ನಿಸಬೇಕು. ಏಕೆಂದರೆ ಬೈಅತ್ ಪ್ರತಿಜ್ಞೆಯಲ್ಲಿ ನಿರಾಡಂಬರ ಜೀವಿತದ ಬಗ್ಗೆ ಹೇಳಲಾಗಿದೆ.

ಒಂದು ಹದೀಸ್ ಹೀಗಿದೆ – ಹಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಜಅಫರ್ ಬಿನ್ ಅಬೀತಾಲಿಬ್ ಬಡವರನ್ನು ಬಹಳ ಪ್ರೀತಿಸುತ್ತಿದ್ದರು. ಅವರೊಂದಿಗೆ ಕುಳಿತುಕೊಳ್ಳುತ್ತಿದ್ದರು. ಅವರೊಂದಿಗೆ ಮಾತನಾಡುತ್ತಿದ್ದರು. ಬಡವರು ಅವರೊಂದಿಗೆ ಮಾತನಾಡುತ್ತಿದ್ದರು. ಆದ್ದರಿಂದ ಹಝ್‌ರತ್ ರಸೂಲುಲ್ಲಾಹ್(ಸ) ಜಅಫರ್‌ರನ್ನು ಅಬುಲ್ ಮಸಾಕೀನ್ (ಬಡವರ ಪಿತ) ಎಂಬ ನಾಮದಿಂದ ಕರೆಯುತ್ತಿದ್ದರು. **(ಇಬ್ನುಮಾಜ)**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನೀವು ಅಲ್ಲಾಹನನ್ನು ಹುಡುಕುವಿರಾದರೆ ದರಿದ್ರರ ಹೃದಯಗಳ ಸಮೀಪ ಹುಡುಕಿರಿ. ಇದೇ ಕಾರಣದಿಂದ ಪ್ರವಾದಿಗಳು ಸರಳತೆಯನ್ನೇ ಅವಲಂಬಿಸಿದ್ದರು. ದೊಡ್ಡ ಕೋಮಿನ ಜನರು ಚಿಕ್ಕ ಕೋಮಿನ ಜನರನ್ನು ಪರಿಹಾಸ ಮಾಡಿ "ನನ್ನ ಕುಟುಂಬ ಪ್ರತಿಷ್ಠಿತ" ಎಂದು ಹೇಳಬಾರದು. ಅಲ್ಲಾಹನು ಹೇಳುತ್ತಾನೆ: ನೀವು ನನ್ನ ಸಮೀಪಕ್ಕೆ ಬಂದಾಗ ನೀವು ಯಾವ ಕೋಮಿಗೆ ಸೇರಿದವರೆಂದು ನಾನು ಪ್ರಶ್ನಿಸಲಾರೆನು. ನೀವು ಹೇಗೆ ಕೆಲಸ ಮಾಡಿದಿರಿ ಎಂದು ಪ್ರಶ್ನಿಸಲಾಗುವುದು. ಇದೇ ರೀತಿ ಹಝ್‌ರತ್ ರಸೂಲುಲ್ಲಾಹ್(ಸ) ತನ್ನ ಮಗಳೊಂದಿಗೆ ಹೇಳಿದರು: ಹೇ ಫಾತಿಮ, ಅಲ್ಲಾಹನು ನಿನ್ನ ಕುಟುಂಬ ಸಂಬಂಧದ ಕುರಿತು ವಿಚಾರಿಸಲಾರನು. ನೀನು ಯಾವುದಾದರೂ ಕೆಟ್ಟ ಕೆಲಸ ಮಾಡಿದರೆ ನೀನು ಪ್ರವಾದಿಯ ಮಗಳೆಂದು ನಿನ್ನನ್ನು ಅಲ್ಲಾಹನು ಕ್ಷಮಿಸಲಾರನು. ನೀನು ನಿನ್ನ ಕೆಲಸವನ್ನು ಯಾವಾಗಲೂ ಜಾಗರೂಕತೆಯಿಂದ ಮಾಡಬೇಕು.

**(ಮಲ್‌ಫೂಝಾತ್; ಸಂಪುಟ 3, ಪುಟ 370 – ಹೊಸಮುದ್ರಣ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ತಖ್ವಾ (ಭಯಭಕ್ತಿ) ಹೊಂದಿದವರು ವಿನಮ್ರತೆಯಿಂದ ಜೀವಿಸಬೇಕು. ಅನಾವಶ್ಯಕವಾಗಿ ಸಿಟ್ಟು ಮಾಡುವುದರಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ತಖ್ವಾದ (ಭಯಭಕ್ತಿಯ) ಒಂದು ಶಾಖೆಯಾಗಿದೆ. ದೊಡ್ಡ ದೊಡ್ಡ ಜ್ಞಾನಿಗಳಿಗೆ ಮತ್ತು ಸತ್ಯಸಂಧರಿಗೆ ಕೊನೆಯ ಮತ್ತು ಕಠಿಣ ಮಜಲು ಕೋಪದಿಂದ ದೂರಸರಿಯುವುದಾಗಿದೆ. ದರ್ಪವು ಸಿಟ್ಟಿನಿಂದ ಉದ್ಭವಿಸುತ್ತದೆ. ಕೆಲವು ಸಾರಿ ಸಿಟ್ಟು ದರ್ಪದ ಕಾರಣದಿಂದ ಉಂಟಾಗುತ್ತದೆ. ತನ್ನನ್ನು ಇತರರಿಗಿಂತ ಶ್ರೇಷ್ಠ ಎಂದು ಗಣಿಸುವಾಗ ಸಿಟ್ಟು ಉಂಟಾಗುತ್ತದೆ.

**(ರಿಪೋರ್ಟ್ ಜಲ್ಸ ಸಾಲಾನ 1897; ಪುಟ 47)**

ಆಕಾಶದಲ್ಲಿ ಅಲ್ಲಾಹನು ನಿಮ್ಮಿಂದ ಸಂಪ್ರೀತನಾಗಬೇಕಾದರೆ ನೀವು ಒಂದೇ ಉದರದಿಂದ ಜನಿಸಿದ ಇಬ್ಬರು ಸಹೋದರರ ಹಾಗೆ ಪರಸ್ಪರ ಒಂದಾಗಬೇಕು. ತನ್ನ ಸಹೋದರನ ಪಾಪಗಳನ್ನು ಕ್ಷಮಿಸುವವನೇ ಅಲ್ಲಾಹನ ದೃಷ್ಟಿಯಲ್ಲಿ ಹೆಚ್ಚು ಗೌರವಾರ್ಹನಾಗಿದ್ದಾನೆ. ಯಾರು ಹಠ ಮಾಡುತ್ತಾನೋ, ಯಾರು ಕ್ಷಮಿಸುವುದಿಲ್ಲವೋ ಅವನೇ ದುರದೃಷ್ಟವಂತನು. ಅವನು ನನಗೆ ಸೇರಿದವನಲ್ಲ.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 12 – 13)**

★★★

# ಬೈಅತಿನ ಎಂಟನೆಯ ಶರತ್ತು

**ಧರ್ಮ, ಧರ್ಮದ ಗೌರವ ಮತ್ತು ಇಸ್ಲಾಮ್ ಧರ್ಮದ ಹಿತವನ್ನು ತನ್ನ ಜೀವ, ತನ್ನ ಸಂಪತ್ತು, ತನ್ನ ಗೌರವ, ತನ್ನ ಸಂತಾನ ಮತ್ತು ಪ್ರಿಯವಾದ ಎಲ್ಲಕ್ಕಿಂತಲೂ ಹೆಚ್ಚು ಪ್ರಿಯಕರವಾದುದೆಂದು ಭಾವಿಸುವೆನು.**

ಧರ್ಮಕ್ಕೆ ಲೌಕಿಕ ಕೆಲಸಗಳ ಮೇಲೆ ಆದ್ಯತೆ ನೀಡುವೆನು ಎಂಬ ಪ್ರತಿಜ್ಞೆಯನ್ನು ಅಹ್ಮದಿಯಾ ಜಮಾಅತಿನೊಂದಿಗೆ ಸಂಬಂಧ ಹೊಂದಿದ ಪ್ರತಿಯೊಬ್ಬ ಅಹ್ಮದೀ ಜಲ್ಸಗಳಲ್ಲಿ, ಇಜ್ತಿಮಾ ಮೊದಲಾದವುಗಳಲ್ಲಿ ಭಾಗವಹಿಸುವಾಗ ಪದೇ ಪದೇ ಪುನರಾವರ್ತಿಸುತ್ತಾನೆ. ಪ್ರತಿಯೊಂದು ಜಲ್ಸ, ಇಜ್ತಿಮಾ ಮೊದಲಾದವುಗಳಲ್ಲಿ ಬ್ಯಾನರ್‌ಗಳನ್ನು ಹಾಕಲಾಗುವಾಗ "ಧರ್ಮಕ್ಕೆ ಲೌಕಿಕ ಕೆಲಸಗಳ ಮೇಲೆ ಆದ್ಯತೆ ನೀಡುವೆನು" ಎಂಬ ವಾಕ್ಯ ಬರೆಯಲಾಗುತ್ತದೆ. ಇದರ ಬಗ್ಗೆ ಇಷ್ಟು ಮಹತ್ವ ನೀಡಿದ್ದು ಏಕೆ? ಧರ್ಮಕ್ಕೆ ಆದ್ಯತೆ ನೀಡದಿದ್ದರೆ ಸತ್ಯವಿಶ್ವಾಸವು ನೆಲೆನಿಲ್ಲಲಿಕ್ಕಿಲ್ಲವೆಂಬುದೇ ಇದಕ್ಕೆ ಕಾರಣ. ಇದರ ಪ್ರಕಾರ ವರ್ತಿಸುವುದು ಸುಲಭದ ಕೆಲಸವೇನೂ ಅಲ್ಲ. ಆದ್ದರಿಂದ ಹೀಗೆ ವರ್ತಿಸಲು ಸದಾ ಅಲ್ಲಾಹನ ಸಹಾಯವನ್ನು ಯಾಚಿಸುತ್ತಾ ಇರಬೇಕು. ಅವನ ಅನುಗ್ರಹದಿಂದಲೇ ಉನ್ನತ ಮಟ್ಟವನ್ನು ತಲಪಬಹುದು. ನಾವು ಅಲ್ಲಾಹನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್‌ರ(ಅ) ಬೈಅತ್ ಮಾಡಿದ್ದೇವೆ. ನಮಗೆ ಅಲ್ಲಾಹನು ಹೀಗೆ ಆಜ್ಞಾಪಿಸಿದ್ದಾನೆ:

وَمَآ اُمِرُوٓا اِلَّا لِيَعۡبُدُوا اللّٰهَ مُخۡلِصِيۡنَ لَهُ الدِّيۡنَ حُنَفَآءَ وَيُقِيۡمُوا الصَّلٰوةَ وَيُؤۡتُوا الزَّكٰوةَ وَذٰلِكَ
دِيۡنُ الۡقَيِّمَةِ

ಅಲ್ಲಾಹನಿಗೆ ಸಂಪೂರ್ಣ ವಿಧೇಯರಾಗಿದ್ದುಕೊಂಡು ಅವನನ್ನು ಆರಾಧಿಸಬೇಕೆಂದು, ಯಾವಾಗಲೂ ಅವನ ಕಡೆಗೆ ಬಾಗುತ್ತಾ ಪ್ರಾರ್ಥನೆಯನ್ನು ನಿಷ್ಠೆಯಿಂದ ಸಲ್ಲಿಸಬೇಕೆಂದು, ಝಕಾತ್ ನೀಡಬೇಕೆಂದು ಹೊರತು ಅವರೊಡನೆ ಆಜ್ಞಾಪಿಸಲಾಗಿಲ್ಲ. ಅದೇ ಶಾಶ್ವತ ಸತ್ಯಾಧಿಷ್ಠಿತ ಧರ್ಮ. **(98:6)**

ನಮಾಝನ್ನು ನೆಲೆನಿಲ್ಲಿಸುವ ಮೂಲಕ, ಅಂದರೆ ಸಾಮೂಹಿಕವಾಗಿ ನಿಗದಿತ ಸಮಯದಲ್ಲಿ ಅದನ್ನು ಅನುಷ್ಠಿಸುವ ಮೂಲಕ, ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಮೂಲಕ, ಬಡವರ ಕುರಿತು ಕಾಳಜಿ ವಹಿಸುವ ಮೂಲಕ ನಾವು ಸರಿಯಾದ ಧರ್ಮದಲ್ಲಿ ನೆಲೆನಿಲ್ಲಲು ಸಾಧ್ಯ. ನಾವು ಅಲ್ಲಾಹನನ್ನು ಆರಾಧಿಸುತ್ತಾ ಇದ್ದರೆ ನಾವು ಮೇಲೆ ವಿವರಿಸಿದ ಉಪದೇಶಗಳನ್ನು ನಮ್ಮ ಜೀವಿತದ ಅಂಶವನ್ನಾಗಿ ಮಾಡಲು ಸಾಧ್ಯ. ನಾವು ನಮ್ಮ ಜೀವಿತದಲ್ಲಿ ಅವುಗಳನ್ನು ಅಳವಡಿಸಲು ಸಾಧ್ಯ. ನಾವು ಅಲ್ಲಾಹನ ಆರಾಧನೆ ಮಾಡುವಾಗ, ಅಲ್ಲಾಹನು ನೀಡಿದ ಉಪದೇಶಗಳನ್ನು ಅನುಸರಿಸುವಾಗ ಅಲ್ಲಾಹನು ನಮಗೆ

ಆ ಸೌಭಾಗ್ಯವನ್ನು ನೀಡುವನು. ನಮ್ಮ ವಿಶ್ವಾಸವನ್ನು ಅಲ್ಲಾಹನು ಎಷ್ಟು ಬಲಪಡಿಸುವನೆಂದರೆ ನಮಗೆ ನಮ್ಮ ದೇಹ, ನಮ್ಮ ಆಶಾಭಿಲಾಷೆಗಳು, ನಮ್ಮ ಮಕ್ಕಳು, ಧರ್ಮದ ಎದುರಿಗೆ ಮಹತ್ವಹೀನವಾಗಿ ಕಾಣುವುವು. ಎಲ್ಲವೂ ಅಲ್ಲಾಹನಿಗೆ ಅರ್ಪಿಸಲ್ಪಟ್ಟರೆ, ನಮ್ಮದು ಏನೂ ಉಳಿಯದಿದ್ದರೆ, ಅಲ್ಲಾಹನು ಅಂತಹ ಜನರನ್ನು ಎಂದೂ ನಾಶಗೊಳಿಸಲಾರನು. ಅವನು ಅವರ ಗೌರವವನ್ನು ಕಾಪಾಡುತ್ತಾನೆ. ಅವರ ಮಕ್ಕಳನ್ನೂ ರಕ್ಷಿಸುತ್ತಾನೆ. ಅವರಿಗೆ ಅನುಗ್ರಹ ನೀಡುತ್ತಾನೆ. ಅವರ ಸಂಪತ್ತನ್ನು ವರ್ಧಿಸುತ್ತಾನೆ. ಅವರನ್ನು ತನ್ನ ಅನುಗ್ರಹ ಮತ್ತು ಕೃಪೆಯ ಚಾದರದಲ್ಲಿ ಯಾವಾಗಲೂ ಸುತ್ತಿಡುತ್ತಾನೆ. ಅವರ ಎಲ್ಲ ವಿಧ ಭಯವನ್ನು ದೂರಸರಿಸುತ್ತಾನೆ. ಈ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ:

بَلٰى ۚ مَنْ اَسْلَمَ وَجْهَهٗ لِلّٰهِ وَهُوَ مُحْسِنٌ فَلَهٗۤ اَجْرُهٗ عِنْدَ رَبِّهٖ ۪ وَلَا خَوْفٌ عَلَيْهِمْ وَلَا هُمْ يَحْزَنُوْنَ

ಯಾರು ಅಲ್ಲಾಹನಿಗೆ ಸಂಪೂರ್ಣವಾಗಿ ಶರಣಾಗಿ ಸತ್ಕರ್ಮನಿರತ ನಾಗುತ್ತಾನೋ ಅವನಿಗೆ ಅವನ ಪ್ರಭುವಿನಿಂದ ಪ್ರತಿಫಲವಿದೆ. ಅಂತಹವರಿಗೆ ಭಯವಿಲ್ಲ; ಅವರು ದುಃಖಿತರೂ ಅಲ್ಲ. **(2:113)**

## ಇಸ್ಲಾಮಿನ ಉಪದೇಶಗಳ ಸಂಕ್ಷಿಪ್ತ ರೂಪ

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

وَمَنْ اَحْسَنُ دِيْنًا مِّمَّنْ اَسْلَمَ وَجْهَهٗ لِلّٰهِ وَهُوَ مُحْسِنٌ وَّاتَّبَعَ مِلَّةَ اِبْرٰهِيْمَ حَنِيْفًا ؕ وَاتَّخَذَ اللّٰهُ
اِبْرٰهِيْمَ خَلِيْلًا

ಅಲ್ಲಾಹನಿಗೆ ಸಂಪೂರ್ಣ ಶರಣಾಗಿ, ಸತ್ಕರ್ಮ ಮಾಡುತ್ತಾ, ಅಲ್ಲಾಹನ ಕಡೆಗೆ ಸದಾ ಬಾಗುತ್ತಿರುವ ಇಬ್ರಾಹೀಮರ ಧರ್ಮವನ್ನು ಅನುಸರಿಸುವವನಿಗಿಂತ ಉತ್ತಮನಾದ ಧರ್ಮವಿಶ್ವಾಸಿ ಯಾರು? ಇಬ್ರಾಹೀಮರನ್ನು ಅಲ್ಲಾಹನು ತನ್ನ ಆಪ್ತ ಮಿತ್ರನನ್ನಾಗಿ ಮಾಡಿದ್ದಾನೆ. **(4:126)**

ಈ ವಚನದಲ್ಲಿ ಇಸ್ಲಾಮಿನ ಉಪದೇಶಗಳ ಸಂಕ್ಷಿಪ್ತ ರೂಪವಿದೆ. ಪರಿಪೂರ್ಣ ಅನುಸರಣೆ, ಎಲ್ಲ ಶಕ್ತಿಗಳೊಂದಿಗೆ ಅಲ್ಲಾಹನ ಆಜ್ಞೆಗಳನ್ನು ಮಾತ್ರ ಪಾಲಿಸುವುದು ಮತ್ತು ಅಲ್ಲಾಹನ ಧರ್ಮಕ್ಕಾಗಿ ತನ್ನನ್ನು ಅರ್ಪಿಸಿ ಪರೋಪಕಾರ ಮಾಡುವವನಾಗಬೇಕು. ಅಲ್ಲಾಹನಿಗಾಗಿ ಸತ್ಕಾರ್ಯಗಳನ್ನು ಮಾಡುವವನಾದ ಕಾರಣ ಎಲ್ಲ ಸಮಯಗಳಲ್ಲೂ ಧರ್ಮದ ಸೇವೆಯಲ್ಲಿ ಮಗ್ನನಾದರೆ ತನ್ನ ಸಂಪತ್ತು ಮತ್ತು ತನ್ನ ಮಕ್ಕಳು ನಾಶವಾಗುವರು ಎಂದು ಭಾವಿಸಬಾರದು. ಅಲ್ಲಾಹನು ಎಲ್ಲರಿಗಿಂತಲೂ ಹೆಚ್ಚಿಗೆ ಪ್ರತಿಫಲ ನೀಡುವವನಾಗಿದ್ದಾನೆ. ಅವನು ಸತ್ಕಾರ್ಯ ಮಾಡುವವರಿಗೆ ಸ್ವತಃ ಪ್ರತಿಫಲ ನೀಡುವನು. ಹಿಂದೆ ಹೇಳಿದ ಹಾಗೆ ಅಲ್ಲಾಹನೇ ಸತ್ಯವಿಶ್ವಾಸಿಯ ಜೀವ, ಸಂಪತ್ತು ಮತ್ತು ಗೌರವವನ್ನು ರಕ್ಷಿಸುವನು. ಅಂತಹ ಜನರನ್ನು ಮತ್ತು ಅವರ ಸಂತಾನವನ್ನು ಅಲ್ಲಾಹನು ನಾಶಮಾಡಲಾರನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

بَلٰى ۚ مَنْ اَسْلَمَ وَجْهَهٗ لِلّٰهِ وَهُوَ مُحْسِنٌ فَلَهٗۤ اَجْرُهٗ عِنْدَ رَبِّهٖ ۪ وَلَا خَوْفٌ عَلَيْهِمْ وَلَا هُمْ يَحْزَنُوْنَ

ಯಾರು ಸಂಪೂರ್ಣವಾಗಿ ಅಲ್ಲಾಹನಿಗೆ ಶರಣಾಗಿ ಸತ್ಕರ್ಮಿಯಾಗುತ್ತಾನೋ, ಅವನಿಗೆ ತನ್ನ ಪ್ರಭುವಿನಿಂದ ಪ್ರತಿಫಲವಿದೆ. ಅಂತಹವರಿಗೆ ಭಯವಿಲ್ಲ; ಅವರು ದುಃಖಿತರೂ ಅಲ್ಲ. **(2:113)**

ಒಬ್ಬನು ತನ್ನ ಎಲ್ಲ ಶಕ್ತಿಯನ್ನು ಅಲ್ಲಾಹನ ಮಾರ್ಗದಲ್ಲಿ ಉಪಯೋಗಿಸುವನಾದರೆ ಮತ್ತು ಅವನ ಮಾತು ಮತ್ತು ನಡತೆ, ಅವನ ಚಲನೆ ಮತ್ತು ನಿಶ್ಚಲತೆ ಸ್ಥಿತಿ ಎಲ್ಲವೂ ಅಲ್ಲಾಹನಿಗಾಗಿ ಮೀಸಲಾಗಿಟ್ಟರೆ ಮತ್ತು ನಿಜವಾದ ಸತ್ಕಾರ್ಯಗಳನ್ನು ಮಾಡುವವನಾದರೆ ಅಂತಹ ವ್ಯಕ್ತಿಗೆ ಅಲ್ಲಾಹನು ತನ್ನಿಂದ ಪ್ರತಿಫಲ ಕೊಡುವನು. ಅವನಿಗೆ ಭಯ ಮತ್ತು ದುಃಖದಿಂದ ಮುಕ್ತಿ ನೀಡುವನು.

**(ಸಿರಾಜುದ್ದೀನ್ ಈಸಾಯಿ ಕೆ ಚಾರ್ ಸವಾಲೋಂಕೆ ಜವಾಬ್; ರೂಹಾನೀ ಖಝಾಇನ್, ಸಂಪುಟ 12, ಪುಟ 344)**

ಒಂದು ಹದೀಸ್ ಹೀಗಿದೆ –

ಮುಆವಿಯ ಬಿನ್ ಹೈದಃ ಖುಶೈರಿ[ರ] ತಾನು ಇಸ್ಲಾಮ್ ಧರ್ಮಕ್ಕೆ ಸೇರಿದ ಬಗ್ಗೆ ವಿವರಿಸುತ್ತಾ ಹೀಗೆಂದರು: ನಾನು ಹಝ್ರತ್ ರಸೂಲುಲ್ಲಾಹ್‌ರ[ಸ] ಹತ್ತಿರ ಹೋಗಿ ಕೇಳಿದೆ: 'ನಿಮಗೆ ನಮ್ಮ ಪ್ರಭು ಯಾವ ಸಂದೇಶ ನೀಡಿದ್ದಾನೆ. ನೀವು ಯಾವ ಧರ್ಮವನ್ನು ತಂದಿರುತ್ತೀರಿ?' ಆಗ ಅವರು ಹೇಳಿದರು: 'ಅಲ್ಲಾಹನು ನನಗೆ ಇಸ್ಲಾಮ್ ಧರ್ಮವನ್ನು ನೀಡಿ ಕಳುಹಿಸಿರುವನು.' ನಾನು ಕೇಳಿದೆ: 'ಇಸ್ಲಾಮ್ ಧರ್ಮವೆಂದರೇನು?' ಅವರು ಹೇಳಿದರು: 'ನಿನ್ನನ್ನು ಪೂರ್ಣವಾಗಿ ಅಲ್ಲಾಹನಿಗೆ ಅರ್ಪಿಸು, ಅನ್ಯ ಆರಾಧ್ಯರನ್ನು ಕೈಬಿಡು, ನಮಾಝನ್ನು ಅನುಷ್ಠಿಸು ಮತ್ತು ಝಕಾತ್ ಕೊಡು. ಇದೇ ಇಸ್ಲಾಮ್'.

**(ಅಲ್ ಇಸ್ತೀಆಬ್)**

ಇನ್ನೊಂದು ಹದೀಸ್ ಹೀಗಿದೆ –

ಹಝ್ರತ್ ಸುಫ್‌ಯಾನ್[ರ] ಹೀಗೆ ಹೇಳಿದರು: ನಾನು ಒಮ್ಮೆ ಹೀಗೆ ಹೇಳಿದೆ – ಅಲ್ಲಾಹನ ಸಂದೇಶವಾಹಕರೇ, ನನಗೆ ಇಸ್ಲಾಮಿನ ಯಾವುದಾದರೂ ಒಂದು ಕಾರ್ಯದ ಬಗ್ಗೆ ಬೇರೆಯವರನ್ನು ಕೇಳುವ ಆವಶ್ಯಕತೆ ಉಂಟಾಗದೆ ಪೂರ್ಣ ಸಮಾಧಾನ ಲಭಿಸುವ ಹಾಗೆ ವಿವರಿಸಿರಿ. ಆಗ ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ನೀನು ಹೇಳು – ನಾನು ಅಲ್ಲಾಹನನ್ನು ನಂಬುತ್ತೇನೆ. ಮತ್ತೆ ಆ ವಿಶ್ವಾಸದಲ್ಲಿ ದೃಢಚಿತ್ತನಾಗಿರು. ಅನಂತರ ಈ ವಿಶ್ವಾಸದಲ್ಲಿ ಸ್ಥಿರವಾಗಿ ನೆಲೆನಿಲ್ಲು.

**(ಮುಸ್ಲಿಮ್)**

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ(ಸ) ಶಿಷ್ಯರ ವರ್ತನೆ ಹೇಗಿತ್ತು ಎಂಬುದರ ಬಗ್ಗೆ ಒಂದು ಹದೀಸು ವಿವರಿಸುತ್ತೇನೆ: ಆರಂಭದಲ್ಲಿ ಮದ್ಯವು ಇಸ್ಲಾಮಿನಲ್ಲಿ ನಿಷಿದ್ಧವಾಗಿರಲಿಲ್ಲ. ಶಿಷ್ಯರು ಮದ್ಯ ಕುಡಿದು ಮತ್ತರಾಗುತ್ತಿದ್ದರು. ಅಂತಹ ಕಾಲದಲ್ಲಿಯೂ ಅವರು ಧರ್ಮವನ್ನು ಗೌರವಿಸುತ್ತಿದ್ದರು. ಧರ್ಮಕ್ಕೆ ಆದ್ಯತೆ ನೀಡಬೇಕೆಂದು ಅವರು ಯೋಚಿಸುತ್ತಿದ್ದರು. ಮದ್ಯವು ನಿಷಿದ್ಧವಾದ ಆಜ್ಞೆ ಬಂದಾಗ ಮದ್ಯಪಾನ ಮಾಡುತ್ತಾ ಕುಳಿತಿದ್ದವರು ಮತ್ತು ಅವರಲ್ಲಿ ಮತ್ತರಾದ ಜನರು ಮದ್ಯ ನಿಷೇಧದ ಆಜ್ಞೆಯನ್ನು ಕೇಳಿದ ಕೂಡಲೆ ಪಾಲಿಸಿದರು. ಇದರ ಬಗ್ಗೆ ಒಂದು ಹದೀಸ್ ಹೀಗಿದೆ:

> ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೀಗೆ ಹೇಳುತ್ತಾರೆ: ಅಬೂತಲ್‌ಹ ಅನ್‌ಸಾರಿ, ಅಬೂ ಉಬೈದ ಬಿನ್ ಜರಾಹ್ ಮತ್ತು ಅಬೀ ಬಿನ್ ಕಅಬ್ ಈ ಮೂವರಿಗೆ ನಾನು ಖರ್ಜೂರದ ಮದ್ಯ ಕುಡಿಸುತ್ತಿದ್ದೆ. ಯಾರೋ ಬಂದು ಮದ್ಯವು ನಿಷಿದ್ಧಗೊಳಿಸಲಾದ ಆಜ್ಞೆಯನ್ನು ತಿಳಿಸಿದರು. ಆಗ ಅಬೂ ತಲ್‌ಹ ಹೇಳಿದರು – ಅನಸ್ ಏಳು, ಮದ್ಯದ ಮಡಕೆಗಳನ್ನು ಒಡೆದು ಹಾಕು. ಅನಸ್ ಹೇಳುತ್ತಾರೆ: ನಾನು ಎದ್ದು ಕಲ್ಲಿನ ಚೂಪಾದ ಭಾಗದಿಂದ ಗುದ್ದಿ ಮಡಕೆಗಳನ್ನು ಒಡೆದು ಹಾಕಿದೆ.

**(ಬುಖಾರಿ)**

## ಇಸ್ಲಾಮ್ ಧರ್ಮ ಪುನಶ್ಚೇತನಗೊಳ್ಳಲು ನಮ್ಮಿಂದ ಒಂದು ಪ್ರಾಯಶ್ಚಿತ್ತವನ್ನು ಆವಶ್ಯಪಡುತ್ತದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ಇಸ್ಲಾಮ್ ಧರ್ಮ ಪುನಶ್ಚೇತನಗೊಳ್ಳಲು ನಮ್ಮಿಂದ ಒಂದು ಪ್ರಾಯಶ್ಚಿತ್ತವನ್ನು ಆವಶ್ಯಪಡುತ್ತದೆ. ಅದೇನು? ನಾವು ಅದರ ಮಾರ್ಗದಲ್ಲಿ ಮೃತರಾಗುವುದು. ಈ ಮೃತ್ಯುವಿನೊಂದಿಗೆ ಇಸ್ಲಾಮಿನ ಜೀವಿತ, ಮುಸ್ಲಿಮರ ಜೀವಿತ, ಮತ್ತು ಜೀವಂತ ದೇವನ ಪ್ರಭೆ ಸಂಬಂಧಿಸಿದೆ. ಇದರದೇ ಇನ್ನೊಂದು ಹೆಸರು ಇಸ್ಲಾಮ್ ಎಂದಾಗಿದೆ. ಈ ಇಸ್ಲಾಮನ್ನು ಜೀವಂತಗೊಳಿಸಲು ಅಲ್ಲಾಹನು ಬಯಸುತ್ತಾನೆ. ಈ ಮಹತ್ಕಾರ್ಯ ಸಾಧಿಸಲು ಒಂದು ವೈಭವಪೂರ್ಣ ಕಾರ್ಯಾಗಾರವನ್ನು ತನ್ನ ಕಡೆಯಿಂದ ಸ್ಥಾಪಿಸಬೇಕಿತ್ತು. ಅದು ಅತ್ಯಂತ ಕಾರ್ಯಕ್ಷಮತೆ ಉಳ್ಳದ್ದಾಗಬೇಕಿತ್ತು. ಸೂಕ್ಷ್ಮಜ್ಞನೂ ಶಕ್ತಿಶಾಲಿಯೂ ಆದ ಅಲ್ಲಾಹನು ಈ ವಿನೀತನನ್ನು ಅವನ ಸೃಷ್ಟಿಗಳ ಸುಧಾರಣೆಗೆ ಕಳುಹಿಸಿ ಹೀಗೆಯೇ ಮಾಡಿದನು.

**(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್, ಸಂಪುಟ 3, ಪುಟ 10 – 12)**

ಅವರು ಇನ್ನೊಂದು ಕಡೆ ಹೀಗೆ ಹೇಳುತ್ತಾರೆ:

> ಮನುಷ್ಯನು ಸತ್ಯ ಮತ್ತು ನಿಷ್ಠೆಯಿಂದ ಅಲ್ಲಾಹನ ದಾಸನಾಗುವ ತನಕ ಅವನಿಗೆ ಯಾವುದೇ ಆಧ್ಯಾತ್ಮಿಕ ಪದವಿ ಸಿಗುವುದು ಕಷ್ಟ. ಹಝ್ರತ್ ಇಬ್ರಾಹೀಮ್‌ರ(ಅ) ಕುರಿತು ಅಲ್ಲಾಹನು ಹೀಗೆ ಸಾಕ್ಷ್ಯ ಹೇಳಿದನು:
>
> وَاِبۡرٰهِيۡمَ الَّذِىۡ وَفّٰٓى **ವ ಇಬ್ರಾಹೀಮಲ್ಲದಿೀ ವಫ್ಫಾ** ಇಬ್ರಾಹೀಮ್ ತನ್ನ ಮಾತನ್ನು ಈಡೇರಿಸಿದನು. (53:38)
>
> ಈ ರೀತಿ ತನ್ನ ಹೃದಯವನ್ನು ಅನ್ಯರನ್ನು ಹೊರಹಾಕಿ ಪರಿಶುದ್ಧಗೊಳಿಸುವುದು, ಅಲ್ಲಾಹನ ಪ್ರೀತಿಯಿಂದ ತುಂಬಿಸುವುದು, ಅಲ್ಲಾಹನ ಇಷ್ಟದ ಪ್ರಕಾರ ನಡೆಯುವುದು, ನೆರಳಿನ ಹಾಗೆ ಅಲ್ಲಾಹನನ್ನು ಅನುಸರಿಸುವುದು, ಅವನ ಮತ್ತು ಅಲ್ಲಾಹನ ಇಷ್ಟ ಒಂದೇ ಆಗುವುದು, ಯಾವುದೇ ವ್ಯತ್ಯಾಸ ಇಲ್ಲದಿರುವುದು. ಇವೆಲ್ಲ ಪ್ರಾರ್ಥನೆಯಿಂದ ಲಭಿಸುತ್ತವೆ. ನಮಾಝ್ ವಾಸ್ತವಿಕವಾಗಿ ಪ್ರಾರ್ಥನೆಗಾಗಿದೆ. ಎಲ್ಲ ಘಟ್ಟಗಳಲ್ಲೂ ದುಆ (ಪ್ರಾರ್ಥನೆ) ಮಾಡಬೇಕು. ಆದರೆ ನಿದ್ರಾವಸ್ಥೆಯಲ್ಲಿ ನಮಾಝ್ ಮಾಡುವವನಿಗೆ ಅದರ ಅರಿವೇ ಇರುವುದಿಲ್ಲ. ಅದು ನಮಾಝ್ ಆಗುವುದಿಲ್ಲ.... ನಮಾಝ್ ಮಾಡುವಾಗ ಮನುಷ್ಯನು ಉದಾಸೀನನಾಗಬಾರದು. ಅವನು ನಿರ್ಲಕ್ಷ್ಯನಾಗಿರಬಾರದು. ನಮ್ಮ ಜಮಾಅತ್ ಒಂದು ಜಮಾಅತ್ ಆಗಲು ಬಯಸುವುದಾದರೆ ಅದೊಂದು ಮೃತ್ಯುವನ್ನು ವರಿಸಬೇಕು. ಶಾರೀರಿಕ ಆಶಾಭಿಲಾಷೆಗಳಿಂದ ದೂರಸರಿಯಬೇಕು. ಅಲ್ಲಾಹನಿಗೆ ಎಲ್ಲದಕ್ಕಿಂತಲೂ ಆದ್ಯತೆ ನೀಡಬೇಕು.

**(ಮಲ್‌ಫೂಝಾತ್; ಸಂಪುಟ 3, ಪುಟ 457 – 458 – ಹೊಸ ಮುದ್ರಣ)**

## ಪಾಪದಿಂದ ದೂರಸರಿಯಲು ಇರುವ ಮಾರ್ಗ – ದೃಢವಿಶ್ವಾಸ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ಅಲ್ಲಾಹನನ್ನು ಕಾಣುವ ಅಪೇಕ್ಷೆ ಹೊಂದಿರುವ ದಾಸರೇ, ಕಿವಿ ತೆರೆದು ಆಲಿಸಿರಿ. ದೃಢವಿಶ್ವಾಸಕ್ಕೆ ಸಮಾನವಾದುದು ಬೇರೊಂದಿಲ್ಲ. ದೃಢವಿಶ್ವಾಸವೇ ಪಾಪಗಳಿಂದ ದೂರ ಸರಿಸುತ್ತದೆ. ದೃಢವಿಶ್ವಾಸವೇ ಸತ್ಕಾರ್ಯಗಳನ್ನು ಮಾಡುವ ಶಕ್ತಿ ನೀಡುತ್ತದೆ. ದೃಢವಿಶ್ವಾಸವೇ ಅಲ್ಲಾಹನ ಸತ್ಯವಾದ ಪ್ರೇಮಿಯನ್ನಾಗಿ ಮಾಡುತ್ತದೆ. ನೀವು ದೃಢವಿಶ್ವಾಸವಿಲ್ಲದೆ ಪಾಪವನ್ನು ಬಿಡಲು ಸಾಧ್ಯವೇ? ನೀವು ದೃಢವಿಶ್ವಾಸದ ಪ್ರಭೆಯಿಲ್ಲದೆ ನಿಮ್ಮ ಶಾರೀರಿಕ ಆಶಾಭಿಲಾಷೆಗಳನ್ನು ತಡೆಯಬಲ್ಲಿರೋ? ನೀವು ದೃಢವಿಶ್ವಾಸವಿಲ್ಲದೆ ಸಮಾಧಾನ ಹೊಂದಲು ಸಾಧ್ಯವೇ? ದೃಢವಿಶ್ವಾಸ ಹೊಂದದೆ ನಿಜವಾದ ಬದಲಾವಣೆ ಉಂಟುಮಾಡಲು ಸಾಧ್ಯವೇ? ನೀವು ದೃಢವಿಶ್ವಾಸವಿಲ್ಲದೆ ನೈಜ ಸುಖವನ್ನು ಅನುಭವಿಸಬಲ್ಲಿರೇನು? ಆಕಾಶದ ಕೆಳಗೆ ನಿಮ್ಮಿಂದ ಪಾಪವನ್ನು ದೂರ ಸರಿಸಬಲ್ಲ ಬೇರೆ ಯಾವುದಾದರೂ ಪರಿಹಾರವಿದೆಯೋ?

......ನೀವು ನೆನಪಿಡಿರಿ, ದೃಢವಿಶ್ವಾಸವಿಲ್ಲದೆ ಜೀವಿತದ ಅಂಧಕಾರದಿಂದ ಹೊರಬರಲಾರಿರಿ. ನಿಮಗೆ ಪವಿತ್ರಾತ್ಮ ಕೂಡ ಲಭಿಸಲಾರದು. ದೃಢವಿಶ್ವಾಸ ಹೊಂದಿದವರೇ ಭಾಗ್ಯಶಾಲಿಗಳು. ಅವರು ಅಲ್ಲಾಹನನ್ನು ಕಾಣುವರು. ಸಂಶಯಗಳನ್ನು ದೂರಸರಿಸಿದವರು ಭಾಗ್ಯಶಾಲಿಗಳು. ಏಕೆಂದರೆ ಅವರೇ ಪಾಪದೋಷಗಳಿಂದ ಮುಕ್ತರಾಗುವರು. ನಿಮಗೆ ದೃಢವಿಶ್ವಾಸದ ಸಂಪತ್ತು ನೀಡಲ್ಪಟ್ಟರೆ ನೀವು ಭಾಗ್ಯಶಾಲಿಗಳಾಗುವಿರಿ. ಅನಂತರ ನಿಮ್ಮ ಪಾಪದೋಷಗಳು ಕೊನೆಗೊಳ್ಳುವುವು. ಪಾಪ ಮತ್ತು ದೃಢವಿಶ್ವಾಸ ಒಗ್ಗೂಡಲಾರವು. ನೀವು ವಿಷ ತುಂಬಿದ ಒಂದು ಹಾವನ್ನು ಬಿಲದಲ್ಲಿ ನೋಡುತ್ತಿರುವಾಗ ಅದಕ್ಕೆ ಕೈ ಹಾಕುವಿರೇನು? ಜ್ವಾಲಾಮುಖಿಯಿಂದ ಕಲ್ಲುಗಳು ಬಂದು ಬೀಳುತ್ತಿರುವ ಸ್ಥಳದಲ್ಲಿ ಅಥವಾ ಸಿಡಿಲು ಮಿಂಚು ಬಡಿಯುತ್ತಿರುವ ಸ್ಥಳದಲ್ಲಿ ಅಥವಾ ರಕ್ತಪಿಪಾಸು ಹುಲಿಯು ಆಕ್ರಮಣ ಮಾಡಬಲ್ಲ ಸ್ಥಳದಲ್ಲಿ ಅಥವಾ ವಿನಾಶಕರ ಪ್ಲೇಗು ಮನುಷ್ಯರನ್ನು ಅಳಿಸಿ ಬಿಡುವ ಸ್ಥಳದಲ್ಲಿ ನೀವು ನಿಲ್ಲುವಿರೇನು? ನೀವು ವಿಷಕರ ಹಾವು, ಸಿಡಿಲು ಮಿಂಚು, ಹುಲಿ ಅಥವಾ ಪ್ಲೇಗ್ ಬಗ್ಗೆ ಯಾವ ರೀತಿಯ ದೃಢನಂಬಿಕೆ ಹೊಂದಿದ್ದೀರೋ ಅದೇ ರೀತಿ ನಿಮಗೆ ಅಲ್ಲಾಹನ ಕುರಿತು ದೃಢವಿಶ್ವಾಸವಿದ್ದರೆ ನೀವು ಅಲ್ಲಾಹನ ಆಜ್ಞೆಗಳನ್ನು ಮೀರಿ ಶಿಕ್ಷೆಯ ಮಾರ್ಗವನ್ನು ಅನುಸರಿಸಲು ಹಾಗೂ ಸತ್ಯ ಮತ್ತು ನಿಷ್ಠೆಯ ಸಂಬಂಧವನ್ನು ಮುರಿದು ಹಾಕಲು ನಿಮಗೆ ಸಾಧ್ಯವಾಗಲಾರದು.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 66 – 67)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ:

ಭಯ, ಪ್ರೀತಿ ಮತ್ತು ಗೌರವದ ಬೇರು ಪರಿಪೂರ್ಣ ಜ್ಞಾನವಾಗಿದೆ. ಯಾರಿಗೆ ಪರಿಪೂರ್ಣ ಜ್ಞಾನ ನೀಡಲಾಗಿದೆಯೋ ಅಂತಹ ವ್ಯಕ್ತಿಗೆ ಭಯ ಮತ್ತು ಪ್ರೀತಿ ಸಹ ಪರಿಪೂರ್ಣವಾಗಿ ನೀಡಲಾಗಿದೆ. ಯಾರಿಗೆ ಭಯ ಮತ್ತು ಪ್ರೀತಿ ಪರಿಪೂರ್ಣವಾಗಿ ನೀಡಲಾಗಿದೆಯೋ ಅಂತಹ ವ್ಯಕ್ತಿಗೆ ನಿರ್ಭಯದಿಂದ ಘಟಿಸಲ್ಪಡುವ ಪ್ರತಿಯೊಂದು ಪಾಪದಿಂದ ಮುಕ್ತಿ ದೊರಕುತ್ತದೆ. ನಮಗೆ ದೋಷ ಮುಕ್ತಿಗೆ ಯಾರ ರಕ್ತದ ಆವಶ್ಯಕತೆಯೂ ಇಲ್ಲ. ಯಾರಾದರೂ ಶಿಲುಬೆಗೆ ಜಡಿಯಲ್ಪಡುವ ಆವಶ್ಯಕತೆಯೂ ಇಲ್ಲ. ಯಾವುದೇ ಪಾಪ ಪರಿಹಾರ ಕ್ರಮದ ಆವಶ್ಯಕತೆಯೂ ಇಲ್ಲ. ನಮಗೆ ಒಂದು ಬಲಿದಾನದ ಆವಶ್ಯಕತೆ ಇದೆ. ಅದು ನಮ್ಮ ಆತ್ಮದ ಬಲಿದಾನವಾಗಿದೆ. ಅದರ ಆವಶ್ಯಕತೆಯನ್ನು ನಮ್ಮ ಮನಸ್ಸಾಕ್ಷಿ ಮನವರಿಕೆ ಮಾಡುತ್ತಿದೆ. ಈ ಬಲಿದಾನದ ಇನ್ನೊಂದು ಹೆಸರು ಇಸ್ಲಾಮ್ ಎಂದಾಗಿದೆ. ಇಸ್ಲಾಮ್ ಎಂದರೆ ವಧಿಸಲ್ಪಡಲು ಕೊರಳನ್ನು ಒಡ್ಡುವುದು. ಎಂದರೆ ಪರಿಪೂರ್ಣ ಸಮ್ಮತಿಯೊಂದಿಗೆ ತನ್ನ ಆತ್ಮವನ್ನು ಅಲ್ಲಾಹನ ಆಸ್ಥಾನದಲ್ಲಿ ಇರಿಸುವುದು. ಈ ಪ್ರಿಯ ಹೆಸರು ಎಲ್ಲ ಶರೀಅತಿನ ತಿರುಳು ಮತ್ತು ಎಲ್ಲ ಆಜ್ಞೆಗಳ ಜೀವವಾಗಿದೆ. ವಧಿಸಲ್ಪಡಲು ಹೃತ್ಪೂರ್ವಕವಾದ ತೃಪ್ತಿ

ಮತ್ತು ಸಂತೋಷದಿಂದ ಕೊರಳನ್ನು ಮುಂದೆ ಇಡುವುದು ಪರಿಪೂರ್ಣ ಪ್ರೀತಿ ಮತ್ತು ಪರಿಪೂರ್ಣ ಪ್ರೇಮವನ್ನು ಆವಶ್ಯಪಡುತ್ತದೆ. ಪರಿಪೂರ್ಣ ಪ್ರೀತಿಗೆ ಪರಿಪೂರ್ಣ ಜ್ಞಾನ ಆವಶ್ಯಕವಾಗಿದೆ. ಇಸ್ಲಾಮ್ ಎಂಬ ಪದ ನೈಜ ಬಲಿದಾನಕ್ಕೆ ಪರಿಪೂರ್ಣ ಜ್ಞಾನ ಮತ್ತು ಪರಿಪೂರ್ಣ ಪ್ರೀತಿಯ ಆವಶ್ಯಕತೆ ಇದೆ ಎಂದೂ ಬೇರೆ ಯಾವುದೇ ವಸ್ತುವಿನ ಆವಶ್ಯಕತೆ ಇಲ್ಲ ಎಂದೂ ಸೂಚಿಸುತ್ತದೆ.

**(ಲೆಕ್ಚರ್ ಲಾಹೋರ್; ರೂಹಾನೀ ಖಝಾಇನ್, ಸಂಪುಟ 20, ಪುಟ 151 – 152)**

ಅಲ್ಲಾಹನು ನಮಗೆ ಈ ಎಲ್ಲ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಸೌಭಾಗ್ಯ ನೀಡಲಿ.

**(ಖುತ್‌ಬ ಜುಮುಅ 29/8/2003; ಶೀವರ್ಟ್ ಹಾಲೆ ಫ್ರಾಂಕ್ ಫರ್ಟ್, ಜರ್ಮನಿ)**

ಇಸ್ಲಾಮಿನ ತತ್ವೋಪದೇಶಗಳು ಎಷ್ಟು ಸುಂದರವಾಗಿದೆ ಎಂದರೆ ಮನುಷ್ಯನ ಜೀವಿತದ ಯಾವುದೇ ಅಂಶವನ್ನು ಅದು ಸ್ಪರ್ಶಿಸದೆ ಬಿಟ್ಟಿಲ್ಲ ಮತ್ತು ಈ ಉಪದೇಶಗಳಲ್ಲಿ ಯಾವುದೇ ಕೊರತೆ ಉಂಟಾಗಿದೆ ಎಂದು ತೋರುವುದಿಲ್ಲ. ಅಲ್ಲಾಹನು ನಮಗೆ ನೀಡಿದ ಈ ಅನುಗ್ರಹಗಳು ಆವಶ್ಯಪಡುವುದೇನೆಂದರೆ, ಅಲ್ಲಾಹನ ಪ್ರಿಯ ಪ್ರವಾದಿಗೆ(ಸ) ಅವತೀರ್ಣವಾದ ಉಪದೇಶಗಳನ್ನು ನಮ್ಮ ಜೀವಿತದ ಭಾಗಗಳನ್ನಾಗಿ ಮಾಡಬೇಕು. ಅವುಗಳನ್ನು ನಮ್ಮ ಮೇಲೆ ಜಾರಿಗೊಳಿಸಬೇಕು. ಹಝ್ರತ್ ರಸೂಲುಲ್ಲಾಹ್‌ರ(ಸ) ಸತ್ಯಸಂಧರಾದ ಪ್ರೇಮಿಯೂ ಗುಲಾಮರೂ ಆದ ಈ ಕಾಲದ ಇಮಾಮ್‌ರ ಜಮಾಅತಿಗೆ ಸೇರಿದ ಅಥವಾ ಸೇರಿರುವೆವು ಎಂದು ವಾದಿಸುವ ನಮ್ಮ ಮೇಲೆ ಬಹಳ ಹೆಚ್ಚಿನ ಜವಾಬ್ದಾರಿ ಇದೆ. ಅಲ್ಲಾಹನು ತನಗೆ ಸಂಬಂಧಿಸಿದ ನಮ್ಮ ಕರ್ತವ್ಯಗಳನ್ನು ಈಡೇರಿಸಲು ಮತ್ತು ಅವನನ್ನು ಆರಾಧಿಸಲು ನಮಗೆ ಹೇಳಿರುವ ಹಾಗೆಯೇ ಸೃಷ್ಟಿಗಳ ಹಕ್ಕುಗಳನ್ನು ಕೊಡುವ ಬಗ್ಗೆಯೂ ಹೇಳಿದ್ದಾನೆ. ವಿವಿಧ ಸಂಬಂಧಿಕರ ಮತ್ತು ಸಂಬಂಧಗಳ ಹಕ್ಕುಗಳನ್ನು ನೀಡಲು ಸಹ ಆಜ್ಞಾಪಿಸಿದ್ದಾನೆ. ಇದರ ಮಹತ್ವದ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬೈಅತಿನ ಒಂಭತ್ತನೆಯ ಶರತ್ತಿನಲ್ಲಿ ದೇವಸೃಷ್ಟಿಗಳ ಹಿತಕ್ಕಾಗಿ ಮಾಡುವ ಕೆಲಸಗಳ ಬಗ್ಗೆ ಮತ್ತು ಅವರಿಗೆ ಅವರ ಹಕ್ಕುಗಳನ್ನು ನೀಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ.

★★★

# ಬೈಅತಿನ ಒಂಬತ್ತನೆಯ ಶರತ್ತು

**ದೇವ ಸೃಷ್ಟಿಗಳ ಹಿತಕ್ಕಾಗಿ ಮಾಡುವ ಕೆಲಸಗಳನ್ನು ಕೇವಲ ಅಲ್ಲಾಹನ ಪ್ರೀತಿ ಗಳಿಸಲಿಕ್ಕಾಗಿ ಮಾಡುವೆನು; ತನಗೆ ಅಲ್ಲಾಹನು ನೀಡಿದ ಶಕ್ತಿ ಸಾಮರ್ಥ್ಯಗಳನ್ನು ಮತ್ತು ಅನುಗ್ರಹಗಳನ್ನು ಮನುಷ್ಯಕುಲದ ಪ್ರಯೋಜನಕ್ಕಾಗಿ ತನ್ನ ಶಕ್ತಿಯಾನುಸಾರ ವಿನಿಯೋಗಿಸುವೆನು.**

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

وَاعْبُدُوا اللّٰهَ وَلَا تُشْرِكُوْا بِهٖ شَيْـًٔا وَّبِالْوَالِدَيْنِ اِحْسَانًا وَّبِذِي الْقُرْبٰى وَالْيَتٰمٰى وَالْمَسٰكِيْنِ وَالْجَارِ ذِي الْقُرْبٰى وَالْجَارِ الْجُنُبِ وَالصَّاحِبِ بِالْجَنْۢبِ وَابْنِ السَّبِيْلِ وَمَا مَلَكَتْ اَيْمَانُكُمْ اِنَّ اللّٰهَ لَا يُحِبُّ مَنْ كَانَ مُخْتَالًا فَخُوْرًا

> ನೀವು ಅಲ್ಲಾಹನನ್ನು ಆರಾಧಿಸಿರಿ. ಬೇರೇನನ್ನೂ ಅವನ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಪಿತರಿಗೆ ನೀವು ಒಳಿತನ್ನು ಮಾಡಿರಿ – ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ. ಅಹಂಭಾವಿಗಳನ್ನೂ ಜಂಭ ಕೊಚ್ಚುವವರನ್ನೂ ಅಲ್ಲಾಹನು ಎಂದಿಗೂ ಇಷ್ಟ ಪಡುವುದಿಲ್ಲ. **(4:37)**

## ಎಲ್ಲರೊಡನೆ ಉತ್ತಮ ನಡತೆ

ಈ ವಚನದಲ್ಲಿ ಅಲ್ಲಾಹನು ಹೇಳಿರುವುದೇನೆಂದರೆ, ನೀವು ನಿಮ್ಮ ಸಹೋದರರಿಗೆ, ಪ್ರಿಯರಿಗೆ, ಸಂಬಂಧಿಕರಿಗೆ, ನಿಮಗೆ ಪರಿಚಯವಿರುವವರಿಗೆ, ನಿಮ್ಮ ನೆರೆಹೊರೆಯವರಿಗೆ ಹಿತವನ್ನು ಉಂಟುಮಾಡುವವರಾಗಿರಿ. ಅವರಿಗೆ ಸಹಾನುಭೂತಿ ತೋರಿಸಿ ಅವರಿಗೆ ಸಹಾಯದ ಆವಶ್ಯಕತೆ ಇದ್ದರೆ ಸಹಾಯ ನೀಡಿರಿ. ಅವರಿಗೆ ಎಷ್ಟರ ಮಟ್ಟಿಗೆ ಉಪಕಾರ ಮಾಡಲು ಸಾಧ್ಯವಿದೆಯೋ ಅಷ್ಟರ ಮಟ್ಟಿಗೆ ಉಪಕಾರ ಮಾಡಿರಿ. ಇವರಿಗೆ ಮಾತ್ರವಲ್ಲ ನಿಮಗೆ ಪರಿಚಯವಿಲ್ಲದ ನೆರೆಹೊರೆಯವರಿಗೂ ನಿಮ್ಮ ಸಂಬಂಧಿಕರಲ್ಲದವರಿಗೂ ನೀವು ತಾತ್ಕಾಲಿಕವಾಗಿ ಭೇಟಿಯಾದವರಿಗೂ ನಿಮ್ಮ ಸಹಾನುಭೂತಿ ಮತ್ತು ಸಹಾಯದ ಆವಶ್ಯವಿದ್ದರೆ ಅವರಿಗೆ ನಿಮ್ಮಿಂದ ಸಾಧ್ಯವಾಗುವ ಸಹಾಯ ಮಾಡಿರಿ.

ಈ ಎಲ್ಲ ಕ್ರಮಗಳಿಂದ ಇಸ್ಲಾಮಿನ ಒಂದು ಸುಂದರ ಸಮಾಜವು ನಿರ್ಮಾಣವಾಗುವುದು. ದೇವಸೃಷ್ಟಿಗಳ ಕುರಿತು ಸಹಾನುಭೂತಿ ಮತ್ತು ಅವರಿಗೆ ಲಾಭ ಉಂಟುಮಾಡಿಕೊಡುವ ಸದ್ಗುಣ ನಿಮ್ಮಲ್ಲಿ ಉಂಟುಮಾಡುವುದಾದರೆ ಮತ್ತು ಈ ಸತ್ಕರ್ಮ **'ಇಹ್‌ಸಾನ್'** ಗುಣಕ್ಕೆ ಸೇರುವುದಾದರೆ ನೀವು ಮಾಡುವ

ಕೆಲಸ ಪ್ರತಿಫಲ ಬಯಸಿ ಮಾಡುವುದಾಗಿರುವುದಿಲ್ಲ. ಮನುಷ್ಯನು ಮಾಡುವ **'ಇಹ್‌ಸಾನ್'** ಎಂಬ ಸತ್ಕೃತ್ಯ ಕೇವಲ ಅಲ್ಲಾಹನ ತೃಪ್ತಿಗಳಿಸಲು ಮಾಡುವುದಾಗಿದೆ. ಆಗ ಅಸ್ತಿತ್ವಕ್ಕೆ ಬರುವಂತಹ ಸಮಾಜದಲ್ಲಿ ಪತಿ – ಪತ್ನಿಯರ ಜಗಳವಿರಲಾರದು, ಅತ್ತೆ – ಸೊಸೆಯರ ಜಗಳವಿರಲಾರದು, ಸಹೋದರ – ಸಹೋದರರ ಜಗಳವಿರಲಾರದು, ನೆರೆಹೊರೆಯವರ ಪರಸ್ಪರ ಜಗಳವಿರಲಾರದು, ಒಂದು ಗುಂಪು ಇನ್ನೊಂದು ಗುಂಪಿನೊಂದಿಗೆ 'ಇಹ್‌ಸಾನ್' (ಫಲಾಪೇಕ್ಷೆಯಿಲ್ಲದ ಪರೋಪಕಾರ) ಮಾಡುವುದು. ಪ್ರತಿಯೊಬ್ಬರ ಹಕ್ಕುಗಳನ್ನು ಪ್ರೀತಿಯಿಂದ ಕೊಡುವ ಪ್ರಯತ್ನ ನಡೆಸುವುದು. ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕಾಗಿ ಸತ್ಕರ್ಮಗಳನ್ನು ಮಾಡಲಾಗುವುದು. ಈಗಿನ ಕಾಲದಲ್ಲಿ ಈ ರೀತಿಯ ವರ್ತನೆ ಬಹಳ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: "ನೀವು ಈ ರೀತಿ ವರ್ತಿಸದಿದ್ದರೆ ಅಹಂಕಾರಿಗಳೆಂದು ಕರೆಯಲ್ಪಡುವಿರಿ. ಅಹಂಕಾರವು ಅಲ್ಲಾಹನಿಗೆ ಇಷ್ಟವಲ್ಲ. ಅಹಂಕಾರವೆಂಬ ರೋಗದ ಮೂಲಕ ಎಲ್ಲ ಅಸ್ತವ್ಯಸ್ತತೆಗಳು ಪ್ರಾರಂಭವಾಗುತ್ತವೆ...."

ಏಳನೆಯ ಶರತ್ತಿನ ವಿವರಣೆಯಲ್ಲಿ ಅಹಂಕಾರದ ಕುರಿತು ಸವಿಸ್ತಾರವಾಗಿ ಹೇಳಲಾಗಿದೆ. ಇಲ್ಲಿ ಪುನರಾವರ್ತಿಸುವ ಅಗತ್ಯವಿಲ್ಲ. ಒಟ್ಟಿನಲ್ಲಿ, ನೀವು ದೇವಸೃಷ್ಟಿಗಳ ಕುರಿತು ಸಹಾನುಭೂತಿಯಿಂದ ವರ್ತಿಸಿರಿ. ಆಗ ನೀವು ಅಲ್ಲಾಹನ ದೃಷ್ಟಿಯಲ್ಲಿ ಮೆಚ್ಚುಗೆ ಗಳಿಸುವಿರಿ. ನೀವು ಇಹ ಪರ ಲೋಕಗಳಲ್ಲಿ ಜಯಗಳಿಸುವಿರಿ. ನೀವು ಮಾಡುವ ಪರೋಪಕಾರ ಪ್ರೀತಿಯ ಕಾರಣದಿಂದಾಗಲಿ. ನೀವು ಮಾಡಿದ ಉಪಕಾರವನ್ನು ಚುಚ್ಚು ಮಾತುಗಳಿಂದ ಪ್ರಕಟಿಸುವ ಉದ್ದೇಶವಿಲ್ಲದಿರಲಿ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

وَيُطْعِمُوْنَ الطَّعَامَ عَلٰى حُبِّهٖ مِسْكِيْنًا وَّيَتِيْمًا وَّاَسِيْرًا

ಅವನ (ಅಲ್ಲಾಹನ) ಪ್ರೀತಿಗೋಸ್ಕರ ಅವರು ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ. **(76:9)**

ಈ ವಚನದ ಒಂದು ತಾತ್ಪರ್ಯ ಹೀಗೆ: ಸತ್ಯವಿಶ್ವಾಸಿಗಳಿಗೆ ಸ್ವಂತ ಆವಶ್ಯಕತೆಗಳಿದ್ದರೂ ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕೋಸ್ಕರ ಬಡವರ ಆವಶ್ಯಕತೆಗಳನ್ನು ಗಮನಿಸುತ್ತಾರೆ. ಸ್ವತಃ ಹಸಿವೆ ಸಹಿಸಿ ಬಡವರಿಗೆ ಊಣ ಬಡಿಸುತ್ತಾರೆ. ಅವರು ಕೊಡುವುದರಲ್ಲಿ ಜಿಪುಣತೆ ತೋರಿಸಿ ಯಾರಿಗೆ ಕೊಡಲಾಗುತ್ತಿದೆಯೋ ಅವರ ಆವಶ್ಯಕತೆಯೂ ಪೂರ್ತಿಯಾಗದಂತೆ, ಅವರ ಹಸಿವು ನೀಗಿಸದಂತೆ ಮಾಡುವುದಿಲ್ಲ. ಅದಕ್ಕೆ ಪ್ರತಿಯಾಗಿ, ಅವರಿಗೆ ಸಾಧ್ಯವಿರುವಷ್ಟು ಸಹಾಯವನ್ನು ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕೋಸ್ಕರ ಮಾಡುತ್ತಾರೆ. ಅವರು ತಾವು ಮಾಡಿದ ಉಪಕಾರವನ್ನು ಪ್ರಚಾರ ಮಾಡುವುದಿಲ್ಲ.

ಇದರ ಮತ್ತೊಂದು ತಾತ್ಪರ್ಯವೇನೆಂದರೆ, ಅವರು ಕೊಡುವ ವಸ್ತು ತಮಗೆ ಉಪಯೋಗಿಸಲು ಇಷ್ಟಪಡುವ ಮತ್ತು ಆವಶ್ಯವಿರುವ ವಸ್ತುವಾಗಿರುತ್ತದೆ. ನೀವು ನಿಮಗೆ ಇಷ್ಟಕರವಾದುದನ್ನು ಅನ್ಯರಿಗೆ ನೀಡಿರಿ ಎಂದು ಅಲ್ಲಾಹನು ಹೇಳಿದ್ದನ್ನು ಅವರು ಯಾವಾಗಲೂ ನೆನಪಿಟ್ಟುಕೊಳ್ಳುತ್ತಾರೆ. ಕೆಲವರು ತಮ್ಮ ಸಹೋದರರಿಗೆ ಸಹಾಯ ಮಾಡುವಾಗ ತಮ್ಮ ಸಹಾಯವನ್ನು ಚುಚ್ಚು ಮಾತುಗಳಿಂದ ಪ್ರಸ್ತಾಪಿಸುತ್ತಾರೆ. ಕೆಲವರು ತಾವು ಉಪಯೋಗಿಸಿದ ವಸ್ತುಗಳನ್ನು ಮತ್ತು ಬಟ್ಟೆಗಳನ್ನು ಉಡುಗೊರೆಯಾಗಿ ಕೊಡುತ್ತಾರೆ. ಇಂತಹ ಜನರು ತಮ್ಮ ಸಹೋದರ ಸಹೋದರಿಯರ ಗೌರವವನ್ನು ಗಮನಿಸಬೇಕು. ನಿಮಗೆ ಸಾಧ್ಯವಿಲ್ಲವಾದರೆ ಪಾರಿತೋಷಕ ಕೊಡಬೇಡಿರಿ ಅಥವಾ ನೀವು "ಇದು ನಾನು ಉಪಯೋಗಿಸಿದ ವಸ್ತುವಾಗಿದೆ. ನಿಮಗೆ ಇಷ್ಟವಿದ್ದರೆ ತೆಗೆದುಕೊಳ್ಳಿರಿ" ಎಂದು ಹೇಳಬೇಕು.

ಕೆಲವು ಜನರು ನನಗೆ ಹೀಗೆ ಬರೆಯುತ್ತಾರೆ: "ನಾವು ಬಡ ಹೆಣ್ಣು ಮಕ್ಕಳಿಗೆ ಮದುವೆ ಸಂದರ್ಭದಲ್ಲಿ, ನಾವು ಒಂದೆರಡು ದಿನ ಉಪಯೋಗಿಸಿದ ನಮ್ಮ ಅಳತೆಗೆ ಸರಿಯಾಗದ ಅಥವಾ ಬೇರೆ ಕಾರಣದಿಂದ ಉಪಯೋಗಿಸದ ಒಳ್ಳೆಯ ಬಟ್ಟೆಗಳನ್ನು ಕೊಡಲು ಬಯಸುತ್ತೇವೆ." ಇದಕ್ಕೆ ಸಂಬಂಧಿಸಿ ಸ್ಪಷ್ಟಪಡಿಸುವುದೇನೆಂದರೆ, ಇಂತಹ ವಸ್ತುಗಳನ್ನು ಲಜ್‌ನ, ಖುದ್ದಾಮುಲ್ ಅಹ್ಮದಿಯಾ ಮೊದಲಾದವುಗಳ ಮೂಲಕ ಕೊಡುವುದಾದರೂ ಅಥವಾ ವೈಯಕ್ತಿಕವಾಗಿ ನೀಡುವುದಾದರೂ ಬಡವರ ಗೌರವದ ಬಗ್ಗೆ ನಿಗಾವಹಿಸಬೇಕು. ವಸ್ತುಗಳು ಕೊಡಲು ಯೋಗ್ಯವಾಗಿದ್ದರೆ ಕೊಡಿರಿ. ಉಪಯೋಗ ಶೂನ್ಯವಾದ ಹಳೆ ಬಟ್ಟೆಗಳನ್ನು ಕೊಡಬೇಡಿರಿ. ಕಲೆಗಳು ಇರುವ, ಬೆವರು ವಾಸನೆ ಬರುತ್ತಿರುವ ಬಟ್ಟೆಗಳನ್ನು ಕೊಡಬೇಡಿರಿ. ಬಡವರಿಗೂ ಒಂದು ಘನತೆಯಿದೆ. ಅದರ ಬಗ್ಗೆ ಶ್ರದ್ಧೆ ವಹಿಸಬೇಕು. ಬಟ್ಟೆಗಳನ್ನು ತೊಳೆದು ಸರಿಪಡಿಸಿ ಕೊಡಬೇಕು. ನಮ್ಮ ಲಜ್‌ನ ಮೊದಲಾದ ಜಮಾಅತಿನ ಅಧೀನ ಸಂಘಟನೆಗಳು ಇಂತಹ ಬಟ್ಟೆಗಳನ್ನು ಕೊಡುವಾಗ "ಇದು ಉಪಯೋಗಿಸಲಾದ ಬಟ್ಟೆ" ಎಂದು ಹೇಳಿ ತೆಗೆದುಕೊಳ್ಳುವವನು ಇಷ್ಟಪಡುವನಾದರೆ ಕೊಡಿರಿ. ಪ್ರತಿಯೊಬ್ಬನಿಗೆ ಆತ್ಮ ಗೌರವವಿದೆ. ನಾನು ಈ ಮೊದಲು ಹೇಳಿದ ಹಾಗೆ ಅದರ ಬಗ್ಗೆ ತುಂಬಾ ಗಮನಕೊಡಬೇಕು.

وَيُطْعِمُوْنَ الطَّعَامَ عَلٰى حُبِّهٖ مِسْكِيْنًا وَّيَتِيْمًا وَّاَسِيْرًا

> ಅಲ್ಲಾಹನ ಪ್ರೀತಿಗೋಸ್ಕರ ಅವರು ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ. **(76:9)**

ಇದರ ಕುರಿತು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ:

> ನೀವು ನೆನಪಿಡಿರಿ, ಅಲ್ಲಾಹನು ಒಳಿತನ್ನು ಬಹಳ ಇಷ್ಟಪಡುತ್ತಾನೆ. ಅವನು ತನ್ನ ಸೃಷ್ಟಿಗಳ ಬಗ್ಗೆ ಸಹಾನುಭೂತಿ ತೋರಿಸಬೇಕೆಂದು ಬಯಸುತ್ತಾನೆ.

ಅವನು ಕೆಡುಕನ್ನು ಇಷ್ಟಪಡುತ್ತಿದ್ದರೆ ಕೆಡುಕು ಮಾಡಲು ಒತ್ತಿ ಹೇಳುತ್ತಿದ್ದನು. ಆದರೆ ಅಲ್ಲಾಹನ ಮಹಿಮೆ ಇವುಗಳಿಂದೆಲ್ಲ ಪರಿಶುದ್ಧವಾಗಿದೆ. (ಅಲ್ಲಾಹನು ಪರಿಶುದ್ಧನು)....... ನನ್ನೊಂದಿಗೆ ಸಂಬಂಧ ಜೋಡಿಸಿದ ಪ್ರತಿಯೊಬ್ಬರು ನೆನಪಿಡಬೇಕು. ಪ್ರತಿಯೊಬ್ಬನಿಗೆ ಅವನು ಯಾವುದೇ ಧರ್ಮಕ್ಕೆ ಸೇರಿದವನಾಗಿದ್ದರೂ ಸಹಾನುಭೂತಿ ತೋರಿಸಿರಿ. ಪ್ರತಿಯೊಬ್ಬನಿಗೆ ಯಾವುದೇ ವ್ಯತ್ಯಾಸವಿಲ್ಲದೆ ಒಳಿತನ್ನು ಮಾಡಿರಿ. ಇದೇ ಪವಿತ್ರ ಖುರ್‌ಆನಿನ ಉಪದೇಶವಾಗಿದೆ.

ಸತ್ಯವಿಶ್ವಾಸಿಗಳು ಅಲ್ಲಾಹನ ಪ್ರೀತಿಗೋಸ್ಕರ ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ ಎಂದು ಪವಿತ್ರ ಖುರ್‌ಆನಿನಲ್ಲಿ ಹೇಳಿದವರಲ್ಲಿ ಕೈದಿಗಳು ಬಹುತೇಕ ಅವಿಶ್ವಾಸಿಗಳೇ ಆಗಿದ್ದರು. ನೀವು ಇಸ್ಲಾಮ್ ತೋರಿಸುವ ಸಹಾನುಭೂತಿಯ ಮೇಲ್ಮಟ್ಟವನ್ನು ನೋಡಿರಿ. ನನ್ನ ಅಭಿಪ್ರಾಯದಲ್ಲಿ ಪರಿಪೂರ್ಣ ನೈತಿಕ ಉಪದೇಶ ಇಸ್ಲಾಮ್ ಧರ್ಮದಲ್ಲಿ ಹೊರತು ಬೇರೆಲ್ಲಿಯೂ ಕಾಣಲು ಸಿಗದು. ನನ್ನ ಆರೋಗ್ಯ ಸುಧಾರಣೆ ಹೊಂದಿದರೆ ನಾನು ಸ್ವಭಾವ ಗುಣಗಳ ಕುರಿತು ಒಂದು ಪ್ರತ್ಯೇಕ ಪುಸ್ತಕ ಬರೆಯಲು ಉದ್ದೇಶಿಸುತ್ತೇನೆ. ನನ್ನ ಅಭಿಪ್ರಾಯ ನನ್ನ ಜಮಾಅತಿನ ಜನರಿಗೆ ಪ್ರಕಟವಾಗಲು ಮತ್ತು ಜನರಿಗೆ ಒಂದು ಪರಿಪೂರ್ಣ ಉಪದೇಶವಾಗಲು ಹಾಗೂ ಅಲ್ಲಾಹನ ಸಂಪ್ರೀತಿಗಳಿಸುವ ಮಾರ್ಗಗಳು ಜನರಿಗೆ ಸ್ಪಷ್ಟವಾಗಲು ನಾನು ಬಯಸುತ್ತೇನೆ. ಅವನು ಹೀಗೆ ಮಾಡಿದನು, ಮತ್ತೊಬ್ಬನು ಹಾಗೆ ಮಾಡಿದನು ಎಂದು ಜನರು ಪ್ರತಿದಿನ ಹೇಳುವಾಗ ನನಗೆ ದುಃಖವಾಗುತ್ತದೆ. ನಾನು ಅವುಗಳಿಂದ ಸಂತೋಷಪಡುವುದಿಲ್ಲ. ನಾನು ಜಮಾಅತನ್ನು ಎರಡು ಹೆಜ್ಜೆ ಹಾಕುವಾಗ ನಾಲ್ಕು ಹೆಜ್ಜೆ ಬೀಳುವ ಮಗುವಿನ ಹಾಗೆ ಕಾಣುತ್ತೇನೆ. ಆದರೆ ಅಲ್ಲಾಹನು ಈ ಜಮಾಅತನ್ನು ಪರಿಪೂರ್ಣಗೊಳಿಸುವನೆಂದು ನಾನು ದೃಢವಾಗಿ ನಂಬುತ್ತೇನೆ. ಆದುದರಿಂದ ನೀವು ಪ್ರಯತ್ನ, ಯೋಜನೆ, ಪರಿಶ್ರಮ ಮತ್ತು ದುಆ ಮಾಡುತ್ತಾ ಇರಿ. ಅಲ್ಲಾಹನು ಅನುಗ್ರಹಿಸಲಿ. ಅವನ ಅನುಗ್ರಹವಿಲ್ಲದೆ ಏನೂ ಆಗುವುದಿಲ್ಲ. ಅವನ ಅನುಗ್ರಹ ಲಭಿಸುವಾಗ ಎಲ್ಲ ಮಾರ್ಗಗಳನ್ನು ಅವನು ತೆರೆದುಬಿಡುತ್ತಾನೆ.

**(ಮಲ್‌ಫೂಝಾತ್; ಸಂಪುಟ 4, ಪುಟ 218 – 219, ಹೊಸ ಮುದ್ರಣ)**

ಅಲ್ಲಾಹನ ಅನುಗ್ರಹದಿಂದ, ಹಝ್ರತ್ ಮಸೀಹ್ ಮೌಊದ್‌ರ(ಅ) ಪರಿಶುದ್ಧ ಶಕ್ತಿಯಿಂದ ಮತ್ತು ಅವರ ಉಪದೇಶಗಳ ಪ್ರಕಾರ ವರ್ತಿಸಿದುದರಿಂದ ಅವರಿಗೆ ಆ ಕಾಲದಲ್ಲಿ ಚಿಂತೆ ಇದ್ದ ಅನೇಕ ರೋಗಗಳು ಜಮಾಅತಿನಿಂದ ದೂರಸರಿದಿದ್ದವು. ಜಮಾಅತಿನ ಬಹಳ ದೊಡ್ಡ ಭಾಗ ಆ ರೋಗಗಳಿಂದ ಸಂಪೂರ್ಣ ಮುಕ್ತವಾಗಿತ್ತು ಮತ್ತು ಈಗಲೂ ಮುಕ್ತವಾಗಿದೆ. ಆದರೆ ನಾವು ಆ ಕಾಲದಿಂದ ದೂರ ಸಾಗುತ್ತಿರುವ ಕಾರಣ ಸಮಾಜದ ಕೆಲವು ಕೆಡುಕುಗಳೊಂದಿಗೆ

ಶೈತಾನನು ಆಕ್ರಮಣ ಮಾಡುತ್ತಾ ಇರುತ್ತಾನೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್[ಅ] ಸೂಚಿಸಿದ ಚಿಂತೆಗಳಿಗೆ ಪರಿಹಾರವನ್ನು ಅವರು ನೀಡಿದ ಉಪದೇಶಗಳ ಪ್ರಕಾರ ಪ್ರಯತ್ನ ಮತ್ತು ದುಆದ ಮೂಲಕ ಅಲ್ಲಾಹನ ಅನುಗ್ರಹವನ್ನು ಕೋರುತ್ತಾ ಕೆಡುಕುಗಳಿಂದ ದೂರಸರಿಯಲು ಪ್ರಯತ್ನಿಸುತ್ತಾ ಇರಬೇಕು. ಆ ಮೂಲಕ ಹಝ್ರತ್ ಮಸೀಹ್ ಮೌಊದ್‌ರ[ಅ] ಜಮಾಅತ್ ಯಾವಾಗಲೂ ಪರಿಪೂರ್ಣವಾಗಿರಿಸುವಂತೆ ಅಲ್ಲಾಹನು ಮಾಡಲಿ. ನಾನು ಈ ಬಗ್ಗೆ ಕೆಲವು ಹದೀಸುಗಳನ್ನು ಉಲ್ಲೇಖಿಸುತ್ತೇನೆ.

ಹಝ್ರತ್ ರಸೂಲುಲ್ಲಾಹ್[ಸ] ಹೇಳಿದ್ದಾಗಿ ಹಝ್ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ: ಪುನರುತ್ಥಾನದ ದಿನ ಅಲ್ಲಾಹನು ಹೇಳುವನು – ಎಲೈ ಆದಮ್ ಪುತ್ರ, ನಾನು ರೋಗಿಯಾಗಿದ್ದೆ. ನೀನು ನನ್ನನ್ನು ಸಂದರ್ಶಿಸಲಿಲ್ಲ. ಆಗ ಮನುಷ್ಯನು ಹೇಳುವನು: ಹೇ ನನ್ನ ಪ್ರಭು, ನೀನು ಸಕಲ ಲೋಕಗಳ ರಕ್ಷಕನಾಗಿರುವಾಗ ನಾನು ಹೇಗೆ ತಾನೆ ಸಂದರ್ಶಿಸಬಲ್ಲೆ. ಆಗ ಅಲ್ಲಾಹನು ಹೇಳುವನು: ನನ್ನ ದಾಸನೊಬ್ಬ ರೋಗಿಯಾಗಿದ್ದಾಗ ನೀನು ಆತನ ಆರೈಕೆ ಮಾಡಲಿಲ್ಲ. ಆಗ ನೀನು ಅವನನ್ನು ಉಪಚರಿಸಿದ್ದರೆ ನನ್ನನ್ನು ಅವನ ಸಮೀಪ ಕಾಣುತ್ತಿದ್ದೆ ಎಂದು ನಿನಗೆ ಗೊತ್ತಿರಲಿಲ್ಲವೇ? ಅಲ್ಲಾಹನು ಪುನಃ ಹೇಳುವನು: ಎಲೈ ಆದಮ್ ಪುತ್ರ, ನಾನು ನಿನ್ನೊಂದಿಗೆ ಅನ್ನವನ್ನು ಕೇಳಿದೆ. ನೀನು ನನಗೆ ಅನ್ನ ಕೊಡಲಿಲ್ಲ. ಆಗ ಮನುಷ್ಯನು ಹೇಳುವನು: ಹೇ ನನ್ನ ಪ್ರಭು, ನೀನು ಸಕಲ ಲೋಕಗಳ ಪ್ರಭುವಾಗಿರುವಾಗ ನಾನು ಹೇಗೆ ತಾನೆ ನಿನಗೆ ಅನ್ನ ನೀಡಬಲ್ಲೆ. ಆಗ ಅಲ್ಲಾಹನು ಹೇಳುವನು: ನಿನ್ನೊಂದಿಗೆ ನನ್ನ ಒಬ್ಬ ದಾಸನು ಅನ್ನ ಕೇಳಿದನು. ಆಗ ನೀನು ಅವನಿಗೆ ಅನ್ನ ಕೊಡಲಿಲ್ಲ. ನೀನು ಅವನಿಗೆ ಅನ್ನ ಕೊಡುತ್ತಿದ್ದರೆ ನನ್ನ ಸನ್ನಿಧಿಯಲ್ಲಿ ಅದಕ್ಕೆ ಪ್ರತಿಫಲ ಪಡೆಯುತ್ತಿದ್ದೆ ಎಂದು ನಿನಗೆ ಗೊತ್ತಿರಲಿಲ್ಲವೇ? ಅಲ್ಲಾಹನು ಪುನಃ ಹೇಳುವನು: ಎಲೈ ಆದಮ್ ಪುತ್ರ, ನಾನು ನಿನ್ನಿಂದ ನೀರನ್ನು ಕೇಳಿದೆ. ಆದರೆ ನೀನು ನನಗೆ ನೀರು ಕುಡಿಸಲಿಲ್ಲ. ಆಗ ಮನುಷ್ಯನು ಹೇಳುವನು: ಹೇ ನನ್ನ ಪ್ರಭು, ನಾನು ನಿನಗೆ ಹೇಗೆ ನೀರನ್ನು ಕುಡಿಸಬಲ್ಲೆ. ನೀನು ಸಕಲ ಲೋಕಗಳ ಪ್ರಭುವಾಗಿರುವೆ. ಆಗ ಅಲ್ಲಾಹನು ಹೇಳುವನು: ನನ್ನ ದಾಸನೊಬ್ಬನು ನಿನ್ನಿಂದ ನೀರನ್ನು ಕೇಳಿದಾಗ ನೀನು ಅವನಿಗೆ ನೀರನ್ನು ಕೊಡಲಿಲ್ಲ. ನೀನು ಅವನಿಗೆ ನೀರನ್ನು ಕೊಡುತ್ತಿದ್ದರೆ ನನ್ನ ಸನ್ನಿಧಾನದಲ್ಲಿ ಅದಕ್ಕೆ ಪ್ರತಿಫಲವನ್ನು ಪಡೆಯುತ್ತಿದ್ದೆ.

**(ಮುಸ್ಲಿಮ್)**

ಇನ್ನೊಂದು ಹದೀಸ್ ಹೀಗಿದೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದ್ದಾಗಿ ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದ್[ರ] ವರದಿ ಮಾಡುತ್ತಾರೆ: ಎಲ್ಲ ಸೃಷ್ಟಿಗಳು ಅಲ್ಲಾಹನ ಕುಟುಂಬವಾಗಿದೆ. ಅವನ ಕುಟುಂಬದೊಂದಿಗೆ ಒಳ್ಳೆಯ

ರೀತಿ ವರ್ತಿಸುವವನು ಮತ್ತು ಅವರ ಆವಶ್ಯಕತೆಗಳ ಕುರಿತು ಗಮನಿಸುವವನು ಅಲ್ಲಾಹನಿಗೆ ಅತ್ಯಂತ ಪ್ರಿಯನಾಗಿದ್ದಾನೆ.

**(ಮಿಶ್ಕಾತ್)**

ಹಝ್‌ರತ್ ರಸೂಲುಲ್ಲಾಹ್[ಸ] ಹೇಳಿದ್ದಾಗಿ ಹಝ್‌ರತ್ ಅಲಿ[ರ] ಹೀಗೆ ವರದಿ ಮಾಡುತ್ತಾರೆ: ಒಬ್ಬ ಮುಸ್ಲಿಮನಿಗೆ ಇನ್ನೊಬ್ಬ ಮುಸ್ಲಿಮನ ಸಂಬಂಧಿಸಿ ಆರು ಕರ್ತವ್ಯಗಳಿವೆ.

1. ಅವನು ಇನ್ನೊಬ್ಬ ಮುಸ್ಲಿಮನನ್ನು ಭೇಟಿಯಾಗುವಾಗ ಅವನಿಗೆ ಅಸ್ಸಲಾಮು ಅಲೈಕುಮ್ ಎಂದು ಹೇಳಬೇಕು.

2. ಅವನು ಸೀನಿದರೆ ಯರ್‌ಹಮುಕಲ್ಲಾಹ್ (ಅಲ್ಲಾಹನು ನಿನಗೆ ದಯೆದೋರಲಿ) ಎಂದು ಹೇಳಬೇಕು.

3. ರೋಗಿಯಾದರೆ ಅವನನ್ನು ಸಂದರ್ಶಿಸಬೇಕು. (ಕೆಲವು ಜನರಿಗೆ ಅಲ್ಲಾಹನ ಅನುಗ್ರಹದಿಂದ ಈ ಉತ್ತಮ ಗುಣವಿದೆ. ಆಸ್ಪತ್ರೆಗೆ ಹೋಗಿ ರೋಗಿಗಳನ್ನು ಸಂದರ್ಶಿಸುತ್ತಾರೆ. ರೋಗಿಗಳು ಪರಿಚಯವಿಲ್ಲದವರಾದರೂ ಸಂದರ್ಶಿಸುತ್ತಾರೆ. ಅವರಿಗೆ ಹಣ್ಣುಹಂಪಲುಗಳನ್ನು ಕೊಂಡು ಹೋಗುತ್ತಾರೆ. ಇದು ಬಹಳ ಉತ್ತಮ ಸೃಷ್ಟಿ ಸೇವೆಯಾಗಿದೆ.)

4. ಯಾರಾದರೂ ಕರೆದರೆ ಕರೆಗೆ ಉತ್ತರ ಕೊಡಬೇಕು.

5. ಯಾರಾದರೂ ಮೃತರಾದರೆ ಜನಾಝಕ್ಕೆ ಹೋಗಬೇಕು.

6. ತಾನು ಇಷ್ಟಪಡುವುದನ್ನು ಬೇರೆಯವನಿಗೂ ಇಷ್ಟಪಡಬೇಕು. ಅವನು ಹಾಜರಿಲ್ಲದ ಸಮಯದಲ್ಲಿಯೂ ಅವನ ಹಿತವನ್ನು ಆಶಿಸಬೇಕು.

**(ಸುನನ್ ದಾರಿಮಿ)**

ಹಝ್‌ರತ್ ರಸೂಲುಲ್ಲಾಹ್[ಸ] ಹೇಳಿದ್ದಾಗಿ ಹಝ್‌ರತ್ ಅಬ್ದುಲ್ಲಾ ಬಿನ್ ಉಮರ್[ರ] ವರದಿ ಮಾಡುತ್ತಾರೆ: ಪರಸ್ಪರ ಅಸೂಯೆಪಡಬೇಡಿರಿ. ಪರಸ್ಪರ ನಷ್ಟ ಉಂಟುಮಾಡಲು ಬೆಲೆಯನ್ನು ಹೆಚ್ಚು ಮಾಡಬೇಡಿರಿ. ಪರಸ್ಪರ ಹಗೆತನ ಹೊಂದಬೇಡಿರಿ. ನೀವು ಪರಸ್ಪರ ಬೆನ್ನು ತಿರುಗಿಸಬೇಡಿರಿ. ಎಂದರೆ ಸಂಬಂಧ ವಿಚ್ಛೇದಿಸಬೇಡಿರಿ. ಒಬ್ಬನು ಮಾಡಿದ ವ್ಯಾಪಾರದ ಮೇಲೆ ವ್ಯಾಪಾರ ಮಾಡಬೇಡಿರಿ. ಅಲ್ಲಾಹನ ದಾಸರಾದ ಸತ್ಯವಿಶ್ವಾಸಿಗಳು ಪರಸ್ಪರ ಸಹೋದರರಂತೆ ವರ್ತಿಸಬೇಕು. ಮುಸ್ಲಿಮನು ತನ್ನ ಸಹೋದರನ ಮೇಲೆ ದೌರ್ಜನ್ಯ ಮಾಡುವುದಿಲ್ಲ. ಅವನನ್ನು ಅಪಮಾನಿಸುವುದಿಲ್ಲ. ಅವನಿಗೆ ನಾಚಿಕೆಗೇಡು ಉಂಟುಮಾಡುವುದಿಲ್ಲ.

ಹಝ್‌ರತ್ ರಸೂಲುಲ್ಲಾಹ್[ಸ] ತನ್ನ ಎದೆಗೆ ತೋರಿಸುತ್ತಾ ಹೇಳಿದರು: ತಖ್ವಾ (ಭಯಭಕ್ತಿ) ಇಲ್ಲಿದೆ. ಈ ಪದವನ್ನು ಅವರು ಮೂರು

ಸಾರಿ ಪುನರಾವರ್ತಿಸಿದರು. ಅವರು ಹೇಳಿದರು: ಮನುಷ್ಯನು ತನ್ನ ಮುಸ್ಲಿಮ್ ಸಹೋದರನನ್ನು ತಾತ್ಸಾರ ಭಾವದಿಂದ ಕಾಣುವುದು ಅವನು ದುರದೃಷ್ಟವಂತನಾಗಲು ಸಾಕು. ಪ್ರತಿಯೊಬ್ಬ ಮುಸ್ಲಿಮನ ರಕ್ತ, ಸಂಪತ್ತು ಮತ್ತು ಗೌರವ ಬೇರೆ ಮುಸ್ಲಿಮನಿಗೆ ನಿಷಿದ್ಧವೂ ಗೌರವಿಸಲ್ಪಡಬೇಕಾದುದೂ ಆಗಿದೆ.

**(ಮುಸ್ಲಿಮ್)**

ಹಝ್ರತ್ ರಸೂಲುಲ್ಲಾಹ್[ಸ] ಹೇಳಿದ್ದಾಗಿ ಹಝ್ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ: ಯಾರು ಒಬ್ಬ ಮುಸ್ಲಿಮನ ಲೌಕಿಕ ಕಷ್ಟವನ್ನು ದೂರಸರಿಸುತ್ತಾನೋ ಅಲ್ಲಾಹನು ಪರಲೋಕದಲ್ಲಿ ಅವನ ಕಷ್ಟಗಳನ್ನು ದೂರಸರಿಸುವನು. ಯಾರಾದರೂ ಒಬ್ಬ ಬಡವನಿಗೆ ಸುಖ ನೀಡಿದರೆ ಪರಲೋಕದಲ್ಲಿ ಅವನಿಗೆ ಅಲ್ಲಾಹನು ಸುಖ ನೀಡುವನು. ಯಾರಾದರೂ ಮುಸ್ಲಿಮನ ಕುಂದುಕೊರತೆಗಳನ್ನು ಮರೆಮಾಚಿದರೆ ಪರಲೋಕದಲ್ಲಿ ಅಲ್ಲಾಹನು ಅವನ ಕುಂದುಕೊರತೆಗಳನ್ನು ಮರೆಮಾಚುವನು. ತನ್ನ ಸಹೋದರನ ಸಹಾಯಕ್ಕೆ ಸಿದ್ಧನಾಗುವವನ ಸಹಾಯಕ್ಕೆ ಅಲ್ಲಾಹನು ಸಿದ್ಧನಾಗುವನು. ಯಾರು ವಿದ್ಯೆ ಗಳಿಸಲಿಕ್ಕಾಗಿ ಹೊರಡುತ್ತಾನೋ ಅವನಿಗೆ ಅಲ್ಲಾಹನು ಸ್ವರ್ಗದ ದಾರಿಯನ್ನು ಸುಲಭಗೊಳಿಸುವನು. ಯಾರು ಅಲ್ಲಾಹನ ಭವನಗಳಲ್ಲಿ ಕುಳಿತು ಅಲ್ಲಾಹನ ಗ್ರಂಥ ಓದುತ್ತಾರೋ ಅದರ ಪಾಠ ಮತ್ತು ವ್ಯಾಖ್ಯಾನ ಮಾಡುತ್ತಾರೋ ಅವರಿಗೆ ಅಲ್ಲಾಹನು ಮನಶ್ಶಾಂತಿ ಮತ್ತು ಮನಸ್ಸಮಾಧಾನವನ್ನು ದಯಪಾಲಿಸುವನು. ಅಲ್ಲಾಹನ ಕಾರುಣ್ಯ ಅವರನ್ನು ಆವರಿಸುವುದು, ದೇವದೂತರು ಅವರನ್ನು ಸುತ್ತುವರಿಯುವರು. ಅಲ್ಲಾಹನು ತನ್ನ ಸಾಮೀಪ್ಯ ಗಳಿಸಿದವರೊಡನೆ ಅವರ ಬಗ್ಗೆ ಪ್ರಸ್ತಾಪಿಸುತ್ತಿರುವನು. ಸತ್ಕರ್ಮಗಳಲ್ಲಿ ಆಲಸ್ಯ ತೋರಿಸುವವನನ್ನು ಅವನ ಕುಲ ಮತ್ತು ಕುಟುಂಬ ಚುರುಕುಗೊಳಿಸಲಾರವು. ಎಂದರೆ ಅವನು ಕುಟುಂಬದ ಮಹಿಮೆಯ ಆಸರೆಯಿಂದ ಸ್ವರ್ಗವನ್ನು ಪ್ರವೇಶಿಸಲಾರ.

**(ಮುಸ್ಲಿಮ್ – ಕಿತಾಬುಧ್ಧಿಕ್ರ್)**

ಮೇಲಿನ ಹದೀಸಿನ ಆರಂಭದಲ್ಲಿ ಹೀಗೆ ಹೇಳಲಾಗಿದೆ: ಜನರಿಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಮತ್ತು ತಮ್ಮ ಸಹೋದರರ ಕ್ಲೇಶ ಮತ್ತು ಕಷ್ಟತೆಗಳನ್ನು ದೂರೀಕರಿಸುವುದರಿಂದ ಅಲ್ಲಾಹನು ಅಂತ್ಯ ದಿನದಂದು ಅದೇ ಕಾರುಣ್ಯದ ವರ್ತನೆ ನಿಮ್ಮೊಂದಿಗೂ ಮಾಡುವನು ಮತ್ತು ನಿಮ್ಮ ಕ್ಲೇಶಗಳನ್ನೂ ಕಷ್ಟತೆಗಳನ್ನೂ ದೂರೀಕರಿಸುವನು. ಇದು ರಸೂಲುಲ್ಲಾಹ್[ಸ] ನಮ್ಮ ಮೇಲೆ ಮಾಡಿದ ಔದಾರ್ಯವಾಗಿದೆ. ರಸೂಲುಲ್ಲಾಹ್[ಸ] ಹೇಳಿದರು: ಅಲ್ಲಾಹನು ತನ್ನ ಕ್ಷಮೆಯ ಹೊದಿಕೆಯಿಂದ ನಿಮ್ಮನ್ನು ಹೊದಿಸಬೇಕೆಂದು ನೀವು ಬಯಸುವಿರಾದರೆ ಕ್ಲೇಶ, ಕಷ್ಟತೆಗಳಿಂದ ಬಳಲಿದವರಿಗೂ ದರಿದ್ರರಿಗೂ ನಿಮ್ಮಿಂದಾಗುವಷ್ಟು ಸೌಕರ್ಯವನ್ನು ಒದಗಿಸಿರಿ. ಆಗ ಅಲ್ಲಾಹನು ನಿಮ್ಮೊಂದಿಗೂ ಕಾರುಣ್ಯದಿಂದ

ವರ್ತಿಸುವನು. ತಮ್ಮ ಸಹೋದರರ ನ್ಯೂನತೆಗಳನ್ನು ಮರೆಮಾಚಿರಿ. ಅವರ ತಪ್ಪುಗಳನ್ನು ಎತ್ತಿ ಹಿಡಿದುಕೊಂಡು ಬಹಿರಂಗ ಪಡಿಸದಿರಿ. ಅಂತ್ಯ ದಿನದಂದು ಲೆಕ್ಕ ಕೊಡಬೇಕಾದ ಎಷ್ಟೆಲ್ಲ ನ್ಯೂನತೆಗಳು ಮತ್ತು ಬಲಹೀನತೆಗಳು ನಿಮ್ಮಲ್ಲಿವೆ ಎಂದು ನಿಮಗೆ ಅರಿವಿಲ್ಲ. ನೀವು ನಿಮ್ಮ ಸಹೋದರನ ನ್ಯೂನತೆಗಳನ್ನು ಈ ಲೋಕದಲ್ಲಿ ಮುಚ್ಚಿಟ್ಟರೆ, ಅವರ ತಪ್ಪುಗಳನ್ನು ನೋಡಿಕೊಂಡು ಅದನ್ನು ಚರ್ಚಾ ವಿಷಯವನ್ನಾಗಿ ಮಾಡುವ ಬದಲು ಅವರೊಂದಿಗೆ ಸಹಾನುಭೂತಿಯಿಂದ ಮನವರಿಕೆ ಮಾಡಲು ಪ್ರಯತ್ನಿಸಿದರೆ ಅಲ್ಲಾಹನು ನಿಮ್ಮ ನ್ಯೂನತೆಗಳನ್ನು ಮುಚ್ಚಿಡುವನು. ದಾಸರಿಗೆ ಸಂಬಂಧಿಸಿದ ಈ ಎಲ್ಲ ಕರ್ತವ್ಯಗಳನ್ನು ನೀವು ನಿರ್ವಹಿಸುವಿರಾದರೆ ಅಲ್ಲಾಹನ ಅನುಗ್ರಹದ ವಾರಸುದಾರರಾಗುವಿರಿ.

> ರಸೂಲುಲ್ಲಾಹ್[ಸ] ಹೇಳಿದ್ದಾಗಿ ಹಝ್ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ: ದಾನಧರ್ಮಗಳಿಂದ ಧನದಲ್ಲಿ ಕೊರತೆ ಉಂಟಾಗುವುದಿಲ್ಲ. ಇತರರ ತಪ್ಪುಗಳನ್ನು ಕ್ಷಮಿಸುವವನಿಗೆ ಅಲ್ಲಾಹನು ಗೌರವವನ್ನು ವರ್ಧಿಸಿ ನೀಡುವನು. ಇತರರ ತಪ್ಪುಗಳನ್ನು ಕ್ಷಮಿಸುವುದರಿಂದ ಯಾವುದೇ ಅಪಮಾನವು ಇಲ್ಲ.

**(ಮಸ್‌ನದ್ ಅಹ್ಮದ್ ಬಿನ್ ಹಂಬಲ್; ಭಾಗ 2, ಪುಟ 235)**

> ಹಝ್ರತ್ ರಸೂಲುಲ್ಲಾಹ್[ಸ] ಹೇಳಿದ್ದಾಗಿ ಅಬ್ದುಲ್ಲಾ ಬಿನ್ ಅಮ್ರ್[ರ] ವರದಿ ಮಾಡುತ್ತಾರೆ: ದಯೆದೋರುವವರಿಗೆ ಅಪರಿಮಿತ ದಯಾಮಯನು (ರಹ್ಮಾನ್) ದಯೆದೋರುವನು. ನೀವು ಭೂಮಿಯ ನಿವಾಸಿಗಳ ಮೇಲೆ ದಯೆದೋರಿರಿ. ಆಕಾಶದಲ್ಲಿರುವವನು ನಿಮ್ಮ ಮೇಲೆ ದಯೆದೋರುವನು.

**(ಅಬೂ ದಾವೂದ್)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ನೀವು ಚೆನ್ನಾಗಿ ನೆನಪಿಡಿರಿ. ಅಲ್ಲಾಹನು ಎರಡು ಆಜ್ಞೆಗಳನ್ನು ನೀಡಿದ್ದಾನೆ. ಒಂದನೆಯ ಆಜ್ಞೆ ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬಾರದು. ಅವನ ಸತ್ತೆಯಲ್ಲಿ, ಅವನ ಗುಣಗಳಲ್ಲಿ, ಅವನ ಆರಾಧನೆಯಲ್ಲಿ ಯಾರನ್ನೂ ಸಹಭಾಗಿಗಳನ್ನಾಗಿ ಮಾಡಬಾರದು. ಎರಡನೆಯ ಆಜ್ಞೆ ಮನುಷ್ಯ ಕುಲದವರಿಗೆ ಸಹಾನುಭೂತಿ ತೋರಿಸುವುದಾಗಿದೆ. ತನ್ನ ಸಹೋದರರಿಗೆ ಮತ್ತು ಸಂಬಂಧಿಕರಿಗೆ ಮಾತ್ರವಲ್ಲ, ಮನುಷ್ಯರಲ್ಲಿ ಪ್ರತಿಯೊಬ್ಬರಿಗೆ ಉಪಕಾರ ಮಾಡಬೇಕು. ಅವನು ಹಿಂದೂ, ಕ್ರೈಸ್ತ ಎಂದು ಭಾವಿಸಬೇಡಿರಿ. ಅಲ್ಲಾಹನು ನಿಮ್ಮ ನ್ಯಾಯ ತೀರ್ಮಾನವನ್ನು ತನ್ನ ಕೈಗೆ ತೆಗೆದುಕೊಂಡಿರುವನು. ನೀವು ಸ್ವತಃ ತೀರ್ಮಾನಿಸಬೇಕೆಂದು ಅವನು ಬಯಸುವುದಿಲ್ಲ. ನೀವು ಎಷ್ಟು ಮೃದುವಾಗಿ ವರ್ತಿಸುತ್ತೀರೋ, ನೀವು ಎಷ್ಟು ವಿನಯದಿಂದಲೂ ನಮ್ರತೆಯಿಂದಲೂ ವರ್ತಿಸುತ್ತೀರೋ ಅಲ್ಲಾಹನು ಅಷ್ಟು ಪ್ರಮಾಣದಲ್ಲಿ

ನಿಮ್ಮಿಂದ ಸಂತುಷ್ಟನಾಗುವನು. ನೀವು ನಿಮ್ಮ ಶತ್ರುಗಳನ್ನು ಅಲ್ಲಾಹನ ವಶಕ್ಕೆ ನೀಡಿರಿ. ಪುನರುತ್ಥಾನದ ದಿನ ಸಮೀಪವಾಗಿದೆ. ನಿಮಗೆ ಶತ್ರುಗಳು ನೀಡುವ ಕಷ್ಟಗಳಿಂದ ನೀವು ಗಾಬರಿಗೊಳ್ಳಬೇಡಿರಿ. ನಿಮಗೆ ಶತ್ರುಗಳಿಂದ ಬಹಳ ಕಷ್ಟ ಅನುಭವಿಸಲಿಕ್ಕಿದೆ. ಏಕೆಂದರೆ, ಸಭ್ಯತೆಯ ವಲಯದಿಂದ ಹೊರಗಾಗುವವರ ನಾಲಗೆ, ಅಣೆಕಟ್ಟು ಒಡೆದರೆ ಹೊರಬರುವ ನೆರೆ ನೀರಿನ ಪ್ರವಾಹದ ಹಾಗೆ ಚಲಿಸುತ್ತದೆ. ಧಾರ್ಮಿಕನಾದವನು ತನ್ನ ನಾಲಗೆಯನ್ನು ಹತೋಟಿಯಲ್ಲಿಡಬೇಕು.

**(ಮಲ್‌ಫೂಝಾತ್; ಸಂಪುಟ 9, ಪುಟ 164 – 165)**

ನೀವು ನೆನಪಿಡಿರಿ. ಹಕ್ಕುಗಳು (ಕರ್ತವ್ಯಗಳು) ಎರಡು ವಿಧಗಳಲ್ಲಿವೆ. ಒಂದು ಹಖ್ಖುಲ್ಲಾಹ್ (ಅಲ್ಲಾಹನಿಗೆ ಸಂಬಂಧಿಸಿದ ನಮ್ಮ ಕರ್ತವ್ಯಗಳು). ಎರಡನೆಯದು ಹಖ್ಖುಲ್ ಇಬಾದ್ (ದಾಸರಿಗೆ ಸಂಬಂಧಿಸಿದ ಕರ್ತವ್ಯಗಳು). ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವುದು ಶ್ರೀಮಂತರಿಗೆ ಕಷ್ಟಕರವಾಗುತ್ತದೆ. ಅವರ ಅಹಂಕಾರ ಮತ್ತು ಸ್ವೇಚ್ಛೆ ಅವರನ್ನು ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸದಂತೆ ಮಾಡುತ್ತದೆ. ಉದಾಹರಣೆಗೆ, ನಮಾಝ್ ಮಾಡುವಾಗ ಒಬ್ಬ ಬಡವನ ಜೊತೆ ನಿಲ್ಲಲು ಅವರಿಗೆ ಅಸಹ್ಯವಾಗುತ್ತದೆ. ಅವರು ಬಡವನನ್ನು ತಮ್ಮ ಹತ್ತಿರ ಕುಳ್ಳಿರಿಸಲಾರರು. ಈ ರೀತಿ ಅವರು ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯವನ್ನು ಈಡೇರಿಸುವುದರಿಂದ ವಂಚಿತರಾಗುತ್ತಾರೆ. ಮಸೀದಿಗಳು ಬಡವರ ಭವನಗಳಾಗಿರುತ್ತವೆ. ಅಲ್ಲಿಗೆ ಹೋಗುವುದು ತಮ್ಮ ಘನತೆಗೆ ಕುಂದುಂಟುಮಾಡುತ್ತದೆ ಎಂದು ಶ್ರೀಮಂತರು ಭಾವಿಸುತ್ತಾರೆ. ಅವರು ಜನರಿಗೆ ಸಂಬಂಧಿಸಿದ ವಿವಿಧ ಸೇವೆಗಳನ್ನು ಮಾಡುವುದಿಲ್ಲ. ಬಡವನು ಪ್ರತಿಯೊಂದು ರೀತಿಯ ಸೇವೆ ಮಾಡಲು ಸಿದ್ಧನಾಗುತ್ತಾನೆ. ಅವನು ಪಾದಗಳನ್ನು ಒತ್ತ ಬಲ್ಲನು. ಅವನು ನೀರು ತರುತ್ತಾನೆ. ಬಟ್ಟೆ ತೊಳೆಯುತ್ತಾನೆ. ಮಲಿನ ವಸ್ತುಗಳನ್ನು ದೂರ ಎಸೆಯಬೇಕಾಗಿದ್ದರೆ ಅದಕ್ಕೂ ಸಿದ್ಧನಾಗುತ್ತಾನೆ. ಆದರೆ ಶ್ರೀಮಂತರು ಇಂತಹ ಕೆಲಸ ಮಾಡಲು ನಾಚಿಗೆಪಡುತ್ತಾರೆ ಮತ್ತು ಇಂತಹ ಸೇವೆಗಳಿಂದ ವಂಚಿತರಾಗುತ್ತಾರೆ. ಐಶ್ವರ್ಯವು ಅನೇಕ ಒಳಿತುಗಳನ್ನು ಗಳಿಸುವುದನ್ನು ತಡೆಯುತ್ತದೆ. ಇದೇ ಕಾರಣದಿಂದ ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಬಡವರು ಐನೂರು ವರ್ಷಗಳಿಗೆ ಮುಂಚಿತವಾಗಿ ಸ್ವರ್ಗವನ್ನು ಪ್ರವೇಶಿಸುವರು.

**(ಮಲ್‌ಫೂಝಾತ್; ಸಂಪುಟ 3, ಪುಟ 368 – ಹೊಸ ಮುದ್ರಣ)**

ಅಲ್ಲಾಹನ ಸೃಷ್ಟಿಗಳೊಂದಿಗೆ ಸಹಾನುಭೂತಿಯನ್ನು ಮನುಷ್ಯನು ಬಿಟ್ಟರೆ ಅವನು ಕ್ರಮೇಣ ಕ್ರೂರ ಮೃಗದ ಹಾಗೆ ಆಗುತ್ತಾನೆ. ಮನುಷ್ಯನ ಮನುಷ್ಯತ್ವ ಆವಶ್ಯಪಡುವುದೇನೆಂದರೆ ಅವನು ತನ್ನ ಸಹೋದರನೊಂದಿಗೆ ಮೃದುವಾಗಿ, ಉಪಕಾರ ಮಾಡುವ ರೀತಿಯಲ್ಲಿ ವರ್ತಿಸಬೇಕೆಂದಾಗಿದೆ. ಅವನು ತಾರತಮ್ಯ

ಭಾವನೆಯಿಂದ ವರ್ತಿಸಬಾರದು. ಸಅದಿ ಹೀಗೆ ಹೇಳಿದ್ದಾರೆ: **ಬನೀ ಆದಮ್ ಅಅ್‌ಝ್ಝಾಯೆ ಎಕ್ ದೀಗರ್ ಅಂದ್**. ಮನುಷ್ಯರೆಲ್ಲರೂ ಒಂದೇ ಶರೀರದ ವಿವಿಧ ಅಂಗಗಳಾಗಿದ್ದಾರೆ.

ನೀವು ನೆನಪಿಡಿರಿ, ಸಹಾನುಭೂತಿಯ ವಲಯ ನನ್ನ ಅಭಿಪ್ರಾಯದಲ್ಲಿ ವಿಶಾಲವಾಗಿದೆ. ಯಾವುದೇ ಜನಾಂಗವನ್ನು ಮತ್ತು ವ್ಯಕ್ತಿಯನ್ನು ಬೇರ್ಪಡಿಸಬೇಡಿರಿ. ನಾನು ಅಜ್ಞಾನಿಗಳ ಹಾಗೆ ನಿಮ್ಮ ಸಹಾನುಭೂತಿಯನ್ನು ಮುಸ್ಲಿಮರಿಗೆ ಮಾತ್ರ ಸೀಮಿತಗೊಳಿಸಿರಿ ಎಂದು ಹೇಳುವುದಿಲ್ಲ. ಹಾಗಲ್ಲ, ನೀವು ಅಲ್ಲಾಹನ ಎಲ್ಲ ಸೃಷ್ಟಿಗಳೊಂದಿಗೆ ಸಹಾನುಭೂತಿ ಹೊಂದಿರಿ. ಹಿಂದು ಆಗಿರಲಿ, ಮುಸ್ಲಿಮನಾಗಿರಲಿ ಅಥವಾ ಬೇರೆ ಯಾರೇ ಆಗಿರಲಿ. ಸಹಾನುಭೂತಿಯನ್ನು ತಮ್ಮ ಜನಾಂಗಕ್ಕೆ ಮಾತ್ರ ಸೀಮಿತಗೊಳಿಸುವವರ ನಿಲುವನ್ನು ನಾನು ಇಷ್ಟಪಡುವುದಿಲ್ಲ.

**(ಮಲ್‌ಫೂಝಾತ್; ಸಂಪುಟ 4, ಪುಟ 216 – 217, ಹೊಸ ಮುದ್ರಣ)**

ಮನುಷ್ಯ ವರ್ಗದವರಿಗೆ ಸಹಾನುಭೂತಿ ತೋರಿಸುವುದು ಮತ್ತು ಅವರಿಗೆ ದಯೆದೋರುವುದು ಬಹಳ ದೊಡ್ಡ ಆರಾಧನೆಯಾಗಿದೆ. ಅದು ಅಲ್ಲಾಹನ ಸಂಪ್ರೀತಿ ಗಳಿಸಲು ಬಹಳ ಬಲಯುತವಾದ ಮಾರ್ಗವಾಗಿದೆ. ಆದರೆ ಈ ಬಗ್ಗೆ ಬಹಳ ಬಲಹೀನತೆ ಕಂಡುಬರುತ್ತಿದೆ. ಇತರರನ್ನು ಕೀಳೆಂದು ಬಗೆಯಲಾಗುತ್ತಿದೆ. ಅವರನ್ನು ಅಪಹಾಸ್ಯ ಮಾಡಲಾಗುತ್ತಿದೆ. ಅವರಿಗೆ ಸಹಾನುಭೂತಿ ತೋರಿಸುವುದು, ಕಷ್ಟಕಾಲದಲ್ಲಿ ಸಹಾಯ ಮಾಡುವುದು ದೂರದ ಮಾತಾಗಿದೆ. ಬಡವರೊಂದಿಗೆ ಒಳ್ಳೆಯ ರೀತಿ ವರ್ತಿಸದೆ ಅವರನ್ನು ಹೀನೈಸುವವರು ಸ್ವತಃ ಇಂತಹ ಕಷ್ಟಗಳಿಗೆ ಗುರಿಯಾಗುವರೋ ಎಂದು ನಾನು ಭಯಪಡುತ್ತೇನೆ. ಅಲ್ಲಾಹನು ಯಾರಿಗಾದರೂ ಅನುಗ್ರಹ ನೀಡಿದ್ದರೆ ಅದಕ್ಕೆ ಕೃತಜ್ಞತೆ ಅರ್ಪಿಸಲು ದೇವ ಸೃಷ್ಟಿಗಳೊಂದಿಗೆ ಔದಾರ್ಯದಿಂದ ವರ್ತಿಸಬೇಕು, ಅಲ್ಲಾಹನು ನೀಡಿದ ಅನುಗ್ರಹಗಳ ಬಗ್ಗೆ ಅಹಂಕಾರಪಡಬಾರದು ಮತ್ತು ಕಾಡುಮೃಗಗಳ ಹಾಗೆ ಬಡವರನ್ನು ತುಳಿದು ಹಾಕಬಾರದು.

**(ಮಲ್‌ಫೂಝಾತ್; ಸಂಪುಟ 4, ಪುಟ 438 – 439, ಹೊಸ ಮುದ್ರಣ)**

ಪವಿತ್ರ ಖುರ್‌ಆನಿನಲ್ಲಿ ತಂದೆ, ತಾಯಿ, ಮಕ್ಕಳು, ಇತರ ಸಂಬಂಧಿಕರು ಮತ್ತು ಬಡವರ ಹಕ್ಕುಗಳನ್ನು ವಿವರಿಸಿದ ಹಾಗೆ ಬೇರೆ ಯಾವ ಗ್ರಂಥದಲ್ಲಿಯೂ ಈ ಹಕ್ಕುಗಳ ಬಗ್ಗೆ ಬರೆಯಲಾಗಿದೆ ಎಂದು ನನಗೆ ಅನಿಸುವುದಿಲ್ಲ. ಅಲ್ಲಾಹನು ಹೀಗೆ ಹೇಳುತ್ತಾನೆ:

وَاعْبُدُوا اللّٰهَ وَلَا تُشْرِكُوْا بِهٖ شَيْئًا وَّبِالْوَالِدَيْنِ اِحْسَانًا وَّبِذِی الْقُرْبٰى وَالْيَتٰمٰى وَالْمَسٰكِيْنِ
وَالْجَارِ ذِی الْقُرْبٰى وَالْجَارِ الْجُنُبِ وَالصَّاحِبِ بِالْجَنْبِ وَابْنِ السَّبِيْلِ وَمَا مَلَكَتْ اَيْمَانُكُمْ اِنَّ اللّٰهَ لَا
يُحِبُّ مَنْ كَانَ مُخْتَالًا فَخُوْرًا

ನೀವು ಅಲ್ಲಾಹನನ್ನು ಆರಾಧಿಸಿರಿ. ಬೇರೇನನ್ನೂ ಅವನಿಗೆ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ – ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ (ಕೆಲಸದಲ್ಲಿ, ಯಾತ್ರೆಯಲ್ಲಿ, ನಮಾಝಿನಲ್ಲಿ, ಕಲಿಕೆಯಲ್ಲಿ ನಮ್ಮೊಂದಿಗಿದ್ದವರೂ ಅನ್ಯ ನೆರೆಹೊರೆಯವರಲ್ಲಿ ಸೇರುತ್ತಾರೆ) ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ. ಅಹಂಭಾವಿಗಳನ್ನೂ ಜಂಬ ಕೊಚ್ಚುವವರನ್ನೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ. **(4:37)**

**(ಚಶ್ಮಯೆ ಮಅರಿಫತ್; ರೂಹಾನೀ ಖಝಾಇನ್, ಸಂಪುಟ 23, ಪುಟ 208 –209)**

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಈ ಬಗ್ಗೆ ಹೀಗೆ ಹೇಳುತ್ತಾರೆ:

ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ –

إِنَّا نَخَافُ مِن رَّبِّنَا يَوْمًا عَبُوسًا قَمْطَرِيرًا

ನಾವು ನಮ್ಮ ಪ್ರಭುವಿನಿಂದ ಬರುವ ಅಸಹನೀಯ ಮತ್ತು ಭೀಕರವಾದ ಒಂದು ದಿನದ ಬಗ್ಗೆ ಭಯಪಡುತ್ತೇವೆ. **(76:11)**

ಪುನರುತ್ಥಾನ ದಿನವು ಅಸಹನೀಯ ಕಷ್ಟದ ಮತ್ತು ದೀರ್ಘವಾದುದಾಗುವುದು. ಹಸಿದವರಿಗೆ ಸಹಾಯ ನೀಡುವುದರಿಂದ ಅಲ್ಲಾಹನು ಕ್ಷಾಮದ ಕಷ್ಟ ಮತ್ತು ದೀರ್ಘತೆಯಿಂದ ಮುಕ್ತಿಯನ್ನು ನೀಡುವನು. ಅದರ ಫಲವಾಗಿ

فَوَقَاهُمُ اللَّهُ شَرَّ ذَٰلِكَ الْيَوْمِ وَلَقَّاهُمْ نَضْرَةً وَسُرُورًا

ಆ ದಿನದ ವಿಪತ್ತಿನಿಂದ ಅಲ್ಲಾಹನು ಅವರನ್ನು ಕಾಪಾಡುವನು ಹಾಗೂ ಅವರಿಗೆ ಹರ್ಷೋಲ್ಲಾಸವನ್ನು ದಯಪಾಲಿಸುವನು. **(76:12)**

ನಾನು ಪುನಃ ಹೇಳುತ್ತೇನೆ, ಇಂದಿನ ಕಾಲದಲ್ಲಿ ಬಡವರಿಗೆ ಮತ್ತು ಹಸಿವೆಯಿಂದ ಬಳಲುವವರಿಗೆ ಸಹಾಯ ನೀಡುವ ಮೂಲಕ ಕ್ಷಾಮದ ಕಷ್ಟದಿಂದ ರಕ್ಷಿಸಲ್ಪಡುವಿರಿ. ನೀವು ಯಾವ ಬಾಹ್ಯ ಗೌರವಕ್ಕಾಗಿ ಪ್ರಯತ್ನಿಸುತ್ತೀರೋ ಸೃಷ್ಟಿಗಳ ಗೌರವ ಮತ್ತು ಸುಖಕ್ಕಾಗಿಯೂ ಪ್ರಯತ್ನ ಮಾಡುವ ಸೌಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ – ಆಮೀನ್.

**(ಹಖಾಯಿಖುಲ್ ಖುರ್‌ಆನ್; ಸಂಪುಟ 4, ಪುಟ 290 – 291)**

ಸಾಧ್ಯವಿರುವಷ್ಟು ಮಟ್ಟಿಗೆ ದೇವಸೃಷ್ಟಿಗಳ ಸೇವೆ ಮಾಡುತ್ತಿರುವುದು ಅಹ್ಮದಿಯಾ ಜಮಾಅತಿನ ವೈಶಿಷ್ಟ್ಯವಾಗಿದೆ. ನಮ್ಮ ಸಂಪನ್ಮೂಲಗಳನ್ನು ಹೊಂದಿಕೊಂಡು ನಾವು ಮಾನವರಿಗೆ ಎಷ್ಟು ಸೇವೆ ಮಾಡಬಲ್ಲೆವೋ ಅಷ್ಟು ಸೇವೆಯನ್ನು ಜಮಾಅತಿನ ವತಿಯಿಂದಲೂ ವೈಯಕ್ತಿಕವಾಗಿಯೂ

ಮಾಡಲಾಗುತ್ತಿದೆ. ಜಮಾಅತಿನ ಸದಸ್ಯರು ತಮಗೆ ದೊರೆತ ಅನುಕೂಲತೆಗಳಿಗೆ ಅನುಸಾರವಾಗಿ ಹಸಿವನ್ನು ಹೋಗಲಾಡಿಸಲು, ಬಡವರ ರೋಗ ಚಿಕಿತ್ಸೆಗಾಗಿ, ವಿದ್ಯಾಭ್ಯಾಸಕ್ಕೆ ಸಹಾಯವಾಗಿ, ಬಡ ಹೆಣ್ಣು ಮಕ್ಕಳ ಮದುವೆಗಾಗಿ ಜಮಾಅತಿನ ವ್ಯವಸ್ಥೆಯ ಅಧೀನದಲ್ಲಿ ನೀಡಲಾಗುವ ಸಹಾಯದಲ್ಲಿ ಭಾಗವಹಿಸುತ್ತಾರೆ. ಅವರು ಈ ರೀತಿ ಬೈಅತ್ ಪ್ರತಿಜ್ಞೆ ಈಡೇರಿಸುತ್ತಾರೆ ಮತ್ತು ಅವರು ಈಡೇರಿಸಬೇಕಾಗಿದೆ.

ತಮ್ಮ ರಾಜಕೀಯ ಉದ್ದೇಶಗಳಿಗೆ ಸಹಕರಿಸದ ಅಥವಾ ಅವರ ಮಾತುಗಳನ್ನು ಅನುಸರಿಸಲು ತಯಾರಿಲ್ಲದ ಕಾರಣಕ್ಕಾಗಿ ತಮ್ಮ ಹೆಚ್ಚುವರಿ ಕೃಷಿ ಉತ್ಪನ್ನಗಳನ್ನು ವ್ಯರ್ಥ ಮಾಡುತ್ತಾರಾದರೂ, ದುಃಖಿತರಾದ ಜನತೆಗಳ ಮೇಲೆ ಖರ್ಚು ಮಾಡದೆ, ಶಿಕ್ಷೆಯ ರೂಪದಲ್ಲಿ ಅವರನ್ನು ಹಸಿದಿರುವಂತೆ ಮತ್ತು ನಗ್ನರಾಗುವಂತೆ ಮಾಡುವ ಜನತೆಗಳು ಮತ್ತು ಸರಕಾರಗಳಂತೆ ಆಗದಿರಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ಅಲ್ಲಾಹನು ಅಹ್ಮದಿಯಾ ಜಮಾಅತಿಗೆ ಮೊದಲಿಗಿಂತ ಅಧಿಕವಾಗಿ ಜನರ ಸೇವೆ ಮಾಡಲು ಸೌಭಾಗ್ಯ ನೀಡಲಿ.

ನಾನು ಮತ್ತೊಂದು ಸಂಗತಿ ಹೇಳಬಯಸುತ್ತೇನೆ. ನಮ್ಮ ಜಮಾಅತಿನಿಂದ ಮಾನವೀಯ ಸೇವೆ ನಮ್ಮ ಶಕ್ತಿಯಾನುಸಾರ ನಡೆಸಲಾಗುತ್ತಿದೆ. ಜಮಾಅತಿನ ಕೆಲವು ನಿಷ್ಠಾವಂತರಿಗೆ ಅಲ್ಲಾಹನು ಸೃಷ್ಟಿ ಸೇವೆ ಮಾಡುವ ಸೌಭಾಗ್ಯ ನೀಡುತ್ತಾನೆ. ಅವರು ದೊಡ್ಡ ದೊಡ್ಡ ಸಂಖ್ಯೆಯಲ್ಲಿ ಹಣವನ್ನು ಕೊಡುತ್ತಾರೆ. ಅವುಗಳ ಮೂಲಕ ಮಾನವೀಯ ಸೇವೆ ನಡೆಸಲಾಗುತ್ತಿದೆ. ಅಲ್ಲಾಹನ ಅನುಗ್ರಹದಿಂದ ಆಫ್ರಿಕದಲ್ಲಿ, ರಬ್ವದಲ್ಲಿ ಮತ್ತು ಖಾದಿಯಾನಿನಲ್ಲಿ ತಮ್ಮ ಸೇವೆಯನ್ನು ಜಮಾಅತ್ ಸೇವೆಗಾಗಿ ಅರ್ಪಿಸಿದ ವಾಕಿಫ್ ಡಾಕ್ಟರ್‌ಗಳು ಮತ್ತು ಅಧ್ಯಾಪಕರು ಇದ್ದಾರೆ. ನಾನು ಪ್ರತಿಯೊಬ್ಬ ಅಹ್ಮದೀ ಡಾಕ್ಟರ್, ಅಹ್ಮದೀ ಟೀಚರ್ ಹಾಗೂ ಅಹ್ಮದೀ ನ್ಯಾಯವಾದಿಯೊಂದಿಗೆ ಮತ್ತು ತಮ್ಮ ಉದ್ಯೋಗದ ಕಾರಣದಿಂದ ಯಾವುದಾದರೂ ರೀತಿಯಲ್ಲಿ ಜನರಿಗೆ ಸೇವೆ ಮಾಡಲು ಸಾಧ್ಯವಿರುವವರೊಂದಿಗೆ ಹೀಗೆ ಹೇಳಲು ಬಯಸುತ್ತೇನೆ – ಅವರು ಬಡವರ ಮತ್ತು ಸೇವೆ ಅವಶ್ಯವಾಗಿರುವವರ ಸೇವೆ ಮಾಡಲು ಪ್ರಯತ್ನಿಸಬೇಕು. ಅದರ ಫಲವಾಗಿ ಅಲ್ಲಾಹನು ನಿಮ್ಮ ಸಂಪತ್ತಿನಲ್ಲೂ ಸಂತಾನದಲ್ಲೂ ಅನುಗ್ರಹ ನೀಡುವನು – ಇನ್‌ಶಾ ಅಲ್ಲಾಹ್. ನಾವು ಈ ಕಾಲದ ಇಮಾಮರ ಬೈಅತ್ ಮಾಡಿದ್ದೇವೆ. ನಮ್ಮ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸುವುದು ನಮಗೆ ಕಡ್ಡಾಯವಾಗಿದೆ ಎಂಬ ನಿರ್ಧಾರದೊಂದಿಗೆ ಸೇವೆ ಮಾಡುವುದಾದರೆ ಅಲ್ಲಾಹನು ನಿಮ್ಮ ಮೇಲೆ ನಿಮ್ಮಿಂದ ನಿಯಂತ್ರಿಸಲಾರದಷ್ಟು ಅನುಗ್ರಹಗಳ ಮಳೆ ಸುರಿಯುವನು.

## ಹಝ್ರತ್ ಮಸೀಹ್ ಮೌಊದ್‌ರಿಗೆ[ಅ]

## ಮಾನವರೊಂದಿಗೆ ಇದ್ದ ಸಹಾನುಭೂತಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನನ್ನ ಸ್ಥಿತಿ ಹೇಗಿದೆ ಎಂದರೆ ನಾನು ನಮಾಝ್ ಮಾಡುತ್ತಿರುವಾಗ ಯಾರಿಗಾದರೂ ನೋವು ಉಂಟಾಗಿ ಅವನ ಕೂಗು ನನ್ನ ಕಿವಿಗೆ ಕೇಳಿಸಿದರೆ ನಾನು ನಮಾಝ್ ಮಾಡುವುದನ್ನು ಬಿಟ್ಟು ಅವನಿಗೆ ಏನಾದರೂ ಸಹಾಯ ಮಾಡಲು ಸಾಧ್ಯವಿದ್ದರೆ ಸಹಾಯ ಮಾಡಲು ಇಚ್ಛಿಸುತ್ತೇನೆ. ಯಾವನಾದರೂ ಸಹೋದರನ ಕಷ್ಟದ ಕಾಲದಲ್ಲಿ ಅವನಿಗೆ ಸಹಾಯ ಮಾಡದೆ ಇರುವುದು ಸುಸ್ವಭಾವಕ್ಕೆ ವಿರುದ್ಧವಾಗಿದೆ. ಬೇರೇನೂ ನಿಮಗೆ ಸಹಾಯ ಮಾಡಲು ಸಾಧ್ಯವಿಲ್ಲದಿದ್ದರೆ ಅವನಿಗಾಗಿ ಪ್ರಾರ್ಥನೆಯನ್ನಾದರೂ ಮಾಡಿರಿ. ನೀವು ನಿಮ್ಮವರೊಂದಿಗೆ ಮಾತ್ರವಲ್ಲ, ಅನ್ಯರೊಂದಿಗೂ ಹಿಂದುಗಳೊಂದಿಗೂ ಇದೇ ರೀತಿಯ ಸುಸ್ವಭಾವಗುಣದಿಂದ ವರ್ತಿಸಿರಿ. ಅವರೊಂದಿಗೆ ಸಹಾನುಭೂತಿಯಿಂದ ವರ್ತಿಸಿರಿ. ನೀವು ನಿರ್ಲಕ್ಷ್ಯದಿಂದ ವರ್ತಿಸಬಾರದು.

ಒಮ್ಮೆ ನಾನು ಅಬ್ದುಲ್ ಕರೀಮ್ ಎಂಬ ಪಟವಾರಿಯೊಂದಿಗೆ ಹೊರಗೆ ವಾಯು ವಿಹಾರಕ್ಕೆ ಹೋಗಿದ್ದೆನು. ಅಬ್ದುಲ್ ಕರೀಮ್ ನನಗಿಂತ ಸ್ವಲ್ಪ ಮುಂದೆ ನಡೆಯುತ್ತಿದ್ದರು. ನಾನು ಹಿಂದೆ ಇದ್ದೆ. ಮಾರ್ಗ ಮಧ್ಯದಲ್ಲಿ ಒಬ್ಬ 70–75 ವರ್ಷದ ವೃದ್ಧೆ ಬಂದು ಪತ್ರವನ್ನು ಓದಲು ಹೇಳಿದಾಗ ಅಬ್ದುಲ್ ಕರೀಮ್ ಆಕೆಯನ್ನು ಧಿಕ್ಕರಿಸಿ ಮುಂದೆ ಹೋದರು. ನನ್ನ ಮನನೊಂದಿತು. ಆಕೆ ಆ ಪತ್ರವನ್ನು ನನಗೆ ಕೊಟ್ಟಳು. ನಾನು ಅದನ್ನು ಓದಿ ಚೆನ್ನಾಗಿ ವಿವರಿಸಿದೆನು. ಆಗ ಅಬ್ದುಲ್ ಕರೀಮ್ ಲಜ್ಜಿತರಾದರು. ಅವರು ನನಗಾಗಿ ನಿಂತು ಕೊಳ್ಳಬೇಕಾಯಿತು ಮತ್ತು ಪುಣ್ಯದಿಂದಲೂ ವಂಚಿತರಾದರು.

**(ಮಲ್‌ಫೂಝಾತ್; ಸಂಪುಟ 4, ಪುಟ 82 – 83. ಹೊಸ ಮುದ್ರಣ)**

ಅಲ್ಲಾಹನ ದಾಸರಿಗೆ ದಯೆದೋರಿರಿ. ಅವರಿಗೆ ನಾಲಗೆ, ಕೈ ಅಥವಾ ಬೇರೆ ರೀತಿಯಲ್ಲಿ ದೌರ್ಜನ್ಯ ಮಾಡಬೇಡಿರಿ. ಸೃಷ್ಟಿಗಳ ಏಳಿಗೆಗಾಗಿ ಯಾವಾಗಲೂ ಪ್ರಯತ್ನ ಮಾಡುತ್ತಾ ಇರಿ. ಯಾರೊಂದಿಗೂ ಅಹಂಕಾರದಿಂದ ವರ್ತಿಸಬೇಡಿರಿ – ನಿಮ್ಮ ಅಧೀನರಾಗಿರುವವರೊಂದಿಗೆ ಕೂಡ. ನಿಮ್ಮನ್ನು ಬೈಯ್ಯುವವರಿಗೆ ಬೈಯ್ಯಬೇಡಿರಿ. ನೀವು ವಿನೀತರೂ ಸಹನೆಯುಳ್ಳವರೂ ಒಳ್ಳೆಯ ಸಂಕಲ್ಪ ಹೊಂದಿದವರೂ ಅಲ್ಲಾಹನ ಸೃಷ್ಟಿಗಳಿಗೆ ಹಿತೈಷಿಯಾಗಿರುವವರೂ ಆಗಿರಿ. ಹಾಗೆ ಆಗುವಿರಾದರೆ ಅಲ್ಲಾಹನಿಂದ ಅಂಗೀಕರಿಸಲ್ಪಡುವಿರಿ..... ನೀವು ದೊಡ್ಡವರಾಗಿದ್ದು ಚಿಕ್ಕವರ ಮೇಲೆ ದಯೆದೋರಿರಿ. ಅವರನ್ನು ಹೀನೈಸಬೇಡಿರಿ. ನೀವು ವಿದ್ವಾಂಸರಾಗಿ ಅಜ್ಞಾನಿಗಳಿಗೆ ಉಪದೇಶಿಸಿರಿ. ನೀವು ನಿಮ್ಮ ಜ್ಞಾನವನ್ನು ಪ್ರದರ್ಶಿಸಲು ಅವರನ್ನು ಅಪಮಾನಿಸಬೇಡಿರಿ. ಶ್ರೀಮಂತರಾಗಿ ಬಡವರ ಸೇವೆ

ಮಾಡಿರಿ. ನೀವು ಸ್ವೇಚ್ಛೆಯಿಂದ ಅವರ ಮೇಲೆ ಅಹಂಕಾರ ತೋರಿಸಬೇಡಿರಿ. ನೀವು ನಾಶದ ಮಾರ್ಗದ ಕುರಿತು ಭಯಪಡಿರಿ.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 11 – 12)**

ಜನರು ನಿಮಗೆ ಹಲವು ರೀತಿಗಳಲ್ಲಿ ಕಷ್ಟಕೊಡುವರು. ಆದರೆ ನಮ್ಮ ಜಮಾಅತಿನ ಜನರು ರೊಚ್ಚಿಗೇಳಬಾರದು. ನೀವು ಆವೇಶದಿಂದ ಜನರಿಗೆ ನೋವುಂಟಾಗುವ ಪದಗಳನ್ನು ಬಳಸಬಾರದು. ಅಲ್ಲಾಹನಿಗೆ ಹಾಗೆ ವರ್ತಿಸುವವರು ಇಷ್ಟವಲ್ಲ. ನಮ್ಮ ಜಮಾಅತನ್ನು ಅಲ್ಲಾಹನು ಒಂದು ಮಾದರಿಯನ್ನಾಗಿ ಮಾಡಲು ಬಯಸುತ್ತಾನೆ.

ಅಲ್ಲಾಹನು ಮುತ್ತಖೀ (ಭಯಭಕ್ತಿ ಉಳ್ಳವನನ್ನು) ಪ್ರೀತಿಸುತ್ತಾನೆ. ಅಲ್ಲಾಹನ ಮಹತ್ವವನ್ನು ನೆನಪಿಸಿ ಅವನಿಗೆ ಭಯಪಡಿರಿ. ಎಲ್ಲರೂ ಅವನ ದಾಸರೆಂದು ನೆನಪಿಡಿರಿ. ಯಾರ ಮೇಲೆಯೂ ದೌರ್ಜನ್ಯ ಮಾಡಬೇಡಿರಿ. ಯಾರ ಮೇಲೆಯೂ ಉದ್ಧಟತನದಿಂದ ವರ್ತಿಸಬೇಡಿರಿ ಮತ್ತು ತಾತ್ಸಾರದಿಂದ ಅನ್ಯರನ್ನು ನೋಡಬೇಡಿರಿ. ಜಮಾಅತಿನಲ್ಲಿ ಒಬ್ಬ ವ್ಯಕ್ತಿ ಕೊಳಕನಾದರೆ ಎಲ್ಲರನ್ನೂ ಕೊಳಕರನ್ನಾಗಿ ಮಾಡುವನು. ನೀವು ಉರಿಯನ್ನು ಅನುಭವಿಸುವಿರಾದರೆ ನೀವು ನಿಮ್ಮ ಹೃದಯವನ್ನು ಪರಿಶೀಲಿಸಿರಿ. ಈ ಉರಿ ಎಲ್ಲಿಂದ ಬರುತ್ತದೆ ಎಂಬುದನ್ನು ನೋಡಿರಿ. ಇದು ಬಹಳ ಸಂದಿಗ್ಧ ಸ್ಥಿತಿಯಾಗಿದೆ.

**(ಮಲ್‌ಫೂಝಾತ್; ಸಂಪುಟ 1, ಪುಟ 8 – 9)**

ನೀವು ಹೇಗಾಗಬೇಕೆಂದರೆ, ನಿಮ್ಮ ಸತ್ಯ, ನಿಮ್ಮ ನಿಷ್ಠೆ ಮತ್ತು ನಿಮ್ಮ ನೋವು ಆಕಾಶಕ್ಕೆ ತಲಪಬೇಕು. ಯಾರ ಹೃದಯ ಸತ್ಯ ಮತ್ತು ಪ್ರೀತಿಯಿಂದ ತುಂಬಿದೆಯೋ ಅಂತಹವನನ್ನು ಅಲ್ಲಾಹನು ರಕ್ಷಿಸುತ್ತಾನೆ ಮತ್ತು ಅವನಿಗೆ ಅನುಗ್ರಹ ನೀಡುತ್ತಾನೆ. ಅವನು ಹೃದಯಗಳನ್ನು ಇಣುಕಿ ನೋಡುತ್ತಾನೆ. ಅವನು ಬಾಹ್ಯ ಮಾತುಗಳಿಂದ ಪ್ರಭಾವಿತನಾಗುವುದಿಲ್ಲ. ಯಾರ ಹೃದಯವು ಪ್ರತಿಯೊಂದು ಕೊಳೆ ಮತ್ತು ಮಲಿನತೆಯಿಂದ ಮುಕ್ತವಾಗಿದೆಯೋ ಅದರಲ್ಲಿ ಅಲ್ಲಾಹನು ಇಳಿದು ಬಂದು ತನ್ನ ಮನೆಯನ್ನಾಗಿ ಮಾಡುತ್ತಾನೆ.

**(ಮಲ್‌ಫೂಝಾತ್; ಸಂಪುಟ 3, ಪುಟ 181 – ಹೊಸಮುದ್ರಣ)**

ನಾನು ಪುನಃ ಹೇಳುತ್ತೇನೆ – ಯಾರು ಜನರಿಗೆ ಉಪಕಾರ ಮಾಡುತ್ತಾರೋ, ವಿಶ್ವಾಸ, ಸತ್ಯ ಮತ್ತು ನಿಷ್ಠೆಯಲ್ಲಿ ಪರಿಪೂರ್ಣತೆ ಹೊಂದಿರುತ್ತಾರೋ ಅವರು ನಿಶ್ಚಯವಾಗಿಯೂ ರಕ್ಷಿಸಲ್ಪಡುವರು. ನೀವು ನಿಮ್ಮೊಳಗೆ ಈ ಗುಣಗಳನ್ನು ಹೊಂದಿರಿ.

**(ಮಲ್‌ಫೂಝಾತ್; ಸಂಪುಟ 4, ಪುಟ 184 – ಹೊಸಮುದ್ರಣ)**

ನಿಮ್ಮ ಅಂತರಂಗ ಮತ್ತು ಬಹಿರಂಗ ಒಂದೇ ಆಗುವ ತನಕ ನೀವು ಅಲ್ಲಾಹನಿಂದ ಅಂಗೀಕರಿಸಲ್ಪಡಲಾರಿರಿ. ನೀವು ದೊಡ್ಡವರಾಗಿದ್ದು ಚಿಕ್ಕವರ ಮೇಲೆ ದಯೆದೋರಿರಿ. ಅವರನ್ನು ಹೀನೈಸಬೇಡಿರಿ. ನೀವು ವಿದ್ವಾಂಸರಾಗಿ ಅಜ್ಞಾನಿಗಳಿಗೆ ಉಪದೇಶಿಸಿರಿ. ನೀವು ನಿಮ್ಮ ಜ್ಞಾನವನ್ನು ಪ್ರದರ್ಶಿಸಲು ಅವರನ್ನು ಅಪಮಾನಿಸಬೇಡಿರಿ. ಶ್ರೀಮಂತರಾಗಿ ಬಡವರ ಸೇವೆ ಮಾಡಿರಿ. ನೀವು ಸ್ವೇಚ್ಛೆಯಿಂದ ಅವರ ಮೇಲೆ ಅಹಂಕಾರ ತೋರಿಸಬೇಡಿರಿ. ನೀವು ನಾಶದ ಮಾರ್ಗಗಳ ಕುರಿತು ಭಯಪಡಿರಿ. ಅಲ್ಲಾಹನಿಗೆ ಹೆದರುತ್ತಾ ಇರಿ. ತಖ್ವಾ ಹೊಂದಿರಿ..... ಅಲ್ಲಾಹನು ಹೇಳಿದ ಮತ್ತು ನಾನು ಉಪದೇಶಿಸಿದ ಮಾತುಗಳನ್ನು ಅಂಗೀಕರಿಸದವನು ಎಷ್ಟು ದುರದೃಷ್ಟಶಾಲಿ! ನೀವು ಆಕಾಶದಲ್ಲಿ ಅಂಗೀಕಾರ ಪಡೆಯಲು ಬಯಸುವಿರಾದರೆ ಒಂದೇ ಹೊಟ್ಟೆಯಿಂದ ಜನಿಸಿದ ಇಬ್ಬರು ಸಹೋದರರ ಹಾಗೆ ಆಗಿರಿ. ತನ್ನ ಸಹೋದರನ ತಪ್ಪುಗಳನ್ನು ಹೆಚ್ಚು ಕ್ಷಮಿಸುವವನೇ ಅಲ್ಲಾಹನ ದೃಷ್ಟಿಯಲ್ಲಿ ಆದರಣೀಯನು. ಹಠಮಾರಿಯಾಗಿರುವವನೂ ಕ್ಷಮಿಸದವನೂ ದುರದೃಷ್ಟಶಾಲಿ ಆಗಿದ್ದಾನೆ.

**(ಕಿಶ್ತೀನೂಹ್; ರೂಹಾನೀ ಖಝಾಇನ್, ಸಂಪುಟ 19, ಪುಟ 11 – 12)**

ಅಲ್ಲಾಹನ ಸೃಷ್ಟಿಗಳೊಂದಿಗೆ ಸಹಾನುಭೂತಿ ತೋರಿಸುವುದು ಬಹಳ ದೊಡ್ಡ ಸಂಗತಿಯಾಗಿದೆ. ಅಲ್ಲಾಹನು ಅದನ್ನು ಬಹಳ ಇಷ್ಟಪಡುತ್ತಾನೆ. ಅವನ ಮೇಲೆ ಅಲ್ಲಾಹನು ಸಹಾನುಭೂತಿ ಹೊಂದುವನು ಎಂಬುದಕ್ಕಿಂತ ಮಹತ್ವಪೂರ್ಣವಾದುದು ಬೇರೇನಿದೆ. ಸಾಮಾನ್ಯವಾಗಿ ಲೋಕದಲ್ಲಿ ಹೀಗೆಯೇ ಆಗುತ್ತದೆ. ಒಬ್ಬ ಸ್ನೇಹಿತನ ಬಳಿಗೆ ಒಬ್ಬನು ತನ್ನ ಸೇವಕನನ್ನು ಕಳುಹಿಸಿದರೆ ಆ ಸ್ನೇಹಿತನು ಈ ಸೇವಕನನ್ನು ನಿರ್ಲಕ್ಷಿಸಿದರೆ ಆ ಸೇವಕನ ಮಾಲಿಕನು ತನ್ನ ಸ್ನೇಹಿತನ ವರ್ತನೆಯಿಂದ ಸಂತೋಷಪಡುವನೆ? ಎಂದೂ ಇಲ್ಲ. ಸತ್ಯದಲ್ಲಿ ಆ ಸ್ನೇಹಿತ ಆ ಸೇವಕನಿಗೆ ಯಾವುದೇ ಕಷ್ಟ ನೀಡಿರಲಿಲ್ಲ. ಆದರೆ ಆ ಸೇವಕನ ಜೊತೆ ಉತ್ತಮವಾಗಿ ವರ್ತಿಸಿದ್ದರೆ ಆತನ ಮಾಲಿಕನೊಂದಿಗೆ ಉತ್ತಮವಾಗಿ ವರ್ತಿಸಿದಂತೆ ಆಗುತ್ತಿತ್ತು. ಇದೇ ರೀತಿ ತನ್ನ ಸೃಷ್ಟಿಗಳೊಂದಿಗೆ ಕೆಟ್ಟ ರೀತಿಯಲ್ಲಿ ವರ್ತಿಸಿದರೆ ಅಲ್ಲಾಹನಿಗೆ ಇಷ್ಟವಾಗುವುದಿಲ್ಲ. ಅವನು ತನ್ನ ಸೃಷ್ಟಿಗಳನ್ನು ಬಹಳ ಪ್ರೀತಿಸುತ್ತಾನೆ. ಯಾರು ಅಲ್ಲಾಹನ ಸೃಷ್ಟಿಗಳೊಂದಿಗೆ ಸಹಾನುಭೂತಿ ತೋರಿಸುತ್ತಾನೋ ಅವನು ಅಲ್ಲಾಹನನ್ನು ಸಂಪ್ರೀತನನ್ನಾಗಿ ಮಾಡುತ್ತಾನೆ.

**(ಮಲ್‌ಫೂಝಾತ್; ಸಂಪುಟ 4, ಪುಟ 215 – 216, ಹೊಸಮುದ್ರಣ)**

ಹಝ್ರತ್ ಮಸೀಹ್ ಮೌಊದ್‌ರ(ಅ) ಉಪದೇಶಗಳ ಪ್ರಕಾರ ನಡೆಯಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ನಾವು ಅವರೊಂದಿಗೆ ಮಾಡಿದ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸುವ ಸೌಭಾಗ್ಯವನ್ನೂ ದಯಪಾಲಿಸಲಿ.

**(ಖುತ್‌ಬ ಜುಮುಅ 12–9–2003; ಮಸ್ಜಿದ್ ಫಝ್ಲ್, ಲಂಡನ್)**

# ಬೈಅತಿನ ಹತ್ತನೆಯ ಶರತ್ತು

**ಉತ್ತಮ ಕೆಲಸಗಳಲ್ಲಿ ವಿಧೇಯನಾಗಿರುವುದಾಗಿ ಒಪ್ಪಿಕೊಂಡು ಈ ವಿನೀತನೊಂದಿಗೆ (ಹಝ್ರತ್ ಅಹ್ಮದ್‌ರೊಂದಿಗೆ) ಸ್ಥಾಪಿಸಿದ ಭ್ರಾತೃತ್ವದ ಸಂಬಂಧವು ಅಲ್ಲಾಹನ ತೃಪ್ತಿಯನ್ನು ಮಾತ್ರ ಆಶಿಸಿಕೊಂಡು ಮಾಡಿದುದಾಗಿರಬೇಕು ಮತ್ತು ಮೃತನಾಗುವ ತನಕ ಅದನ್ನು ನಿಷ್ಠೆಯಿಂದ ಪಾಲಿಸಬೇಕು. ಕೌಟುಂಬಿಕ ಸಂಬಂಧಗಳು, ಇತರ ಲೌಕಿಕ ಸಂಬಂಧಗಳು ಮತ್ತು ಇತರ ಎಲ್ಲ ರೀತಿಯ ಸೇವಾ ಸ್ಥಿತಿಗಳಲ್ಲಿ ಕಾಣಲಾಗದಂತಹ ಉನ್ನತ ಮಟ್ಟದ ಸಂಬಂಧವನ್ನು ಈ ಭ್ರಾತೃ ಸಂಬಂಧವು ಹೊಂದಿರಬೇಕು.**

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಆಯಾಕಾಲದ ಖಲೀಫರೊಂದಿಗೆ ಭ್ರಾತೃತ್ವದ ಸಂಬಂಧ ಸ್ಥಾಪಿಸುವುದು ಅತ್ಯಾವಶ್ಯಕವಾಗಿದೆ

ಈ ಶರತ್ತಿನ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮಿಂದ ಹೀಗೆ ಪ್ರತಿಜ್ಞೆ ಮಾಡಿಸುತ್ತಿದ್ದಾರೆ. ಈ ಬೈಅತ್ ವ್ಯವಸ್ಥೆಯಲ್ಲಿ ಸೇರಿಕೊಂಡು ನೀವು ನನ್ನೊಂದಿಗೆ ಭ್ರಾತೃತ್ವದ ಸಂಬಂಧವನ್ನು ಸ್ಥಾಪಿಸುತ್ತಾ ಇರುವಿರಿ. ಏಕೆಂದರೆ ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ಆದರೆ ಇಲ್ಲಿ ಸ್ಥಾಪಿತವಾಗುವ ಪ್ರೀತಿ ಮತ್ತು ಭ್ರಾತೃತ್ವದ ಸಂಬಂಧ ಅದಕ್ಕಿಂತ ಮೇಲಿನ ಮಟ್ಟದ್ದಾಗಿದೆ. ಏಕೆಂದರೆ ಇಲ್ಲಿ ಸಮತೆಯ ಸಂಬಂಧವು ಸ್ಥಾಪನೆ ಆಗುತ್ತಾ ಇಲ್ಲ. ಬದಲಿಗೆ, ಆಗಮಿಸಲಿರುವ ಮಸೀಹರನ್ನು ನಂಬಬೇಕೆಂದು ಅಲ್ಲಾಹನೂ ಅವನ ಸಂದೇಶವಾಹಕರೂ ನೀಡಿದ ಆಜ್ಞೆಯನ್ನು ನೀವು ಅಂಗೀಕರಿಸುತ್ತಿರುವಿರಿ. ಈ ಸಂಬಂಧವನ್ನು ಅಲ್ಲಾಹನಿಗಾಗಿ ಸ್ಥಾಪಿಸುತ್ತಿದ್ದೇನೆ ಎಂದು ನೀವು ಪ್ರತಿಜ್ಞೆ ಮಾಡಿರುತ್ತೀರಿ. ಅಲ್ಲಾಹನ ಧರ್ಮವನ್ನು ಜಯಶಾಲಿಯನ್ನಾಗಿ ಮಾಡಲು ಮತ್ತು ಇಸ್ಲಾಮ್ ಧರ್ಮವನ್ನು ಲೋಕದಾದ್ಯಂತ ತಲಪಿಸಲು, ಹರಡಲು ನೀವು ಈ ಸಂಬಂಧವನ್ನು ಸ್ಥಾಪಿಸುತ್ತಾ ಇದ್ದೀರಿ. ಈ ಸಂಬಂಧ ದೃಢವಾಗಲು ನೀವು ಉತ್ತಮ ಕೆಲಸಗಳಲ್ಲಿ ವಿಧೇಯನಾಗಿರುವುದಾಗಿ ಪ್ರತಿಜ್ಞೆ ಮಾಡಿ ಆ ಪ್ರತಿಜ್ಞೆಯನ್ನು ಮೃತನಾಗುವ ತನಕ ಪಾಲಿಸಬೇಕು. ಈ ಸಂಬಂಧ ಒಂದೇ ಕಡೆ ನಿಲ್ಲದೆ ದಿನಗಳೆದಂತೆ ಹೆಚ್ಚು ಬಲಿಷ್ಠವೂ ಉನ್ನತಮಟ್ಟದ್ದೂ ಆಗಬೇಕು. ಅದರ ಎದುರಿಗೆ ಎಲ್ಲ ಲೌಕಿಕ ಸಂಬಂಧಗಳು, ಸ್ನೇಹಗಳು ಕೆಳಮಟ್ಟದವುಗಳಾಗಿರಬೇಕು. ಈ ಸಂಬಂಧ ಅತುಲ್ಯವೂ ದೃಢತೆಯುಳ್ಳದ್ದೂ ಆಗಿರಬೇಕು. ಆ ಸಂಬಂಧದೆದುರಿಗೆ ಬೇರೆ ಎಲ್ಲ ಸಂಬಂಧಗಳು ಉದ್ದೇಶ ರಹಿತವಾಗಿ ತೋರಬೇಕು. ಕುಟುಂಬ ಸಂಬಂಧದಲ್ಲಿ ಕೊಡುವುದು, ತೆಗೆದುಕೊಳ್ಳುವುದು, ಕೆಲವು ಸಲ ಒಪ್ಪುವುದು, ಕೆಲವು ಸಲ ಒಪ್ಪಿಸುವುದು ಎಂಬ ತತ್ವ ಜಾರಿಯಲ್ಲಿರುತ್ತದೆ ಎಂಬ ಯೋಚನೆ

ನಿಮಗೆ ಉಂಟಾಗಬಹುದು. ಆದ್ದರಿಂದ ತಿಳಿದುಕೊಳ್ಳಬೇಕಾದ ಸಂಗತಿ ಏನೆಂದರೆ, ಇಲ್ಲಿ ನಿಮ್ಮ ಸಂಬಂಧ ಗುಲಾಮನಂತಹ  ಸೇವಕನದ್ದೂ ಆಗಿದೆ ಅಥವಾ ಅದಕ್ಕಿಂತಲೂ ಮಿಗಿಲಾದದ್ದು ಆಗಬೇಕು. ನೀವು ಯಾವುದೇ ಅತೃಪ್ತಿ ಸೂಚಿಸದೆ ವಿಧೇಯರಾಗಬೇಕಾಗಿದೆ. ನೀವು ಎಂದೂ "ಈ ಕೆಲಸ ಈಗ ಆಗಲಾರದು ಅಥವಾ ಈಗ ಮಾಡಲಾರೆ" ಎಂದು ಹೇಳಬಾರದು. ನೀವು ಬೈಅತ್ ಮಾಡಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ವ್ಯವಸ್ಥೆಗೆ ಸೇರಿರುವಾಗ ನೀವು ನಿಮ್ಮ ಎಲ್ಲವನ್ನೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕೊಟ್ಟಿರುತ್ತೀರಿ. ನೀವು ಅವರ ಆಜ್ಞೆಗಳನ್ನು ಪಾಲಿಸಬೇಕಾಗಿದೆ. ಅವರ ಉಪದೇಶಗಳನ್ನು ಅನುಸರಿಸಬೇಕಾಗಿದೆ. ಅವರು ನಿಧನ ಹೊಂದಿದ ನಂತರ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಗಿರುವುದರಿಂದ ಆಯಾಕಾಲದ ಖಲೀಫರ ಆಜ್ಞೆಗಳನ್ನೂ ಮಾರ್ಗದರ್ಶನಗಳನ್ನೂ ಪಾಲಿಸಬೇಕಾದುದು ನಿಮ್ಮ ಕರ್ತವ್ಯವಾಗಿದೆ. ಆದರೆ ಸೇವಕ ಅಥವಾ ನೌಕರ ಕೆಲಸಮಾಡಲು ನಿರ್ಬಂಧಿತನಾಗಿರುತ್ತಾನೆ ಮತ್ತು ಸೇವೆ ಮಾಡಲೇ ಬೇಕಾಗುತ್ತದೆ ಹಾಗು ಸೇವಕ ಕೆಲವು ಬಾರಿ ಗೊಣಗುತ್ತಲೂ ಇರುತ್ತಾನಲ್ಲವೇ? ಎಂದು ನೀವು ಯೋಚಿಸಬಾರದು. ಯಾವಾಗಲೂ ನೆನಪಿಡಿರಿ, ಬೈಅತ್ ಮಾಡುವವನು ಸೇವಕನ ಸ್ಥಿತಿಯಲ್ಲಿರುತ್ತಾನಾದರೂ ಅವನ ಸ್ಥಿತಿ ಅವನಿಗಿಂತ ಮೇಲಿನ ಮಟ್ಟದ್ದಾಗಿರುತ್ತದೆ. ಏಕೆಂದರೆ ಅಲ್ಲಾಹನಿಗಾಗಿ ಭ್ರಾತೃತ್ವದ ಸಂಬಂಧವನ್ನು ಸ್ಥಾಪಿಸಲಾಗಿದೆ. ಅಲ್ಲಾಹನಿಗಾಗಿ ವಿಧೇಯತೆಯ ಪ್ರತಿಜ್ಞೆಯನ್ನೂ ಮಾಡಲಾಗಿದೆ. ಆ ಕಾರಣದಿಂದ ಬಲಿದಾನದ ಪ್ರತಿಜ್ಞೆ ಸಹ ಇದೆ. ಮನುಷ್ಯನು ಸಂತೋಷದಿಂದ ಬಲಿದಾನ ಮಾಡುವಾಗಲೇ ಬಲಿದಾನದ ಪ್ರತಿಫಲ ಲಭಿಸುತ್ತದೆ. ಬೈಅತಿನ ಹತ್ತನೆಯ ಶರತ್ತಿನ ಕುರಿತು ನೀವು ಯೋಚಿಸುತ್ತಾ ಹೋದ ಹಾಗೆ ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರೀತಿಯಲ್ಲಿ ಮುಳುಗುತ್ತಾ ಹೋಗುವಿರಿ. ನೀವು ಜಮಾಅತಿನ ವ್ಯವಸ್ಥೆಗೆ ಬದ್ಧರಾಗಿ ನಿಮ್ಮನ್ನು ಕಾಣುವಿರಿ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ:

يَاَيُّهَا النَّبِيُّ اِذَا جَاءَكَ الْمُؤْمِنٰتُ يُبَايِعْنَكَ عَلٰٓى اَنْ لَّا يُشْرِكْنَ بِاللّٰهِ شَيْئًا وَّلَا يَسْرِقْنَ وَلَا يَزْنِيْنَ وَلَا يَقْتُلْنَ اَوْلَادَهُنَّ وَلَا يَاْتِيْنَ بِبُهْتَانٍ يَّفْتَرِيْنَهٗ بَيْنَ اَيْدِيْهِنَّ وَاَرْجُلِهِنَّ وَلَا يَعْصِيْنَكَ فِيْ مَعْرُوْفٍ فَبَايِعْهُنَّ وَاسْتَغْفِرْ لَهُنَّ اللّٰهَ ۗ اِنَّ اللّٰهَ غَفُوْرٌ رَّحِيْمٌ

ಹೇ ಪ್ರವಾದಿ, ಸತ್ಯವಿಶ್ವಾಸಿನಿಯರು ನಿನ್ನ ಬಳಿಗೆ ಬಂದು ತಾವು ಅಲ್ಲಾಹನಿಗೆ ಸಹಭಾಗಿತ್ವವನ್ನು ಕಲ್ಪಿಸಲಾರೆವು, ಕದಿಯಲಾರೆವು, ವ್ಯಭಿಚರಿಸಲಾರೆವು, ತಮ್ಮ ಸಂತಾನಗಳನ್ನು ಕೊಲ್ಲಲಾರೆವು, ಉದ್ದೇಶಪೂರ್ವಕವಾಗಿ ಸುಳ್ಳು ಆರೋಪವನ್ನು ಹೊರಿಸಲಾರೆವು ಮತ್ತು ಯಥೋಚಿತವಾದ ಯಾವುದೇ ವಿಚಾರದಲ್ಲಿ ನಿಮಗೆ ಅವಿಧೇಯತೆ ತೋರಿಸಲಾರೆವು ಎಂಬ ನಿಬಂಧನೆಗಳೊಂದಿಗೆ ನಿಮ್ಮೊಡನೆ ಬೈಅತ್ (ಅನುಸರಣೆ ಪ್ರತಿಜ್ಞೆ) ಮಾಡಲು ಬಯಸಿದರೆ, ನೀನು ಅವರ ಅನುಸರಣೆಯ ಪ್ರತಿಜ್ಞೆಯನ್ನು ಸ್ವೀಕರಿಸು ಹಾಗೂ ಅವರ ಪಾಪ ವಿಮುಕ್ತಿಗೋಸ್ಕರ

ಪ್ರಾರ್ಥಿಸು. ಖಂಡಿತವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ. **(60:13)**

ಈ ವಚನದಲ್ಲಿ ಸ್ತ್ರೀಯರಿಂದ ಹೀಗೆ ಪ್ರತಿಜ್ಞೆ ಮಾಡಿಸಲು ಒತ್ತಿ ಹೇಳಲಾಗಿದೆ: ಶಿರ್ಕ್ (ಬಹುದೇವಾರಾಧನೆ) ಮಾಡಲಾರೆವು, ಕಳ್ಳತನ ಮಾಡಲಾರೆವು, ವ್ಯಭಿಚಾರ ಮಾಡಲಾರೆವು, ಮಕ್ಕಳನ್ನು ಕೊಲ್ಲಲಾರೆವು (ಎಂದರೆ ಅವರ ತರಬೇತಿ ಬಗ್ಗೆ ನಿಗಾವಹಿಸುವೆವು) ಯಾರ ವಿರುದ್ಧವೂ ಸುಳ್ಳು ಆರೋಪ ಮಾಡಲಾರೆವು, ಯಥೋಚಿತವಾದ (ಎಂದರೆ ಉತ್ತಮವಾದ) ಕೆಲಸಗಳಲ್ಲಿ ಅವಿಧೇಯರಾಗಲಾರೆವು.

ಇಲ್ಲಿ ಒಂದು ಪ್ರಶ್ನೆ ಉದಿಸುತ್ತದೆ. ಅಲ್ಲಾಹನಿಂದ ನೇಮಿತ ಪ್ರವಾದಿಗಳು ಅನುಚಿತವಾದ ಆಜ್ಞೆಗಳನ್ನು ನೀಡಬಲ್ಲರೇ? ಪ್ರವಾದಿ ಅನುಚಿತ ಆಜ್ಞೆಗಳನ್ನು ನೀಡಬಲ್ಲರಾದರೆ ಅವರ ಖಲೀಫರು ಸಹ ಅನುಚಿತ ಆಜ್ಞೆ ನೀಡಬಲ್ಲರು. ಸ್ಪಷ್ಟವಾಗಿ ಮನವರಿಕೆ ಮಾಡಬೇಕಾದ ಸಂಗತಿ ಏನೆಂದರೆ, ಪ್ರವಾದಿ ಅನುಚಿತ ಆಜ್ಞೆ ಎಂದೂ ನೀಡಲಾರರು. ಪ್ರವಾದಿ ಉಚಿತವಾದ, ಯೋಗ್ಯವಾದ, ಉತ್ತಮವಾದ ಆಜ್ಞೆಗಳನ್ನೇ ನೀಡುವರು. ಇದೇ ಕಾರಣದಿಂದ ಪವಿತ್ರ ಖುರ್‌ಆನಿನಲ್ಲಿ ಅನೇಕ ಕಡೆಗಳಲ್ಲಿ ನೀವು ಅಲ್ಲಾಹನ ಮತ್ತು ಸಂದೇಶವಾಹಕರ ಆಜ್ಞೆ ಪಾಲಿಸಬೇಕೆಂದು ಆಜ್ಞಾಪಿಸಲಾಗಿದೆ. ಉತ್ತಮ ಆಜ್ಞೆಗಳನ್ನು ಮಾತ್ರ ಅನುಸರಿಸಬೇಕೆಂದು ಎಲ್ಲಿಯೂ ಹೇಳಿಲ್ಲ. ಎರಡು ವಿವಿಧ ಆಜ್ಞೆಗಳೇಕೆ ಎಂಬ ಪ್ರಶ್ನೆ ಇಲ್ಲಿ ಉದಿಸುತ್ತದೆ. ಆದರೆ ಇವು ಎರಡು ಬೇರೆ ಬೇರೆ ಆಜ್ಞೆಗಳಲ್ಲ. ಕೆಲವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ನಾನು ಈ ಮೊದಲು ಹೇಳಿದ ಹಾಗೆ ಪ್ರವಾದಿಯ ಎಲ್ಲ ಆಜ್ಞೆಗಳು ಉತ್ತಮವಾಗಿಯೇ ಇರುತ್ತವೆ. ಪ್ರವಾದಿ ಎಂದೂ ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾಗಿ, ಶರೀಅತಿನ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸಲು ಸಾಧ್ಯವೇ ಇಲ್ಲ. ಅವರನ್ನು ಆ ಕೆಲಸಕ್ಕಾಗಿ ನೇಮಿಸಲಾಗಿದೆ. ಅವರನ್ನು ಯಾವ ಕೆಲಸಕ್ಕಾಗಿ ನೇಮಿಸಲಾಗಿದೆಯೋ ಅದಕ್ಕೆ ವಿರುದ್ಧವಾಗಿ ಹೇಗೆ ತಾನೆ ವರ್ತಿಸಬಲ್ಲರು? ನಿಮಗೆ ಶುಭವಾರ್ತೆ ನೀಡಲಾಗುತ್ತಿದೆ. ನೀವು ಪ್ರವಾದಿಯನ್ನು ನಂಬಿ, ದೇವನಿಂದ ನೇಮಿಸಲ್ಪಟ್ಟವರನ್ನು ನಂಬಿ, ಅವರ ಜಮಾಅತಿನಲ್ಲಿ ಸೇರ್ಪಡೆಗೊಂಡು ಸುರಕ್ಷಿತರಾಗಿರುವಿರಿ. ನಿಮಗೆ ಇನ್ನು ಮುಂದೆ ಯಾವ ಅನುಚಿತ ಆಜ್ಞೆಯೂ ದೊರಕಲಾರದು. ನಿಮಗೆ ಅಲ್ಲಾಹನ ದೃಷ್ಟಿಯಲ್ಲಿ ಮೆಚ್ಚುಗೆಯಾಗುವ ಆಜ್ಞೆ ಮಾತ್ರ ಲಭಿಸುವುದು.

## ಮಅ್‌ರೂಫ್ (ಉತ್ತಮ, ಉಚಿತ) ಗೈರ್ ಮಅ್‌ರೂಫ್ (ಕೆಟ್ಟ, ಅನುಚಿತ)

ಕೆಲವು ಜನರು **ಮಅ್‌ರೂಫ್** (ಉತ್ತಮ, ಉಚಿತ) ಆಜ್ಞೆ, **ಗೈರ್ ಮಅ್‌ರೂಫ್** (ಕೆಟ್ಟ, ಅನುಚಿತ) ಆಜ್ಞೆ ಇವುಗಳ ವ್ಯಾಖ್ಯಾನದಲ್ಲಿ ಮುಳುಗಿ ಜಮಾಅತಿನ ವ್ಯವಸ್ಥೆಯಿಂದ ಸ್ವತಃ ದೂರಸರಿದಿರುವರಲ್ಲದೆ ಇತರರನ್ನು ಸಹ ಕೆಡಿಸುತ್ತಿದ್ದಾರೆ. ಅವರು ತಮ್ಮ ಸುತ್ತಮುತ್ತ ಸಮಸ್ಯೆಗಳನ್ನು ಉಂಟುಮಾಡುತ್ತಾರೆ.

ಅವರು ಮಅ್‌ರೂಫ್ ಮತ್ತು ಗೈರ್ ಮಅ್‌ರೂಫ್ ತೀರ್ಮಾನಗಳ ವ್ಯಾಖ್ಯಾನ ಸ್ವತಃ ಮಾಡಬಾರದು ಎಂದು ಅರಿಯಲಿ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೀಗೆ ಹೇಳಿದ್ದಾರೆ:

> ಮಅ್‌ರೂಫ್ ಆಜ್ಞೆಗಳ ಪಾಲನೆಯ ಬಗ್ಗೆ ಅವರು ಮತ್ತೊಂದು ತಪ್ಪು ಮಾಡುತ್ತಾರೆ. ತಾವು ಮಅ್‌ರೂಫ್ (ಒಳ್ಳೆಯ, ಉಚಿತ) ಎಂದು ಭಾವಿಸದ ಆಜ್ಞೆಗಳನ್ನು ಅನುಸರಿಸಲಾರೆವು ಎಂದು ಅವರು ಹೇಳುತ್ತಾರೆ. ಈ ಪದ ಹಝ್ರತ್ ರಸೂಲುಲ್ಲಾಹ್‌ರ(ಸ) ಕುರಿತು ಸಹ ಬಳಸಲಾಗಿದೆ:
>
> وَلَا يَعْصِيْنَكَ فِيْ مَعْرُوْفٍ 'ಯಥೋಚಿತವಾದ ಯಾವುದೇ ವಿಚಾರದಲ್ಲಿ ನಿನಗೆ ಅವಿಧೇಯತೆ ತೋರಿಸಲಾರೆವು' (ಪವಿತ್ರ ಖುರ್‌ಆನ್ 60:13 ನೋಡಿರಿ). ಏನು ಈ ಜನರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ(ಸ) ಅನುಚಿತ ಆಜ್ಞೆಗಳ ಪಟ್ಟಿ ತಯಾರಿಸಿರುವರೇನು? ಇದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾಅತ್ ದರ್ ಮಅ್‌ರೂಫ್ (ಉತ್ತಮ ಕೆಲಸಗಳಲ್ಲಿ ವಿಧೇಯತೆ) ಎಂದು ಬೈಅತ್ ಶರತ್ತಿನಲ್ಲಿ ಬರೆದಿದ್ದಾರೆ. ಇದರಲ್ಲಿ ಒಂದು ರಹಸ್ಯ ಇದೆ. ನನಗೆ ನಿಮ್ಮ ಪೈಕಿ ಯಾರ ಬಗ್ಗೆಯೂ ತಪ್ಪುಗ್ರಹಿಕೆಯಿಲ್ಲ. ನೀವು ಒಳಗಿಂದೊಳಗೆ ಮೋಸಕ್ಕೊಳಗಾಗದಿರಲಿಕ್ಕಾಗಿ ಸ್ಪಷ್ಟಪಡಿಸುತ್ತಿದ್ದೇನೆ.
>
> **(ಖುತುಬಾತೆ ನೂರ್; ಪುಟ 420 – 421)**

ಹಝ್ರತ್ ಮಸೀಹ್ ಮೌಊದ್(ಅ) **ಯಅ್‌ಮುರ್ ಬಿಲ್ ಮಅ್‌ರೂಫ್** ಎಂಬ ವಚನಕ್ಕೆ ವ್ಯಾಖ್ಯಾನ ನೀಡುತ್ತಾ ಹೀಗೆ ಹೇಳುತ್ತಾರೆ:

> ಈ ಪ್ರವಾದಿ ಬುದ್ಧಿಗೆ ವಿರುದ್ಧವಾದ ಆಜ್ಞೆಗಳನ್ನು ನೀಡುವುದಿಲ್ಲ. ಯಾವ ಸಂಗತಿಗಳನ್ನು ಬುದ್ಧಿಯು ನಿಷಿದ್ಧಗೊಳಿಸುತ್ತವೆಯೋ ಅಂತಹ ಸಂಗತಿಗಳನ್ನು ಅವರು ನಿಷಿದ್ಧಗೊಳಿಸುತ್ತಾರೆ. ಅವರು ಪರಿಶುದ್ಧ ವಸ್ತುಗಳನ್ನು ಧರ್ಮಬದ್ಧಗೊಳಿಸುತ್ತಾರೆ ಮತ್ತು ಕೊಳಕು ವಸ್ತುಗಳನ್ನು ನಿಷಿದ್ಧಗೊಳಿಸುತ್ತಾರೆ. ಅವರು ಸಮುದಾಯಗಳನ್ನು ಅದುಮುತ್ತಿದ್ದ ಭಾರವನ್ನು ಇಳಿಸುತ್ತಾರೆ. ನೊಗಗಳಿಂದ ಬಂಧಿಸಲ್ಪಟ್ಟು ನೇರವಾಗಿಡಲಾಗದ ಕೊರಳುಗಳನ್ನು ಅವರು ನೊಗಗಳಿಂದ ಬಿಡಿಸಿದರು. ಯಾರು ಪ್ರವಾದಿಯನ್ನು ಅಂಗೀಕರಿಸುತ್ತಾರೋ, ಅವರ ಜೊತೆ ಸೇರುವ ಮೂಲಕ ಯಾರು ಅವರಿಗೆ ಶಕ್ತಿ ನೀಡುತ್ತಾರೋ, ಅವರಿಗೆ ಸಹಾಯವನ್ನು ಮಾಡುತ್ತಾರೋ ಮತ್ತು ಪ್ರವಾದಿಯ ಜೊತೆಗೆ ಇಳಿಸಲಾದ ಪ್ರಕಾಶವನ್ನು ಅನುಸರಿಸುತ್ತಾರೋ ಅವರು ಇಹಪರ ಲೋಕಗಳ ಕಷ್ಟದಿಂದ ಮುಕ್ತಿ ಪಡೆಯುವರು.
>
> **(ಬರಾಹೀನೆ ಅಹ್ಮದಿಯಾ ಭಾಗ 5; ರೂಹಾನೀ ಖಝಾಇನ್, ಸಂಪುಟ 21, ಪುಟ 420)**

ಪ್ರವಾದಿ ಅಲ್ಲಾಹನ ಆಜ್ಞೆಗಳಿಂದ ಸ್ವಲ್ಪವೂ ಅತ್ತಿತ್ತ ಹೋಗುವುದಿಲ್ಲ. ಪ್ರವಾದಿ ನಿಧನ ಹೊಂದಿದ ನಂತರ ಅವರ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು

ಸತ್ಯವಿಶ್ವಾಸಿಗಳಿಂದ ಆಯ್ಕೆಗೊಂಡ ಅಲ್ಲಾಹನ ಪ್ರತಿನಿಧಿಯಾಗಿರುವ ಖಲೀಫರು ಸಹ ಪ್ರವಾದಿಯ ಉಪದೇಶಗಳನ್ನು ಮತ್ತು ಆಜ್ಞೆಗ್ಗಳನ್ನು ಜಾರಿಗೊಳಿಸುತ್ತಾರೆ. ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಅಲ್ಲಾಹನ ಆಜ್ಞೆಗ್ಗಳನ್ನು ನಮಗೆ ತಲಪಿಸಿದರು. ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ನುಡಿದ ಭವಿಷ್ಯವಾಣಿ ಪ್ರಕಾರ ಈ ಕಾಲದಲ್ಲಿ ಆಗಮಿಸಿದ ಹಝ್‌ರತ್ ಮಸೀಹ್ ಮೌಊದ್[ಅ] ಆ ಆಜ್ಞೆಗ್ಗಳನ್ನು ನಮಗೆ ಸ್ಪಷ್ಟವಾಗಿ ವಿವರಿಸಿಕೊಟ್ಟರು. ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರ[ಸ] ಭವಿಷ್ಯವಾಣಿ ಪ್ರಕಾರ ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಗಿದೆ. ಇದು ಪುನರುತ್ಥಾನ ದಿನದ ತನಕ ಸ್ಥಿರವಾಗಿ ನಿಲ್ಲುವುದು – ಇನ್‌ಶಾಅಲ್ಲಾಹ್. ಈ ಖಿಲಾಫತ್ ವ್ಯವಸ್ಥೆಯಲ್ಲಿ ಶರೀಅತ್ ಮತ್ತು ವಿವೇಕಕ್ಕೆ ಅನುಸಾರವಾಗಿ ತೀರ್ಮಾನಗಳು ಮಾಡಲ್ಪಡುತ್ತಿವೆ. ಇನ್ನು ಮುಂದೆ ಸಹ ಹೀಗೆಯೇ ಮಾಡಲ್ಪಡುವುವು – ಇನ್‌ಶಾಅಲ್ಲಾಹ್. ಇವುಗಳೇ ಮಅ್‌ರೂಫ್ (ಎಂದರೆ ಉತ್ತಮ) ತೀರ್ಮಾನಗಳು. ಯಾವುದಾದರೂ ಖಲೀಫ ಯಾವಾಗಲಾದರೂ ತಪ್ಪುಮಾಡಿ ಅಥವಾ ತಪ್ಪುಗ್ರಹಿಕೆಯಿಂದ ಯಾವುದಾದರೂ ತೀರ್ಮಾನ ಮಾಡಿದಾಗ ಅದರಿಂದ ಹಾನಿಯುಂಟಾಗುವ ಸಾಧ್ಯತೆ ತಲೆದೋರಿದರೆ ಅಲ್ಲಾಹನು ಆ ತೀರ್ಮಾನದ ಕೆಟ್ಟ ಪರಿಣಾಮ ಉಂಟಾಗದ ರೀತಿಯ ವ್ಯವಸ್ಥೆ ಮಾಡುವನು. ಈ ಬಗ್ಗೆ ಹಝ್‌ರತ್ ಮುಸ್ಲಿಹ್ ಮೌಊದ್[ರ] ಹೀಗೆ ಹೇಳುತ್ತಾರೆ:

> ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಆಯಾಕಾಲದ ಖಲೀಫರಿಂದ ಯಾವುದಾದರೂ ತಪ್ಪಾಗಬಹುದಾಗಿದೆ. ಆದರೆ ಜಮಾಅತಿನ ಆಧ್ಯಾತ್ಮಿಕ ಮತ್ತು ಲೌಕಿಕ ಅಭಿವೃದ್ಧಿಗೆ ಸಂಬಂಧಿಸಿ ಯಾವುದಾದರೂ ತಪ್ಪು ಸಂಭವಿಸಿದರೆ ಅಲ್ಲಾಹನು ತನ್ನ ಜಮಾಅತನ್ನು ರಕ್ಷಿಸುವನು ಮತ್ತು ಯಾವುದಾದರೂ ರೀತಿಯಲ್ಲಿ ಖಲೀಫರಿಗೆ ಅವರ ತಪ್ಪನ್ನು ತಿಳಿಸಿಕೊಡುವನು. ಸೂಫಿಗಳ ಸಾಂಕೇತಿಕ ಪದಗಳಲ್ಲಿ ಇದನ್ನು **'ಇಸ್ಮತೆ ಸುಗ್ರಾ'** ಎಂದು ಕರೆಯುತ್ತಾರೆ. ಪ್ರವಾದಿಗಳಿಗೆ **'ಇಸ್ಮತೆ ಕುಬ್ರಾ'** (ಹಿರಿಯ ನಿಷ್ಕಳಂಕತೆ) ಲಭಿಸುತ್ತದೆ. ಖಲೀಫರಿಗೆ 'ಇಸ್ಮತೆ ಸುಗ್ರಾ' (ಕಿರಿಯ ನಿಷ್ಕಳಂಕತೆ) ಲಭಿಸುತ್ತದೆ. ಜಮಾಅತಿನ ನಾಶಕ್ಕೆ ಕಾರಣವಾಗಬಲ್ಲ ತಪ್ಪುಗಳು ಖಲೀಫರಿಂದ ಘಟಿಸದಂತೆ ಅಲ್ಲಾಹನು ನೋಡಿಕೊಳ್ಳುತ್ತಾನೆ. ಖಲೀಫರ ತೀರ್ಮಾನಗಳಲ್ಲಿ ಆಂಶಿಕ ಮತ್ತು ಸಾಮಾನ್ಯ ತಪ್ಪು ಆಗಬಹುದಾಗಿದೆ. ಆದರೆ ಅಂತಿಮ ಪರಿಣಾಮವಾಗಿ ಇಸ್ಲಾಮಿಗೆ ಜಯವೇ ಸಿಗುವುದು ಮತ್ತು ಶತ್ರುಗಳಿಗೆ ಸೋಲುಂಟಾಗುವುದು. ಖಲೀಫರಿಗೆ 'ಇಸ್ಮತೆ ಸುಗ್ರಾ' ಲಭಿಸಿರುವ ಕಾರಣ ಅಲ್ಲಾಹನ ನಿಲುವು ಅವರ ನಿಲುವಿನ ಹಾಗೆ ಇರುವುದು. ಅವರೇ ಮಾತನಾಡುತ್ತಾರೆ ಎಂಬುದು ಸತ್ಯವೇ ಆಗಿದೆ. ಅವರ ನಾಲಗೆಯೇ ಚಲಿಸಿತ್ತಿರುವುದು, ಅವರ ಕೈಗಳೇ ಚಲಿಸುವುವು, ಅವರ ಮಿದುಳೇ ಕೆಲಸ ಮಾಡುವುದು. ಆದರೆ ಅವುಗಳೆಲ್ಲದರ ಹಿಂದೆ ಅಲ್ಲಾಹನ ಕೈ ಇರುವುದು. ಖಲೀಫರಿಂದ ಆಂಶಿಕವಾಗಿ ನಗಣ್ಯ ತಪ್ಪುಗಳಾಗಬಹುದು. ಕೆಲವು ಸಾರಿ ಅವರ ಸಲಹೆಗಾರರು ತಪ್ಪು ಸಲಹೆ ನೀಡಬಹುದು. ಆದರೆ ಮಧ್ಯದ

ತಡೆಗಳನ್ನು ದಾಟಿ ಜಯ ಅವರಿಗೆಯೇ ಲಭಿಸುವುದು. ಎಲ್ಲ ಕೊಂಡಿಗಳು ಸೇರಿ ಸರಿಪಳಿಯಾಗುವಾಗ ಸರಿಯಾಗುವುದು. ಅದು ಸುಶಕ್ತವಾಗಿ ಯಾವುದೇ ಶಕ್ತಿ ಅದನ್ನು ಮುರಿದು ಹಾಕದಂತೆ ಆಗುವುದು.

**(ತಫ್‌ಸೀರ್ ಕಬೀರ್; ಭಾಗ 6, ಪುಟ 376 – 377)**

ಇದರಿಂದ ಸ್ಪಷ್ಟವಾಗುವುದೇನೆಂದರೆ, ಅಲ್ಲಾಹನ ಆಜ್ಞೆಗಳಿಗೆ ಮತ್ತು ಶರೀಅತಿನ ಆಜ್ಞೆಗಳಿಗೆ ವಿರುದ್ಧವಾಗಿರುವವು ಗೈರ್ ಮಅ್‌ರೂಫ್ (ಕೆಟ್ಟ, ಅನುಚಿತ) ಆಜ್ಞೆಗಳಾಗಿವೆ. ಈ ಬಗ್ಗೆ ಒಂದು ಹದೀಸ್ ಹೀಗಿದೆ:

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: "ಹಝ್ರತ್ ರಸೂಲುಲ್ಲಾಹ್(ಸ) ಒಂದು ಸೈನ್ಯವನ್ನು ಕಳುಹಿಸಿದಾಗ ಒಬ್ಬನನ್ನು ಅದರ ಸೇನಾ ನಾಯಕನನ್ನಾಗಿ ಮಾಡಿದರು. ಆತನನ್ನು ಅನುಸರಿಸಲು ಹೇಳಿದರು. ಆತನು ಬೆಂಕಿಯನ್ನು ಹೊತ್ತಿಸಿ ತನ್ನ ಸಂಗಡಿಗರನ್ನು ಅದರಲ್ಲಿ ಹಾರಲು ಆಜ್ಞಾಪಿಸಿದನು. ಕೆಲವರು ಈ ಅಪ್ಪಣೆಯನ್ನು ಅನುಸರಿಸಲಿಲ್ಲ ಮತ್ತು "ನಾವು ಮುಸ್ಲಿಮರಾಗಿರುವುದು ಬೆಂಕಿಯಿಂದ ರಕ್ಷಣೆ ಪಡೆಯಲಿಕ್ಕಾಗಿದೆ" ಎಂದು ಹೇಳಿದರು. ಕೆಲವರು ಬೆಂಕಿಗೆ ಹಾರಲು ಸಿದ್ಧರಾದರು. ಈ ವಿಷಯ ಹಝ್ರತ್ ರಸೂಲುಲ್ಲಾಹ್‌ರಿಗೆ(ಸ) ತಿಳಿದಾಗ ಅವರು ಹೇಳಿದರು: ಆ ಜನರು ಬೆಂಕಿಗೆ ಹಾರುತ್ತಿದ್ದರೆ ಯಾವಾಗಲೂ ಬೆಂಕಿಯಲ್ಲಿಯೇ ಇರುತ್ತಿದ್ದರು. ಅಲ್ಲಾಹನ ಆಜ್ಞೆಗೆ ವಿರುದ್ಧವಾಗಿ ಯಾವುದೇ ಅನುಸರಣೆ ಮಾಡಬಾರದು. ಅನುಸರಣೆ ಕೇವಲ ಮಅ್‌ರೂಫ್ (ಉತ್ತಮ) ಕೆಲಸಗಳ ಬಗ್ಗೆ ಮಾತ್ರ ಆವಶ್ಯಕವಾಗಿದೆ.

**(ಸುನನ್ ಅಬೂದಾವೂದ್)**

ಈ ಹದೀಸಿನ ಬಗ್ಗೆ ಹೆಚ್ಚು ವಿವರಣೆ ಇನ್ನೊಂದು ಹದೀಸಿನಿಂದ ಸಿಗುತ್ತದೆ.

ಹಝ್ರತ್ ಅಬೂ ಸಈದ್ ಖುದ್ರಿ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಅಲ್‌ಖಮ ಬಿನ್ ಮುಜಝ್ಝಿಝ್ ಎಂಬವರನ್ನು ಸೇನಾಧಿಪತಿಯನ್ನಾಗಿ ಮಾಡಿ ಒಂದು ಯುದ್ಧಕ್ಕೆ ಕಳುಹಿಸಿದರು. ಅವರು ರಣರಂಗದ ಸಮೀಪಕ್ಕೆ ತಲಪಿದಾಗ ಅಥವಾ ಮಾರ್ಗ ಮಧ್ಯದಲ್ಲಿ ಅವರ ಸೈನ್ಯದ ಒಂದು ದಳವು ಬೇರೆ ಕಡೆ ಹೋಗಲು ಅನುಮತಿ ಕೇಳಿತು. ಅಬ್ದುಲ್ಲಾ ಬಿನ್ ಹುಝ್ಝಾಫ ಖೈಸ್ ಬಿನ್ ಅಸ್ಸಹ್‌ಮಿಯನ್ನು ನೇತಾರನನ್ನಾಗಿ ಮಾಡಿ ಸೇನೆಯ ಒಂದು ದಳವು ಹೊರಟಿತು. ಅದರಲ್ಲಿ ನಾನೂ ಇದ್ದೆನು. ನಾವು ಹೋಗುತ್ತಿರುವಾಗ ಚಳಿಕಾಯಲು ಅಥವಾ ಆಹಾರ ತಯಾರಿಸಲು ಬೆಂಕಿ ಹೊತ್ತಿಸಲಾಯಿತು. ಆಗ ನಮ್ಮ ನಾಯಕ ಅಬ್ದುಲ್ಲಾ (ಅವರು ತಮಾಷೆ ಮಾಡುವ ಸ್ವಭಾವದವರಾಗಿದ್ದರು) ಹೇಳಿದರು: ಏನು ನನ್ನ ಆಜ್ಞೆ ಕೇಳಿದರೆ ಅದರ ಅನುಸರಣೆ ಕಡ್ಡಾಯವಲ್ಲವೇ? ಆಗ ಜನರು ಹೇಳಿದರು: ಹೌದು. ಆಗ ಅಬ್ದುಲ್ಲಾ ಹೇಳಿದರು: ನಾನು ಯಾವ ಆಜ್ಞೆ ನೀಡಿದರೂ

ಅನುಸರಿಸುವಿರೇನು? ಜನರು ಹೇಳಿದರು: ನಾವು ಅನುಸರಿಸುವೆವು. ಆಗ ಅಬ್ದುಲ್ಲಾ ಹೇಳಿದರು: ನೀವು ಬೆಂಕಿಗೆ ಹಾರಿರಿ ಎಂದು ನಾನು ಆಜ್ಞಾಪಿಸುತ್ತೇನೆ. ಆಗ ಕೆಲವರು ಬೆಂಕಿಗೆ ಹಾರಲು ಸಿದ್ಧರಾದರು. ಜನರು ನಿಜವಾಗಿಯೂ ಹಾರಲು ಸಿದ್ಧರಾಗಿರುವರು ಎಂದು ತಿಳಿದ ಅಬ್ದುಲ್ಲಾ ಹೇಳಿದರು: ನೀವು ಬೆಂಕಿಗೆ ಹಾರಬೇಡಿರಿ.

ನಾವು ಮರಳಿ ಬಂದು ಹಝ್ರತ್ ರಸೂಲುಲ್ಲಾಹ್‌ರಿಗೆ[ಸ] ಈ ವಿಷಯ ತಿಳಿಸಿದಾಗ ಅವರು ಹೇಳಿದರು: ನಿಮ್ಮ ಮೇಲಧಿಕಾರಿಗಳಲ್ಲಿ ಯಾರಾದರೂ ಅಲ್ಲಾಹನ ಆಜ್ಞೆಗೆ ವಿರುದ್ಧವಾದ ಆಜ್ಞೆಯನ್ನು ನೀಡಿದರೆ ಅದನ್ನು ಅನುಸರಿಸಬೇಡಿರಿ.

**(ಸುನನ್ ಇಬ್ನು ಮಾಜ)**

ಈ ಹದೀಸಿನಿಂದ ತಿಳಿಯುವ ಒಂದು ವಿಷಯವೇನೆಂದರೆ, ನಾಯಕನ ಆಜ್ಞೆಯನ್ನು ಉಲ್ಲಂಘಿಸುವ ತೀರ್ಮಾನ ಒಬ್ಬ ವ್ಯಕ್ತಿಯದಾಗಿರಲಿಲ್ಲ. ಪ್ರತಿಯೊಂದು ಪರಿಸ್ಥಿತಿಯಲ್ಲೂ ಮೇಲಧಿಕಾರಿಯನ್ನು ಅನುಸರಿಸಬೇಕೆಂದು ಆಜ್ಞೆ ಇದೆ, ಆದ್ದರಿಂದ ಎಲ್ಲ ಸಂದರ್ಭಗಳಲ್ಲೂ ಈ ಆಜ್ಞೆ ಪಾಲಿಸಬೇಕೆಂದು ಬೆಂಕಿಗೆ ಹಾರಲು ಸಿದ್ಧರಾದವರು ಯೋಚಿಸಿದರು. ಆದರೆ ಕೆಲವು ಶಿಷ್ಯರಿಗೆ ಅಲ್ಲಾಹನ ಆಜ್ಞೆಗಳ ಕುರಿತು ಹೆಚ್ಚಿನ ತಿಳುವಳಿಕೆಯಿತ್ತು. ಅವರು ಹಝ್ರತ್ ರಸೂಲುಲ್ಲಾಹ್‌ರ[ಸ] ಸಹವಾಸದಿಂದ ಹೆಚ್ಚಿನ ಪ್ರಯೋಜನ ಪಡೆದವರಾಗಿದ್ದರು. ಅವರು ಆ ಆಜ್ಞೆಯನ್ನು ನಿರಾಕರಿಸಿದರು. ಅವರು ಸಮಾಲೋಚನೆ ನಡೆಸಿ ಈ ಆಜ್ಞಾಪಾಲನೆಯಿಂದ ಹಿಂದೆಸರಿದರು. ಕಾರಣ ಹೀಗೆ ಮಾಡುವುದು ಆತ್ಮಹತ್ಯೆಯಾಗಿದೆ. ಆತ್ಮಹತ್ಯೆ ಸ್ಪಷ್ಟವಾಗಿ ಇಸ್ಲಾಮಿನಲ್ಲಿ ನಿಷಿದ್ಧವಾಗಿದೆ. ಎರಡನೆಯದಾಗಿ, ಅಬ್ದುಲ್ಲಾ ಬಿನ್ ಹುಝಾಫ (ಅವರ ನಾಯಕ) ಜನರ ನಿರ್ಧಾರವನ್ನು ನೋಡಿದಾಗ ಅವರಿಗೆ ಚಿಂತೆ ಉಂಟಾಯಿತು. ತಮಾಷೆಗಾಗಿ ಹೇಳಿದ್ದನ್ನು ಕಾರ್ಯರೂಪಕ್ಕೆ ಇಳಿಸಬೇಡಿರೆಂದು ತಡೆದರು. ಈ ಸಂಭವದ ನಂತರ ಹಝ್ರತ್ ರಸೂಲುಲ್ಲಾಹ್[ಸ] ಮಅ್‌ರೂಫ್ ಮತ್ತು ಗೈರ್ ಮಅ್‌ರೂಫ್ ಎಂದರೇನೆಂದು ಸ್ಪಷ್ಟಪಡಿಸಿದರು.

ಪ್ರವಾದಿ ಅಥವಾ ಆಯಾಕಾಲದ ಖಲೀಫರು ತಮಾಷೆಗಾಗಿ ಕೂಡ ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾದ ಆಜ್ಞೆ ನೀಡಲಾರರು. ಆದುದರಿಂದ ಅಲ್ಲಾಹನು ಹೇಳಿರುವನು – ನಿಮ್ಮ ನಾಯಕನು ಅಲ್ಲಾಹನ ಆಜ್ಞೆಗೆ ಸ್ಪಷ್ಟವಾಗಿ ವಿರುದ್ಧವಾದುದನ್ನು ಏನಾದರೂ ಹೇಳಿದರೆ ಅಲ್ಲಾಹನ ಕಡೆಗೆ ಮತ್ತು ಅವನ ಸಂದೇಶವಾಹಕನ ಕಡೆಗೆ ತಿರುಗಿರಿ. ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಂತರ ಖಿಲಾಫತೆ ರಾಶಿದ ಸ್ಥಾಪಿತವಾಗಿದೆ. ಆದುದರಿಂದ ನೀವು ಖಲೀಫರನ್ನು ಸಮೀಪಿಸಿರಿ. ಖಲೀಫರ ತೀರ್ಮಾನ ಯಾವಾಗಲೂ ಮಅ್‌ರೂಫ್ (ಉತ್ತಮ) ಆಗಿರುವುದು. ಅಲ್ಲಾಹನ ಮತ್ತು ಅವನ

ಸಂದೇಶವಾಹಕರ ಆಜ್ಞೆಗಳ ಪ್ರಕಾರವೇ ಆಗುವುದು. ನಾನು ಹಿಂದೆ ಹೇಳಿದಂತೆ ನಿಮಗೆ ಶುಭವಾರ್ತೆ ಇದೆ. ನೀವು ಈಗ ಯಾವಾಗಲೂ ಮಅ್‌ರೂಫ್ (ಉತ್ತಮ) ತೀರ್ಮಾನದ ಅಡಿಯಲ್ಲೇ ಇದ್ದೀರಿ.

ಒಬ್ಬ ಕಾರ್ಯನಿರ್ವಾಹಕ ಉತ್ತಮ ಕೆಲಸ ಮಾಡುತ್ತಿದ್ದಾಗ ಅವನನ್ನು ತೆಗೆದು ಹಾಕಿ ಇನ್ನೊಬ್ಬನನ್ನು ನೇಮಿಸಲಾಗಿದೆ; ಖಲೀಫರು ಅಥವಾ ಜಮಾಅತ್ ವ್ಯವಸ್ಥೆ ತಪ್ಪು ನಿರ್ಧಾರ ಮಾಡಿದೆ; ಆದುದರಿಂದ ಇದು ಗೈರ್ ಮಅ್‌ರೂಫ್ (ಅನುಚಿತ) ತೀರ್ಮಾನವಾಗಿದೆ ಎಂದೆಲ್ಲ ಇಂದೂ ಆಕ್ಷೇಪಗಳು ಆಗುತ್ತಾ ಇರುತ್ತವೆ. ಅವರಿಗೆ ಬೇರೇನನ್ನೂ ಮಾಡಲು ಸಾಧ್ಯವಿರುವುದಿಲ್ಲ; ಅವರು ಈ ವಿಷಯವನ್ನು ಗೈರ್ ಮಅ್‌ರೂಫ್ (ಕೆಟ್ಟ, ಅನುಚಿತ) ವರ್ಗಕ್ಕೆ ಸೇರುತ್ತದೆ, (ಅವರು ಸ್ವತಃ ಹೀಗೆ ವರ್ಗೀಕರಿಸುತ್ತಾರೆ) ಆದುದರಿಂದ ತಮಗೆ ಅದರ ವಿರುದ್ಧ ಮಾತನಾಡಲು ಅಧಿಕಾರವಿದೆ ಎಂದು ಹೇಳುತ್ತಾರೆ. ಅಲ್ಲಲ್ಲಿ ಕುಳಿತು ಆ ಬಗ್ಗೆ ಮಾತನಾಡುವ ಹಕ್ಕು ತಮಗಿದೆ ಎಂದು ಅವರು ಹೇಳುತ್ತಾರೆ.

ನಾನು ಹೇಳಬಯಸುವುದೇನೆಂದರೆ, ಜಮಾಅತ್ ವ್ಯವಸ್ಥೆ ವಿರುದ್ಧ ಸಿಕ್ಕಿದಲ್ಲೆಲ್ಲ ಹರಟುವ ಹಕ್ಕು ಯಾರಿಗೂ ಇಲ್ಲ. ಈ ಬಗ್ಗೆ ನಾನು ಈ ಮೊದಲು ಸವಿವರವಾಗಿ ಹೇಳಿದ್ದೆನು. ನಿಮ್ಮ ಕೆಲಸ ಕೇವಲ ಅನುಸರಣೆಯಾಗಿದೆ. ನಿಮ್ಮ ಅನುಸರಣೆಯ ಮಟ್ಟ ಹೇಗಿರಬೇಕೆಂದು ಪವಿತ್ರ ಖುರ್‌ಆನ್ ಈ ರೀತಿಯಲ್ಲಿ ಹೇಳುತ್ತದೆ:

وَاَقۡسَمُوۡا بِاللّٰهِ جَهۡدَ اَيۡمَانِهِمۡ لَئِنۡ اَمَرۡتَهُمۡ لَيَخۡرُجُنَّ ؕ قُلۡ لَّا تُقۡسِمُوۡا ۚ طَاعَةٌ مَّعۡرُوۡفَةٌ
اِنَّ اللّٰهَ خَبِيۡرٌۢ بِمَا تَعۡمَلُوۡنَ

ನೀನು ಅವರಿಗೆ ಆಜ್ಞಾಪಿಸಿದರೆ, ಖಂಡಿತವಾಗಿಯೂ ತಾವು ಅದನ್ನು ಕಾರ್ಯಗತಗೊಳಿಸಲಿಕ್ಕೋಸ್ಕರ ಹೊರಡುವೆವೆಂದು ಅಲ್ಲಾಹನಾಣೆ ಹಾಕಿ ಅವರು ಪ್ರತಿಜ್ಞೆ ಮಾಡುತ್ತಾರೆ. ಹೇಳು: ನೀವು ಅಲ್ಲಾಹನಾಣೆ ಹಾಕಬೇಡಿರಿ. ಉತ್ತಮ ವಿಧೇಯತೆಯೇ ಸಾಕು. ನಿಶ್ಚಯವಾಗಿಯೂ ನಿಮ್ಮ ವರ್ತನೆಗಳ ಬಗ್ಗೆ ಅಲ್ಲಾಹನು ಬಲ್ಲವನಾಗಿದ್ದಾನೆ. **(24:54)**

ಈ ವಚನದ ಮುಂಚೆ ಇರುವ ವಚನಗಳಲ್ಲಿ ಸಹ ಅನುಸರಣೆಯ ವಿಷಯವನ್ನೇ ಪ್ರತಿಪಾದಿಸಲಾಗಿದೆ. "ನಾವು ಆಲಿಸಿದೆವು, ನಾವು ಅಂಗೀಕರಿಸಿದೆವು" ಎಂದು ಸತ್ಯವಿಶ್ವಾಸಿಗಳು ಯಾವಾಗಲೂ ಹೇಳುತ್ತಾರೆ. ಅವರ ಭಯಭಕ್ತಿಯ ಕಾರಣದಿಂದ ಅವರು ಅಲ್ಲಾಹನ ಸಮೀಪಸ್ಥರಾಗುತ್ತಾರೆ. ಅವರು ತಮ್ಮ ಉದ್ದೇಶವನ್ನು ಗಳಿಸುತ್ತಾರೆ. ಸತ್ಯವಿಶ್ವಾಸಿಗಳ ಹಾಗೆ ಆಲಿಸಿರಿ ಮತ್ತು ಅನುಸರಿಸಿರಿ ಎಂದು ಈ ವಚನದಲ್ಲಿಯೂ ಹೇಳಲಾಗಿದೆ: ನಾವು ಹಾಗೆ ಮಾಡುವೆವು, ಹೀಗೆ ಮಾಡುವೆವು ಎಂದು ಆಣೆ ಹಾಕಬೇಡಿರಿ. ಹಝ್ರತ್ ಮುಸ್ಲಿಹ್ ಮೌಊದ್[ರ] ಹೀಗೆ ಹೇಳುತ್ತಾರೆ: ಕಪಟವಿಶ್ವಾಸಿಗಳು ಸಹ ಬಹಳ ವಾದ ಮಾಡುತ್ತಾರೆ. ಆದರೆ

ಮುಖ್ಯ ಸಂಗತಿ ಕಾರ್ಯರೂಪದಲ್ಲಿ ಅನುಸರಿಸುವುದಾಗಿದೆ. ಅಲ್ಲಾಹನು ಇಲ್ಲಿ ಹೇಳುವುದೇನೆಂದರೆ, ಉತ್ತಮ ರೀತಿಯಲ್ಲಿ ಅನುಸರಣೆ ಮಾಡಿರಿ. ಸಂಪ್ರದಾಯದ ಪ್ರಕಾರ ಅನುಸರಣೆ ಮಾಡಿರಿ. ಶರೀಅತಿಗೆ ವಿರುದ್ಧವಾದ ಮತ್ತು ಬುದ್ಧಿಗೆ ವಿರುದ್ಧವಾದ ಆಜ್ಞೆ ಪ್ರವಾದಿ ನೀಡುವುದಿಲ್ಲ. ಉದಾಹರಣೆಗೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನನ್ನು ನಂಬುವುದಾದರೆ ಐದು ಹೊತ್ತಿನ ನಮಾಝ್ ಕ್ರಮಬದ್ಧವಾಗಿ ಅನುಷ್ಠಿಸಿರಿ. ಸುಳ್ಳು ಹೇಳುವುದನ್ನು ಬಿಡಿರಿ. ಅಹಂಕಾರ ಬಿಟ್ಟುಬಿಡಿರಿ. ಜನರ ಹಕ್ಕುಗಳನ್ನು ಅಪಹರಿಸುವುದನ್ನು ಬಿಟ್ಟುಬಿಡಿರಿ. ಪರಸ್ಪರ ಪ್ರೀತಿಯಿಂದ ವರ್ತಿಸಿರಿ. ಇವೆಲ್ಲ **'ತಾಅತ್ ದರ್ ಮಅ್‌ರೂಫ್'** – ಉತ್ತಮ ರೀತಿಯಲ್ಲಿ ಅನುಸರಣೆಯಲ್ಲಿ ಸೇರುತ್ತದೆ. ನೀವು ಕೇವಲ ಅಲ್ಲಾಹನ ಆಣೆ ಹಾಕುತ್ತಾ 'ನೀವು ಆಜ್ಞಾಪಿಸಿದುದನ್ನು ನಾವು ಮಾಡುವೆವು' ಎಂದು ಹೇಳುತ್ತಾ ನಡೆದಾಡಬೇಡಿರಿ. ನೀವು ಆಜ್ಞೆಗಳನ್ನು ಅನುಷ್ಠಾನಕ್ಕೆ ತರಬೇಕು. ಇದೇ ರೀತಿ ಖ಼ಲೀಫರು ಸಹ ವಿವಿಧ ಕಾಲಗಳಲ್ಲಿ ಆಧ್ಯಾತ್ಮಿಕ ಏಳಿಗೆಗೆ ಪ್ರಸ್ತಾಪಗಳನ್ನು ಮಾಡುತ್ತಾರೆ. ಉದಾಹರಣೆಗೆ, ಮಸೀದಿಗೆ ಹೋಗಿ ನಮಾಝ್ ಅನುಷ್ಠಿಸುವ ಕುರಿತು, ಮಕ್ಕಳ ತರಬೇತಿಯ ಕುರಿತು, ನಿಮ್ಮೊಳಗೆ ಧೈರ್ಯವುಂಟುಮಾಡಲು, ಧರ್ಮ ಪ್ರಚಾರದ ಕುರಿತು ಅಥವಾ ವಿವಿಧ ಸಾಂಪತ್ತಿಕ ದೇಣಿಗೆಗಳ ಕುರಿತು – ಇವೆಲ್ಲ ವಿಷಯಗಳಲ್ಲಿ ಅನುಸರಣೆ ಮಾಡಬೇಕು. ಇವೆಲ್ಲ 'ತಾಅತ್ ದರ್ ಮಅ್‌ರೂಫ್' ಗುಂಪಿಗೆ ಸೇರುತ್ತವೆ. ಪ್ರವಾದಿ ಅಥವಾ ಖ಼ಲೀಫ ನಿಮ್ಮೊಂದಿಗೆ ಶರೀಅತ್ ವಿರುದ್ಧವಾದ ಅಥವಾ ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾದ ಕೆಲಸ ಮಾಡಲು ಹೇಳಲಾರರು. ನೀವು ಬೆಂಕಿಗೆ ಹಾರಿರಿ ಅಥವಾ ಸಮುದ್ರಕ್ಕೆ ಜಿಗಿಯಿರಿ ಎಂದು ಅವರು ಹೇಳಲಾರರು. ಅವರು ನಿಮ್ಮನ್ನು ಶರೀಅತಿಗೆ ಅನುಸಾರವಾಗಿಯೇ ನಡೆಸಬೇಕಾಗಿದೆ.

## ಅನುಸರಣೆಯ ಅತ್ಯುತ್ತಮ ಮಾದರಿ

ಅನುಸರಣೆಯ ಅತ್ಯುತ್ತಮ ಮಾದರಿ ನಮಗೆ ಆದ್ಯಕಾಲದ ಮುಸ್ಲಿಮರಿಂದ ದೊರಕುತ್ತದೆ. ಒಂದು ಯುದ್ಧದ ಕಾಲದಲ್ಲಿ ಹಝ್ರತ್ ಉಮರ್[ರ] ಅವರು ಸೈನ್ಯದ ಸೇನಾಧಿಪತಿಯಾಗಿದ್ದ ಖ಼ಾಲಿದ್ ಬಿನ್ ವಲೀದ್[ರ] ಅವರನ್ನು ಬದಲಾಯಿಸಿ ಆ ಸ್ಥಾನವನ್ನು ಹಝ್ರತ್ ಅಬೂ ಉಬೈದರಿಗೆ[ರ] ನೀಡಿದರು. ಖ಼ಾಲಿದ್ ಬಿನ್ ವಲೀದ್ ಚೆನ್ನಾಗಿ ಕೆಲಸ ಮಾಡುತ್ತಾರೆಂದು ಮನವರಿಕೆ ಮಾಡಿದ ಹಝ್ರತ್ ಅಬೂ ಉಬೈದ ಖ಼ಾಲಿದ್‌ರಿಂದ ಅಧಿಕಾರ ಸ್ವೀಕರಿಸಲಿಲ್ಲ. ಹಝ್ರತ್ ಖ಼ಾಲಿದ್ ಬಿನ್ ವಲೀದ್‌ರಿಗೆ[ರ] ಹಝ್ರತ್ ಉಮರ್‌ರ[ರ] ಆಜ್ಞೆಯ ಬಗ್ಗೆ ತಿಳಿಯಿತು. ಅವರು ಹಝ್ರತ್ ಅಬೂ ಉಬೈದರ ಬಳಿಗೆ ಹೋಗಿ ಖ಼ಲೀಫರ ಆಜ್ಞೆಯನ್ನು ಕೂಡಲೆ ಪಾಲಿಸಿರಿ, ನಿಮ್ಮ ಅಧೀನದಲ್ಲಿ ಕೆಲಸ ಮಾಡಲು ನಾನು ಹಿಂಜರಿಯಲಾರೆ. ನಾನು ಮೊದಲು ಕಮಾಂಡರ್ ಆಗಿ ಕೆಲಸ

ಮಾಡಿದ ಹಾಗೆಯೇ ನಿಮ್ಮ ಅಧೀನಕ್ಕೆ ಒಳಗಾಗಿಯೂ ಉತ್ಸಾಹಭರಿತನಾಗಿ ಕೆಲಸ ಮಾಡುವೆನೆಂದು ಹೇಳಿದರು.

ಇದು ಅನುಸರಣೆಯ ಮಾದರಿಯಾಗಿದೆ. ಹಝ್‌ರತ್ ಉಮರ್[ರ] ಅವರ ನಿರ್ಧಾರ ಗೈರ್ ಮಅ್‌ರೂಫ್ (ಅನುಚಿತ) ಆಗಿತ್ತೆಂದು ತಲೆ ಕೆಟ್ಟ ಯಾರಾದರೂ ಹೇಳಬಹುದು. ಹಾಗೆ ಯೋಚಿಸುವುದು ತಪ್ಪಾಗಿದೆ. ಹಝ್‌ರತ್ ಉಮರ್[ರ] ಯಾವ ಪರಿಸ್ಥಿತಿಯಲ್ಲಿ ಆ ತೀರ್ಮಾನ ಮಾಡಿದರೆಂದು ನಮಗೆ ತಿಳಿಯದು. ಅದು ಹಝ್‌ರತ್ ಉಮರ್‌ರಿಗೆ[ರ] ಮಾತ್ರ ತಿಳಿದಿತ್ತು. ಆ ತೀರ್ಮಾನದಲ್ಲಿ ಶರೀಅತಿಗೆ ವಿರುದ್ಧವಾಗಿ ಏನೂ ಇರಲಿಲ್ಲ. ಅಲ್ಲಾಹನು ಹಝ್‌ರತ್ ಉಮರರ[ರ] ತೀರ್ಮಾನದ ಗೌರವವನ್ನು ಕಾಪಾಡಿದನು. ಆ ಯುದ್ಧದಲ್ಲಿ ಒಬ್ಬೊಬ್ಬ ಮುಸ್ಲಿಮನು ನೂರು – ನೂರು ವಿರೋಧಿ ಸೈನಿಕರನ್ನು ಕೆಲವು ಸಾರಿ ಎದುರಿಸಬೇಕಾಗಿ ಬಂದರೂ ಆ ಯುದ್ಧದಲ್ಲಿ ಜಯ ಲಭಿಸಿತು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೂ ತನ್ನ ಯಜಮಾನರಾದ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು[ಸ] ಅತುಲ್ಯವಾದ ರೀತಿಯಲ್ಲಿ ಅನುಸರಿಸಿದ ಕಾರಣ ಹಕಮ್ ಮತ್ತು ಅದಲ್ (ನ್ಯಾಯನಿಷ್ಠನಾದ ನ್ಯಾಯಾಧಿಪತಿಯ) ಪದವಿ ಲಭಿಸಿತ್ತು. ಆದುದರಿಂದ ಈ ಕಾಲದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅನುಸರಿಸುವ ಮೂಲಕವೇ ಹಝ್‌ರತ್ ಮುಹಮ್ಮದ್ ಮುಸ್ತಫಾರನ್ನು[ಸ] ಅನುಸರಿಸುವ ಮತ್ತು ಪ್ರೀತಿಸುವ ವಾದವು ಸತ್ಯವಾಗುವುದು. ಹಝ್‌ರತ್ ರಸೂಲುಲ್ಲಾಹ್‌ರನ್ನು[ಸ] ಅನುಸರಿಸುವ ಮೂಲಕ ಅಲ್ಲಾಹನನ್ನು ಪ್ರೀತಿಸುತ್ತೇನೆ ಎಂಬ ವಾದವು ಸತ್ಯವಾಗುವುದು. ಅಲ್ಲಾಹನು ಹೇಳುತ್ತಾನೆ:

قُلْ اِنْ كُنْتُمْ تُحِبُّوْنَ اللّٰهَ فَاتَّبِعُوْنِيْ يُحْبِبْكُمُ اللّٰهُ وَيَغْفِرْ لَكُمْ ذُنُوْبَكُمْ وَاللّٰهُ غَفُوْرٌ رَّحِيْمٌ

ಹೇಳು: 'ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ'. **(3:32)**

## ಹಝ್‌ರತ್ ಮಸೀಹ್ ಮೌಊದ್[ಅ] ಗಳಿಸಿದ ಅನುಗ್ರಹಗಳು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರ[ಸ] ಅನುಸರಣೆಯಿಂದ

ಹಝ್‌ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ:

ನನಗಿಂತ ಮೊದಲು ಆಗಮಿಸಿದ ಪ್ರವಾದಿಗಳಿಗೆ, ಸಂದೇಶವಾಹಕರಿಗೆ ಮತ್ತು ಅಲ್ಲಾಹನಿಂದ ಆಯ್ಕೆ ಪಡೆದವರಿಗೆ ಲಭಿಸಿದ ಅನುಗ್ರಹಗಳಿಂದ ನಾನು ಪಾಲನ್ನು ಪಡೆದಿರುವುದು ಕೇವಲ ಅಲ್ಲಾಹನ ಅನುಗ್ರಹದಿಂದ ಹೊರತು ನನ್ನ ಯಾವುದೇ ನೈಪುಣ್ಯತೆಯ ಕಾರಣದಿಂದಲ್ಲ. ನಾನು ನನ್ನ ಯಜಮಾನರಾದ,

ಪ್ರವಾದಿಗಳ ಅಭಿಮಾನವಾದ, ಮನುಷ್ಯರಲ್ಲಿ ಶ್ರೇಷ್ಠರಾದ ಹಝ್‌ರತ್ ಮುಹಮ್ಮದ್ ಮುಸ್ತಫಾರ(ಸ) ಮಾರ್ಗವನ್ನು ಅನುಸರಿಸದೆ ಇರುತ್ತಿದ್ದರೆ ಈ ಅನುಗ್ರಹ ಪಡೆಯಲು ನನಗೆ ಸಾಧ್ಯವಾಗುತ್ತಿರಲಿಲ್ಲ. ನಾನು ಅಲ್ಲಾಹನಿಂದ ಗಳಿಸಿದುದೆಲ್ಲವೂ ಈ ಅನುಸರಣೆಯಿಂದ ಲಭಿಸಿದುದಾಗಿವೆ. ನಾನು ನನ್ನ ಸತ್ಯವಾದ ಮತ್ತು ಪರಿಪೂರ್ಣವಾದ ಜ್ಞಾನದಿಂದ ಹೀಗೆ ತಿಳಿದಿರುವೆನು: ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು(ಸ) ಅನುಸರಿಸದೆ ಯಾವುದೇ ಮನುಷ್ಯನಿಗೆ ಅಲ್ಲಾಹನನ್ನು ತಲಪಲು ಮತ್ತು ಪರಿಪೂರ್ಣ ಆಧ್ಯಾತ್ಮಿಕ ಜ್ಞಾನ ಗಳಿಸಲು ಸಾಧ್ಯವಿಲ್ಲ. ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು(ಸ) ಸತ್ಯವಾಗಿಯೂ ಪೂರ್ಣವಾಗಿಯೂ ಅನುಸರಿಸಿದ ನಂತರ ಎಲ್ಲದಕ್ಕಿಂತಲೂ ಮೊದಲು ಹೃದಯದಲ್ಲಿ ಏನುಂಟಾಗುತ್ತದೆ ಎಂಬುದನ್ನು ನಾನು ಇಲ್ಲಿ ಹೇಳಲು ಬಯಸುತ್ತೇನೆ. ಅದು **'ಖಲ್‌ಬೆ ಸಲೀಮ್'** (ಶಾಂತ ಹೃದಯ) ಎಂದರೆ ಲೋಕದ ಬಗ್ಗೆ ಪ್ರೀತಿ ಹೃದಯದಿಂದ ಹೊರಟು ಹೋಗುತ್ತದೆ. ಅದು ಶಾಶ್ವತವಾದ ಒಂದು ಅನುಭೂತಿಯನ್ನು ಅಪೇಕ್ಷಿಸುತ್ತದೆ. ಅನಂತರ ಪರಿಶುದ್ಧವಾದ ದೈವಿಕ ಪ್ರೀತಿ ಲಭಿಸುತ್ತದೆ. ಇವೆಲ್ಲ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು(ಸ) ಅನುಸರಿಸುವ ಕಾರಣದಿಂದ ವಾರಸುದಾರಿಕೆಯ ರೂಪದಲ್ಲಿ ಲಭಿಸುತ್ತದೆ. ಇದರ ಬಗ್ಗೆಯೇ ಅಲ್ಲಾಹನು ಪೈಗಂಬರ್‌ರನ್ನು(ಸ)ಸಂಬೋಧಿಸಿ ಹೀಗೆ ಹೇಳಿರುವುದು:

قُلْ اِنْ كُنْتُمْ تُحِبُّوْنَ اللّٰهَ فَاتَّبِعُوْنِيْ يُحْبِبْكُمُ اللّٰهُ

ನೀನು ಹೇಳು; ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು. **(3:32)**

ಏಕಪಕ್ಷೀಯವಾದ ಪ್ರೀತಿಯು ಸುಳ್ಳು ಮತ್ತು ನಿರರ್ಥಕ ವಾದವಾಗಿದೆ. ಮನುಷ್ಯನು ಸತ್ಯವಾಗಿಯೂ ಅಲ್ಲಾಹನನ್ನು ಪ್ರೀತಿಸುವಾಗ ಅಲ್ಲಾಹನೂ ಅವನನ್ನು ಪ್ರೀತಿಸುತ್ತಾನೆ. ಆಗ ಅಲ್ಲಾಹನು ಅಂತಹ ವ್ಯಕ್ತಿಗೆ ಲೋಕದಲ್ಲಿ ಅಂಗೀಕಾರ ಲಭಿಸುವಂತೆ ಮಾಡುತ್ತಾನೆ. ಸಾವಿರಾರು ಮನುಷ್ಯರ ಹೃದಯಗಳಲ್ಲಿ ಆ ವ್ಯಕ್ತಿಯ ಬಗ್ಗೆ ಸತ್ಯವಾದ ಪ್ರೀತಿಯನ್ನು ಹಾಕಲಾಗುತ್ತದೆ. ಆ ವ್ಯಕ್ತಿಗೆ ಒಂದು ಆಕರ್ಷಕ ಶಕ್ತಿ ಪ್ರದಾನ ಮಾಡಲಾಗುತ್ತದೆ. ಒಂದು ಪ್ರಕಾಶ ಆ ವ್ಯಕ್ತಿಗೆ ನೀಡಲಾಗುತ್ತದೆ. ಅದು ಯಾವಾಗಲೂ ಆ ವ್ಯಕ್ತಿಯ ಜೊತೆಗಿರುತ್ತದೆ. ಒಬ್ಬ ಮನುಷ್ಯನು ಸತ್ಯವಾದ ಹೃದಯದಿಂದ ಅಲ್ಲಾಹನನ್ನು ಪ್ರೀತಿಸುವನಾದರೆ ಎಲ್ಲ ಲೌಕಿಕ ವಸ್ತುಗಳಿಗಿಂತ ಅವನಿಗೆ ಮಹತ್ವ ನೀಡುತ್ತಾನಾದರೆ ದೇವೇತರರ ಬಗ್ಗೆ ಗೌರವಾದರ ಆತನ ಹೃದಯದಲ್ಲಿ ಬಾಕಿಯಾಗಿ ಉಳಿಯದಿದ್ದರೆ ಮತ್ತು ಎಲ್ಲವನ್ನೂ ಸತ್ತ ಕ್ರಿಮಿ ಕೀಟಕ್ಕಿಂತ ಕೀಳಾಗಿ ಕಾಣುವನಾದರೆ ಆಗ ಅಲ್ಲಾಹನು ಅವನ ಹೃದಯವನ್ನು ನೋಡುತ್ತಾನೆ. ಒಂದು ದಿವ್ಯ ಪ್ರಕಾಶದೊಂದಿಗೆ ಅವನ ಹೃದಯದಲ್ಲಿ ಇಳಿಯುತ್ತಾನೆ. ಒಂದು ಸ್ವಚ್ಛ ಕನ್ನಡಿಯನ್ನು ಸೂರ್ಯನೆದುರಿಗೆ

ಹಿಡಿದರೆ ಸೂರ್ಯನ ಬಿಂಬವು ಪೂರ್ಣವಾಗಿ ಆ ಕನ್ನಡಿಯಲ್ಲಿ ಬೀಳುತ್ತದೆ. ಇದನ್ನು ಆಲಂಕಾರಿಕವಾಗಿ ಆಕಾಶದಲ್ಲಿ ಇರುವ ಅದೇ ಸೂರ್ಯ ಈ ಕನ್ನಡಿಯಲ್ಲೂ ಇದೆ ಎಂದು ಹೇಳಬಹುದು. ಇದೇ ರೀತಿ ಅಲ್ಲಾಹನು ಅಂತಹ ಹೃದಯದೊಳಗೆ ಇಳಿಯುತ್ತಾನೆ ಮತ್ತು ಆ ಹೃದಯವನ್ನು ಅವನು ತನ್ನ ಸಿಂಹಾಸನವನ್ನಾಗಿ ಮಾಡುತ್ತಾನೆ. ಈ ಕೆಲಸಕ್ಕಾಗಿಯೇ ಮನುಷ್ಯನನ್ನು ಸೃಷ್ಟಿಸಲಾಗಿದೆ.

**(ಹಖೀಖತುಲ್ ವಹ್ಯ್: ರೂಹಾನೀ ಖಝಾಇನ್, ಸಂಪುಟ 22, ಪುಟ 64 – 65)**

ಹಝ್ರತ್ ಮಸೀಹ್ ಮೌಊದ್‌ರಿಗೆ[ಅ] ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರೊಂದಿಗೆ[ಸ] ಇದ್ದ ಪ್ರೀತಿ ಮತ್ತು ಪ್ರೇಮದ ಕಾರಣ ಅಲ್ಲಾಹನು ಅವರ ಪರಿಶುದ್ಧ ಹೃದಯವನ್ನು ತನ್ನ ಸಿಂಹಾಸನವನ್ನಾಗಿ (ಅರ್ಶ್) ಮಾಡಿದನು.

ಇನ್ನು ಮುಂದೆ ಸಹ ಅಲ್ಲಾಹನು ವ್ಯಕ್ತಿಗಳ ಪದವಿಗಳಿಗೆ ತಕ್ಕಂತೆ ಇಳಿಯುತ್ತಾ ಹೋಗುವನು. ಆದರೆ ಈಗ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು[ಸ] ಪ್ರೀತಿಸುವ ವಾದ ಮತ್ತು ಪರಿಪೂರ್ಣ ಅನುಸರಣೆಯ ವಾದ ಸತ್ಯವಾಗಬೇಕಾದರೆ ಅವರ ಆಧ್ಯಾತ್ಮಿಕ ಪುತ್ರರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರೊಂದಿಗೆ ಸಂಬಂಧವನ್ನು ಜೋಡಿಸಬೇಕು. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದ್ದಾರೆ: "ಎಲ್ಲ ಸಂಬಂಧಗಳಿಗಿಂತಲೂ ಮಿಗಿಲಾದ ಪ್ರೀತಿ ಮತ್ತು ಅನುಸರಣೆಯ ಸಂಬಂಧವನ್ನು ನನ್ನೊಂದಿಗೆ ಇರಿಸಬೇಕು. ನೀವು ನನ್ನನ್ನು ಅನುಸರಿಸುವ ಮೂಲಕವೇ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು[ಸ] ಅನುಸರಿಸುವಿರಿ ಮತ್ತು ಅಲ್ಲಾಹನ ಪ್ರೀತಿಯನ್ನು ಗಳಿಸುವಿರಿ."

ಹಝ್ರತ್ ಮಸೀಹ್ ಮೌಊದ್[ಅ] ಸ್ವತಃ ಸುಮ್ಮನೆ ಈ ಮಾತು ಹೇಳಿದುದಲ್ಲ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಸ್ವತಃ ಈ ಮಾತು ಹೇಳುತ್ತಾರೆ. ಅವರು ಹೇಳಿದರು: ನೀವು ಮಹ್‌ದೀ ಮಸೀಹರ ಕಾಲವನ್ನು ಕಂಡರೆ ನೀವು ಮೊಣಕಾಲೂರಿ ಹೋಗಬೇಕಾದರೂ ನೀವು ಹಾಗೆ ಹೋಗಿ ಅವರಿಗೆ ನನ್ನ ಸಲಾಮ್ ಹೇಳಿರಿ.

ಇಷ್ಟು ಕಷ್ಟಪಟ್ಟು ತನ್ನ ಸಲಾಮ್ ತಲಪಿಸಲು ಹೇಳಿದುದರಲ್ಲಿ ಇರುವ ರಹಸ್ಯವೇನು? ಆ ರಹಸ್ಯ ಇದಾಗಿದೆ: ಅವರು ನನಗೆ ಪ್ರಿಯರಾಗಿದ್ದಾರೆ. ನಾನು ಅವರಿಗೆ ಪ್ರಿಯನಾಗಿರುವೆನು. ಪ್ರಿಯರನ್ನು ತಲಪುವುದು ಅವರಿಗೆ ಪ್ರಿಯರಾದವರ ಮೂಲಕವೇ ಸಾಧ್ಯವೆಂಬುದು ನಿಯಮವಾಗಿದೆ. ಆದುದರಿಂದ ಹಝ್ರತ್ ರಸೂಲುಲ್ಲಾಹ್[ಸ] ಹೀಗೆ ಸೂಚಿಸಿದರು: ನೀವು ನನ್ನನ್ನು ಅನುಸರಿಸಲು ಬಯಸುವಿರಾದರೆ ಮಸೀಹ್ ಮೌಊದ್‌ರನ್ನು ಅನುಸರಿಸಿರಿ. ಅವರನ್ನು ಇಮಾಮರೆಂದು ಅಂಗೀಕರಿಸಿರಿ. ಅವರ ಜಮಾಅತ್‌ನಲ್ಲಿ ಸೇರಿರಿ. ಇದೇ

ಕಾರಣದಿಂದ ಹದೀಸಿನಲ್ಲಿ ಹೀಗೆ ಬರೆಯಲಾಗಿದೆ:

> ಗಮನವಿಟ್ಟು ಕೇಳಿರಿ, ಈಸಬ್ನು ಮರ್‌ಯಮ್ (ಮಸೀಹ್ ಮೌಊದ್) ಮತ್ತು ನನ್ನ ಮಧ್ಯೆ ಪ್ರವಾದಿ ಅಥವಾ ಸಂದೇಶವಾಹಕ ಇಲ್ಲ. ಆಲಿಸಿರಿ, ನನ್ನ ಅನಂತರ ಅವರು ನನ್ನ ಖಲೀಫರಾಗುವರು. ದಜ್ಜಾಲನನ್ನು ಅವರು ಕೊಲ್ಲುವರು. ಶಿಲುಬೆಯನ್ನು ಮುರಿದು ಹಾಕುವರು. ಎಂದರೆ ಕ್ರೈಸ್ತರ ವಿಶ್ವಾಸಗಳನ್ನು ಧ್ವಂಸಗೊಳಿಸುವರು. ಜಿಝ್ಯಾವನ್ನು ಕೊನೆಗೊಳಿಸುವರು. (ಆ ಕಾಲದಲ್ಲಿ ಧಾರ್ಮಿಕ ಯುದ್ಧಗಳು ನಡೆಯಲಾರವು. ಜಿಝ್ಯಾ ಸಂಪ್ರದಾಯ ಇಲ್ಲದಾಗುವುದು). ಯಾರು ಅವರನ್ನು ಭೇಟಿಯಾಗುತ್ತಾರೋ ಅವರು ನನ್ನ ಸಲಾಮ್ ಅವರಿಗೆ ಆವಶ್ಯಕವಾಗಿ ತಲಪಿಸಿರಿ.

(ತಬ್ರಾನಿ)

ಈ ಹದೀಸಿನ ಬಗ್ಗೆ ಅಧ್ಯಯನ ಮಾಡದೆ ಅಥವಾ ಅದನ್ನು ಅಧ್ಯಯನ ಮಾಡಿ ಅದರ ತಳವನ್ನು ತಲುಪಿದವರ ಮಾತುಗಳನ್ನು ಕೇಳುವ ಬದಲಾಗಿ, ಇಂದಿನ ಕಾಲದ ಮತಪಂಡಿತರು ಈ ಹದೀಸಿನ ಬಾಹ್ಯ ಅರ್ಥದ ಹಿಂದೆ ಬಿದ್ದು ಸಾಮಾನ್ಯ ಮುಸ್ಲಿಮರನ್ನು ತಪ್ಪು ಮಾರ್ಗದಲ್ಲಿ ನಡೆಸುತ್ತಿದ್ದಾರೆ. ಅವರು ಅಸಭ್ಯತೆಯ ಚಂಡಮಾರುತ ಬೀಸುವಂತೆ ಮಾಡಿರುವರು. ಅಲ್ಲಾಹನು ರಕ್ಷಿಸಲಿ. ನಾವು ಅಲ್ಲಾಹನ ಆಶ್ರಯವನ್ನೇ ಬೇಡುತ್ತೇವೆ. ಅವನು ಅವರೊಂದಿಗೆ ಆವಶ್ಯಕವಾದ ರೀತಿಯಲ್ಲಿ ವರ್ತಿಸುತ್ತಿದ್ದಾನೆ. ಇನ್ನು ಮುಂದೆ ಸಹ ಹಾಗೆಯೇ ಮಾಡುವನು – ಇನ್‌ಶಾ ಅಲ್ಲಾಹ್.

ಈ ಹದೀಸಿನಿಂದ ಹೀಗೆ ತಿಳಿಯುತ್ತದೆ: ವಾಗ್ದತ್ತ ಮಸೀಹ್ ನ್ಯಾಯನಿಷ್ಠರಾದ ನ್ಯಾಯಾಧಿಪತಿಯಾಗುವರು. ಅವರು ನ್ಯಾಯದ ಹೊರತು ಇನ್ನೇನೂ ಹೇಳಲಾರರು. ಅವರು ಲೋಕದಲ್ಲಿ ನ್ಯಾಯವನ್ನೂ ಸಮತೆಯನ್ನೂ ಸ್ಥಾಪಿಸುವ ಇಮಾಮರಾಗುವರು. ಅವರೊಂದಿಗೆ ಸಂಬಂಧ ಜೋಡಿಸಬೇಕು. ಅವರ ಆಜ್ಞೆಗಳನ್ನು ಪಾಲಿಸಬೇಕು. ಅವರ ಉಪದೇಶಗಳನ್ನು ಅನುಸರಿಸಬೇಕು. ಅವರು ನ್ಯಾಯ ಮತ್ತು ಸಮತೆಯ ಉಪದೇಶ ನೀಡುವರು. ಅವರು ನೀಡುವ ಉಪದೇಶ ಪವಿತ್ರ ಖುರ್‌ಆನಿನ ಉಪದೇಶದ ಹೊರತು ಬೇರೇನೂ ಅಲ್ಲ. ಮಸೀಹರು ಬಂದು ಸುತ್ತಿಗೆಯಿಂದ ಶಿಲುಬೆಗಳನ್ನು ಒಡೆಯುವರು ಎಂದು ಈ ಜನರು ಭಾವಿಸಿದ್ದಾರೆ. ಇವೆಲ್ಲ ನಿರರ್ಥಕ ಮಾತುಗಳಾಗಿವೆ. ಆಗಮಿಸಲಿರುವ ಮಸೀಹರು ತನ್ನ ಯಜಮಾನರಾದ ಹಝ್ರತ್ ರಸೂಲುಲ್ಲಾಹ್‌ರನ್ನು[ಸ] ಅನುಸರಿಸಿ ಸಾಕ್ಷ್ಯಾಧಾರಗಳನ್ನು ನೀಡಿ ಶಿಲುಬೆಗೆ ಸಂಬಂಧಿಸಿದ ವಿಶ್ವಾಸವನ್ನು ಅಳಿಸಿಬಿಡುವರು ಮತ್ತು ಅದರ ರಹಸ್ಯವನ್ನು ಬಯಲುಮಾಡುವರು ಎಂಬುದಾಗಿದೆ ಸ್ಪಷ್ಟವಾದ ಸಂಗತಿ. ದಜ್ಜಾಲನನ್ನು ಕೊಲ್ಲುವುದು ಎಂದರೆ ದಜ್ಜಾಲನ ಕೆಡುಕುಗಳಿಂದ ಮುಸ್ಲಿಮ್ ಸಮುದಾಯವನ್ನು ರಕ್ಷಿಸುವುದು ಎಂದಾಗಿದೆ. ಧಾರ್ಮಿಕ ಯುದ್ಧಗಳು

ನಡೆಯದ ಕಾರಣ ಜಿಝ್ಯಿಯಾ ತೆರಿಗೆ ಕೂಡ ಇಲ್ಲದಾಗುವುದು. ಈ ಹದೀಸಿನಲ್ಲಿ ಸಲಾಮ್ ತಲಪಿಸುವ ಬಗ್ಗೆಯೂ ಹೇಳಲಾಗಿದೆ. ಆದರೆ ಮುಸ್ಲಿಮರು ಸಲಾಮ್ ತಲಪಿಸುವುದಕ್ಕೆ ಬದಲಾಗಿ ಮಸೀಹರನ್ನು ವಿರೋಧಿಸುತ್ತಿದ್ದಾರೆ. ಅಲ್ಲಾಹನೇ ಅವರಿಗೆ ವಿವೇಕ ನೀಡಲಿ.

ಇನ್ನೊಂದು ಹದೀಸಿನಲ್ಲಿ ಹಝ್‌ರತ್ ಮಸೀಹ್ ಮೌಊದ್‌ರ(ಅ) ಪದವಿಯ ಕುರಿತು ವಿವರಿಸಲಾಗಿದೆ. ಅವರನ್ನು ಅನುಸರಿಸುವುದರ ಆವಶ್ಯಕತೆಯ ಬಗ್ಗೆ ತಿಳಿಸಲಾಗಿದೆ.

> ಹಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಹಝ್‌ರತ್ ರಸೂಲುಲ್ಲಾಹ್(ಸ) ಹೇಳಿದರು: ನ್ಯಾಯನಿಷ್ಠ ಅಧಿಕಾರಿಯೂ ಸಮತೆಯ ಪ್ರತಿಪಾದಕ ಇಮಾಮ್ ಆಗಿಯೂ ಈಸಬ್ನು ಮರ್‌ಯಮ್ ಆಗಮಿಸುವ ತನಕ ಪುನರುತ್ಥಾನ ದಿನ ಬರಲಾರದು. (ಅವರು ಆಗಮಿಸಿದಾಗ) ಅವರು ಶಿಲುಬೆಯನ್ನು ಮುರಿದು ಹಾಕುವರು, ಹಂದಿಯನ್ನು ಕೊಲ್ಲುವರು, ಜಿಝ್ಯಿಯಾವನ್ನು ಕೊನೆಗೊಳಿಸುವರು, ಅವರು ಸಂಪತ್ತನ್ನು ವಿತರಣೆ ಮಾಡುವರು. ಆದರೆ ಅದನ್ನು ಸ್ವೀಕರಿಸಲು ಜನರು ಸಿದ್ಧರಾಗಲಾರರು.
>
> **(ಸುನನ್ ಇಬ್ನು ಮಾಜ)**

ಈ ಹದೀಸು ಸಹ ವ್ಯಾಖ್ಯಾನಾರ್ಹವಾಗಿದೆ. ಆದರೆ ಸೂಕ್ಷ್ಮ ಬುದ್ಧಿಯಿಲ್ಲದ ಜನರು ಅದನ್ನು ಅರ್ಥ ಮಾಡಿಕೊಳ್ಳಲಿಲ್ಲ. ಅವರು ಬಾಹ್ಯ ಅರ್ಥದ ಹಿಂದೆ ಬಿದ್ದಿರುವರು. ಅವರು ವಿಚಿತ್ರ ಹಾಸ್ಯಾಸ್ಪದ ವಿವರಣೆ ನೀಡುತ್ತಾರೆ. ಹಂದಿಯನ್ನು ಕೊಲ್ಲುವರು ಎಂದರೆ ಹಂದಿಯ ಹಾಗೆ ಕೊಳಕು ಬುದ್ಧಿಯ ಜನರನ್ನು ನಾಶಗೊಳಿಸುವರು ಎಂದಾಗಿದೆ. ಹಂದಿಗಳ ಕೆಟ್ಟ ಸ್ವಭಾವಗುಣಗಳು ಬೇರೆ ಪ್ರಾಣಿಗಳಿಗಿಂತ ವಿಭಿನ್ನವಾಗಿವೆ ಎಂದು ಈಗ ಸಾಬೀತಾದ ಸಂಗತಿಯಾಗಿದೆ. ಇಂತಹ ಕೆಟ್ಟ ಗುಣಗಳು ಮನುಷ್ಯರಲ್ಲಿ ಉಂಟಾದಾಗ ಅವರನ್ನು ಸ್ವಚ್ಛಗೊಳಿಸುವುದು ಅತ್ಯಾವಶ್ಯಕವಾಗಿದೆ. ಈ ಹದೀಸಿನಲ್ಲಿ ಹೇಳಿದ ಇನ್ನೊಂದು ವಿಚಾರ ಸಂಪತ್ತಿನ ವಿತರಣೆಯಾಗಿದೆ. ಇದನ್ನು ಸಹ ಜನರು ಅರ್ಥ ಮಾಡಿಕೊಳ್ಳುವುದಿಲ್ಲ. ಇತೀಚೆಗೆ ಪಾಕಿಸ್ತಾನದಲ್ಲಿ ಮುಸ್ಲಿಮ್ ಮತಪಂಡಿತರು ಹಝ್‌ರತ್ ಮಸೀಹ್ ಮೌಊದ್‌ರ(ಅ) ವಿರುದ್ಧ ಸಭೆ ನಡೆಸಿದರು. ಅವರ ವಿರುದ್ಧ ಮತ್ತು ಜಮಾಅತ್ ವಿರುದ್ಧ ಅತ್ಯಂತ ಕೊಳಕು ಭಾಷೆಯಲ್ಲಿ ಹೀಗೆ ಆಕ್ಷೇಪಿಸಿದರು: ಮಸೀಹ್ ಬಂದು ಸಂಪತ್ತನ್ನು ಜನರಿಗೆ ಹಂಚಬೇಕಾಗಿತ್ತು, ಸಂಪತ್ತನ್ನು ಜನರಿಂದ ಬೇಡುವುದಲ್ಲ. ನೀವು ನೋಡಿರಿ ಅಹ್ಮದಿಯರು (ಅವರು ಖಾದಿಯಾನಿ ಎನ್ನುತ್ತಾರೆ) ಚಂದಾ ವಸೂಲು ಮಾಡುತ್ತಾರೆ. ಆದುದರಿಂದ ಅವರು ಸುಳ್ಳುವಾದಿಗಳೆಂದು ಸಾಬೀತಾಗುತ್ತದೆ. ಇದಾಗಿದೆ ಅವರ ಒಂದು ಆಕ್ಷೇಪ. ಮಸೀಹರು ವಿತರಣೆ ಮಾಡುತ್ತಿರುವುದು ನೀವು ಪಡೆಯಲು ನಿರಾಕರಿಸಿದ ಆಧ್ಯಾತ್ಮಿಕ ಸಂಪತ್ತಾಗಿದೆ ಎಂದು ಬುದ್ಧಿಯಲ್ಲಿ

ಅಂಧಕಾರ ಕವಿದ ಇವರಿಗೆ ವಿವೇಕಿಯಾದವನು ಮನವರಿಕೆ ಮಾಡಿಸಿಕೊಳ್ಳಲು ಸಾಧ್ಯವಲ್ಲ.

ವಾಸ್ತವದಲ್ಲಿ ಈ ಜನರಿಗೆ ಕೇವಲ ಲೌಕಿಕವಾದ ಒಂದೇ ಕಣ್ಣಿದೆ. ಅವರು ಅದಕ್ಕಿಂತ ಮುಂದೆ ಹೋಗಲಾರರು. ಅವರ ಕೆಲಸ ಅವರು ಮಾಡಲು ಬಿಡಿರಿ. ಪಾಕಿಸ್ತಾನದ ಅಹ್ಮದಿಯರು ಹೆಚ್ಚಿಗೆ ಗಾಬರಿಗೊಳ್ಳಬೇಕಾಗಿಲ್ಲ. ಶತ್ರುಗಳ ಕೊಳಕು ಮಾತುಗಳನ್ನು ಆಲಿಸಿ ಸಹನೆದೋರುತ್ತಾ ಸ್ಥೈರ್ಯದಿಂದ ಮುಖ ತಿರುಗಿಸಿ ಹೋಗಿರಿ. ಅವರ ಕೊಳಕನ್ನು ಎದುರಿಸುವುದರಲ್ಲಿ ನಾವು ಪರಾಜಿತರೆಂದು ಒಪ್ಪಿಕೊಳ್ಳುತ್ತೇವೆ. ನಾವು ಅವರ ಕೊಳಕನ್ನು ಕೊಳಕಿನಿಂದ ಎದುರಿಸಲು ಸಾಧ್ಯವೇ ಇಲ್ಲ.

ಆದರೆ ನಾನು ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ದಾಸನು ಶತ್ರುಗಳನ್ನು ಎದುರಿಸದೆ ಇರುವಾಗ ದಾಸನ ಪರವಾಗಿ ದೇವನು ಮಾತನಾಡುತ್ತಾನೆ. ಅಲ್ಲಾಹನು ಮಾತನಾಡುವಾಗ, ಶತ್ರುಗಳು ನಾಶವಾಗಿ ಅವರ ತುಂಡುಗಳು ಗಾಳಿಯಲ್ಲಿ ಹರಡುತ್ತಾ ಇದ್ದದ್ದನ್ನು ನಾವು ಕಂಡಿದ್ದೇವೆ. ಇನ್ನು ಮುಂದೆ ಸಹ ಹೀಗೆಯೇ ಕಾಣುವೆವು – ಇನ್‌ಶಾ ಅಲ್ಲಾಹ್.

ಅಹ್ಮದಿಯರು ಹಝ್ರತ್ ಮಸೀಹ್ ಮೌಊದ್‌ರೊಂದಿಗೆ[ಅ] ಸತ್ಯಸಂಧ ಸಂಬಂಧವನ್ನು ಇರಿಸಬೇಕು, ಪ್ರಾರ್ಥನೆಗೆ ಒತ್ತು ಕೊಡಬೇಕು, ಯಾವಾಗಲೂ ಪ್ರಾರ್ಥಿಸುತ್ತಾ ಇರಬೇಕು. ಮೇಲೆ ವಿವರಿಸಿದ ಹದೀಸುಗಳಿಂದ ಆಗಮಿಸಲಿರುವ ಮಸೀಹರು ಇಮಾಮರಾಗುವರು, ಅಧಿಕಾರಿಯೂ ಆಗುವರು. ನ್ಯಾಯ ಮತ್ತು ಸಮತ್ವದ ರಾಜಕುಮಾರರಾಗುವರು ಎಂದು ಸಾಬೀತಾಯಿತು. ಆದ್ದರಿಂದ ಅವರೊಂದಿಗೆ ಸಂಬಂಧವನ್ನು ಕಡ್ಡಾಯವಾಗಿ ಜೋಡಿಸಬೇಕು. ಅವರನ್ನು ಇಮಾಮ್ ಎಂಬ ನೆಲೆಯಲ್ಲಿ ಅನುಸರಿಸಬೇಕು. ನಿಮ್ಮ ಒಳಿತಿಗಾಗಿ, ನಿಮ್ಮ ತರಬೇತಿಗಾಗಿ ಈ ಎಲ್ಲ ವಿಷಯಗಳನ್ನು ವಿವರಿಸಲಾಗಿದೆ. ಅವುಗಳ ಪ್ರಕಾರ ನಡೆಯಿರಿ. ಅದರ ಫಲವಾಗಿ ನೀವು ಹಝ್ರತ್ ರಸೂಲುಲ್ಲಾಹ್‌ರ[ಸ] ಪ್ರೀತಿಗೆ ಪಾತ್ರರಾದವರೊಂದಿಗೆ ಸೇರುವಿರಿ ಮತ್ತು ಅಲ್ಲಾಹನ ಸಾಮೀಪ್ಯ ಪಡೆದವರೊಂದಿಗೂ ಸೇರುವಿರಿ.

## ಅನುಸರಣೆ ಎಲ್ಲ ಸ್ಥಿತಿಯಲ್ಲಿಯೂ ಆವಶ್ಯಕವಾಗಿದೆ

ಅನುಸರಣೆಗೆ ಸಂಬಂಧಿಸಿ ಕೆಲವು ಹದೀಸುಗಳನ್ನು ನಿಮ್ಮ ಮುಂದಿರಿಸುತ್ತೇನೆ. ಅದರಿಂದ ಅನುಸರಣೆಯ ಮಹತ್ವವು ನಿಮಗೆ ತಿಳಿಯುವುದು.

ಹಝ್ರತ್ ಅಬೂ ಹುರೈರ[ರ] ಹೀಗೆ ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹ್[ಸ] ಹೇಳಿದರು: ಕಷ್ಟ ಕಾಲದಲ್ಲಿ, ಸುಖದ ಕಾಲದಲ್ಲಿ, ಸಂತೋಷದಲ್ಲಿರುವಾಗ ಮತ್ತು ದುಃಖದಲ್ಲಿರುವಾಗ, ನಿಮ್ಮ ಹಕ್ಕುಗಳಿಂದ ವಂಚಿತರಾದಾಗ ಮತ್ತು

ನಿಮ್ಮೊಂದಿಗೆ ಇತರರಿಗಿಂತ ಉತ್ತಮವಾಗಿ ನಡೆದುಕೊಂಡಾಗ, ಒಟ್ಟಾರೆ ಎಲ್ಲ ಪರಿಸ್ಥಿತಿಗಳಲ್ಲೂ ಆಯಾಕಾಲದ ಆಡಳಿತಾಧಿಕಾರಿಯ ಆಜ್ಞೆಯನ್ನು ಆಲಿಸಿ ಅದನ್ನು ಅನುಸರಿಸುವುದು ಆವಶ್ಯಕವಾಗಿದೆ.

**(ಮುಸ್ಲಿಮ್)**

ಹಝ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು: ಯಾರಾದರೂ ತನ್ನ ನಾಯಕನ ಯಾವುದಾದರೂ ಕೆಲಸವನ್ನು ನೋಡಿದಾಗ ಅವನಿಗೆ ಇಷ್ಟವಾಗದಿದ್ದರೆ ಅವನು ಸಹನೆಯಿಂದ ವರ್ತಿಸಬೇಕು. ಏಕೆಂದರೆ ಜಮಾಅತಿನಿಂದ ಒಂದು ಗೇಣು ಕೂಡ ದೂರಸರಿಯುವವನು ಅಜ್ಞಾನದ ಮೃತ್ಯುವನ್ನು ಹೊಂದುವನು. **(ಬುಖಾರಿ)**

ಹಝ್ರತ್ ಅರಫ್ಜ(ರ) ಹೇಳುತ್ತಾರೆ: ನಾನು ಹಝ್ರತ್ ರಸೂಲುಲ್ಲಾಹ್(ಸ) ಹೀಗೆ ಹೇಳುವುದಾಗಿ ಆಲಿಸಿದೆ: ನೀವು ಒಟ್ಟಿಗೆ ಸೇರಿದ್ದು ನಿಮಗೆ ಒಬ್ಬ ನಾಯಕನಿದ್ದರೆ ಯಾರಾದರೂ ಒಬ್ಬನು ಬಂದು ನಿಮ್ಮ ಈ ಒಗ್ಗಟ್ಟನ್ನು ಮುರಿಯಲೆತ್ನಿಸಿದರೆ, ನಿಮ್ಮಲ್ಲಿ ಒಡಕುಂಟುಮಾಡಲು ಪ್ರಯತ್ನಿಸಿದರೆ ಅವನನ್ನು ಕೊಲ್ಲಿರಿ. (ಎಂದರೆ ಅವನಿಂದ ಸಂಬಂಧವನ್ನು ವಿಚ್ಛೇದಿಸಿರಿ. ಅವನ ಮಾತನ್ನು ಅಂಗೀಕರಿಸಬೇಡಿರಿ.)

**(ಮುಸ್ಲಿಮ್)**

ಹಝ್ರತ್ ಉಬಾದ ಬಿನ್ ಸಾಮಿತ್(ರ) ಹೇಳುತ್ತಾರೆ: ನಾವು ಹಝ್ರತ್ ರಸೂಲುಲ್ಲಾಹ್(ಸ) ಬೈಅತ್ ಈ ಕೆಳಗಿನ ಶರತ್ತು ಪ್ರಕಾರ ಮಾಡಿದೆವು – ನಮಗೆ ಇಷ್ಟವಾದರೂ ಇಷ್ಟವಾಗದಿದ್ದರೂ ನಾವು ಆಲಿಸುವೆವು ಮತ್ತು ಅನುಸರಿಸುವೆವು. ನಾವು ಎಲ್ಲಿದ್ದರೂ ಆಜ್ಞೆ ಮಾಡಲು ಅಧಿಕಾರವಿರುವವನೊಂದಿಗೆ ಜಗಳ ಮಾಡಲಾರೆವು. ನಾವು ಸತ್ಯದ ಮೇಲೆ ನಿಲ್ಲುವೆವು ಅಥವಾ ಸತ್ಯವಾದ ಮಾತನ್ನೇ ಹೇಳುವೆವು. ಅಲ್ಲಾಹನಿಗೆ ಸಂಬಂಧಿಸಿದ ನಮ್ಮ ಕರ್ತವ್ಯಗಳನ್ನು ಮಾಡುವಾಗ ನಮ್ಮನ್ನು ಆಕ್ಷೇಪಿಸುವವನ ಆಕ್ಷೇಪಗಳಿಗೆ ನಾವು ಹೆದರಲಾರೆವು.

**(ಮುಸ್ಲಿಮ್)**

ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಹೀಗೆ ಹೇಳಿದರು: ಯಾರು ಅಲ್ಲಾಹನನ್ನು ಅನುಸರಿಸುವುದರಿಂದ ತನ್ನ ಕೈಯನ್ನು ಹಿಂದಕ್ಕೆ ಎಳೆಯುತ್ತಾನೋ ಅವನು ಪುನರುತ್ಥಾನದ ದಿನ ಅವನ ಬಳಿಯಲ್ಲಿ ಸಾಕ್ಷ್ಯಾಧಾರವಾಗಲಿ ನೆವನವಾಗಲಿ ಇರಲಾರದ ಸ್ಥಿತಿಯಲ್ಲಿ ಅಲ್ಲಾಹನನ್ನು ಕಾಣುವನು. ಯಾರು ತನ್ನ ಕಾಲದ ಇಮಾಮರಿಗೆ ಬೈಅತ್ ಮಾಡದೆ ಮೃತನಾಗುತ್ತಾನೋ ಅವನು ಅಜ್ಞಾನದ ಮತ್ತು ದಾರಿ ತಪ್ಪಿದ ಸ್ಥಿತಿಯಲ್ಲಿ ಮೃತನಾದನು.

**(ಮುಸ್ಲಿಮ್)**

ನೀವು ಭಾಗ್ಯಶಾಲಿಗಳು. ನೀವು ಈ ಕಾಲದ ಇಮಾಮರನ್ನು ನಂಬಿರುವಿರಿ. ಅವರ ಬೈಅತಿನಲ್ಲಿ ಸೇರಿರುವಿರಿ. ನೀವು ಅಲ್ಲಾಹನಿಗೋಸ್ಕರ ಅವರನ್ನೇ ಅನುಸರಿಸಬೇಕು. ಅವರ ಎಲ್ಲ ಆಜ್ಞೆಗಳನ್ನು ಅನುಸರಿಸಬೇಕು. ಇಲ್ಲದಿದ್ದರೆ ಅಲ್ಲಾಹನ ಅನುಸರಣೆಯಿಂದ ಹೊರಗೆ ಹೋಗುವವರಾಗುವಿರಿ. ಪ್ರತಿಯೊಬ್ಬ ಅಹ್ಮದಿಯನ್ನು ಅಲ್ಲಾಹನು ಅನುಸರಣೆಯ ಉನ್ನತ ಮಟ್ಟವನ್ನು ಸ್ಥಾಪಿಸುವವನನ್ನಾಗಿ ಮಾಡಲಿ. ಆದರೆ ಉನ್ನತ ಮಟ್ಟವನ್ನು ಸ್ಥಾಪಿಸುವುದು ಹೇಗೆ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಅನುಸರಣೆ ಮಾಡುತ್ತಾ ಅದನ್ನು ಗಳಿಸಬಹುದು.

## ಅಹ್ಮದಿಯಾ ಜಮಾಅತಿಗೆ ಸೇರಿದವರು ಯಾರು?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

> ನಮ್ಮ ಉಪದೇಶಗಳನ್ನು ತನ್ನ ಕೆಲಸಗಳಿಗೆ ಮಾರ್ಗಸೂಚಿಯನ್ನಾಗಿ ಮಾಡುವವನೇ ನಮ್ಮ ಜಮಾಅತಿಗೆ ಸೇರಿದವನಾಗಿದ್ದಾನೆ. ಅವನು ತನ್ನ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಅವುಗಳನ್ನು ಪಾಲನೆ ಮಾಡುತ್ತಾನೆ. ಆದರೆ ಯಾರು ತನ್ನ ಹೆಸರನ್ನು ಬರೆಯಿಸಿ ನಮ್ಮ ಉಪದೇಶಗಳ ಪ್ರಕಾರ ನಡೆಯುವುದಿಲ್ಲವೋ ಅವನು ನೆನಪಿಡಲಿ, ಅಲ್ಲಾಹನು ಇದನ್ನು ಒಂದು ವಿಶಿಷ್ಟ ಜಮಾಅತನ್ನಾಗಿ ಮಾಡಲು ಉದ್ದೇಶಿಸುತ್ತಾನೆ. ಯಾವ ವ್ಯಕ್ತಿ ನಿಜವಾಗಿ ಈ ಜಮಾಅತಿಗೆ ಸೇರಿಲ್ಲವೋ ಅವನು ಕೇವಲ ಹೆಸರು ಬರೆಯಿಸಿ ಈ ಜಮಾಅತಿನಲ್ಲಿ ಸೇರಲಾರ. ಯಾವುದಾದರೊಂದು ಸಂದರ್ಭದಲ್ಲಿ ಅವನು ಈ ಜಮಾಅತಿನಿಂದ ಬೇರ್ಪಡಿಸಲ್ಪಡುವನು. ಆದುದರಿಂದ ನಾವು ನೀಡುವ ಉಪದೇಶಗಳ ಪ್ರಕಾರ ನೀವು ನಿಮ್ಮ ಕೃತ್ಯಗಳನ್ನು ಮಾಡುವವರಾಗಿರಿ.

ಹಝ್ರತ್ ಮಸೀಹ್ ಮೌಊದ್[ಅ] ಉಪದೇಶಗಳೇನು? ಅವರು ಹೇಳುತ್ತಾರೆ:

> ನೀವು ಪಿತೂರಿ ಉಂಟುಮಾಡಬೇಡಿರಿ. ನೀವು ಕೆಡುಕನ್ನುಂಟುಮಾಡಬೇಡಿರಿ. ಬೈಗಳನ್ನು ಕೇಳಿ ಸಹಿಸಿರಿ. ಯಾರನ್ನೂ ಎದುರಿಸಬೇಡಿರಿ. ನಿಮ್ಮನ್ನು ಎದುರಿಸಿದವನೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಿರಿ. ನೀವು ಮೃದು ಮಾತುಗಳ ಉತ್ತಮ ಮಾದರಿ ತೋರಿಸಿರಿ. ಸತ್ಯವಾದ ಹೃದಯದೊಂದಿಗೆ ಪ್ರತಿಯೊಂದು ಆಜ್ಞೆಯನ್ನು ಅನುಸರಿಸಿರಿ. ಆ ಮೂಲಕ ಅಲ್ಲಾಹನು ಸಂಪ್ರೀತನಾಗಲಿ. 'ಈ ವ್ಯಕ್ತಿ ಬೈಅತ್ ಮಾಡಿದ ನಂತರ ಮೊದಲಿನ ಹಾಗೆ ಇಲ್ಲ' ಎಂದು ನಿಮ್ಮ ಶತ್ರು ಕೂಡ ತಿಳಿದುಕೊಳ್ಳುವಂತಾಗಲಿ. ಮೊಕದ್ದಮೆಗಳಲ್ಲಿ ಸತ್ಯವಾದ ಸಾಕ್ಷ್ಯ ಹೇಳಿರಿ. ಈ ಜಮಾಅತಿಗೆ ಸೇರುವವರು ಹೃತ್ಪೂರ್ವಕವಾಗಿ ಪೂರ್ಣ ಸ್ಥೈರ್ಯದೊಂದಿಗೆ ಪೂರ್ಣ ಮನಸ್ಸಿನೊಂದಿಗೆ ಸತ್ಯವನ್ನು ಅನುಸರಿಸುವವರಾಗಬೇಕು. ಲೋಕವು ನಾಶಕ್ಕೆ ಸಮೀಪವಾಗಿದೆ.

**(ಮಲ್‌ಫೂಝಾತ್; ಸಂಪುಟ 3, ಪುಟ 620 – 621, ಹೊಸಮುದ್ರಣ)**

ಹಝ್ರತ್ ಮಸೀಹ್ ಮೌಊದ್(ಅ) ಪಿತೂರಿ ಉಂಟುಮಾಡಬೇಡಿರಿ ಎಂದು ಹೇಳಿದ್ದಾರೆ. ಆದರೆ ಕೆಲವು ಜನರು ಕೇವಲ ವಿನೋದಕ್ಕಾಗಿ ಒಂದು ಕಡೆಯ ಮಾತು ಇನ್ನೊಂದು ಕಡೆಗೆ ತಲಪಿಸುತ್ತಾರೆ. ಅದರಿಂದ ಶಾಂತಿಭಂಗ ಉಂಟಾಗುತ್ತದೆ. ವಿವಿಧ ರೀತಿಯ ಮನೋಭಾವದ ಜನರಿರುತ್ತಾರೆ. ಒಬ್ಬನು ಇನ್ನೊಬ್ಬನ ಬಗ್ಗೆ ಏನಾದರೂ ಹೇಳಿದರೆ ಆ ಮಾತನ್ನು ಕೇಳಿದವನು ಆ ಇನ್ನೊಬ್ಬನಿಗೆ ಆ ಮಾತನ್ನು ತಲಪಿಸಿದರೆ ಆಗ ಪರಸ್ಪರ ತಿಕ್ಕಾಟ ಉಂಟಾಗುತ್ತದೆ. ನನ್ನ ಪ್ರಕಾರ ಹೀಗೆ ಆಗಬಾರದು. ಇಂತಹ ಪಿತೂರಿಯನ್ನು ತಡೆಯಲು ಪರಿಹಾರ ಮಾರ್ಗವೇನೆಂದರೆ, ಯಾರಾದರೂ ತನ್ನ ಬಗ್ಗೆ ಒಬ್ಬನು ಹೇಳಿದ ಮಾತನ್ನು ಇನ್ನೊಬ್ಬನಿಂದ ಕೇಳಿದರೆ ಅವನು ಆ ಮಾತನ್ನು ಹೇಳಿದವನ ಹತ್ತಿರ ಹೋಗಿ, ಅವನು ಹಾಗೆ ಹೇಳಿದ್ದಾನೆಯೇ ಎಂದು ಕೇಳಬೇಕು. ಆಗ ಹೇಳಿದ ಮಾತು ಏನೆಂದು ಸರಿಯಾಗಿ ತಿಳಿಯುವುದು. ಪರಸ್ಪರ ಆ ಬಗ್ಗೆ ಚರ್ಚಿಸಿ ಸಮಸ್ಯೆ ಬಗೆಹರಿಯುವುದು. ಹೀಗೆ ಚಾಡಿ ಹೇಳಿದವನ ಸುಧಾರಣೆಯೂ ನಡೆಯುವುದು. ಕೆಲವು ಸಾರಿ ಕುಟುಂಬಗಳು ಪರಸ್ಪರ ಜಗಳವಾಡುವಂತೆ ಚಾಡಿ ಹೇಳುವವರು ಮಾಡುತ್ತಾರೆ. ನೀವು ಈ ರೀತಿ ಮಾಡಬಾರದು. ಹೀಗೆ ಮಾಡುವವರಿಂದ ಕೂಡ ದೂರಸರಿಯಿರಿ. ಸಾಧ್ಯವಿದ್ದರೆ ಅವರ ಸುಧಾರಣೆ ಮಾಡಲು ಪ್ರಯತ್ನಿಸಿರಿ. ಜಗಳಗಳಿಂದ ಮತ್ತು ಬೈದಾಟಗಳಿಂದ ಕೆಡುಕು ಉಂಟಾಗುತ್ತದೆ. ಅದರಿಂದ ಶಾಂತಿ ಭಂಗವಾಗುತ್ತದೆ.

ಆದುದರಿಂದ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೀವು ನನ್ನನ್ನು ಅನುಸರಿಸುವಿರಾದರೆ ನನ್ನ ಉಪದೇಶದ ಪ್ರಕಾರ ನಡೆಯಿರಿ. ನನ್ನ ಉಪದೇಶವೇನೆಂದರೆ, ನೀವು ಕಲಹವನ್ನು ಉಂಟುಮಾಡಬಾರದು ಮತ್ತು ಕೆಡುಕಿನಿಂದ ರಕ್ಷಿಸಿಕೊಳ್ಳಿರಿ. ನಿಮಗೆ ಯಾರಾದರೂ ಬೈದರೂ ನೀವು ಸಹಿಸಿಕೊಳ್ಳುವ ಸ್ಥೈರ್ಯ ನಿಮಗಿರಬೇಕು. ನೀವು ಈ ಉಪದೇಶಗಳನ್ನು ಅನುಸರಿಸಿದರೆ ನಿಮಗೆ ಮೋಕ್ಷದ ಮಾರ್ಗಗಳು ತೆರೆಯಲ್ಪಡುವುವು. ನೀವು ಅಲ್ಲಾಹನ ಸಾಮೀಪ್ಯ ಗಳಿಸಿದವರಲ್ಲಿ ಸೇರುವಿರಿ. ಯಾವುದೇ ವಿಷಯದಲ್ಲಿ ಕಾದಾಟ ಇರಬಾರದು. ನೀವು ಸತ್ಯವಂತರಾಗಿ ತಪ್ಪಿತಸ್ಥರ ಹಾಗೆ ವಿನಯಾನ್ವಿತರಾಗಿರಿ. ನಿಮ್ಮನ್ನು ಇಷ್ಟಬಂದಂತೆ ಆಕ್ಷೇಪಿಸುವವನೊಂದಿಗೆ ಕೂಡ ಪ್ರೀತಿಯಿಂದ ವರ್ತಿಸಿರಿ. ನೀವು ಪರಿಶುದ್ಧ ನಾಲಗೆ, ಸಿಹಿ ಮಾತು ಮತ್ತು ಉತ್ತಮ ಸ್ವಭಾವ ಗುಣ ಹೊಂದಿರಿ. ಜನರು ನಿಮ್ಮ ಕಡೆಗೆ ಆಕರ್ಷಿತರಾಗಲಿ. ನಿಮ್ಮ ಪರಿಸರದಲ್ಲಿರುವವರಿಗೆ ಈ ವ್ಯಕ್ತಿ ಅಹ್ಮದಿ ಎಂದು ತಿಳಿಯುವ ಹಾಗೆ ಆಗಲಿ. ಅಹ್ಮದಿಯಿಂದ ಉತ್ತಮ ಸ್ವಭಾವದ ಹೊರತು ಇನ್ನೇನೂ ಕಾಣಿಸದು ಎಂದು ತಿಳಿಯುವಂತಾಗಲಿ. ನಿಮ್ಮ ಉತ್ತಮ ಸ್ವಭಾವ ಗುಣಗಳು ಬೇರೆಯವರನ್ನು ಆಕರ್ಷಿಸುವಂತಾಗುವುದು.

ಕೆಲವು ಜನರು ಮೊಕದ್ದಮೆಗಳಲ್ಲಿ ತಮ್ಮ ಸ್ವಾರ್ಥ ಲಾಭಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಾರೆ. ಕೆಲವರು ಸುಳ್ಳು ಮೊಕದ್ದಮೆ ಹೂಡುತ್ತಾರೆ. ನಿಮ್ಮ ಸ್ವಂತ ಲಾಭಕ್ಕಾಗಿ

ಕೂಡ ಸುಳ್ಳು ಸಾಕ್ಷ್ಯ ಹೇಳಬಾರದೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಕೆಲವು ಜನರು ಇಲ್ಲಿ ಮತ್ತು ಬೇರೆ ದೇಶಗಳಲ್ಲಿ ಕೆಲವು ಸಾರಿ ವಿದೇಶಗಳಿಗೆ ಹೋಗಲಿಕ್ಕಾಗಿ ಸುಳ್ಳು ಹೇಳಿಕೆ ನೀಡುತ್ತಾರೆ. ಇದರಿಂದ ದೂರಸರಿಯಬೇಕು. ವಾಸ್ತವಿಕ ಅಂಶಗಳಿಗನುಸಾರವಾಗಿ ಮೊಕದ್ದಮೆ ಹೂಡಿರಿ. ನಿಮ್ಮ ವಾದ ಒಪ್ಪುವುದಾದರೆ ಸರಿ, ಇಲ್ಲದಿದ್ದರೆ ನೀವು ಮರಳಿ ಹೋಗಿರಿ. ಕೆಲವರಿಗೆ ಸಂಬಂಧಿಸಿದ ಮೊಕದ್ದಮೆ ತಪ್ಪು ಹೇಳಿಕೆ ನೀಡಿದರೂ ಸೋತು ಹೋಗುತ್ತದೆ. ಹೀಗಿರುವಾಗ ಸತ್ಯ ಹೇಳಿ ಪರೀಕ್ಷಿಸಿರಿ. ಇನ್‌ಶಾಅಲ್ಲಾಹ್, ನಿಮಗೆ ಲಾಭ ಉಂಟಾಗುವುದು. ನಿಮ್ಮ ಅಪೇಕ್ಷೆ ತಿರಸ್ಕೃತವಾದರೂ ಕನಿಷ್ಠ ಪಕ್ಷ ಅಲ್ಲಾಹನ ಕೋಪಕ್ಕೆ ಗುರಿಯಾಗಲಾರಿರಿ.

## ಪರಸ್ಪರ ಭ್ರಾತೃತ್ವ ಮತ್ತು ಪ್ರೀತಿ ಉಂಟುಮಾಡಿರಿ. ಅಲ್ಲಾಹನೊಂದಿಗೆ ಸತ್ಯವಾದ ಸಂಬಂಧ ಸ್ಥಾಪಿಸಿರಿ

ಹಝ್ರತ್ ಮಸೀಹ್ ಮೌಊದ್(ಅ) ಪರಸ್ಪರ ಭ್ರಾತೃತ್ವ ಮತ್ತು ಪ್ರೀತಿಯ ಉಪದೇಶ ನೀಡುತ್ತಾ ಹೇಳುತ್ತಾರೆ:

> ಪರಸ್ಪರ ಭ್ರಾತೃತ್ವ ಮತ್ತು ಪ್ರೀತಿಯ ಸಂಬಂಧ ಸ್ಥಾಪಿಸಿರಿ. ಮೃಗೀಯತೆ ಮತ್ತು ಭಿನ್ನಾಭಿಪ್ರಾಯಗಳನ್ನು ಬಿಡಿರಿ. ನೀವು ಎಲ್ಲ ವಿಧಗಳ ವ್ಯಂಗ್ಯ ಮತ್ತು ಅಪಹಾಸ್ಯದಿಂದ ಸಂಪೂರ್ಣವಾಗಿ ದೂರಸರಿಯಿರಿ. ಪರಿಹಾಸ ಮನುಷ್ಯನ ಹೃದಯವನ್ನು ಸತ್ಯದಿಂದ ದೂರಸರಿಸುತ್ತದೆ ಮತ್ತು ಎಲ್ಲೆಲ್ಲಿಗೋ ತಲಪಿಸುತ್ತದೆ. ಪರಸ್ಪರ ಗೌರವದಿಂದ ವರ್ತಿಸಿರಿ. ಪ್ರತಿಯೊಬ್ಬ ತನ್ನ ಸುಖಕ್ಕಿಂತ ತನ್ನ ಸಹೋದರನ ಸುಖಕ್ಕೆ ಆದ್ಯತೆ ನೀಡಲಿ. ಅಲ್ಲಾಹನೊಂದಿಗೆ ಸತ್ಯವಾದ ರಾಜಿಮಾಡಿಕೊಳ್ಳಿರಿ. ಅವನನ್ನು ಅನುಸರಿಸಲು ಮರಳಿ ಬನ್ನಿರಿ..... ನಿಮ್ಮ ಮಧ್ಯೆ ಜಗಳ ಮತ್ತು ದ್ವೇಷವನ್ನು ನೀಗಿಸಿರಿ. ನೀವು ಚಿಕ್ಕ ಸಂಗತಿಗಳಿಂದ ಮುಖ ತಿರುಗಿಸಿ ಮುಖ್ಯ ಮತ್ತು ಮಹತ್ವಪೂರ್ಣ ಕೆಲಸಗಳಲ್ಲಿ ಮಗ್ನರಾಗುವ ಸಮಯ ಇದಾಗಿದೆ.

**(ಮಲ್‌ಫೂಝಾತ್; ಭಾಗ 1, ಪುಟ 266 – 268)**

> ನಮ್ಮ ಜಮಾಅತಿಗೆ ಅಲ್ಲಾಹನೊಂದಿಗೆ ಸತ್ಯವಾದ ಸಂಬಂಧ ಇರಬೇಕು. ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅಲ್ಲಾಹನು ಅವರನ್ನು ಉಪೇಕ್ಷಿಸಲಿಲ್ಲ. ಅವರ ವಿಶ್ವಾಸದ ಶಕ್ತಿಯನ್ನು ದೃಢತೆಗೆ ತಲಪಿಸಲು ನೂರಾರು ದೃಷ್ಟಾಂತಗಳನ್ನು ತನ್ನ ಶಕ್ತಿಯಿಂದ ತೋರಿಸಿದನು. ನಿಮ್ಮಲ್ಲಿ ಯಾರಾದರೂ 'ನಾನು ಒಂದು ದೃಷ್ಟಾಂತವನ್ನಾದರೂ ಕಂಡಿಲ್ಲ' ಎಂದು ಹೇಳಬಲ್ಲನೆ? ನನ್ನೊಂದಿಗೆ ಸಹವಾಸದ ಸಂದರ್ಭ ದೊರೆತಾಗ ಅಲ್ಲಾಹನ ತಾಜಾ ದೃಷ್ಟಾಂತಗಳನ್ನು ಕಂಡಿಲ್ಲದ ಒಬ್ಬನೂ ಇಲ್ಲ ಎಂದು ನಾನು ಒತ್ತಿ ಹೇಳುತ್ತೇನೆ.

ನಮ್ಮ ಜಮಾಅತಿಗೆ ಸೇರಿದವರ ವಿಶ್ವಾಸ ವರ್ಧಿಸಬೇಕೆಂಬುದು ಆವಶ್ಯಕ ಸಂಗತಿಯಾಗಿದೆ. ಅಲ್ಲಾಹನ ಕುರಿತು ನಿಜವಾದ ಭರವಸೆ ಮತ್ತು ಅವನ ಬಗ್ಗೆ ಜ್ಞಾನ ದೊರೆತಿರಬೇಕು. ಸತ್ಕಾರ್ಯಗಳಲ್ಲಿ ಉದಾಸೀನತೆ ಮತ್ತು ಆಲಸ್ಯ ಇರಬಾರದು. ಉದಾಸೀನತೆ ಇದ್ದರೆ ವುಝು ಮಾಡುವುದು ಕೂಡ ಒಂದು ಕಷ್ಟದ ಕೆಲಸ ಎಂಬಂತೆ ತೋರುವುದು. ಅಂತಹ ಜನರು ತಹ್‌ಜ್ಜುದ್ ನಮಾಝ್ ಮಾಡುವುದಾದರೂ ಹೇಗೆ? ಸತ್ಕಾರ್ಯ ಮಾಡುವ ಶಕ್ತಿ ಉಂಟಾಗದಿದ್ದರೆ ಸತ್ಕಾರ್ಯಗಳಲ್ಲಿ ಮೇಲುಗೈಯಾಗಲು ಸ್ಪರ್ಧಿಸುವ ಉತ್ಸಾಹವಿಲ್ಲದಿದ್ದರೆ ಅಂತಹ ವ್ಯಕ್ತಿ ನಮ್ಮೊಂದಿಗೆ ಸಂಬಂಧ ಜೋಡಿಸುವುದು ನಿಷ್ಪ್ರಯೋಜಕವಾಗಿದೆ.

**(ಮಲ್‌ಫೂಝಾತ್; ಸಂಪುಟ 2, ಪುಟ 710 – 711, ಹೊಸಮುದ್ರಣ)**

ಹಝ್ರತ್ ಮಸೀಹ್ ಮೌಊದ್[ಅ] ಈ ಹತ್ತನೆಯ ಶರತ್ತಿನಲ್ಲಿ ಬೈಅತ್ ಮಾಡುವ ವ್ಯಕ್ತಿ ತನ್ನೊಂದಿಗೆ ಸ್ಥಾಪಿಸಬೇಕಾದ ಸಂಬಂಧದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಯಾವುದೇ ಲೌಕಿಕ ಸಂಬಂಧದಲ್ಲಿ ಇರುವುದಕ್ಕಿಂತ ಮಿಗಿಲಾದ ಸಂಬಂಧದ ಬಗ್ಗೆ ಹೇಳಿದ್ದಾರೆ. ಇದಕ್ಕೆ ಕಾರಣ ನಮ್ಮ ಬಗ್ಗೆ ಇದ್ದ ಸಹಾನುಭೂತಿ ಮಾತ್ರವಾಗಿದೆ. ನಮ್ಮನ್ನು ನಾಶದಿಂದ ರಕ್ಷಿಸಲು ಹಾಗೆ ಹೇಳಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವುದರಿಂದ ಮಾತ್ರ ಸತ್ಯವಾದ ಇಸ್ಲಾಮ್ ಲಭಿಸುತ್ತದೆ. ನಾವು ನಮ್ಮನ್ನು ಮುಳುಗುವುದರಿಂದ ರಕ್ಷಿಸಿಕೊಳ್ಳಬೇಕಾದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನೌಕೆಯಲ್ಲಿ ಪ್ರವೇಶಿಸಲೇ ಬೇಕಾಗಿದೆ. ಅವರು ಹೀಗೆ ಹೇಳುತ್ತಾರೆ:

ನೀವು ಈಗ ನನ್ನ ಕಡೆಗೆ ಓಡಿ ಬನ್ನಿರಿ. ಯಾರು ಈಗ ನನ್ನ ಕಡೆಗೆ ಓಡಿ ಬರುತ್ತಾನೋ ಅವನ ಉದಾಹರಣೆ ತೂಫಾನಿನ ಸಮಯದಲ್ಲಿ ನೌಕೆಯೊಳಗೆ ಕುಳಿತವನ ಹಾಗಿದೆ. ಆದರೆ ಯಾರು ನನ್ನನ್ನು ನಂಬುವುದಿಲ್ಲವೋ ಅವನು ತೂಫಾನಿಗೆ ತನ್ನನ್ನು ಒಡ್ಡುತ್ತಾನೆ ಮತ್ತು ಅವನಿಗೆ ರಕ್ಷಣೆ ಪಡೆಯಲು ಯಾವುದೇ ಸಾಮಗ್ರಿ ಇಲ್ಲದ್ದಾಗಿ ನಾನು ಕಾಣುತ್ತೇನೆ. ಸತ್ಯವಾದ ಶಿಫಾರಸುಗಾರನು ನಾನಾಗಿದ್ದೇನೆ. ನಾನು ಆ ಹಿರಿಯ ಶಿಫಾರಸುಗಾರರ ನೆರಳಾಗಿದ್ದೇನೆ. ಆದರೆ ಈ ಕಾಲದ ಅಂಧರು ನನ್ನನ್ನು ಅಂಗೀಕರಿಸಿಲ್ಲ. ಆ ಮೂಲಕ ಅವರು ಹಝ್ರತ್ ಮುಹಮ್ಮದ್ ಮುಸ್ತಫಾರನ್ನು[ಸ] ಬಹಳ ಅಪಮಾನಿಸಿರುವರು.

**(ದಾಫಿಉಲ್ ಬಲಾ; ರೂಹಾನೀ ಖಝಾಇನ್, ಸಂಪುಟ 18, ಪುಟ 233)**

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ[ಸ] ಭವಿಷ್ಯವಾಣಿಯ ಪ್ರಕಾರ ಆಗಮಿಸಿದ ಕಾರಣ ಹಝ್ರತ್ ಮಸೀಹ್ ಮೌಊದ್[ಅ] ಮೇಲಿನಂತೆ ಹೇಳಿರುವರು.

## ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ ಮಾಡುವುದರಿಂದ ದೊರಕುವ ಎರಡು ಲಾಭಗಳು

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನನ್ನ ಕೈಯಲ್ಲಿ ಬೈಅತ್ ಮಾಡುವುದರಿಂದ ಎರಡು ಲಾಭಗಳಿವೆ. ಒಂದನೆಯ ಲಾಭವೇನೆಂದರೆ, ಪಾಪದೋಷಗಳು ಕ್ಷಮಿಸಲ್ಪಡುತ್ತವೆ. ಮನುಷ್ಯನು ಅಲ್ಲಾಹನ ವಾಗ್ದಾನಗಳ ಪ್ರಕಾರ ಕ್ಷಮಿಸಲ್ಪಡಲು ಅರ್ಹನಾಗುತ್ತಾನೆ. ಎರಡನೆಯ ಲಾಭವೇನೆಂದರೆ, ಅಲ್ಲಾಹನು ನೇಮಿಸಿದವರ ಮುಂದೆ ತೌಬ (ಪಶ್ಚಾತ್ತಾಪಗೊಂಡು ದೇವನ ಕಡೆಗೆ ತಿರುಗುವುದು) ಮಾಡುವುದರಿಂದ ಶಕ್ತಿ ಲಭಿಸುತ್ತದೆ. ಮನುಷ್ಯನು ಶೈತಾನನ ಆಕ್ರಮಣಗಳಿಂದ ರಕ್ಷಿಸಲ್ಪಡುತ್ತಾನೆ. ನೀವು ನೆನಪಿಡಿರಿ, ಈ ಜಮಾಅತಿನಲ್ಲಿ ಸೇರುವುದರ ಉದ್ದೇಶ ಲೌಕಿಕ ಲಾಭ ಗಳಿಸುವುದಾಗಿರಬಾರದು. ಅಲ್ಲಾಹನ ಸಂಪ್ರೀತಿ ಗಳಿಸುವುದೇ ನಿಮ್ಮ ಉದ್ದೇಶವಾಗಿರಬೇಕು. ಲೋಕವು ದಾಟಿಹೋಗುವ ಸ್ಥಳವಾಗಿದೆ. ಯಾವುದಾದರೂ ರೀತಿಯಲ್ಲಿ ಅದನ್ನು ದಾಟಿ ಹೋಗಲಾಗುವುದು. 'ಕಷ್ಟಾನುಭವದ ರಾತ್ರಿಯಾಗಲಿ, ಸುಖಾನುಭೂತಿಯ ರಾತ್ರಿಯಾಗಲಿ ಅದು ದಾಟಿ ಹೋಗುವುದು.'

ಲೋಕ ಮತ್ತು ಅದರ ಉದ್ದೇಶ ಲಕ್ಷ್ಯಗಳನ್ನು ಪೂರ್ಣವಾಗಿ ಬೇರೆ ಇರಿಸಿರಿ. ಅವುಗಳನ್ನು ಧರ್ಮದೊಂದಿಗೆ ಎಂದೂ ಬೆರಸಬೇಡಿರಿ. ಏಕೆಂದರೆ ಲೋಕವು ನಾಶವಾಗಲಿದೆ, ಧರ್ಮ ಮತ್ತು ಅದರ ಫಲಗಳು ಬಾಕಿಯಾಗಿ ಉಳಿಯುವವುಗಳಾಗಿವೆ.

**(ಮಲ್‌ಫೂಝಾತ್; ಭಾಗ 6, ಪುಟ 145)**

## ಈ ಕಾಲದ ಭದ್ರಕೋಟೆ ಹಝ್‌ರತ್ ಮಸೀಹ್ ಮೌಊದ್(ಅ) ಆಗಿದ್ದಾರೆ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನನ್ನ ಪ್ರಿಯ ಬಂಧುಗಳೇ, ನನ್ನ ಪ್ರಿಯರೇ, ನನ್ನ ವೃಕ್ಷದ ಹಚ್ಚ ಹಸುರಾದ ಶಾಖೆಗಳೇ, ಅಲ್ಲಾಹನು ನಿಮಗೆ ನೀಡಿದ ಅನುಗ್ರಹದಿಂದ ನನ್ನ ಬೈಅತ್ ಮಾಡಿ ಈ ಜಮಾಅತಿನಲ್ಲಿ ನೀವು ಪ್ರವೇಶಿಸಿರುವಿರಿ. ನಿಮ್ಮ ಜೀವಿತ, ನಿಮ್ಮ ಸುಖ ಮತ್ತು ನಿಮ್ಮ ಸಂಪತ್ತನ್ನು ಈ ಮಾರ್ಗದಲ್ಲಿ ಅರ್ಪಿಸುತ್ತಾ ಇದ್ದೀರಿ. ನಾನು ಹೇಳಿದುದನ್ನು ಅಂಗೀಕರಿಸುವುದು ನಿಮಗೆ ಅನುಗ್ರಹದಾಯಕವೆಂದು ನೀವು ಭಾವಿಸುತ್ತೀರೆಂದು ನಾನು ತಿಳಿದಿರುವೆನು. ನೀವು ನಿಮಗೆ ಸಾಧ್ಯವಿರುವಷ್ಟು ತ್ಯಾಗಮಾಡಲು ನೀವು ಹಿಂಜರಿಯಲಾರಿರಿ. ಆದರೆ ನಾನು ಈ ಸೇವೆಯನ್ನು ನಿಮಗೆ ಕಡ್ಡಾಯಗೊಳಿಸಲಾರೆನು. ನೀವು ಮಾಡುವ ಸೇವೆ ನಾನು ಹೇಳಿದ ಮಾತುಗಳ ಕಾರಣದಿಂದ ನಿರ್ವಾಹವಿಲ್ಲದೆ ಮಾಡಿದವುಗಳಾಗಬಾರದು.

ನೀವು ಆತ್ಮ ಸಂತೋಷದಿಂದ ಸೇವೆ ಮಾಡಬೇಕು. ನನ್ನ ಸ್ನೇಹಿತ ಯಾರು? ನನ್ನ ಬಂಧು ಯಾರು? ನನ್ನನ್ನು ಗುರುತಿಸಿದವನೇ ನನ್ನ ಸ್ನೇಹಿತ, ನನ್ನ ಬಂಧು. ನನ್ನನ್ನು ಯಾರು ಗುರುತಿಸುತ್ತಾನೆ? ನಾನು ಅಲ್ಲಾಹನಿಂದ ಕಳುಹಿಸಲ್ಪಟ್ಟವನೆಂದು ದೃಢವಾಗಿ ನಂಬುವವನೇ ನನ್ನನ್ನು ಗುರುತಿಸಿದವನಾಗಿದ್ದಾನೆ. ಅಲ್ಲಾಹನು ಕಳುಹಿಸಿದವರನ್ನು ಹೇಗೆ ಅಂಗೀಕರಿಸಲಾಗುತ್ತಿದೆಯೋ ಅದೇ ರೀತಿ ನನ್ನನ್ನು ಅಂಗೀಕರಿಸುವವನು ನನ್ನನ್ನು ಗುರುತಿಸಿದವನಾಗಿದ್ದಾನೆ. ಲೌಕಿಕ ಮನೋಭಾವದ ಜನರು ನನ್ನನ್ನು ಅಂಗೀಕರಿಸಲಾರರು. ಏಕೆಂದರೆ ನಾನು ಲೋಕಕ್ಕೆ ಸೇರಿದವನಲ್ಲ. ಆದರೆ ಯಾರ ಪ್ರಕೃತಿಗೆ ಆ ಪ್ರಪಂಚದ ಭಾಗ ನೀಡಲಾಗಿದೆಯೋ ಅವರು ನನ್ನನ್ನು ಅಂಗೀಕರಿಸುತ್ತಾರೆ ಮತ್ತು ಮುಂದೆಯೂ ಅಂಗೀಕರಿಸುವರು. ಯಾರು ನನ್ನನ್ನು ಉಪೇಕ್ಷಿಸುತ್ತಾನೋ ಅವನು ನನ್ನನ್ನು ಕಳುಹಿಸಿದವನನ್ನು ಉಪೇಕ್ಷಿಸುತ್ತಾನೆ. ಯಾರು ನನ್ನೊಂದಿಗೆ ಸಂಬಂಧ ಜೋಡಿಸುತ್ತಾನೋ ಅವನು ನನ್ನನ್ನು ಕಳುಹಿಸಿದವನೊಂದಿಗೆ ಸಂಬಂಧ ಜೋಡಿಸುತ್ತಾನೆ. ನನ್ನ ಕೈಯಲ್ಲಿ ಒಂದು ದೀಪವಿದೆ. ನನ್ನ ಬಳಿಗೆ ಬರುವವನು ನಿಶ್ಚಯವಾಗಿಯೂ ಅದರ ಬೆಳಕಿನಿಂದ ಪಾಲು ಪಡೆಯುವನು. ಆದರೆ ಯಾರು ಸಂಶಯದಿಂದ ದೂರ ಓಡಿ ಹೋಗುತ್ತಾನೋ ಅವನು ಅಂಧಕಾರಕ್ಕೆ ತಳ್ಳಲ್ಪಡುವನು. ಈ ಕಾಲದ ಭದ್ರಕೋಟೆ ನಾನಾಗಿದ್ದೇನೆ. ಯಾರು ನನ್ನೊಂದಿಗೆ ಸೇರುತ್ತಾನೋ ಅವರು ಕಳ್ಳರಿಂದಲೂ ದರೋಡೆಕೋರರಿಂದಲೂ ಕಾಡು ಮೃಗಗಳಿಂದಲೂ ತಮ್ಮ ಜೀವವನ್ನು ರಕ್ಷಿಸಿಕೊಳ್ಳುವರು. ಯಾರು ನನ್ನ ಗೋಡೆಗಳಿಂದ ದೂರವಿರಲು ಬಯಸುತ್ತಾನೋ ಎಲ್ಲ ದಿಕ್ಕುಗಳಿಂದಲೂ ಅವನಿಗೆ ಮೃತ್ಯು ಎದುರಾಗುವುದು. ಅವನ ಮೃತ ಶರೀರ ಕೂಡ ಸುರಕ್ಷಿತವಾಗಿರಲಾರದು. ನನ್ನೊಂದಿಗೆ ಯಾರು ಸೇರುತ್ತಾನೆ? ಕೆಡುಕನ್ನು ಬಿಡುವವನೂ ಒಳಿತನ್ನು ಮಾಡುವವನೂ ಸುಳ್ಳನ್ನು ಬಿಡುವವನೂ ಸತ್ಯವನ್ನು ಅನುಸರಿಸುವವನೂ ಶೈತಾನನ ದಾಸತ್ವದಿಂದ ಸ್ವತಂತ್ರನಾಗುವವನೂ ಅಲ್ಲಾಹನನ್ನು ಅನುಸರಿಸುವ ದಾಸನಾಗುವವನೂ ನನ್ನೊಂದಿಗೆ ಸೇರುತ್ತಾನೆ. ಹೀಗೆ ಮಾಡುವ ಪ್ರತಿಯೊಬ್ಬನು ನನ್ನಲ್ಲಿ ಇದ್ದಾನೆ. ನಾನು ಅವನಲ್ಲೂ ಇದ್ದೇನೆ. ಆದರೆ ಅಲ್ಲಾಹನು ಯಾರನ್ನು ಪರಿಶುದ್ಧ ಆತ್ಮದ ನೆರಳಿಗೆ ಹಾಕುತ್ತಾನೋ ಅವನೇ ಹೀಗೆ ಮಾಡಲು ಶಕ್ತನಾಗುತ್ತಾನೆ. ಆಗ ಅಲ್ಲಾಹನು ಅವನ ಆತ್ಮದ ನರಕದ ಒಳಗೆ ತನ್ನ ಪಾದ ಇಡುತ್ತಾನೆ. ಆಗ ಅದರಲ್ಲಿ ಎಂದೂ ಬೆಂಕಿ ಇರಲಿಲ್ಲ ಎಂಬಂತೆ ತಂಪಾಗುತ್ತದೆ. ಆಗ ಅವನು ಅಭಿವೃದ್ಧಿಯಿಂದ ಅಭಿವೃದ್ಧಿಗೆ ಸಾಗುತ್ತಾನೆ. ಕೊನೆಗೆ ಅಲ್ಲಾಹನ ಆತ್ಮ ಅವನಿಗೆ ಸಮಾಧಾನ ನೀಡುತ್ತದೆ. ಅನಂತರ ದಿವ್ಯ ಪ್ರಭೆಯೊಂದಿಗೆ ಸರ್ವಲೋಕಗಳ ಪ್ರಭು ಅವನ ಹೃದಯದೊಳಗೆ ಸಿಂಹಾಸನಾರೂಢನಾಗುತ್ತಾನೆ. (ಎಂದರೆ ಅಲ್ಲಾಹನು ಅವನ ಹೃದಯದೊಳಗೆ ತನ್ನ ಸಿಂಹಾಸನವನ್ನು ಇರಿಸುತ್ತಾನೆ.) ಆಗ ಅವನ ಹಳೆಯ ಮಾನವೀಯತೆ ಸುಟ್ಟು ಹೋಗಿ ಒಂದು ಹೊಸ

ಪರಿಶುದ್ಧ ಮಾನವೀಯತೆ ಅವನಿಗೆ ನೀಡಲ್ಪಡುತ್ತದೆ. ಅಲ್ಲಾಹನು ಸಹ ಒಬ್ಬ ಹೊಸ ದೇವನಾಗಿ ವಿಶಿಷ್ಟವಾಗಿ ಅವನೊಂದಿಗೆ ಸಂಬಂಧ ಜೋಡಿಸುತ್ತಾನೆ. ಸ್ವರ್ಗೀಯ ಜೀವಿತದ ಎಲ್ಲ ಸಾಮಗ್ರಿಗಳು ಇದೇ ಲೋಕದಲ್ಲಿ ಅವನಿಗೆ ಸಿಗುತ್ತವೆ.

**(ಫತ್‌ಹ್ ಇಸ್ಲಾಮ್; ರೂಹಾನೀ ಖಝಾಇನ್, ಸಂಪುಟ 3, ಪುಟ 34 – 35)**

ಅಲ್ಲಾಹನು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿದ ಎಲ್ಲ ಪ್ರತಿಜ್ಞೆಗಳನ್ನು ಈಡೇರಿಸುವ ಸೌಭಾಗ್ಯ ದಯಪಾಲಿಸಲಿ. ಅವರು ವಿಧಿಸಿದ ಬೈಅತಿನ ಎಲ್ಲ ಶರತ್ತುಗಳನ್ನು ನಾವು ಬಲಯುತವಾಗಿ ಪಾಲಿಸುವಂತಾಗಲಿ. ಅವರ ಉಪದೇಶಗಳನ್ನು ಅನುಸರಿಸಿ ನಡೆದುಕೊಂಡು ನಾವು ನಮ್ಮ ಜೀವಿತವನ್ನು ಸ್ವರ್ಗ ಸದೃಶವನ್ನಾಗಿ ಮಾಡುವವರಾಗೋಣ ಮತ್ತು ಪರಲೋಕದ ಸ್ವರ್ಗದ ವಾರಸುದಾರರಾಗೋಣ. ಅಲ್ಲಾಹನು ನಮಗೆ ನೆರವು ನೀಡಲಿ – ಆಮೀನ್.

**(ಖುತ್‌ಬ ಜುಮುಅ 19/9/2003; ಮಸ್‌ಜಿದ್ ಫಝ್ಲ್ ಲಂಡನ್)**

★★★ ★★★ ★★★